TIGHT BINDING BOOK

UNIVERSAL LIBRARY
OU_198366
UNIVERSAL LIBRARY

ಶ್ರೀ ಶೇಷಾಚಲ ಗ್ರಂಥಮಾಲೆಯ

೩೧ನೆಯ ಗ್ರಂಥವು.

ಶ್ರೀ ಶೇಷಾಚಲಸದ್ಗುರೋತ್ತಮರ

# ನಿರ್ಯಾಣಮಹೋತ್ಸವ

ಅಥವಾ

# ಲೋಕಜಾಗ್ರತೆ.

ಇದನ್ನು

ಸ್ವಪ್ರೇರಣೆಯಿಂದಲೋ, ಶ್ರೀ ಗುರು ಪ್ರೇರಣೆಯಿಂದಲೋ

ಎಂಬದನ್ನರಿಯದ

ವೇಂಕಟೇಶ ತಿರಕೋ ಕುಲಕರಣಿ ಗಳಗನಾಥ,

ಪೆನಶನರ ಹೆ. ಮಾಸ್ತರ, ಟ್ರೇ. ಕಾಲೇಜ, ಧಾರವಾಡ,

ಇವರು ಬರೆದರು.

PUBLISHER:

Yello Guddo Kulkarni.

Editor, Sadbodha Chandrika, Anandvan-agdi.

1915

ಬೆಲೆ ೮ ಆಣೆ.

# ವಿಷಯಾನುಕ್ರಮಣಿಕೆ.


| ಪ್ರಕರಣ. | ವಿಷಯ. | ಪುಟ. |
|---|---|---|
| | ಪ್ರಸ್ತಾವನೆ. | ೧-೨ |
| ೧ | ಶ್ರೀ ಸದ್ಗುರುವಿನ ಶ್ರೇಷ್ಠವಾದ ಸಂತಧರ್ಮ | ೧-೮ |
| ೨ | ಶ್ರೀ ಗುರುವು ಲೋಕದ ಪಾಪವನ್ನು ಶೋಷಿಸಿದ್ದು | ೮-೧೬ |
| ೩ | ಶ್ರೀ ಗುರುವು ಲೋಕದ ಪಾಪವನ್ನು ತಾನು ಭೋಗಿಸಿದ್ದು | ೧೬-೨೫ |
| ೪ | ಸದ್ಗುರುವಿನ ಲೋಕಾನುವರ್ತನ | ೨೬-೩೮ |
| ೫ | ಶ್ರೀ ಸದ್ಗುರುವಿನ ಕಲಿಕಾಲ ನಿರೀಕ್ಷಣ | ೩೮-೫೫ |
| ೬ | ಶ್ರೀ ಸದ್ಗುರುವಿನ ನಿರ್ಯಾಣೋನ್ಮುಖತೆ | ೫೫-೬೫ |
| | (ಪ್ರಸ್ತಾವನೆಯಲ್ಲಿ ಬರೆದಂತೆ ಈ ೨೦ಪುಟಗಳನ್ನು ಕೊಟ್ಟಿಲ್ಲ) | |
| ೭ | ಶ್ರೀ ಗುರುವಿನ ಶರಣ್ಯ ಪ್ರದರ್ಶನ | ೬೫-೮೭ |
| ೮ | ಶ್ರೀ ಗುರುವಿನ ನಿರ್ಯಾಣ | ೮೭-೧೦೧ |
| ೯ | ಶ್ರೀ ಗುರುವಿನ ಔರ್ಧ್ವದೇಹಿಕ ಕರ್ಮಗಳು | ೧೦೨-೧೧೩ |
| ೧೦ | ಪುನರ್ಘಟನೆ— | |
| | ೧ನೆಯ ವಿಚಾರ-ಅಗ್ರಹಾರಕ್ಕೆ ಮುಂದೆಯಾರ.? | ೧೧೩-೧೨೩ |
| | ೨ನೆಯ ವಿಚಾರ-ಅಗ್ರಹಾರವು ಮುಂದೆಹ್ಯಾಗೆನಡೆಯುವದು? | ೧೨೩-೧೪೩ |
| ೧೧ | ಉಪಸಂಹಾರ | ೧೪೩-೧೫೬ |


[*All rights reserved.*]

# ಪ್ರಸ್ತಾವನೆ.

ಆನಂದವನಸಂರಾಜದ್ರಾಜಹಂಸಂ ದಯಾನಿಧಿಂ ॥
ಶೇಷಾಚಲಗುರುಂ ವಂದೇ ವಂದಾರ್ವಾನಂದಕಂದಳಂ ॥ ೧ ॥

ಯನ್ಮೂರ್ತಿದರ್ಶನಮಘೌಘಮಹೋ ನರಾಣಾಂ ।
ಆನಂದದಾಯಿ ಜನತಾಪರಿತಾಪಹರ್ತೃ ॥
ಅಗ್ರೇಪ್ಯನಂತಸುಖದಾನಚಣಂ ಮನೋಜ್ಞಂ ।
ಶೇಷಾಚಲೋ ಗುರುವರಸ್ತನುತಾಂ ಸಲಕ್ಷ್ಮೀಂ ॥ ೨ ॥

ಶ್ರೀಶೇಷಾಚಲಸದ್ಗುರುಂ ಗುಣಲಸಂಕಾರುಣ್ಯವಾರಾಂನಿಧಿಂ।
ಮೋಹಾಂಭೋಧಿನಿಮಗ್ನಮಾನವತತೇರ್ನೌಕಾಯಮಾನಂ ವಿಭುಂ॥
ಸಾಕ್ಷಾಚ್ಛ್ರೀಹರಿಬೋಧಿತಾರ್ಥಮನಿಶಂ ಸ್ವಾಚಾರತೋ ದರ್ಶಿನಂ ।
ಸದ್ಗೋಭ್ರಾಹ್ಮಣಪಾಲನಾಧೃತಗುಣಂ ನಿತ್ಯಂ ಹೃದಾ ಭಾವಯೇ ॥ ೩ ॥

[K. ಶೇಷಶಾಸ್ತ್ರೀ, ಅಧ್ಯಾಪಕ, ಸಂಸ್ಕೃತಶಾಲಾ, ಆನಂದವನ.]

ಭಾದ್ರಪದದ ಅಂಕದಲ್ಲಿ ಶ್ರೀ ಶೇಷಾಚಲಸದ್ಗುರೂತ್ತಮರ ನಿರ್ಯಾಣವಾರ್ತೆಯನ್ನು ತಿಳಿಸುವಾಗ "ಇವರ ಪವಿತ್ರ ನಿರ್ಯಾಣಮಹೋತ್ಸವ ವರ್ಣನವನ್ನು ನಮ್ಮ ವಾಚಕರ ಸಲುವಾಗಿ ಮುಂದಿನಸಾರೆ ಕೊಡುವೆವು" ಎಂದು ತಿಳಿಸಿದಂತೆ, ಅಶ್ವಿನದ ಅಂಕದಲ್ಲಿ ೨೪ ಪುಟಗಳಲ್ಲಿ ನಿರ್ಯಾಣಮಹೋತ್ಸವವರ್ಣನವನ್ನು ಕೊಡಬೇಕೆಂದು ಮಾಡಿದ್ದೆವು; ಆದರೆ ಸ್ವಪ್ರೇರಣೆಯಿಂದಲೋ, ಶ್ರೀ ಗುರುಪ್ರೇರಣೆಯಿಂದಲೋ ಆ ವರ್ಣನವು ೨೪ ಪುಟಗಳಲ್ಲಿ ಮುಗಿಯದೆ, ೧೬೦ ಪುಟಗಳನ್ನು ವ್ಯಾಪಿಸಿದ್ದರಿಂದ, ಅಶ್ವಿನ, ಕಾರ್ತಿಕ, ಮಾರ್ಗಶೀರ್ಷ, ಪುಷ್ಯ ಎಂಬ ನಾಲ್ಕು ತಿಂಗಳ ಅಂಕಗಳ ಬದಲು ಇದೊಂದು ಸ್ವತಂತ್ರ ಪುಸ್ತಕವನ್ನೇ ಕಳಿಸುವ ಪ್ರಸಂಗಬಂದಿತು; ಆದರೆ ಮಹಾಪುರುಷರ ತಾತ್ವಿಕನಿರ್ಯಾಣೋತ್ಸವವರ್ಣನದ ಮಹತ್ವದ ಕಡೆಗೆ ಲಕ್ಷ್ಯಗೊಟ್ಟು ಇದಕ್ಕಾಗಿ ವಾಚಕರು ಚಂದ್ರಿಕೆಯನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಲಾಗುವದು.

ಇದರಲ್ಲಿ ಉಪಸಂಹಾರ ಕೂಡಿಸಿಕೊಂಡು ೧೧ ಪ್ರಕರಣಗಳಿರುವವು. ಅವುಗಳಲ್ಲಿ ಮೊದಲಿನ ೬ ಪ್ರಕರಣಗಳು ಶ್ರೀ ಗುರುವಿನ ನಿರ್ಯಾ

ಣದ ಭೂತಕಾಲದ ವೃತ್ತಾಂತದ ತಾತ್ತ್ವಿಕವಿವೇಚನದಿಂದ ತುಂಬಿರುವದರಿಂದ, ಅವುಗಳನ್ನು ವಾಚಕರು ಬಹು ಲಕ್ಷ್ಯಪೂರ್ವಕವಾಗಿ ಓದಬೇಕಾಗುವದು. ಈ ಪ್ರಕರಣಗಳನ್ನು ಬರೆಯದಿದ್ದರೆ, ಶ್ರೀ ಗುರುವಿನ ನಿರ್ಯಾಣ ಪ್ರಸಂಗದ ಸೋಪಪತ್ತಿಕಜ್ಞಾನವಾಗುತ್ತಿದ್ದಿಲ್ಲ. ೭ನೇ ೮ನೇ ೯ನೇ ಪ್ರಕರಣಗಳು ಶ್ರೀ ಗುರುವಿನ ನಿರ್ಯಾಣಮಹೋತ್ಸವಕ್ಕೆ ಪ್ರತ್ಯಕ್ಷ ಸಂಬಂಧಿಸಿದವಿದ್ದು, ಅವು ಶ್ರೀ ಗುರುವಿನ ನಿರ್ಯಾಣದ ವರ್ತಮಾನಕಾಲದ ಯ-ಥಾರ್ಥನಿರೂಪಣದಿಂದ ಕೂಡಿರುವದರಿಂದ, ವಾಚಕರಚಿತ್ತವನ್ನು ಸುಲಭವಾಗಿ ಆಕರ್ಷಿಸಿ, ಶ್ರೀ ಗುರುವಿನ ಮಹಿಮೆಯನ್ನು ಸ್ಪಷ್ಟೀಕರಿಸುವವು. ಮುಂದಿನ ೧೦ನೇ ೧೧ನೇ ಪ್ರಕರಣಗಳಲ್ಲಿ ಶ್ರೀ ಗುರುವಿನ ನಿರ್ಯಾಣದ ಭವಿಷ್ಯಕಾಲದಲ್ಲಾಗಬಹುದಾದ ಆನಂದವನದ ಸ್ಥಿತಿ-ಗತಿಯ ಬಗ್ಗೆ ಬರೆಯಲ್ಪಟ್ಟಿರುವದರಿಂದ, ಲೋಕಜಾಗ್ರತೆಗೆ ಸಹಕಾರವಾಗಿರುವದು. ಒಟ್ಟಿಗೆ ಶ್ರೀ ಗುರುವಿನ ನಿರ್ಯಾಣಮಹೋತ್ಸವದ ಸಾಂಗೋಪಾಂಗಜ್ಞಾನವಾಗಲಿಕ್ಕೆ ಹನ್ನೊಂದೂ ಪ್ರಕರಣಗಳನ್ನು ಸಮಾಧಾನದಿಂದ ಓದುವಂತೆ ಮಾಡಬೇಕೆಂದು ವಾಚಕರನ್ನು ಪ್ರಾರ್ಥಿಸಲಾಗುವದು.

ಈ ಹನ್ನೊಂದು ಪ್ರಕರಣಗಳಲ್ಲಿ “ಸದ್ಗುರುವಿನ ನಿರ್ಯಾಣೋನ್ಮುಖತೆ”ಯೆಂಬ ೬ ನೆಯ ಪ್ರಕರಣವನ್ನು ಹಲವು ಕಾರಣಗಳಿಂದ ತೆಗೆದುಬಿಡಬೇಕಾಯಿತೆಂದು ವಿಷಾದದಿಂದ ತಿಳಿಸುವದರ ಹೊರತು ಹೆಚ್ಚಿಗೆ ಏನೂ ಬರೆಯುವದಿಲ್ಲ. ಈ ಇಪ್ಪತ್ತು ಪುಟದ ಹಾನಿಯನ್ನು ಚಂದ್ರಿಕೆಯು ವಾಚಕರಿಗೆ ಎಂದಾದರೂ ತುಂಬಿಕೊಟ್ಟಾಳು, ಮರೆಯಲಿಕ್ಕಿಲ್ಲ.

ಇದೇನು ಕಥೆಯಲ್ಲ-ಕಾದಂಬರಿಯಲ್ಲ, ಎಂದು ವಾಚಕರು ತಿರಸ್ಕರಿಸಬಾರದು. ಎಷ್ಟು ಕಥೆಕಾದಂಬರಿಗಳನ್ನೋದಿದರೂ ಆಗದಷ್ಟು ಹಿತವು ತಾತ್ತ್ವಿಕ ಸತ್ಪುರುಷರ ಈ ನಿರ್ಯಾಣೋತ್ಸವವರ್ಣನವನ್ನು ಓದಿದ್ದರಿಂದ ಆಗಬಹುದು. ಈ ವಿಸ್ತೃತಲೇಖಾವಲೋಕನದ ಮೂಲಕ ಎಲ್ಲರಲ್ಲಿ ನಿಜವಾದ ಪ್ರೇಮೋತ್ಕರ್ಷವಾಗಿ, ಆನಂದವನದ ವಿದ್ಯಾದಾನಾದಿಪರೋಪಕಾರದ ಕಾರ್ಯಗಳು ಚಿರಕಾಲ ನಡೆಯುವಂತೆ ವಿದೇಹಸ್ಥಿತಿಯಲ್ಲಿರುವ ಶ್ರೀ ಶೇಷಾಚಲಸದ್ಗುರೂತ್ತಮನು ಅನುಗ್ರಹಿಸಲೆಂದು ಅನನ್ಯಭಾವದಿಂದ ಆತನನ್ನೇ ಪ್ರಾರ್ಥಿಸಿ, ಮುಂದಿನ ಕೆಲಸಕ್ಕೆ ತೊಡಗುವೆವು.

ಶಕೆ ೧೮೩೭ ರಾಕ್ಷಸಸಂವತ್ಸರದ<br>ಕಾರ್ತಿಕಶುದ್ಧ ೧೨ ಗುರುವಾರ,<br>ತಾ|| ೧೮-೧೧-೧೯೧೫.

ವಿಧೇಯ,<br>ವೆ. ತಿ. ಗಳಗನಾಥ.

ಶ್ರೀ ಶೇಷಾಚಲ-ಸದ್ಗುರೂತ್ತಮರ

# ನಿರ್ಯಾಣಮಹೋತ್ಸವ.

आनंदारण्याग्रहारे जनानाम् । व्यूहान् भक्त्या पूजयन्तं स्तुवन्तं॥
लोकैस्सर्वैःपूजितांघ्रिद्वयाब्जं । शेषाभिख्यं सद्गुरुं चिन्तयामि ॥

## ೧ನೆಯ ಪ್ರಕರಣ.

### ಶ್ರೀ ಸದ್ಗುರುವಿನ ಶ್ರೇಷ್ಠವಾದ ಸಂತಧರ್ಮ.

[೧] सन्तःस्वयं परहितेषु कृताभियोगाः ॥ भर्तृहरिः॥

[೨] जगाच्या कल्याणा संताच्या विभूति ॥
देहकष्टविती । उपकारे ॥१॥ तुकाराम ॥

(೩) ತನ್ನಂತೆ ಪರರ ಬಗೆದೊಡೆ, ಕೈಲಾಸ ಬಿನ್ನಣವಕ್ಕು ॥ ಸರ್ವಜ್ಞ ॥

ಶ್ರೀ ರಾಮಕೃಷ್ಣ ಪರಮಹಂಸರ ಸೂಕ್ತಿಮಾಲೆಯೊಳಗಿನ "ಎಲ್ಲವೂ ನಾನೇ" ಎಂಬ ಅದ್ವೈತ ಸಿದ್ಧಾಂತದಂತೆಯಾಗಲಿ, "ಎಲ್ಲವೂ ನೀನೇ" ಎಂಬ ವಿಶಿಷ್ಟಾದ್ವೈತ ಸಿದ್ಧಾಂತದಂತೆಯಾಗಲಿ, "ನೀನು ದೇವರು. ನಾನು ಭಕ್ತ" ಎಂಬ ದ್ವೈತ ಸಿದ್ಧಾಂತದಂತೆಯಾಗಲಿ ಜೀವನು ಸಿದ್ಧಿಯನ್ನು ಪಡೆದರೆ, ಆತನು ಮುಕ್ತನಾಗುವನೆಂದು ಸಜ್ಜನರು ಹೇಳುತ್ತ ಬಂದಿರುವರು. ಈ ತ್ರಿಮತಗಳ ಸಂಕ್ಷಿಪ್ತ ಸಿದ್ಧಾಂತಗಳಲ್ಲಿಯೂ, ಜೀವನು ತನ್ನ, ಹಾಗು ಪರಮೇಶ್ವರನ ಸ್ವರೂಪಜ್ಞಾನ ಮಾಡಿಕೊಳ್ಳಬೇಕೆಂಬ ಮಾತು ಸಾಧಾರಣವಾಗಿರುತ್ತದೆ. ಜ್ಞಾನಿಗಳು ಮಾತ್ರ ದ್ವೈತರಾಗಬಲ್ಲರು, ವಿಶಿಷ್ಟಾದ್ವೈತರಾಗಬಲ್ಲರು, ಅದ್ವೈತರಾಗಬಲ್ಲರು. ಈ ಮೂರು ಮತಗಳ ಅನುಭವವು ಜ್ಞಾನಿಗಳಿಗೊಬ್ಬರಿಗೆಮಾತ್ರ ಇರುವದು. "ನಾವು ಅದ್ವೈತರು" ಎಂಬ ಅಭಿಮಾನದಿಂದ ದ್ವೈತ-ವಿಶಿಷ್ಟಾದ್ವೈತರನ್ನು ನಿಂದಿಸುವವರೂ, "ನಾವು ದ್ವೈತರು" ಎಂಬ ಅಭಿಮಾನದಿಂದ ಅದ್ವೈತ-ವಿಶಿಷ್ಟಾದ್ವೈತರನ್ನು

ನಿಂದಿಸುವವರೂ, "ನಾವು ವಿಶಿಷ್ಟಾದ್ವೈತರು" ಎಂಬ ಅಭಿಮಾನದಿಂದ ದ್ವೈತಾದ್ವೈತರನ್ನು ನಿಂದಿಸುವವರೂ ಜ್ಞಾನಿಗಳೆನಿಸಿಕೊಳ್ಳಲಾರರು; ಯಾಕಂದರೆ, ನಿಂದಾಸ್ತುತಿಗಳು ಕಲ್ಪಕತೆಯ ಫಲಗಳಾದ್ದರಿಂದ, ಕಲ್ಪಕರಿಗೆ ವಸ್ತುಸ್ವರೂಪದ ನಿಷ್ಕರ್ಷಜ್ಞಾನವಿರುವದಿಲ್ಲ. ನಿಷ್ಕರ್ಷಜ್ಞಾನವುಳ್ಳವರಿಗೆ ಕೇವಲ ಅದ್ವೈತಾನುಭವದಲ್ಲಿ ದ್ವೈತ-ವಿಶಿಷ್ಟಾದ್ವೈತಗಳ ಅನುಭವವೂ, ಕೇವಲ ದ್ವೈತಾನುಭವದಲ್ಲಿ ಅದ್ವೈತ-ವಿಶಿಷ್ಟಾದ್ವೈತಗಳ ಅನುಭವವೂ, ಕೇವಲ ವಿಶಿಷ್ಟಾದ್ವೈತದ ಅನುಭವದಲ್ಲಿ ದ್ವೈತಾದ್ವೈತಗಳ ಅನುಭವವೂ ಆಗುವ ಸಂಭವವಿರುವದಿಲ್ಲ; ಆದ್ದರಿಂದ ಸ್ತುತಿ-ನಿಂದೆಗಳ ಬಾಧೆಯು ಏಕೀಭಾವದ ಅದ್ವೈತರನ್ನಾಗಲಿ, ವಿಶಿಷ್ಟಾದ್ವೈತರನ್ನಾಗಲಿ, ದ್ವೈತರನ್ನಾಗಲಿ ಹ್ಯಾಗೆ ತಟ್ಟಬೇಕು? ಕಾರಣ ಸ್ವಾರ್ಥಬುದ್ಧಿಯಿಂದ ನಿಂದಾ-ಸ್ತುತಿಗಳನ್ನು ಮಾಡುವವರನ್ನು ಅಜ್ಞಾನಿಗಳೆಂತಲೇ ಭಾವಿಸಬೇಕಾಗುವದು. ಜ್ಞಾನಿಗಳುಮಾತ್ರ ದ್ವೈತಾ-ದ್ವೈತಗಳ ಮೂರ್ತಿಮಂತ ಸ್ವರೂಪವಾಗಿರುವರು; ಅಂದರೆ ಅವರು ಅಂತರಂಗದಲ್ಲಿ ಏಕೀಭಾವವನ್ನೂ, ಬಹಿರಂಗದಲ್ಲಿ ದ್ವೈತಭಾವವನ್ನೂ ವಹಿಸಿರುವರು. 'ದ್ವೈತಭಾವದಲ್ಲಿಯಾದರೂ ಕೆಲವು ಮಹಾತ್ಮರು ಸ್ವೇತರ ಚರಾಚರಾತ್ಮಕ ಜಗತ್ತನ್ನೇ ಈಶ್ವರಸ್ವರೂಪವೆಂದು ಭಾವಿಸಿ, ತಾವು ದಾಸಭಾವವನ್ನು ವಹಿಸುವರು.' ಇದಕ್ಕೆ ತುಕಾರಾಮಾದಿ ಸಂತಮಂಡಲವೇ ಸಾಕ್ಷಿಯಾಗಿರುವದು. ಈ ಸಂತಮಂಡಲದಲ್ಲಿ ಶ್ರೀ ಶೇಷಾಚಲ ಸದ್ಗುರುಗಳ ಸಮಾವೇಶವಾಗುತ್ತದೆಂಬಮಾತು ಅವರ ಚರಿತ್ರಾವಲೋಕನದಿಂದ ಗೊತ್ತಾಗಬಹುದು; ಆದ್ದರಿಂದ ಅಗಡಿಯ ಶ್ರೀ ಸಾಧುಗಳನ್ನು ದ್ವೈತರು, ಅಥವಾ ಅದ್ವೈತರು, ಅಥವಾ ವಿಶಿಷ್ಟಾದ್ವೈತರು ಎಂದು ಕರೆಯದೆ, ಆ ತ್ರಿಮತಗಳಿಗೂ ತಲೆಬಾಗಿ ನಡೆಯುವ ಮಹಾಜ್ಞಾನಿಗಳೆಂದು ಕರೆಯುವದು ಸಮಂಜಸವಾಗಿರುವದು!!

ಮೇಲಿನ ಮೂರು ಮತಗಳೊಳಗೆ ಯಾವದೊಂದರಂತೆಯೋ ಆಗಲಿ, ಸದ್ಗುರುಕೃಪೆಯಿಂದ ಶಾಂತಿಯನ್ನು ಪಡೆದ ಜೀವಗಳನ್ನು ಮುಕ್ತಜೀವರೆಂತಲೂ, ಉಳಿದವರನ್ನು ಬದ್ಧಜೀವರೆಂತಲೂ ಕರೆಯಬೇಕಾಗುವದು. ಬಂಧನಕ್ಕೊಳಗಾಗಿ ನರಳುವದೂ, ನರಳುವವರನ್ನು ನೋಡಿ, ಅಥವಾ ಬಂಧನವನ್ನು ನೆನಿಸಿ ಭಯಪಟ್ಟು ತಾವು ಬಂಧನಕ್ಕೊಳಗಾಗದಂತೆ ಜಾಗರೂಕತೆಯಿಂದ ತಮ್ಮ ಮುಕ್ತಸ್ಥಿತಿಯನ್ನು ಕಾಯ್ದುಕೊಳ್ಳುವದೂ, ನರಳುವವರನ್ನು ನೋಡಿ ಕನಿಕರಪಟ್ಟು ಪರಮಕಾರುಣಿಕತೆಯಿಂದ ಪರರ ಬಂಧನವನ್ನು ನೀಗಲು ತಾನು ಬಂಧನಕ್ಕೊಳಗಾಗಿ ದುಃಖ

ಪಡುವದೂ, ಜೀವಸ್ವರೂಪವನ್ನು ಹೊಂದಿದ ಈಶ್ವರಾಂಶರ ಸರ್ವಸಾಧಾರಣವಾದ ಧರ್ಮವು, ಅಥವಾ ಲೀಲೆಯು ಎಂಬಂತೆ ಕಾಣುತ್ತದೆ. ಈ ಮೂರು ಧರ್ಮಗಳುಳ್ಳ ಜೀವಗಳನ್ನು ಕ್ರಮವಾಗಿ, ಅಧಮ, ಮಧ್ಯಮ, ಉತ್ತಮ ವರ್ಗಗಳಲ್ಲಿ ಸೇರಿಸಬೇಕಾಗುವದು. ಇವರಲ್ಲಿ ಮಧ್ಯಮ-ಉತ್ತಮ ವರ್ಗದ ಜೀವರಿಬ್ಬರೂ ಮುಕ್ತರೇ ಆದರೂ, ಅವರಲ್ಲಿ ಉತ್ತಮ ವರ್ಗದವರು ಪರಹಿತೈಕಬದ್ಧರಾದದ್ದರಿಂದ ಅವರು ಸ್ವಾರ್ಥಪರರಾದ ಮಧ್ಯಮವರ್ಗದ ಮುಕ್ತರಿಗಿಂತ ಶ್ರೇಷ್ಠರೆಂದು ಹೇಳತಕ್ಕದ್ದು. ತಾನು, ತನ್ನವರು, ಉಂಡುಟ್ಟು ಸುಖದಿಂದಿದ್ದರಾಯಿತು; ಜಗತ್ತು ಹಾಳಾದಭಾಗ್ಯವೇನು, ಅನ್ನುವ ಸಾಂಸಾರಿಕನಿಗಿಂತ, ಜಗತ್ತಿನ ಜನರ ಕಷ್ಟಗಳನ್ನು ನೋಡಿ ಮರುಗಿ, ಕೈಲಾದಮಟ್ಟಿಗಾದರೂ ಪರೋಪಕಾರ ಮಾಡುವ ಸಾಂಸಾರಿಕನು ಶ್ರೇಷ್ಠನೆಂಬ ಅನುಭವವು ನಮಗೆ ವ್ಯವಹಾರದಲ್ಲಿ ಬರುವದಿಲ್ಲವೆ? ಅದರಂತೆಯೇ ಜ್ಞಾನಿಗಳಲ್ಲಿಯಾದರೂ, ಅಜ್ಞಾನಿಗಳ ದುಃಖವನ್ನು ನೋಡಿ ಭಯಪಟ್ಟು ತಾವು ದುಃಖಕ್ಕೆ ಒಳಗಾಗದಂತೆ ಎಚ್ಚರಪಡುವವರಿಗಿಂತ, ಪರರಸಲುವಾಗಿ ತಾವೂ ದುಃಖಕ್ಕೆ ಒಳಗಾಗುವವರು ಶ್ರೇಷ್ಠರಾಗಿರುವರು. ಈ ಶ್ರೇಷ್ಠವರ್ಗದಲ್ಲಿ ಆಗಡಿಯ ಶ್ರೀ ಶೇಷಾಚಲಸದ್ಗುರುಗಳು ಬರುವದರಿಂದಲೇ, ಅವರನ್ನು ಮಹಾಜ್ಞಾನಿಗಳೆಂದು ಕರೆಯಬೇಕಾಗುವದು. ಈ ಮಹಾಜ್ಞಾನಿಗಳೇ ಸಂತರು, ಇವರೇ ಸಜ್ಜನರು, ಇವರೇ ಸದ್ಗುರುಗಳು, ಇವರೇ ಪರೋಪಕಾರಿಗಳು, ಇವರೇ ಜಗತ್ಕಲ್ಯಾಣಕರ್ತೃಗಳು, ಇವರೇ ದೇವರನ್ನು ಕಂಡವರು ಎಂದು ಹೇಳತಕ್ಕದ್ದು. ಈ ಮಹಾಜ್ಞಾನಿಗಳಲ್ಲಿಯೂ ಜಗತ್ತಿನ ಜನರ ಸಂಬಂಧಕ್ಕೆ ಪಾತ್ರತೆಯಿರುವಮೂನದಿಂದ, ಮೂರುವರ್ಗಗಳನ್ನು ಕಲ್ಪಿಸಬೇಕಾಗುವದು. ಸಜ್ಜನರು ತ್ರಿಗುಣಾತೀತರು, ಅಂದರೆ ತ್ರಿಗುಣಗಳ ಬಂಧನವನ್ನು ಮೀರಿದವರು ಆಗಿದ್ದರೂ, ಪರೋಪಕಾರಕ್ಕಾಗಿ ದೇಹಧಾರಣಮಾಡಿದ್ದರಿಂದ, ಅವರು ಯಾವದೊಂದು ಗುಣದ ಆರೋಪಕ್ಕೆ ಒಳಗಾಗಲೇಬೇಕಾಗುವದು . ಅವರಲ್ಲಿ ತಾಮಸಗುಣದ ಆರೋಪವುಳ್ಳವರಿಗಿಂತ ರಾಜಸಗುಣದ ಆರೋಪವುಳ್ಳವರೂ, ರಾಜಸಗುಣದ ಆರೋಪವುಳ್ಳವರಿಗಿಂತ ಸಾತ್ವಿಕಗುಣದ ಆರೋಪವುಳ್ಳವರೂ ಉತ್ತರೋತ್ತರ ಶ್ರೇಷ್ಠರೆಂದು ಹೇಳಲ್ಪಡುವರು; ಯಾಕಂದರೆ ಬಂಧನಕ್ಕೊಳಗಾದವರು, ತಾಮಸರಿಗಿಂತ ರಾಜಸರನ್ನೂ, ರಾಜಸರಿಗಿಂತ ಸಾತ್ವಿಕರನ್ನೂ ಮುಕ್ತಿ ಹರಿಯುವದು ಹೆಚ್ಚು. ಹೀಗೆ ಬಹುಜನರ ಹರತಕ್ಕೆ ಪಾತ್ರರಾದ, ಹಾಗು ಹಲವು ಜನರ ಹರತಗಳನ್ನು ತಡೆಯುವಷ್ಟು ಸತ್ವವುಳ್ಳ, ಸಾತ್ವಿಕಸತ್ಪುರುಷರ ಯೋಗ್ಯತೆಯನ್ನು ಪಾಮರರಾದ ನಾವು ಏನೆಂದು

ವರ್ಣಿಸಬೇಕು! ಆದ್ದರಿಂದ ಸಾತ್ವಿಕಶಿಖಾಮಣಿಗಳಾದ ನಮ್ಮ ಶ್ರೀ ಶೇಷಾಚಲ ಸದ್ಗುರೂತ್ತಮರ ಯೋಗ್ಯತೆಯನ್ನು ಮಹಾತ್ಮರಾದ ವಾಚಕರೇ ತರ್ಕಿಸಬಹುದಲ್ಲದೆ, ಅದನ್ನು ನಾವು ವರ್ಣಿಸಲಾರೆವು!!

ಒಟ್ಟಿಗೆ, ಶ್ರೀ ಶೇಷಾಚಲಸದ್ಗುರುಗಳು ಆತ್ಮಸ್ವರೂಪವನ್ನೂ, ಪರಮೇಶ್ವರಸ್ವರೂಪವನ್ನೂ ಬಲ್ಲವರಾದ್ದರಿಂದ, ಜ್ಞಾನಿಗಳು, ಅರ್ಥಾತ್ ಮುಕ್ತರು; ಆದರಲ್ಲಿ ಪರೋಪಕಾರಕ್ಕೋಸ್ಕರ ತಮ್ಮ ಮುಕ್ತಸ್ಥಿತಿಯ ಆನಂದಕ್ಕೆ ಎರವಾಗಿ, ಲೋಕಕಲ್ಯಾಣಕ್ಕಾಗಿ ಜನ್ಮತಾಳಿದವರಾದ್ದರಿಂದ ಮಹಾಜ್ಞಾನಿಗಳು, ಅರ್ಥಾತ್ ಸಮರ್ಥರು; ಹಾಗೆಯೇ ಸಮರ್ಥಸ್ಥಿತಿಯುಳ್ಳಯೂ ಪರಮಸಾತ್ವಿಕರಾದ್ದರಿಂದ, ಲೋಕಸಂಗ್ರಹದ ಬಾಹುಲ್ಯದಮೂಲಕ ಅವರು ಕೇವಲ ಸಮರ್ಥರೇ ಆಗಿರದೆ, ಪರಮಕಾರುಣಿಕರಾದ ಸಮರ್ಥರಾಗಿರುವರು. ಈ ವರೆಗೆ ಪರೋಪಕಾರಕ್ಕಾಗಿ ಅವತರಿಸಿದ ಹಲವು ಸತ್ಪುರುಷರ ಚರಿತ್ರಗಳು ಕೇಳಿಕೆಯಲ್ಲಿ ಬಂದಿರುವವು. ಈ ಕರ್ನಾಟಕ ಪ್ರಾಂತದಲ್ಲಿಯೇ ಮೊನ್ನೆ ಮೊನ್ನೆತನಕ ಹಲವುಜನ ಸತ್ಪುರುಷರು ಆಗಿ ಹೋಗಿರುವರು. ಶ್ರೀ ನಾಗಲಿಂಗಪ್ಪನವರಂಥ ಸತ್ಪುರುಷರು ತಾಮಸರಾದರು; ಗರಗದ ಶ್ರೀ ಮಡಿವಾಳಪ್ಪನವರಂಥ ಸತ್ಪುರುಷರು ರಾಜಸರಾದರು; ಗಂಜಿಯ ಗಟ್ಟಿಯ ಶ್ರೀ ಚರಂತಪ್ಪನವರಂಥ ಸತ್ಪುರುಷರು ವರ್ಣಾಶ್ರಮನಿಯಮಾತೀತರಾದರು; ಸದ್ಯಕ್ಕೆ ಪರಮಾನುಭವಜ್ಞಾನಿಗಳಾದ ಶ್ರೀ ಸಿದ್ಧಾರೂಢರು ಹುಬ್ಬಳ್ಳಿಯಲ್ಲಿ ಇರುವರು; ಅವರು ಚರಾಚರಾತ್ಮಕ ಜಗತ್ತನ್ನೇ ಈಶ್ವರಸ್ವರೂಪವೆಂದು ಭಾವಿಸಿ, ತಾವು ದಾಸಭಾವದಿಂದ ತಲೆಬಾಗಿ ತಲೆಬಾಗಿ, ಸಣ್ಣಾಗಿ ಸಣ್ಣಾಗಿ ನಡೆದು, ವರ್ಣಾಶ್ರಮಧರ್ಮಗಳಿಗೆ ವ್ಯತ್ಯಯಬಾರದಂತೆ ಆಚರಿಸುತ್ತ, ಜಗತ್ತಿನ ಜನರೊಳಗಿನವರೊಬ್ಬರು ತಾವಾಗಿ ಯಾವತರದ ಲೌಕಿಕ, ಪಾರಮಾರ್ಥಿಕಾಡಂಬರಕ್ಕೂ ಒಳಗಾಗದೆ, ಕೇಳುವವರ ಗದ್ದತುಟಿಗಳನ್ನು ಹಿಡಿದು, ಅತ್ಯಂತವಿನಯೋಕ್ತಿಗಳಿಂದ ಅಜ್ಞಾನರೂಪವಾದ ರೋಗದಿಂದ ನೋವಾಗದಂತೆ ಜನರನ್ನು ಮುಕ್ತರಾಗಮಾಡಲು ಯತ್ನಿಸುವ, ಹಾಗು 'ತನ್ನ ಮನೆಯಲ್ಲಿದ್ದ ದುಃಖವು ಪರರಮನೆಯಲ್ಲಿ, ಪರರಮನೆಯಲ್ಲಿದ್ದ ದುಃಖವು ತನ್ನ ಮನೆಯಲ್ಲಿ' ಎಂಬ ಸಾತ್ವಿಕಸಿದ್ಧಾಂತದಿಂದ ನಡೆಯುತ್ತ, ಕಡೆತನಕ ತಮ್ಮ ಸಾಧುತ್ವವನ್ನು ಕಾಯ್ದುಕೊಂಡು ಪಾರಾದ ಮಹಾತ್ಮರೆಂದರೆ, ನಾವು ನೋಡಿದವರಲ್ಲಿ ಆಗಡಿಯ ಶ್ರೀ ಸಾಧುಗಳೊಬ್ಬರೇ, ಎಂದು ಸ್ಪಷ್ಟವಾಗಿ ಹೇಳುವೆವು! ಪ್ರಿಯವಾಚಕರೇ, ನಮ್ಮ ಗುರುಗಳು ಶ್ರೇಷ್ಠರೆಂಬ ಅಭಿಮಾನವು ಯಾರಿಗೂ ಬಿಟ್ಟಿರುವದಿಲ್ಲ. ಹಾಗೆ ಅಭಿಮಾನತಾಳುವದು ನಿರರ್ಥಕವೆಂತಲೂ

ನಾವು ಹೇಳುವದಿಲ್ಲ; ಆದರೆ ಸ್ವತಃ ಜಗತ್ತಿಗೆ ಶಂಕರತ್ವವನ್ನು ಕೊಟ್ಟು, ತಾವು ಕಿಂಕರರಾಗಿ ಆಚರಿಸಿದ ಶ್ರೀ ಶೇಷಾಚಲಸದ್ಗುರುಗಳ ಶಿಷ್ಯರೆನಿಸಿಕೊಳ್ಳುವವರು, ತಮ್ಮ ಗುರುಗಳು ಮಹಾಶ್ರೇಷ್ಠರೆಂದು ಅಭಿಮಾನಪಟ್ಟರೆ ನೀವು ಒಪ್ಪಬಹುದೋ? ಅಂಥ ದುರಭಿಮಾನದ ಶಿಷ್ಯರನ್ನು ಅಗಡಿಯ ಸಾಧುಗಳ ಶಿಷ್ಯರೆಂದಾದರೂ ನೀವು ಭಾವಿಸಬಹುದೋ? ಜಗತ್ತೇ ಈಶ್ವರಸ್ವರೂಪವೆಂದು ಶ್ರೀ ಸದ್ಗುರುವು ಬೋಧಿಸುತ್ತ, ತಾನು ಸ್ವತಃ ಆಚರಿಸಿ ತೋರಿಸುವಾಗ, ಆತನ ಶಿಷ್ಯರು ತಮ್ಮ ಗುರುಗಳೇ ಎಲ್ಲರಿಗಿಂತಲೂ ಶ್ರೇಷ್ಠರೆಂದು ಹೇಳಿಕೊಂಡರೆ, ಯಾರು ಕೇಳಬೇಕು?

ಆದರೂ ಅಗಡಿಯ ಸಾಧುಗಳು ಶ್ರೇಷ್ಠರೆಂತಲೇ ನಾವು ಹೇಳುವೆವು; ಆದರೆ ಯಾತರಲ್ಲಿ? ದಾಸಭಾವದಲ್ಲಿ!! ಶ್ರೀಸಾಧುಗಳು ತಮ್ಮಲ್ಲಿ ಅಗಾಧವಾದ ಸಾಮರ್ಥ್ಯವಿದ್ದರೂ, ಅದನ್ನು ಜಗತ್ತಿನಲ್ಲಿ ಮೆರಿಸಿ ಶ್ರೇಷ್ಠರೆನಿಸಿಕೊಳ್ಳಲಿಲ್ಲ; ಆದರೆ ಅಭಿಮಾನದಿಂದ ತಮ್ಮ ಸಾಮರ್ಥ್ಯವನ್ನು ಸ್ವಲ್ಪವಾದರೂ ತೋರಗೊಡದೆ,

"त्वद्भक्तभक्तपारचारकभक्तभक्तदासस्यदासइतिमांस्मर लोकपाल"

ಎಂಬಂತೆ, ಕಿಂಕರರ ಕಿಂಕರರೆನಿಸಿಕೊಳ್ಳುವದರಲ್ಲಿ ಶ್ರೇಷ್ಠರಾದರು. ಅದರಂತೆ ತಾವು ಮಹಾಜ್ಞಾನಿಗಳಿದ್ದರೂ, ಕರ್ಮಮಾರ್ಗದಲ್ಲಿ ಔದಾಸೀನ್ಯವನ್ನು ತಾಳಿ, ಜಗತ್ತನ್ನು ಭ್ರಾಂತಿಗೀಡುಮಾಡುವದರಲ್ಲಿ ಶ್ರೇಷ್ಠರೆನಿಸಿಕೊಳ್ಳಲಿಲ್ಲ; ಆದರೆ ತಾವು ಮಹಾಭಯಗ್ರಸ್ತ ಸಾಂಪ್ರದಾಯಾಭಿಮಾನಿಗಳಂತೆ ವರ್ಣಾಶ್ರಮೋಚಿತ ಕರ್ಮಗಳನ್ನು ಭಾವನಾಯುಕ್ತವಾಗಿ ಆಚರಿಸಿ, ಡಾಂಭಿಕರ ಕರ್ಮಾಚರಣೆಯನ್ನು ನಿರ್ಭಿಡೆಯಿಂದ ನಿಷೇಧಿಸಿ, ಕರ್ಮಾಚರಣೆಯ ರಹಸ್ಯವನ್ನು ಸ್ಪಷ್ಟವಾಗಿ ತಿಳಿಸುವವರಲ್ಲಿ ಶ್ರೇಷ್ಠರೆನಿಸಿಕೊಂಡರು; ಹಾಗೆಯೇ ಸಾಧುಗಳು ಕಲ್ಲುಕೊಟ್ಟು ಬಂಗಾರಮಾಡುವದರಲ್ಲಿಯೂ, ಸತ್ತವರನ್ನು ಬದುಕಿಸುವದರಲ್ಲಿಯೂ, ಮಹಾರೋಗಾದಿಗಳನ್ನು ಸ್ಪರ್ಶಮಾತ್ರದಿಂದ ನಿವಾರಣಮಾಡುವದರಲ್ಲಿಯೂ, ಬಂಜೆಗೆ ಮಕ್ಕಳನ್ನು ಕೊಡುವದರಲ್ಲಿಯೂ, ದರಿದ್ರರನ್ನು ಶ್ರೀಮಂತರಾಗಮಾಡುವದರಲ್ಲಿಯೂ ಅರ್ಥಾತ್ ಪ್ರಾರಬ್ಧಭೋಗಕ್ಕೆ ಚ್ಯುತಿಯನ್ನುಂಟುಮಾಡುವದರಲ್ಲಿ ಶ್ರೇಷ್ಠರೆನಿಸಿಕೊಳ್ಳಲಿಲ್ಲ; ಆದರೆ ಪ್ರಸಂಗವಶಾತ್ ಪ್ರಕೃತಿಗುಣದಿಂದ ನಿರಾಲೋಚಿತವಾಗಿ ಇಂಥ ಹಲವು ಅಲೌಕಿಕ ಕೃತಿಗಳೊದಗಿದರೂ, ಅವುಗಳವಿಷಯವಾಗಿ ನಿರಭಿಮಾನಿಗಳೂ-ಸ್ಮೃತಿಹೀನರೂ ಆಗುವದರಲ್ಲಿಯೂ, ಇಂಥ ಮಾಯಾಸ್ಪದ ವ್ಯವಹಾರಗಳಿಂದ ಜನರ ವಾಸನೆಗಳನ್ನು ಹೆಚ್ಚಿಸಲಿಕ್ಕೆ ಹೇಸಿ, ಇಂಥ ವ್ಯವಹಾರಗಳಿಗೆ ಆಸ್ಪದವು ದೊರೆಯದಂತೆ ಎಚ್ಚರಪಡುವದರಲ್ಲಿಯೂ, ಮಾಯಾರಹಿತವಾದ ಪರಿಶುದ್ಧಾಚರಣೆ,

ಮಾಯೆಗೆ! ಆಸ್ಪದಕೊಡದಿರುವ ತ್ರಿಕಾಲಾಬಾಧಿತವಾದ ಶುದ್ಧವೂ-ಸಾತ್ವಿಕವೂ-ಸತ್ಯವೂ ಆದ ಅನುಭವದ ಬೋಧ ಇವುಗಳಿಂದ ಜನರ ವೃತ್ತಿಪರಿವರ್ತನಮಾಡಿ, ಅದನ್ನು ಸನ್ಮಾರ್ಗಕ್ಕೆ ಎಳೆಯುವವರಲ್ಲಿಯೂ ಶ್ರೇಷ್ಠರೆನಿಸಿಕೊಂಡರು. ಪ್ರಿಯ ವಾಚಕರೇ, ನಮ್ಮ ಗುರುಗಳು ಜನರನ್ನು ಕಂಡಕೂಡಲೆ ಈಶ್ವರಭಾವನೆಯಿಂದ ರಅವನ್ನು ಮಟ್ಟಮಾಡಲು ನಮಸ್ಕರಿಸುತ್ತಿದ್ದರಲ್ಲದೆ, ಅಹಂಭಾವನೆಯಿಂದ ತಾವು ಮೊದಲು ಜನರಿಂದ ನಮಸ್ಕೃತರಾಗಿ, ಆಮೇಲೆ ತಾವು ನಮಸ್ಕಾರ ಮಾಡುತ್ತಿದ್ದಿಲ್ಲ. ಜನರು ಒಮ್ಮೆ ನಮಸ್ಕಾರಮಾಡುವದರೊಳಗಾಗಿ, ಅವರು ಜನರಿಗೆ ಹತ್ತುಸಾರೆ ನಮಸ್ಕರಿಸುತ್ತಿದ್ದರು. ಶ್ರೀ ಸಾಧುಗಳು ತಮಗೆ ನಮಸ್ಕಾರಮಾಡುವವರನ್ನು ಕುರಿತು ಸತ್ಯವಾದ ಭಾವನೆಯಿಂದ—ಮಹಾರಾಜಾ, ನೀವು ಸ್ವತಃ ಈಶ್ವರಸ್ವರೂಪರಿದ್ದು, ಈ ದೇಹಕ್ಕೆ ಯಾಕೆ ನಮಸ್ಕರಿಸುತ್ತೀರಿ? ನಿಮ್ಮ ಹತ್ತುಜನರೊಳಗಿನದೇ ಇದು ಇರುತ್ತದೆ. ಇದರಲ್ಲಿ ಯಾವ ಯೋಗ್ಯತೆಯಿರುತ್ತದೆ? ಇದರ ಎದೆಸೀಳಿದರೆ ಮೂರು ಅಕ್ಷರಗಳಿಲ್ಲ; ಇದು ಸದ್ಗುರುವಿಗೆ ಶರಣುಹೋದದ್ದಲ್ಲ; ಜಗತ್ತನ್ನೇ ಈಶ್ವರಸ್ವರೂಪವೆಂದು ಭಾವಿಸಿದ್ದಲ್ಲ; ಮಾತಾಪಿತೃಗಳನ್ನು ದೇವರೆಂದು ಪೂಜಿಸಿದ್ದಲ್ಲ; ಭಾವನೆಯಿಂದ ಬ್ರಾಹ್ಮಣಾರಾಧನೆ ಮಾಡಿದ್ದಲ್ಲ; ಶುದ್ಧ ಕರಿಬಂಡೆಬೆಳೆದಂತೆ ಬೆಳೆದಿರುತ್ತದೆ; ಚಿಕ್ಕಂದಿನಲ್ಲಿ ಇದನ್ನು 'ಕುಂಟಸ್ವಾಸ'ನೆಂದು ಸಣ್ಣವರೂ, ದೊಡ್ಡವರೂ, ಮುದುಕರೂ ಕೂಡಿಯೇ ಕರೆದಿರುವರು. ಮಹಾರಾಜಾ, ಸ್ವಾಮಿಯು ತನ್ನ ಸೇವೆಯಲ್ಲಿ ಹ್ಯಾಗೆ ಇದನ್ನು ಎಳಕೊಂಡನೋ ತಿಳಿಯದು. ಅಭಿಮಾನದಿಂದ ಇದು ಸೇವೆಯನ್ನು ಮಾಡಿದರೆ, ಮೂರುದಿನ ನಡೆಯಲಾರದು." ಇತ್ಯಾದಿ ಯಥಾರ್ಥವಾದ ವಿನಯೋಕ್ತಿಗಳನ್ನು ನುಡಿಯುತ್ತಿದ್ದರು; ಆದ್ದರಿಂದಲೇ ನಮ್ಮ ಗುರುಗಳನ್ನು ದಾಸಭಾವತಾಳುವವರಲ್ಲಿ ಶ್ರೇಷ್ಠರೆಂದು ಮೇಲೆ ಹೇಳಿರುವೆವು.

ಪ್ರಿಯವಾಚಕರೇ, ನಮ್ಮ ಗುರುಗಳ ಈ ಕೈಂಕರ್ಯಭಾವವನ್ನೇ ಸಂತರ ಶ್ರೇಷ್ಠವಾದ ಧರ್ಮವೆಂದು ನಾವು ತಿಳಿಯುತ್ತೇವೆ: ಯಾಕೆಂದರ, ಈ ಪ್ರಕರಣದ ಮೇಲ್ಗಡೆಯಲ್ಲಿ ಬರೆದ ಭರ್ತೃಹರಿಯ ಸಂಸ್ಕೃತ ಉಕ್ತಿಯಂತೆ "ಸಂತರು ತಾವಾಗಿ ಪರಹಿತದಲ್ಲಿ ತೊಡಗಿದವರಾಗಿರುವರು." ತುಕಾರಾಮನ ಮಹಾರಾಷ್ಟ್ರ ಉಕ್ತಿಯಂತೆ "ಸಂತರ ವಿಭೂತಿಯು ಜಗತ್ತಿಗೆ ಕಲ್ಯಾಣಕಾರಕವಾಗಿರುವದು." ಸರ್ವಜ್ಞನ ಕನ್ನಡ ಉಕ್ತಿಯಂತೆ "ಸಂತರು ತನ್ನಂತೆ ಪರರನ್ನು ತಿಳಿಯುವರು" ಈ ಮೂವರ ಉಕ್ತಿಗಳಲ್ಲಿ ತುಂಬಿತುಳುಕುತ್ತಿರುವ ಸಂತರ ಶ್ರೇಷ್ಠವಾದ ಧರ್ಮದ ಮೂರ್ತಿಯೇ ಆಗಡಿಯ ಶ್ರೀ ಸಾಧುಗಳು ಆಗಿದ್ದರೆಂದು ಹೇಳುವೆವು; ಯಾಕಂದರೆ ಶ್ರೀ ಸಾಧು

ಗಳು ಯಾರಿಂದಲೂ ಪ್ರಾರ್ಥಿತರಾಗದೆ, ದೊಡ್ಡವರ ತಪೋಬಲಕ್ಕೆ ಮಣಿಯಾಗಿ ಪರಹಿತಕ್ಕೋಸ್ಕರ ತಾವಾಗಿ ಅಗಡಿಯ ಚಕ್ರವರ್ತಿಯವರ ಮನೆಯಲ್ಲಿ ಹುಟ್ಟಿ ಬಂದರು; ಹಾಗೆ ಹುಟ್ಟಿಬಂದಬಳಿಕ ಜಗತ್ತಿನ ಕಲ್ಯಾಣಮಾಡುವದಕ್ಕಾಗಿ ಅವರು, ಸಜ್ಜನರೂ-ದುರ್ಜನರೂ, ಸದಾಚಾರಿಗಳೂ-ದುರಾಚಾರಿಗಳೂ, ಪಾಪಿಗಳೂ-ಪುಣ್ಯವಂತರೂ, ಆಸ್ತಿಕರೂ-ನಾಸ್ತಿಕರೂ ಎಂಬ ಭೇದಭಾವವಿಲ್ಲದೆ, ನಿರಾತಂಕವಾಗಿ ತಮ್ಮನ್ನು ಎಲ್ಲರೂ ಮುಟ್ಟುವಂತೆ ತಾವು ಕೇವಲ ಸಾತ್ವಿಕಭಾವವನ್ನು ತಾಳಿದರು ; ಹೀಗೆ ಸಾತ್ವಿಕರಾದ ತಮ್ಮನ್ನು ಜನರು ಅನುಗ್ರಹಾಕಾಂಕ್ಷಿಗಳಾಗಿ ಮುತ್ತಲು, ಅವರ ಕಲ್ಯಾಣವನ್ನು ಮನಮುಟ್ಟಿ ಮಾಡುವದಕ್ಕಾಗಿ ತನ್ನಂತೆ ಪರರನ್ನು ತಿಳಿದು, ಮನುಷ್ಯನು ತನಗೆ ತಾನೇ ನಿಜವಾಗಿ ದಾಸನಾಗಿರುವಂತೆ, ಜಗತ್ತು ತಾನೆಂದು ತಿಳಿದು, ನಮ್ಮ ಸದ್ಗುರುವು ಜಗತ್ತಿಗೆ ದಾಸನಾದನು. ಪ್ರಿಯವಾಚಕರೇ, ತನಗೆ ತಾನೇ ದಾಸನಾಗುವದು ಹ್ಯಾಗೆಂದು ಸಂಶಯಬರುವ ಸಂಭವವಿರುವದರಿಂದ ಅದನ್ನು ಕುರಿತು ಸ್ವಲ್ಪ ವಿವೇಚಿಸುವೆನು, ಅವಧಾನವಿರಲಿ. ಈ ಜಗತ್ತಿನಲ್ಲಿ ನಮಗೆ ನಿಜವಾದ ದಾಸರು ನಾವೇ ಅಲ್ಲದೆ ಅನ್ಯರು ಆಗಲಾರರೆಂಬದನ್ನು ಚೆನ್ನಾಗಿ ನೆನಪಿನಲ್ಲಿಡತಕ್ಕದ್ದು. ನಮ್ಮಲ್ಲಿ ನಮ್ಮ ವಿಷಯವಾಗಿ ಸೇವ್ಯಸೇವಕವೆಂಬ ಎರಡು ಭಾವಗಳಿರುತ್ತವೆಂಬದನ್ನು ತೋರಿಸುವದಕ್ಕಾಗಿ ಒಂದು ಉದಾಹರಣವನ್ನು ಕೊಡೋಣ. ನಮಗೆ ಮಂಡಿಗೆತಿನ್ನುವ ಇಚ್ಛೆಯಾಗುತ್ತದೆಂದು ಕಲ್ಪಿಸುವಾ. ಮಂಡಿಗೆಯನ್ನು ತಿನ್ನುವ ಇಚ್ಛೆಯಾದಕೂಡಲೆ ಅದನ್ನು ಪ್ರಯತ್ನಪೂರ್ವಕವಾಗಿ ಸಂಪಾದಿಸುವದಕ್ಕೆ ನಾವೇ ಹೆಣಗುತ್ತೇವೆ; ಅಂದರೆ ಯಾವದೊಂದನ್ನು ಇಚ್ಛಿಸುವವರೂ ನಾವೇ; ಉಪಾಯಾಂತರಗಳಿಂದ ಹೆಣಗಿ, ಆ ಇಚ್ಛೆಯನ್ನು ಪೂರ್ಣಮಾಡಿಕೊಳ್ಳುವವರೂ ನಾವೇ. ಅಂದಬಳಿಕ ಇಚ್ಛಾರೂಪರಾದ ನಮ್ಮನ್ನು ಸೇವ್ಯರೆಂತಲೂ, ಇಚ್ಛಾಪೂರ್ತಿಗಾಗಿ ಪ್ರಯತ್ನರೂಪರಾದ ನಮ್ಮನ್ನು ಸೇವಕರೆಂತಲೂ ಎನಿಸಬೇಕಾಗುವದಲ್ಲವೆ? "आत्मैवात्मनोबंधुरात्मैवरिपुरात्मनः" ಎಂಬ ಭಉಕ್ತಿಯು ಇದೇ ಮಾತನ್ನು ಹೇಳುತ್ತದೆ. ನಾವು ತಾರಕವಾದ ಇಚ್ಛೆಗಳನ್ನು ತಾಳಿ ಅವುಗಳ ಪೂರ್ತಿಗಾಗಿ ಯತ್ನಿಸಿದರೆ, ನಮಗೆ ನಾವೇ ಬಂಧುಗಳೂ, ಮಾರಕವಾದ ಇಚ್ಛೆಗಳನ್ನು ತಾಳಿ ಅವುಗಳ ಪೂರ್ತಿಗಾಗಿ ಯತ್ನಿಸಿದರೆ, ನಮಗೆ ನಾವೇ ವೈರಿಗಳೂ ಆಗುವೆವು. ಒಟ್ಟಿಗೆ ನಮ್ಮಲ್ಲಿ ಸೇವ್ಯಸೇವಕಭಾವಗಳೆರಡೂ ಇರುತ್ತವೆಂದು ಒಡಂಬಡಬೇಕಾಗುವದು; ಅಂದಬಳಿಕ ತಮ್ಮಂತೆಯೇ ಜಗತ್ತನ್ನು ತಿಳಿಯುವ ಸಾಧುಗಳು, ಜಗತ್ತಿನಸಲುವಾಗಿ ಸೇವ್ಯಭಾವವನ್ನಾಗಲಿ, ಸೇವಕಭಾವವ

ನ್ನಾಗಲಿ ವಹಿಸಲೇ ಬೇಕಾಗುವದು; ಆದರೆ ಜಗತ್ತಿನ ಜನರು ಕಲಿಬಾಧೆಯಿಂದ ಪೀಡಿತರಾಗಿ ಉದ್ಧಾರಾದಿಕಾಮನಾಪರರಾಗಿರಲು, ಅವರ ಇಷ್ಟಾರ್ಥಪೂರ್ತಿಗಾಗಿ ಅವರ ರೂಪವೇ ಆಗಿರುವ ಸಾಧುಗಳು, ತಾವುಪ್ರಯುಕ್ತರೂಪರಾಗಿ ಜಗತ್ತಿಗೆ ಸೇವಕರಾಗಬೇಕಾಯಿತು. ಅಂದರೆ ಜಗತ್ತಿಗೂ ತಮಗೂ ಭೇದವಿಲ್ಲೆಂದು ತಿಳಿಯುವ ಶ್ರೀ ಸಾಧುಗಳು, ಉದ್ಧಾರಾಕಾಂಕ್ಷಿಯಾದ ತಮ್ಮ ಜಗದ್ರೂಪದಲ್ಲಿ ಸೇವ್ಯರಾಗಿಯೂ, ಉದ್ಧಾರಕ್ಕಾಗಿ ಯತಿಸುವ ತಮ್ಮ ಸಾಧುರೂಪದಲ್ಲಿ ಸೇವಕರಾಗಿಯೂ ಪರಿಣಮಿಸಿದರು. ಅಂದಬಳಿಕ ಶ್ರೀ ಶೇಷಾಚಲಸದ್ಗುರುಮಹಾತ್ಮರ ಈ ಸೇವಕ ಧರ್ಮವನ್ನು ಸಂತರ ಶ್ರೇಷ್ಠಧರ್ಮವೆಂದು ಯಾರಾದರೂ ಒಪ್ಪಿಕೊಳ್ಳಬಹುದಲ್ಲವೆ?

## ೨ನೆಯ ಪ್ರಕರಣ.

### ಶ್ರೀ ಗುರುವು ಲೋಕದ ಪಾಪವನ್ನು ಶೋಷಿಸಿದ್ದು.

**लोभमूलानि पापानि ॥**

ಮೇಲಿನ ಪ್ರಕರಣದಲ್ಲಿ ಜೀವರೊಳಗೆ ಬದ್ಧರು, ಮುಕ್ತರು ಎಂಬ ಎರಡು ವರ್ಗಗಳಿರುತ್ತವೆಂದು ಹೇಳಿದೆಯಷ್ಟೆ? ಹ್ಯಾಗಿದ್ದರೂ ಅವರು ಪರಮೇಶ್ವರನ ಅಂಶಭೂತರಾದದ್ದರಿಂದ ಅವರು ಪರಸ್ಪರ ಬಂಧುಗಳಾಗುವರು. ಈ ಬಂಧುಗಳ ಪರಸ್ಪರವಿಷಯಕ ಧರ್ಮವನ್ನು ಸ್ಪಷ್ಟವಾಗಿ ತಿಳಿಸುವದಕ್ಕಾಗಿ ತಂದೆಮಕ್ಕಳ ಒಂದು ವ್ಯಾವಹಾರಿಕ ಉದಾಹರಣವನ್ನು ತೆಗೆದುಕೊಳ್ಳುವಾ. ಧರ್ಮಾತ್ಮನೂ, ಕರ್ತೃತ್ವಶಾಲಿಯೂ ಆದ ಒಬ್ಬ ತಂದೆಗೆ ಇಬ್ಬರು ಅವಳಿ-ಜವಳಿ ಮಕ್ಕಳಿರುತ್ತಾರೆಂದು ಕಲ್ಪಿಸೋಣ. ಅವರಲ್ಲಿ ಒಬ್ಬನು, ಅಂದರೆ ಜನನ ಕ್ರಮದಿಂದ ಹಿರಿಯನಾದವನು ಕೇವಲ ತಂದೆಯ ಸದ್ಧರ್ಮದಲ್ಲಿ ದೃಷ್ಟಿಯುಳ್ಳವನಾಗಿ, ತಂದೆ ಸಂಪಾದಿಸಿದ ವಿಷಯಗಳಿಗೆ ಮಹತ್ವಕೊಡದೆ, ತನ್ನ ತಂದೆಯ ವೃತ್ತಿಯಂತೆ ತನ್ನ ವೃತ್ತಿಯೂ ಧರ್ಮತತ್ಪರನಾಗುವಹಾಗೆ ಯತ್ನಿಸುವನೆಂತಲೂ, ಕಿರಿಯಮಗನು ತಂದೆಯ ಸದ್ಧರ್ಮವನ್ನು, ಅರ್ಥಾತ್ ತಂದೆಯನ್ನು ಮರೆತು, ಕೇವಲ ತಂದೆ ಸಂಪಾದಿಸಿದ ಹೊಲ-ಮನೆ-ದುಡ್ಡು-ಮೊದಲಾದ ವಿಷಯಗಳಲ್ಲಿ ಆಸಕ್ತಿಯುಳ್ಳವನಾಗಿ, ಎಲ್ಲರನ್ನು ವಂಚಿಸಿ ತಂದೆಯ ಎಲ್ಲ ಗಂಟನ್ನು ತಾನೊಬ್ಬನೇ ತಿನ್ನಲು ಹವಣಿಸುತ್ತಾನೆಂತಲೂ ಭಾವಿಸೋಣ. ಇವರಲ್ಲಿ ಹಿರಿಯಮಗನು ತನ್ನ ತಂದೆಗಿಂತಲೂ ಆತ

ನಿಂದ ಸಂಪಾದಿಸಲ್ಪಟ್ಟ ವಿಷಯಗಳು ತುಚ್ಛವೆಂದು ತಿಳಿದು ಧರ್ಮತತ್ಪರನಾಗಿ, ತನ್ನ ವಿಷಯಾಸಕ್ತ ಬಂಧುವಿನ, ಅದರಂತೆ ಧರ್ಮಮೂರ್ತಿಯಾದ ತನ್ನ ತಂದೆಯ ಸುಖ-ಶಾಂತಿಗಳಿಗೆ ಭಂಗಬಾರದಂತೆ ನಡೆದು, ತಂದೆಯ ಕೃಪೆಗೆ ಪಾತ್ರನಾಗಿ ತಂದೆಯಂತೆ ಧರ್ಮಾತ್ಮನೂ, ಕರ್ತೃತ್ವಶಾಲಿಯೂ ಆಗಿ, ತಂದೆಯ ಅತ್ಯಪೇಕ್ಷಿತನಾಗಿ ಪರಿಣಮಿಸಿ ಪುತ್ರಧರ್ಮವನು ಸಫಲವಾಗಿ ಮಾಡುವನು. ಇಂಥ ಮಗನನ್ನು ನೋಡಿ ತಂದೆಯು ಸಂತೋಷಪಟ್ಟು ಮಗನು ಹೇಳಿದಹಾಗೆ ಕೇಳಲಿಕ್ಕೂ, ಆತನ ಸಂಕಟಗಳನ್ನು ನಿವಾರಿಸಲಿಕ್ಕೂ ಬದ್ಧಕಂಕಣನಾದರೆ ಆಶ್ಚರ್ಯವೇನು? ಇದಕ್ಕೆ ವಿರುದ್ಧವಾಗಿ ಕಿರಿಯಮಗನು ತನ್ನ ತಂದೆಯ ಧರ್ಮವನ್ನು, ಅರ್ಥಾತ್ ತಂದೆಯ ಗುರುತನ್ನು ಮರೆತುಬಿಟ್ಟು, ಆತನಿಂದ ಸಂಪಾದಿಸಲ್ಪಟ್ಟ ವಿಷಯಕ್ಕೆ ಮಾತ್ರ ಮಹತ್ವಕೊಟ್ಟು ಅದರಸಂಪಾದನೆಗಾಗಿ ಪರಿಪರಿಯಿಂದ ಯತ್ನಿಸುತ್ತ ಧರ್ಮಭ್ರಷ್ಟನೂ, ಕರ್ತವ್ಯಹೀನನೂ ಆಗಿ ಬಗೆಬಗೆಯ ದುಃಖಗಳಿಗೆ ಈಡಾಗಬಹುದು. ಇಂಥ ತಿಳಿಗೇಡಿ ಮಗನನ್ನು ನೋಡಿ ತಂದೆಯು ಸಿಟ್ಟಾಗಿ, ತನ ಕರ್ಮದ ಫಲವನ್ನು ತಾನು ಭೋಗಿಸಲೆಂದು ಆ ಮೂರ್ಖಮಗನ ಗೊಡವೆಗೆ ಹೋಗದೆ ಔದಾಸೀನ್ಯವನ್ನು ತಾಳಬಹುದೆಂದು ಬೇರೆಯಾಕೆ ಹೇಳಬೇಕು? ಹೀಗೆ ಇಬ್ಬರಿಗೂ ಜನ್ಮಕೊಟ್ಟ ತಂದೆಯು, ಅವರವರ ವೃತ್ತಿಗೆ ತಕ್ಕ ಫಲವನ್ನು ಕೊಡುತ್ತ, ಒಬ್ಬ ಮಗನಿಗೆ ತಾನು ಧರ್ಮರೂಪನಾಗಿಯೂ, ಒಬ್ಬ ಮಗನಿಗೆ ವಿಷಯರೂಪನಾಗಿಯೂ ತೋರುತ್ತ, ಕಿರಿಯಮಗನು ವಿಷಯಲೋಲುಪತೆಯಿಂದ ಹಿರಿಯಮಗನಿಗೆ ತೊಂದರೆ ಕೊಡುವಾಗ ಕಿರಿಯನಿಗೆ ತಕ್ಕಶಾಸನ ಮಾಡಿ ಹಿರಿಯನನ್ನು ರಕ್ಷಿಸುತ್ತ, ತನ್ನ ದುಷ್ಟಶಾಸನ-ಶಿಷ್ಟಪರಿಪಾಲನ ಧರ್ಮವನ್ನು ಪಾಲಿಸುತ್ತ ಇಬ್ಬರು ಮಕ್ಕಳನ್ನು ನಡಿಸಿಕೊಂಡು ಹೋಗಬಹುದು; ಆದರೆ ಈ ಅವಸರದಲ್ಲಿ ಧರ್ಮಮೂರ್ತಿಯೂ, ಅಂತೇ ಕರುಣಾಶಾಲಿಯೂ ಆದ ಹಿರಿಯಮಗನುಮಾತ್ರ ತನ್ನ ತಮ್ಮನು ದುಃಖಪಡುವದನ್ನು ನೋಡಿ ಮರುಗಿ, ತನ್ನ ತಮ್ಮನ ವಿಷಯಾಸಕ್ತಿಯನ್ನು ದೂರಮಾಡಿ ಆತನಿಗೆ ತಂದೆಯ ಗುರುತುಮಾಡಿಕೊಡಲು ಯತ್ನಿಸಿ, ತನ್ನ ಬಂಧುಧರ್ಮವನ್ನು ಪಾಲಿಸದೆ ಬಿಡುವದಿಲ್ಲ. ಕಿರಿಯಮಗನು ತನ್ನ ಧರ್ಮದಂತೆ ಹಿರಿಯನನ್ನು ವಿಷಯಾಸಕ್ತನಾಗುವಂತೆ ಮಾಡಲಿಕ್ಕೆ ಯತ್ನಿಸುತ್ತಿರಲು, ಹಿರಿಯಮಗನು ತನ್ನ ಧರ್ಮದಂತೆ ತನ್ನ ತಮ್ಮನನ್ನು ವಿಷಯಲೋಲುಪತೆಯಿಂದ ಉದ್ಧರಿಸಲಿಕ್ಕೆ ಯತ್ನಿಸದಿದ್ದರೆ ಆ ಹಿರಿಯಮಗನು ತನ್ನ ಬಂಧುಧರ್ಮವನ್ನು ಪಾಲಿಸಿದಹಾಗೆ ಆಗುವದಿಲ್ಲ. ಅದಕ್ಕಾಗಿಯೇ ಧರ್ಮಾತ್ಮನಾದ ಹಿರಿಯಮಗನು ತನ್ನ ತಮ್ಮನ ತಿಳಿಗೇಡಿತನವನ್ನು (ಅಜ್ಞಾನವನ್ನು) ದೂರಮಾಡುವದಕ್ಕಾಗಿ ತಾನೂ ತಮ್ಮನೊಡನೆ ವಿಷಯಾಸಕ್ತನಂತೆ

ಆಚರಿಸಿ ಆತನೊಡನೆ ಪರಿಪರಿಯ ಕಷ್ಟಗಳಿಗೆ ಗುರಿಯಾಗುತ್ತ ತಮ್ಮನ್ನು ಹಾದಿಗೆ ತರಲು ಹೆಣಗುವನು. ಶಿಕ್ಷಕನು ಘನವಿದ್ವಾಂಸನಾದರೂ ಚಿಕ್ಕಮಗುವಿಗೆ ಕಲಿಸುವಾಗ ತಾನೂ ಚಿಕ್ಕಮಗುವಿನಂತೆ ನಟಿಸಬೇಕಾಗುವದಲ್ಲವೆ?

ಪ್ರಿಯವಾಚಕರೇ, ಇದೇಮಾತನ್ನು ಉಜ್ವಲಧರ್ಮಮೂರ್ತಿಯೂ, ಮಹಾಕರ್ತೃತ್ವಶಾಲಿಯೂ ಆದ ಪರಮೇಶ್ವರನಿಗೂ, ಆತನ ಅಂಶಭೂತಜೀವರಿಗೂ ಹಚ್ಚಿಕೊಳ್ಳಿರಿ. ಈ ಸೃಷ್ಟಿಯು ಪರಮೇಶ್ವರನ ಕರ್ತೃತ್ವಶಾಲಿತ್ವದ ಫಲವಾಗಿರುತ್ತದೆ. ಆ ಷಡ್ಗುಣೈಶ್ವರ್ಯಸಂಪನ್ನನಾದ ಪರಮಾತ್ಮನಿಗೆ, ಆತನ ಧರ್ಮಸ್ವರೂಪರಾಗಿ ಮಹಾಜ್ಞಾನಿಗಳೆನಿಸುವ ಸದಾನಂದಮೂರ್ತಿಗಳಾದ ಹಲವು ಜನಮಕ್ಕಳೂ, ಸೃಷ್ಟಿಯ ತಂತ್ರಕ್ಕೊಳಗಾಗಿ ತಂದೆಯನ್ನು ಮರೆತು ಪರಿಪರಿಯತಾಪಕ್ಕೆ ಗುರಿಯಾಗಿ ಬಳಲುವ ಬಹುಜನಮಕ್ಕಳೂ ಇರುತ್ತಾರೆ. ಈ ಎರಡುವರ್ಗದ ಮಕ್ಕಳನ್ನೇ ಮೇಲಿನ ೧ ನೆಯಪ್ರಕರಣದಲ್ಲಿ ಕ್ರಮವಾಗಿ ಮುಕ್ತಜೀವರೆಂತಲೂ, ಬದ್ಧಜೀವರೆಂತಲೂ ವರ್ಗೀಕರಿಸಿದ್ದೇವೆ. ಮುಕ್ತಜೀವರಲ್ಲಿಯೂ ಶ್ರೀ ಶೇಷಾಚಲಸದ್ಗುರುಗಳಂಥವರು, ಸಮರ್ಥಮುಕ್ತರೆಂದು ಹೇಳಿದ್ದೇವೆ. ಸಮರ್ಥರಾದ ಶ್ರೀಶೇಷಾಚಲಸದ್ಗುರುಗಳು ತಮ್ಮ ೬೮ ವರ್ಷಗಳ ಅಸ್ತಿತ್ವದಲ್ಲಿ ತಮ್ಮ ಬಂಧುಗಳಾದ ಬದ್ಧಜೀವರ ಉದ್ಧಾರಕ್ಕಾಗಿ ಅವರೊಡನೆ ಹ್ಯಾಗೆ ಕಷ್ಟಪಟ್ಟರೆಂಬದನ್ನು ಅವರ ಸಾದ್ಯಂತವಿಸ್ತೃತಚರಿತ್ರವು ಪ್ರಕಟವಾದಾಗ ಓದಿ ವಾಚಕರು ತಿಳಕೊಳ್ಳಬಹುದು; ಆದರೆ ಸದ್ಯಕ್ಕೆ ಶ್ರೀಗುರುವಿನ ನಿರ್ಯಾಣಮಹೋತ್ಸವವನ್ನು ವರ್ಣಿಸಬೇಕಾಗಿರುವದರಿಂದ ಅವರು ಪರೋಪಕಾರಕ್ಕಾಗಿ ಕಟ್ಟಕಡೆಯಲ್ಲಿ ಪಟ್ಟಶ್ರಮವನ್ನು ಮಾತ್ರ ಇಲ್ಲಿ ಉಲ್ಲೇಖಿಸುವೆವು. ಈ ಪ್ರಕರಣದ ಶಿರೋಲೇಖದಲ್ಲಿ ಹೇಳಿದಂತೆ ಎಲ್ಲ ಪಾಪಗಳಿಗೂ ಲೋಭವೇ ಮೂಲವಾಗಿರುವದು. ಲೋಭಕ್ಕೆ ಮನೋಹರವಾದ ಸೃಷ್ಟಿಯು ಮೂಲವಾಗಿರುವದು. ಯಾವತ್ತು ಸೃಷ್ಟಪದಾರ್ಥಗಳ ಲೋಭಗಳ ಏಕೀಕರಣವು, ಆ ಪದಾರ್ಥಗಳ ವಿನಿಮಯಸಾಧನವಾದ ಧನಲೋಭದಲ್ಲಿ ಒಟ್ಟುಗೂಡಿರುವದರಿಂದ, ಧನಲೋಭವು ಎಲ್ಲ ಲೋಭಗಳಲ್ಲಿ ಅಗ್ರಗಣ್ಯವಾಗಿರುವದು. ಈ ಕಲಿಯುಗದಲ್ಲಿ ನಾವು ಧನಲೋಭದಿಂದ ಮಾಡುವ ಘೋರಪಾತಕಗಳನ್ನು ಮನಸ್ಸಿನಲ್ಲಿ ತಂದರೆ, ಮೈಮೇಲಿನ ಕೂದಲುಗಳು ನೆಟ್ಟಗಾಗಬಹುದು! ನಮ್ಮ ಕಣ್ಣುಗಳಲ್ಲಿ ಉತ್ಪನ್ನವಾಗಿದ್ದ ಧನಲೋಭದ ಪರಿಯು ದಪ್ಪವಾಗುತ್ತ ಹೋದಂತೆ, ನಮ್ಮ ಕಣ್ಣಿಗೆ ದೇವರೊಳಗಿನ ದೇವತ್ವವೂ, ಸತ್ಪುರುಷರೊಳಗಿನ ಸದ್ವೃತ್ತಿಯೂ ಮಾತಾಪಿತೃಗಳೊಳಗಿನ ಪೂಜ್ಯತೆಯೂ, ಬಂಧುಬಾಂಧವರೊಳಗಿನ ಸಹೃದಯತೆಯೂ, ಗುರುಹಿರಿಯರೊಳಗಿನ ವರಿಷ್ಠತ್ವವೂ, ಹೆಂಡತಿಯೊಳ

ಗಿನ ಅಕೃತ್ರಿಮತ್ವವೂ, ಮಕ್ಕಳೊಳಗಿನ ಆತ್ಮತ್ವವೂ ಕಾಣದಂತಾಗಿ, ಅವರೆಲ್ಲರು ಒಂದಿಲ್ಲೊಂದು ಬಗೆಯಿಂದ ಧನಲೋಭಾಭಿವೃದ್ಧಿಗೆ ಕಾರಣರಾಗಿ ಕುಳಿತಿರುವರು!! ಹಾಯ್ ಹಾಯ್! ಇಂಥ ದುರ್ಧರಪ್ರಸಂಗದಲ್ಲಿ ನಾವು ಸಾಂಸಾರಿಕ ತಾಪದಿಂದ ಹುರಪಳಿಸಿ ಹೋಗುತ್ತಿರುವಲ್ಲಿ ಆಶ್ಚರ್ಯವೇನು? ಲೋಭಗ್ರಸ್ತರಾದ ನಮಗೆ, ಉಂಡರೆ ಸುಖವಿಲ್ಲ-ಉಪವಾಸವಿದ್ದರೆ ಸುಖವಿಲ್ಲ; ಬಡವರಾದರೆ ಸುಖವಿಲ್ಲ-ದೈವವುಳ್ಳವರಾದರೆ ಸುಖವಿಲ್ಲ; ಲಗ್ನಮಾಡಿಕೊಂಡರೆ ಸುಖವಿಲ್ಲ-ಲಗ್ನಮಾಡಿಕೊಳ್ಳದಿದ್ದರೆ ಸುಖವಿಲ್ಲ; ಸಂಸಾರಮಾಡಿದರೆ ಸುಖವಿಲ್ಲ-ಸಂಸಾರಬಿಟ್ಟರೆ ಸುಖವಿಲ್ಲ; ಮಕ್ಕಳಾದರೆ ಸುಖವಿಲ್ಲ-ಮಕ್ಕಳಾಗದಿದ್ದರೆ ಸುಖವಿಲ್ಲ; ದುಸ್ಸಂಗಮಾಡಿದರೆ ಸುಖವಿಲ್ಲ-ಸತ್ಸಂಗಮಾಡಿದರೆ ಸುಖವಿಲ್ಲ; ಒಟ್ಟಿಗೆ ಲೋಭಗ್ರಸ್ತರಿಗೆ ಯಾವದರಲ್ಲಿಯೂ ಸುಖವಿಲ್ಲ. ಹೀಗೆ ಜಗತ್ತು ದುಃಖಮಗ್ನವಾಗಿರಲು, ಈ ದುಃಖದ ನಿಜವಾದ ಕಾರಣವನ್ನು ಅರಿತು ಅದನ್ನು ದೂರಮಾಡಿ ಜನರನ್ನು ಉದ್ಧರಿಸುವದಕ್ಕಾಗಿ ಸಮರ್ಥವಾದ ಒಂದು ಮುಕ್ತಜೀವವು, ಅಗಡಿಯ ಶುಕ್ಲಯಜುರ್ವೇದದ ಕಣ್ವಶಾಖೀಯ ಚಕ್ರವರ್ತಿಯವರ ಮನೆತನದಲ್ಲಿ ಅವತರಿಸಿ, ಶೇಷಭಟ್ಟನೆಂಬ ಹೆಸರಿನಿಂದ ಬೆಳೆಯಹತ್ತಿ, ಪ್ರಸಂಗ ಬದಗಿದ ಕೂಡಲೆ ತನ್ನ ಯಾಚನಾಧರ್ಮದಿಂದ ಸರ್ವಲೋಭಮೂಲವಾದ ಧನವನ್ನು ಗ್ರಹಿಸುತ್ತ ಜನರ ಪಾಪಶೋಷಣಮಾಡಹತ್ತಿತು!

ಶೇಷಭಟ್ಟರು ಬ್ರಾಹ್ಮಣರು, ವಿಶೇಷವಾಗಿ ವೈದಿಕವೃತ್ತಿಯ ಬ್ರಾಹ್ಮಣರಾದದ್ದರಿಂದ ಅವರಿಗೆ ಯಜನ-ಯಾಜನ, ದಾನ-ಪ್ರತಿಗ್ರಹ, ಅಧ್ಯಯನಾಧ್ಯಾಪನಗಳೆಂಬ ಷಟ್ಕರ್ಮಗಳ ಅಧಿಕಾರವು ಪ್ರಾಪ್ತವಾಗುವದಷ್ಟೆ? ಈ ಷಟ್ಕರ್ಮಗಳಲ್ಲಿ ಸತ್ವನಾಶಕವೂ, ಅತ್ಯಂತಭಯಪ್ರದವೂ ಅಂತೇತ್ಯಾಜ್ಯವೂ ಆದ ಪ್ರತಿಗ್ರಹಕರ್ಮವನ್ನು, ಅಂದರೆ ಯಾಚಕಕರ್ಮವನ್ನು ಶ್ರೀ ಸದ್ಗುರುಗಳು ಸ್ವೀಕರಿಸಿದ್ದು ಸಾಮಾನ್ಯಮಾತಲ್ಲ! ಲೋಭಗ್ರಸ್ತವಾದ ಈಗಿನ ಕಲಿಕಾಲದಲ್ಲಿ ನಿರಾತಂಕವಾಗಿ ಯಾಚನಾವೃತ್ತಿಯನ್ನು ನಡಿಸಿ ತಮ್ಮ ಸದ್ವೃತ್ತಿಯನ್ನು ಕಾಯ್ದುಕೊಳ್ಳುವದು ಸಮರ್ಥರಾದ ಮುಕ್ತರಿಗಲ್ಲದೆ ಅನ್ಯರಿಗೆ ಶಕ್ಯವಲ್ಲ. "कुक्षौतिष्ठति यस्यान्नं तस्यबुद्धिः प्रवर्तते" ಎಂಬ ಜ್ಞಾನಿಗಳ ಉಕ್ತಿಯಂತೆ, ದುರನ್ನ ಗ್ರಹಣದಿಂದ ದುರ್ವೃತ್ತಿಯಾಗುವದೊತ್ತಟ್ಟಿಗುಳಿದು, ಅಖಂಡ ೪೦ ವರ್ಷ ಉತ್ತರೋತ್ತರ ಅಭಿವೃದ್ಧಿಯಾಗುತ್ತ ನಡೆದ ಯಾಚನಾವೃತ್ತಿಯೊಡನೆ ತಮ್ಮ ಸಾಧುವೃತ್ತಿಯನ್ನು ಅತ್ಯುಜ್ವಲತೆಯಿಂದ ಪ್ರಕಟಿಸುತ್ತ ಹೋದ ಚಕ್ರವರ್ತಿಯ ಶೇಷಭಟ್ಟರ ಯೋಗ್ಯತೆಯು ಸಾಮಾನ್ಯವಾದದ್ದಿರಬಹುದೋ? ಆ ಯೋಗ್ಯತೆಯೇ ಶೇಷಭಟ್ಟರನ್ನು ಮೊದಲು ಸಾಧುಗಳೆಂದು ಕರೆ

ಸಿತು, ಆ ಮೇಲೆ ಗುರುಗಳೆಂದು ಕರೆಸಿತು, ಆ ಮೇಲೆ ಸದ್ಗುರುಗಳೆಂದು ಕರೆಸಿತು, ಆ ಮೇಲೆ ಸದ್ಗುರೂತ್ತಮರೆಂದು ಕರೆಸಿತು!! ಪ್ರಿಯವಾಚಕರೇ, ಕಳ್ಳರ ಮನೆಯ ಅನ್ನವನ್ನುಣ್ಣುವದರಿಂದ ಕಳ್ಳರೂ, ಸುಳ್ಳರ ಮನೆಯ ಅನ್ನವನ್ನುಣ್ಣುವದರಿಂದ ಸುಳ್ಳರೂ, ಷಟಿಂಗರ (ಜಾರರ) ಮನೆಯ ಅನ್ನವನ್ನುಣ್ಣುವದರಿಂದ ಷಟಿಂಗರೂ ಆದೇವೆಂಬ ಭಯದಿಂದ ಜ್ಞಾನಿಗಳು ಪರಾನ್ನವನ್ನೇ ಬಿಡುತ್ತಿರಲು, ಕಳ್ಳರ-ಸುಳ್ಳರ-ಷಟಿಂಗರ ಮನೆಯ ಅನ್ನವನ್ನು ಸಹ ಉಂಡು, ಆ ಅನ್ನಗಳೊಳಗಿನ ದೋಷಗಳನ್ನು, ಹೊತ್ತುಬಂದಾಗ ನೋಡೋಣವೆಂದು ಒತ್ತಟ್ಟಿಗೆ ಕಟ್ಟಿ ಇಟ್ಟು, ತಮ್ಮ ಉಜ್ವಲವಾದ ಸದ್ವೃತ್ತಿಯಿಂದ ದುರನ್ನವನ್ನು ಸದನ್ನವಾಗಿ ಮಾಡಿ ಉಪಯೋಗಿಸಿ, ಆ ಅನ್ನರೂಪವಾದ ತಮ್ಮ ಪ್ರಸಾದಗ್ರಹಣ ಮಾಡುವವರ ಪಾಪಕ್ಷಾಲನೆಮಾಡಿ ಕಡೆಗೂ ತಮ್ಮ ಸಾಧುತ್ವವನ್ನು-ಗುರುತ್ವವನ್ನು-ಸದ್ಗುರುತ್ವವನ್ನು-ಸದ್ಗುರೂತ್ತಮತ್ವವನ್ನು ಕಾಯ್ದುಕೊಂಡ ನಮ್ಮ ಸದ್ಗುರುಗಳ ಯೋಗ್ಯತೆಯನ್ನು ಮಹಾತ್ಮರಾದ ವಾಚಕರೇ ತರ್ಕಿಸತಕ್ಕದ್ದು! ಮೊಟ್ಟಮೊದಲು ಶೇಷಭಟ್ಟರು ಯಾಚನಾದ್ರವ್ಯದಿಂದ ಪೋಷಿತರಾಗಿ ಘೋರತಪಶ್ಚರ್ಯಮಾಡಿ, ಸತ್ಕರ್ಮನಿರತತೆಯು ಜ್ಞಾನಸಾಧನವೆಂಬದನ್ನು ಜಗತ್ತಿಗೆ ತೋರಿಸಿ ಸಾಧುಗಳೆನಿಸಿಕೊಂಡರು; ಆ ಮೇಲ ಸ್ವರೂಪಜ್ಞಾನಿಗಳಾದ ಶ್ರೀ ಸಾಧುವರ್ಯರು, ಅದೇ ಯಾಚನಾದ್ರವ್ಯದಿಂದ ಪರಿಪೋಷಿತರಾಗಿ ಸದ್ಬೋಧದಿಂದ ಜನರ ಚಿತ್ತಹರಣಮಾಡುತ್ತ ಗುರುಗಳೆನಿಸಿಕೊಂಡರು; ಆ ಮೇಲೆ ಶ್ರೀ ಗುರುಗಳು ಲೋಕಸಂಗ್ರಹಾಕಾಂಕ್ಷಿಗಳಾಗಿ ಅದೇ ಯಾಚನಾದ್ರವ್ಯದಿಂದ ತಮ್ಮ ಗೃಹಸ್ಥಾಶ್ರಮ ಧರ್ಮಕ್ಕೆ ಉಚಿತವಾದ ಅತಿಥಿಸೇವೆಯನ್ನು ಉಜ್ವಲವಾಗಿ ನಡಿಸಿ, ತಮ್ಮ ಸದ್ಬೋಧಾಮೃತದಿಂದ ಬಹುಜನರ ಚಿತ್ತವನ್ನು ಆಕರ್ಷಿಸಿ ಸದ್ಗುರುಗಳೆನಿಸಿಕೊಂಡರು; ಆಮೇಲೆ ಶ್ರೀ ಸದ್ಗುರುಗಳು ಅದೇ ಯಾಚನಾದ್ರವ್ಯದಿಂದ ಅತಿಥಿಸೇವೆಯೊಡನೆ ವೈದಿಕವಿದ್ಯಾದಾನಕ್ಕೆ ಆಸ್ಪದಕೊಟ್ಟು ತಮ್ಮ ಆನಂದವನವನ್ನು ಬ್ರಾಹ್ಮಣ್ಯಪ್ರಾಪ್ತಿಯ ಕ್ಷೇತ್ರವಾಗಮಾಡಿ ಸದ್ಗುರೂತ್ತಮರೆನಿಸಿಕೊಂಡರು. ಪ್ರಿಯವಾಚಕರೇ, ಸಾರ್ವತ್ರಿಕಯಾಚನೆಯು ಅನ್ನದಲ್ಲಿಯ ದೋಷವನ್ನು ತೆಗೆದುಹಾಕದಿದ್ದರೆ, ಆ ದೋಷಯುಕ್ತವಾದ ಅನ್ನದಿಂದ ಆನಂದವನಾಗ್ರಹಾರದಲ್ಲಿ ಇಂಥಿಂಥ ಪವಿತ್ರಕಾರ್ಯಗಳು ನಡೆಯಬಹುದೇ? ಅಂದಬಳಿಕ ಶ್ರೀ ಶೇಷಾಚಲಸದ್ಗುರುರೂಪನಾದ ಸಮರ್ಥ ದಲಾಲನು, ಜಗತ್ತಿನ ಪಾಪಿಗಳಾದ ನಮ್ಮಂಥವರನ್ನು ಯಾಚಿಸಿ, ತನ್ನ ಯಾಚನಾದ್ರವ್ಯದೊಳಗಿನ ದೋಷವನ್ನು ಒತ್ತಟ್ಟಿಗೆ ದುಂಡಗೆಮಾಡಿ ಇಟ್ಟು, ನಿರ್ದುಷ್ಟವಾದ ತನ್ನ ಅನ್ನದಿಂದ

ಅತಿಥಿಸತ್ಕಾರ-ವಿದ್ಯಾರ್ಥಿಗಳಪೋಷಣೆ-ಅನ್ನದಾನ ಮೊದಲಾದ ಪವಿತ್ರಕಾರ್ಯಗಳನ್ನು ಮಾಡಿ ಬಂದ ಪುಣ್ಯವನ್ನು ಅವರವರದು ಅವರವರಿಗೆ ಹಂಚಿಕೊಡುತ್ತ ಬಂದು ಲೋಕವನ್ನು ಪುನೀತವಾಗಿ ಮಾಡಿದನೆಂದು ಹೇಳಿದರೆ, ನೀವು ಯಾಕೆ ಒಪ್ಪಿಕೊಳ್ಳಲಿಕ್ಕಿಲ್ಲ?

ಇದರಿಂದ ಶ್ರೀಶೇಷಾಚಲಸದ್ಗುರುಗಳು ಭೂಮಿಯಲ್ಲಿ ಅವತರಿಸಿ ಮೂರು ಮಹತ್ವದಕಾರ್ಯಗಳನ್ನು ಮಾಡಿಜನರನ್ನು ಉದ್ಧರಿಸಿದರೆಂದು ಹೇಳಬೇಕಾಗುವದು. ೧ನೆಯ ಮಹತ್ಕಾರ್ಯವು, ಯಾಚನಾರೂಪದಿಂದ ಜನರ ಪಾಪಶೋಷಣಮಾಡಿ ಅವರನ್ನು ಪವಿತ್ರೀಕರಿಸಿದ್ದು. ೨ನೆಯ ಮಹತ್ಕಾರ್ಯವು, ತಾವು ಸಂಪಾದಿಸಿ ಸಿದ್ಧಮಾಡಿದ ಶ್ರೀಗುರುಪ್ರಸಾದರೂಪವಾದ ಪವಿತ್ರಾನ್ನಗ್ರಹಣಯೋಗವನ್ನು ಜನರಿಗೆ ಒದಗಿಸಿಕೊಟ್ಟು, ಅವರ ಬುದ್ಧಿಯನ್ನು ಸತ್ಕಾರ್ಯಪ್ರವರ್ತವಾಗಿ ಮಾಡಿದ್ದು. ೩ನೆಯ ಕಾರ್ಯವು, ಆ ಪವಿತ್ರಾಂತಃಕರಣದ ಜನರನ್ನು ತಮ್ಮ ಸದ್ಬೋಧದಿಂದ ಬೋಧಿಸಿ ತಮ್ಮಂತೆ ಮಾಡಿಕೊಳ್ಳಲಿಕ್ಕೆ ಯತ್ನಿಸಿದ್ದು. ಪ್ರಿಯವಾಚಕರೇ, ಇಂಥ ಮಹತ್ಕಾರ್ಯ ಮಾಡುವ ಶ್ರೀಸದ್ಗುರುವು ಲೋಭಗ್ರಸ್ತರಾದ ನಮ್ಮ ಮನೆಗೆ ಯಾಚನೆಗಾಗಿ ಬಂದನೆಂದರೆ ನಾವು—"ಸಾಧುಗಳು ದುಡ್ಡು ಎಳೆಯುವದಕ್ಕಾಗಿ ಬಂದರೆಂ"ದು ಕಾರ್ಪಣ್ಯವನ್ನು ತಾಳಿ, ನಮ್ಮ ಪಾಪವನ್ನು ಬಚ್ಚಿಟ್ಟು ನಾವುಹಾಳಾದೆವಲ್ಲದೆ, "ಸಾಧುಗಳು ನಮ್ಮ ಪಾಪಶೋಷಣಮಾಡಲಿಕ್ಕೆ ಬಂದರೆಂ"ದು ಸಂತೋಷಬಟ್ಟು ಅವರಿಗೆ ಸರ್ವಸ್ವವನ್ನು ಅರ್ಪಿಸಿ ನಿಷ್ಪಾಪರಾಗಿ ಅನುಗ್ರಹಕ್ಕೆ ಪಾತ್ರರಾಗಲಿಲ್ಲ!! ಆದರೂ ಕರುಣಾಳುವಾದ ಶ್ರೀ ಸದ್ಗುರುವು ನಮ್ಮ ಕೃಪಣರ ದಾನವನ್ನು ಅಲ್ಪವೆಂದು ನಿರಾಕರಿಸಲಿಲ್ಲ. "ಕುರಿ ಮೇದರೆ ಕುರುಬನಿಗೆ ಲಾಭವೆಂ"ಬಂತೆ, ಜನರ ಅಲ್ಪಪಾಪಶೋಷಣವಾದರೂ ಅಷ್ಟೇಲಾಭಕರವೆಂದು ಸಂತೋಷಬಟ್ಟು, ಕೊಟ್ಟದ್ದನ್ನು ಶ್ರೀ ಗುರುವು ಅತ್ಯಾದರದಿಂದ ಗ್ರಹಿಸಿ ಅಭಿನಂದಿಸುತ್ತಿದ್ದನು. "ಮಹಾರಾಜಾ, ಇದು ಭಿಕ್ಷೆಕನು, ಲಕ್ಷೀಕನಾಗಿದ್ದರೆ ಯಾತಕ್ಕೂ ಹೆದರುತ್ತಿದ್ದಿಲ್ಲ. ಎಲ್ಲ ಕೆಲಸವೂ ಅಂಗೈಮೇಲೆ ನಡೆಯಬೇಕಾಗಿದೆ; ಏನು ಮಾಡಬೇಕು ಮಹಾರಾಜಾ, ತಮ್ಮ ತಮ್ಮ ಸಂಸಾರಗಳೇ ತಮಗೆ ಭಾರವಾಗಿರುವ ಈಗಿನಕಾಲದಲ್ಲಿ ಯಾಚನೆಮಾಡುವಾಗ ಎಡಗೈಯಲ್ಲಿ ಜೀವಹಿಡಕೊಳ್ಳಬೇಕಾಗುತ್ತದೆ" ಎಂಬಿವೇ ಮೊದಲಾದ ವಿನಯೋಕ್ತಿಗಳನ್ನಾಡುತ್ತ, ಅಸಮರ್ಥನಂತೆ-ಪರಾಧೀನನಂತೆ-ದೀನನಂತೆ ಶ್ರೀಗುರುವು ನಟಿಸಿದ್ದನ್ನು ಬಹುಜನರು ನೋಡಿರಬಹುದು. ಎಂಥ ಕಷ್ಟಕಾಲದಲ್ಲಿಯಾದರೂ ಆತನು ತನ್ನ ಯಾಚನಾಕರ್ಮದಿಂದ ಜನರ ಪಾಪ

ಶೋಷಣಮಾಡುವದನ್ನು ನಿಲ್ಲಿಸಲಿಲ್ಲ. ಏಳುತಿಂಗಳು ವ್ಯಾಧಿಗ್ರಸ್ತನಾಗಿ ನರಳಿದನು, ಆದರೆ ದಾನಕೊಡುವವರು ತಮ್ಮ ಕೈಯನ್ನು ಮುಂದ ಮಾಡಲು, ಬೇನೆಯನ್ನು ಒತ್ತಟ್ಟಿಗಿಟ್ಟು, ಮೂರು ನಾಲ್ಕು ಜನರು ಬಹು ಸೂಕ್ಷ್ಮವಾಗಿ ಎಬ್ಬಿಸಿ ಕುಳ್ಳಿರಿಸಲು, ನಿರಾಮಯನಂತೆ ಎದ್ದು ಕುಳಿತು ಆದರದಿಂದ ದಾನವನ್ನು ಸ್ವೀಕರಿಸಿ, ಜನರನ್ನು ಬೋಧಿಸುತ್ತಿದ್ದನು! ಶ್ರೀ ಸಮರ್ಥ ರಾಮದಾಸಸ್ವಾಮಿಗಳು ಒಮ್ಮೆ ಶಿವಾಜಿಮಹಾರಾಜನು ದರ್ಶನಕ್ಕೆ ಬಂದಾಗ ತಮಗೆ ಛಳಿ ಬಂದಿರಲು, ರಾಜನೊಡನೆ ಮಾತಾಡಲಿಕ್ಕೆ ಪ್ರತಿಬಂಧವಾಗಬಾರದೆಂದು ಛಳಿಯನ್ನು ಮುಚ್ಚಿಕಟ್ಟಿ ಒತ್ತಟ್ಟಿಗಿಟ್ಟು ಶಿವಾಜಿಮಹಾರಾಜರೊಡನೆ ಮಾತಾಡಿದರೆಂದು ಕೇಳಿದ್ದರ ಅನುಭವವು, ಶ್ರೀ ಗುರುಗಳು ೭ ತಿಂಗಳು ಬೇನೆಬಿದ್ದಾಗ ಹಲವುಸಾರೆ ಆಯಿತು!! ಅದರಲ್ಲಿ ವಿಶೇಷವೇನಂದರೆ, ಶ್ರೀ ಸಮರ್ಥರಂತ ಸಾಧುಗಳು ಕಟ್ಟಿಟ್ಟ ಬೇನೆಯು ಗಂಟು ಮಾತ್ರ ಯಾರಿಗೂ ಕಾಣುತ್ತಿದ್ದಿಲ್ಲ!!

ನೆಟ್ಟಗಿರುವಾಗಿನದಕ್ಕಿಂತ ವ್ಯಾಧಿಗ್ರಸ್ತರಾಗಿದ್ದಾಗ, ಶ್ರೀ ಗುರುಗಳು ಜನರ ಪಾಪಶೋಷಣವನ್ನು ವಿಶೇಷವಾಗಿ ಮಾಡುವರೆಂದು ಹೇಳಬಹುದು. ನೆಟ್ಟಗಿದ್ದವರನ್ನು ನೋಡಿ ಸಹಾಯಮಾಡುವದಕ್ಕಿಂತ ರೋಗಾದಿಗಳಿಂದಪೀಡಿತರಾಗಿರುವವರನ್ನು ನೋಡಿ ಹೆಚ್ಚು ಸಹಾಯಮಾಡುವದು ಜನವಾಡಿಕೆಯಾಗಿರುವದಷ್ಟೇ? ಅದರಲ್ಲಿ ತಮ್ಮ ಸದ್ವೃತ್ತಿಯಿಂದಲೂ, ಸದ್ಬೋಧದಿಂದಲೂ, ಲೋಕಕ್ಕೆ ಅಲೌಕಿಕಾನುಭವಕೊಡುವದರಿಂದಲೂ ಜನರ ಚಿತ್ತವನ್ನು ಪೂರ್ಣವಾಗಿ ಆಕರ್ಷಿಸಿಕೊಂಡು, ಈಶ್ವರಾವತಾರವಾಗಿತೋರಿದ ಮಹಾತ್ಮರು ರೋಗಪೀಡಿತರಾಗಿ ಅವ್ಯಬಿದ್ದರ್ದೇಹಿಕರ್ಮದನೆವದಿಂದ ಯಾಚಿಸುವಾಗ ಅದಾವಭಾವಿಕನು ಆತುರದಿಂದ ದಾನಕೊಡಲು ಕೈಮುಂದೆ ಮಾಡದೆ ಇದ್ದಾನು? ಈಗಿನ ಕಠಿಣಕಾಲದಲ್ಲಿಯೂ ಶ್ರೀ ಗುರುಗಳು ತಮ್ಮ ಅಂತ್ಯೇಷ್ಟಿಯ ಕರ್ಮದಲ್ಲಿ ಮೂರುವರೆನಾಲ್ಕು ಸಾವಿರ ರೂಪಾಯಿ ವೆಚ್ಚ ಮಾಡಬೇಕೆಂದು ಹೇಳಿದ್ದನ್ನು ಕೇಳಿ, ಎಷ್ಟೋ ಜನರು ಭಕ್ತಿಯಿಂದಾಗಲಿ, ಅಭಿಮಾನದಿಂದಾಗಲಿ, ಪ್ರತಿಷ್ಠಾಕಾಂಕ್ಷೆಯಿಂದಾಗಲಿ, ಅನುಗ್ರಹದ ಆಶೆಯಿಂದಾಗಲಿ, ಭಯದಿಂದಾಗಲಿ, ನಾಚಿಕೆಯಿಂದಾಗಲಿ, ದ್ರವ್ಯಾದಿಗಳನ್ನು ಸದ್ಗುರುವಿಗೆ ಅರ್ಪಿಸುವದನ್ನು ನೋಡಿದರೆ—"श्रद्धयादेयं; अश्रद्धयादेयं; ह्रियादेयं; भियादेयं; संविदादेयं" ಇತ್ಯಾದಿ ಉಪನಿಷದ್ವಾಕ್ಯಗಳಂತೆ ದಾನಮಾಡಲು ಜನರಿಗೆ ಸದ್ಗುರುವು ಆಸ್ಪದಕೊಡುವಹಾಗೆ ತೋರುತ್ತಿತ್ತು! "ಮಹಾರಾಜಾ, ಗಾಳಿಬಿಟ್ಟಕೈಯಲ್ಲಿ ತೂರಿಕೊಳ್ಳಿರಿ; ಇಂಥ ಸಂಧಿಯು ಮುಂದೆ ಬೇಕೆಂದರೂ ಸಿಗಲಿಕ್ಕಿಲ್ಲ. ಉತ್ತರಕ್ರಿಯೆಯಲ್ಲಿ ಮಾಡತಕ್ಕ ಬ್ರಾಹ್ಮಣಸೇವೆಯನ್ನು

ವಸ್ಥೆಯಾಗಿದ್ದನ್ನು ಕಣ್ಣು ಮುಚ್ಚಿ ನೋಡಿ ಸಂತೋಷಪಡಬೇಕೆಂದು ಸ್ವಾಮಿಯು ದೇಹಧಾರಣಮಾಡಿರುವಂತೆ ತೋರುತ್ತದೆ. ಅನುಗ್ರಹಕ್ಕೆ ಪಾತ್ರರಲ್ಲದವರಿಂದ ಬ್ರಾಹ್ಮಣಸೇವೆಯು ಆಗದು. ಕಲಿಯುಗದಲ್ಲಿ ಬ್ರಾಹ್ಮಣಸೇವೆಯು ದುರ್ಲಭವು. ನೀವು ಈಗ ಸಹಾಯಮಾಡಿ ಸ್ವಾಮಿಯನ್ನು ಸಂತೋಷಪಡಿಸಿದರೂ ಚಿಂತೆಯಿಲ್ಲ; ಸ್ವಾಮಿಯು ದೇಹಬಿಟ್ಟ ಮೇಲೆ ಆತನ ಉತ್ತರಕಾರ್ಯಕ್ಕೆ ಸಹಾಯಮಾಡಿ ಅನುಗ್ರಹಕ್ಕೆ ಪಾತ್ರರಾದರೂ ಚಿಂತೆಯಿಲ್ಲ. ದೇವರು ಬುದ್ಧಿ ಕೊಟ್ಟ ಹಾಗೆ ಮಾಡಿರಿ; ಆಗ್ರತೋ ಇಲ್ಲವೋ!" ಎಂದು ಮನಃಪೂರ್ವಕವಾಗಿ ತನ್ನ ದಾಸಭಾವಕ್ಕನುಸರಿಸಿ ಹೇಳುವದನ್ನು ನೋಡಿದರೆ "ಎಲೈ ಬಂಧನಕ್ಕೊಳಗಾಗಿರುವ ಬಂಧುಗಳೇ, ಯಾಚನಾಧರ್ಮದಿಂದ ನಿಮ್ಮ ಪಾಪಶೋಷಣಮಾಡಿ ಅನುಗ್ರಹಿಸಲು ಅವತರಿಸಿದ ನನಗೆ ಏನಾದರೂ ಕೊಟ್ಟು ಕೃತಾರ್ಥರಾಗಿರಿ." ಎಂದು ಮಮತೆಯಿಂದ ಬೋಧಿಸುತ್ತಿರುವಂತೆ ತೋರುತ್ತಿತ್ತು. ಒಟ್ಟಿಗೆ ಸದ್ಗುರುವು ಶ್ರೀ ಸಮರ್ಥರಾಮದಾಸರ "मनाचंदनाच्यापरित्वाझिजावे" ಎಂಬ ಉಕ್ತಿಯಂತೆ, ಪರೋಪಕಾರದಲ್ಲಿ ದೇಹವನ್ನು ಚಂದನದ ಕೊರಡಿನಂತೆ ಸವಿಸಿ ಅದು ಕೈಗೆ ಬಾರದ ಹಾಗಾದ ಬಳಿಕ ಚೆಲ್ಲಿಕೊಡಬೇಕೆಂದು, ದೇಹವು ರೋಗಬಾಧೆಯಿಂದ ತಾನಾಗಿ ಉದುರಿಬೀಳುವವರೆಗೆ ಭರದಿಂದ ಯಾಚನೆಮಾಡಿ ಜನರನ್ನು ಪುನೀತರಾಗಮಾಡಿದರು. ಆಹಾ! ಸದ್ಗುರುವಿನ ಈ ಪರಮಕಾರುಣಿಕತೆಯನ್ನು ವರ್ಣಿಸುವ ಯೋಗ್ಯತೆಯು ನಮಗಿಲ್ಲ! ಅಸಹ್ಯವಾದ ರೋಗದ ಮಹಾಬಾಧೆಯನ್ನು ಅನುಭವಿಸುತ, ಮಾಂಸರಕ್ತಶುಷ್ಕವಾದ ಅಸ್ಥಿಪಂಜರವು ಗಾದಿಗೆ ಒತ್ತಿ ವ್ಯಥೆಪಡಿಸುತ್ತಿರಲು, ಜನರ ಯೋಗಕ್ಷೇಮವನ್ನು ವಿಚಾರಿಸುವಾಗೂ, ನಾಲ್ಕು ಬೋಧವಚನಗಳನ್ನು ನುಡಿಯುವಾಗೂ ಆಯಾಸವಾಗುತ್ತಿರಲು, ಧರ್ಮವು ಲೇಶವಾದರೂ ಕಣ್ಣಿಗೆ ಬೀಳದೆ, ಸ್ವಾರ್ಥದಲ್ಲಿಯೇ ಆಗುವ ಜನರ ಪ್ರವೃತ್ತಿಯನ್ನು ನೋಡಿ ಅಂತರಾತ್ಮನು ತಳಮಳಿಸುತ್ತಿರಲು, "ಈಗಲೇ ದೇಹಬಿಡಬಾರದೆಂ"ದು ಜನರು ಮೋಹದಿಂದ ಪ್ರಾರ್ಥಿಸುವಾಗ ತನ್ನ ದಾಸವೃತ್ತಿಗೆ ಭಂಗಬಾರದಂತೆ ಆಜ್ಞೆಯ ಉಲ್ಲಂಘನವನ್ನು ಮಾಡದೆ ಹ್ಯಾಗೆ ಪಾರಾದೇನೆಂಬ ಚಿಂತೆಯು ನೋಯಿಸುತ್ತಿರಲು, ಎಲೈ ಸದ್ಗುರುವೇ? ನೀನು ಅಸಹ್ಯಪಡಲಿಲ್ಲ; ಜನರನ್ನು ನಿರಾಕರಿಸಲಿಲ್ಲ; ಕವಕ್ಕನೆ ಅವರ ಮೈಮೇಲೆ ಹೋಗಲಿಲ್ಲ; ಆಗ ನೀನು ಅತ್ಯಂತ ಸಮಾಧಾನದಿಂದಲೂ, ದಕ್ಷತೆಯಿಂದಲೂ ಜನರ ಪಾಪಶೋಷಣಮಾಡಿದೆ. ಇಂಥ ಭೂತದಯಾಪರನಾದ ನಿನಗೆ ಪಾಮರನಾದ ನನ್ನ ಅನಂತ ಪ್ರಣಾಮಗಳಿರಲಿ

ಸದ್ಗುರೂತ್ತಮನೇ, ಇಂಥ ಅಗಾಧಧರ್ಮವುಳ್ಳ ನೀನೇ ಧನ್ಯನು! ನೀನೇ ಪರೋಪಕಾರಿಯು!! ನೀನೇ ಭೂತದಯಾಪರನು!!! ಇಂಥ ನಿನ್ನನ್ನು ಪುನಃ ಪುನಃ ನಾನು ವಂದಿಸುತ್ತೇನೆ!

## ೩ನೆಯ ಪ್ರಕರಣ.

### ಶ್ರೀಗುರುವು ಲೋಕದ ಪಾಪವನ್ನು ತಾನು ಭೋಗಿಸಿದ್ದು!

**ईश्वरकृपेच्याहो पुढे प्रारब्धकायसे बापुडे ॥**

ಶ್ರೀ ಶೇಷಾಚಲ ಸದ್ಗುರುವು ಶ್ರೇಷ್ಠನಾದ ಸಂತಧರ್ಮವುಳ್ಳವನು, ಮೇಲೆ ಲೋಕದ ಪಾಪವನ್ನು ಶೋಷಿಸಿ ತಾನು ಅದರ ಬಾಧೆಗೆ ಒಳಗಾಗದೆ ಲೋಕವನ್ನು ಪುನೀತವಾಗ ಮಾಡಲು ಸಮರ್ಥನಾದವನು. ಹೀಗಿದ್ದು, ಸಾಮಾನ್ಯಜನರಿಗಿಂತಲೂ ಪರಾಧೀನನಾಗಿ ಏಳುತಿಂಗಳುಬೇನೆಯನು ಯಾಕೆಭೋಗಿಸಿದನೆಂಬ ವಿಚಾರವು ವಾಚಕರ ಮನಸ್ಸಿನಲ್ಲಿ ಬಂದಿರಬಹುದೆಂಬದಿಷ್ಟೇಅಲ್ಲ, ಲೇಖಕನೂ ಮೊದ-ಮೊದಲುಈ ಶಂಕೆಯಿಂದ ಪೀಡಿತನಾಗಿದ್ದನು; ಆದರೆ ಸದ್ಗುರುವಿನ ಈ ಅಗಾಧವಾದ ವ್ಯಾಧಿಯ ಅನುಭವವೇ ಆತನ ಮಹಾಮಹಿಮೆಗೂ, ಕರುಣಾಳುತನಕ್ಕೂ ಸಾಕ್ಷಿಯಾಗಿರುತ್ತದೆಂಬಮಾತು, ಆತನ ನಿರ್ಯಾಣ ಮಹೋತ್ಸವ ವರ್ಣನವನ್ನು ವಿಚಾರಪೂರ್ವಕವಾಗಿ ಸಂಪೂರ್ಣ ಓದಿದಮೇಲೆ ಲೇಖಕನಂತೆ ವಾಚಕರ ಅನುಭವಕ್ಕೆ ಸಹ ಬರಬಹುದು! ಶ್ರೀ ಸದ್ಗುರುವು ಬೇನೆಯನ್ನು ಭೋಗಿಸುವಾಗ ಆಗಾಗ್ಗೆ "ಮಹಾರಾಜಾ, ದೇಹಕ್ಕೂ-ಪ್ರಾರಬ್ಧಕ್ಕೂ ಗಂಟುಇರುತ್ತದೆ, ಭೋಗಿಸಿಯೇ ತೀರಬೇಕು" ಎಂದು ನುಡಿಯುತ್ತಿದ್ದನು. ಈಶ್ವರಕೃಪೆಯಿಂದ ಪ್ರಾರಬ್ಧ ನಾಶವಾಗುತ್ತದೆಂದು ದೊಡ್ಡವರು ಹೇಳುತ್ತಿರಲು, ಈಶ್ವರಕೃಪೆಗೆ ಪಾತ್ರರಾದವರಿಷ್ಟೇಅಲ್ಲ, ಸ್ವತಃ ಈಶ್ವರಾವತಾರವೆನಿಸುವ ಶ್ರೀ ಗುರುಗಳಿಗೆ ಪ್ರಾರಬ್ಧವೆಲ್ಲಿಂದ ಬಂತೆಂಬ ವಿಚಾರವು ಉತ್ಪನ್ನವಾಗಿ ಮನಸ್ಸು ಕುಂಠಿತವಾಗುತ್ತದೆ. ಎಷ್ಟೋ ದಿವಸಗಳಿಂದ ಈ ಶಂಕೆಯು ಲೇಖಕನನ್ನು ಬಾಧಿಸುತ್ತಿರಲು, ಆತನ ಆ ಶಂಕೆಯು ಶ್ರೀಗುರುವಿನ ಅಗಾಧವಾದ ರೋಗಾನುಭವವನ್ನು ನೋಡಿ ಮತ್ತಿಷ್ಟು ಹೆಚ್ಚಾಗಿ,

ಆತನು ಶ್ರೀ ಗುರುವಿನ ಬಳಿಗೆ ಹೋದಾಗ ಆತನ ಹತ್ತಿರ ಕುಳಿತು ತನ್ನ ಈ ಶಂಕೆಯನ್ನು ಕುರಿತು ಆಲೋಚಿಸತೊಡಗುವನು. ಹೀಗಿರುವಾಗ ಲೇಖಕನು ಹಿಂದೆ ಒಮ್ಮೆ ಶ್ರೀ ಗುರುವಿನಮುಂದೆ—"ಭಕ್ತರ ಕರ್ಮಗಳು ದೇವರಿಗೂ, ಶಿಷ್ಯರ ಕರ್ಮಗಳು ಗುರುಗಳಿಗೂ, ಲೋಕದ ಕರ್ಮಗಳು ಲೋಕೋದ್ಧಾರಕರಿಗೂ ಪ್ರಾರಬ್ಧರೂಪದಿಂದ ಪರಿಣಮಿಸುತ್ತಿರಬಹುದೆಂ"ದು ನುಡಿದದ್ದಕ್ಕೆ ಶ್ರೀ ಗುರುವು ಒಪ್ಪಿಕೊಂಡದ್ದು ಪಕ್ಕನೆ ನೆನಪಾಯಿತು. ಆಗ ಲೇಖಕನಿಗೆ ಸಮಾಧಾನವಾದಂತಾಗಿ, ಆತನು ಸದ್ಗುರುವಿನ ರೋಗಾನುಭವದ ಉಪಪತ್ತಿಯನ್ನು ಕುರಿತು ಶೋಧಿಸಹತ್ತಿದನು. ಆಗ ಆತನಿಗೆ ಸಮರ್ಪಕವಾದ ಹಲವು ಉದಾಹರಣಗಳು ನೆನಪಾಗಿ ಶ್ರೀ ಗುರುವಿನ ರೋಗಾನುಭವದ ಒಂದೊಂದೇ ಕಾರಣಗಳು ಆತನ ಮನಸ್ಸಿಗೆ ಹೊಳೆಯಹತ್ತಿದವು. ಸಂಸಾರದಲ್ಲಿಯಾದರೂ ಒಬ್ಬರ ಕರ್ಮಗಳು ಇನ್ನೊಬ್ಬರಿಗೆ ಬಾಧಿಸುತ್ತವೆಂಬದನ್ನು ಸುಲಭವಾಗಿ ಮನಗಾಣಬಹುದು. ಧರ್ಮರಾಜನು ಯಕ್ಷನನ್ನು ಕುರಿತು—"ಸದಾ ದುಃಖಿಯು ಯಾರು" ಎಂದು ಪ್ರಶ್ನೆಮಾಡಿದಾಗ "ಯಾವನ ಕುಟುಂಬವು ದೊಡ್ಡದೋ ಅವನು" ಎಂದು ಯಕ್ಷನು ಕೊಟ್ಟ ಉತ್ತರವು ವಿಚಾರಮಾಡತಕ್ಕದ್ದಾಗಿದೆ. ದೊಡ್ಡ ಕುಟುಂಬದವನು ಹಲವು ಜನರಿಗೆ ಸಂಬಂಧಪಟ್ಟವನಾದ್ದರಿಂದ, ಆ ಸಂಬಂಧಿಕರೊಡನೆ ಅವರೆಲ್ಲರ ಕರ್ಮದ ಸಂಬಂಧವೂ ಅವನಿಗಾಗಿ ಆತನು ಅವರವರ ಕರ್ಮಗಳ ಫಲಗಳನ್ನು ಭೋಗಿಸಬೇಕಾಗುವದು. ನಯ-ಭಯಗಳಿಲ್ಲದೆ ಮನಬಂದಂತೆ ನಡೆಯುವ ಹೆಂಡಿರು-ಮಕ್ಕಳು-ಬಂಧುಬಳಗದವರು ಉಳ್ಳ ಕುಟುಂಬದ ಯಜಮಾನನಿಗೆ ಈ ಮಾತಿನ ಅನುಭವವು ಚೆನ್ನಾಗಿ ಬರಬಹುದಾಗಿ ತೋರುತ್ತದೆ. "ನಿನ್ನ ಕಾಲಲ್ಲಿ ಇಷ್ಟೆಲ್ಲ ಭೋಗಿಸಬೇಕಾಯಿತು," ಎಂಬ ಆಕ್ಕಸದ ನುಡಿಯು, ಸಾಂಸಾರಿಕರಾದ ನಮ್ಮಲ್ಲಿ ಬಹುರೂಢವಾಗಿರುವದು ಇದಕ್ಕೆ ಸಾಕ್ಷಿಯಾಗಿರುತ್ತದೆ.

ಈ ಮೇರೆಗೆ ಸಂಸಾರದಲ್ಲಿ ಕುಟುಂಬದವರ ಕರ್ಮಗಳೂ, ಸಮಾಜದವರ ಕರ್ಮಗಳೂ, ದೇಶದವರ ಕರ್ಮಗಳೂ ಹೆಚ್ಚುಕಡಿಮೆಪ್ರಮಾಣದಿಂದ ಪರಸ್ಪರ ಬಾಧಿಸುವಂತೆ, ಭಕ್ತರ, ಹಾಗು ಲೋಕದ ಕರ್ಮಗಳು ದೇವರನ್ನೂ, ಶಿಷ್ಯರ, ಹಾಗು ಲೋಕದ ಕರ್ಮಗಳು ಲೋಕೋದ್ಧಾರಕ ಗುರುಗಳನ್ನೂ ಬಾಧಿಸುತ್ತವೆ. ಯಾದವರ ಉದ್ಧತತನದಿಂದ ಒಬ್ಬ ಸತ್ಪುರುಷನು ಅವರಿಗೆ—"ನಿಮ್ಮ ವಂಶಕ್ಷಯವಾಗಲೆಂ"ದು ಶಾಪಕೊಡಲು, ನಿರಪರಾಧಿಯಾದ ಶ್ರೀ ಕೃಷ್ಣನು ಅವತಾರಿಕನಾದರೂ ಗಿಡದ ಬುಡದಲ್ಲಿ ಬಿದ್ದು ಬಾಣತಾಕಿ ಪ್ರಾಣಬಿಡಬೇಕಾಯಿತು!

ಭಕ್ತರನ್ನು, ಇಲ್ಲವೆ ಲೋಕವನ್ನು ಉದ್ಧರಿಸುವ ಸಂಕಲ್ಪಮಾಡಿದಕೂಡಲೆ, ದೇಶ ಕಾಲ ಪರಿಸ್ಥಿತಿಗಳಿಗನುಸರಿಸಿ ಭಗವಂತನು ಮೀನವಾಗಬೇಕಾಯಿತು, ಆವೆಯಾಗಬೇಕಾಯಿತು, ಹಂದಿಯಾಗಬೇಕಾಯಿತು, ಮಹಾ ತಾಮಸಿಯಾದ ನೃಸಿಂಹನಾಗಬೇಕಾಯಿತು, ಆಶೆಬುರುಕ ಗಿಡ್ಡ ಬ್ರಾಹ್ಮಣನಾಗಬೇಕಾಯಿತು, ಮಾತೃಘಾತಕನೂ-ಕ್ಷತ್ರಿಯ ವಿಧ್ವಂಸಕನೂ ಆದ ಬ್ರಾಹ್ಮಣನಾಗಬೇಕಾಯಿತು; ಏಕಪತ್ನೀವ್ರತಸ್ಥ ಕ್ಷತ್ರಿಯವೀರನಾಗಬೇಕಾಯಿತು; ಮಹಾ ಠಕ್ಕನೂ-ಕಳ್ಳನೂ-ಸುಳ್ಳನೂ-ಷಟಿಂಗನೂ ಎನಿಸುವ ಯಾದವನಾಗಬೇಕಾಯಿತು; ವೇದವಿದೂಷಕಬೌದ್ಧನಾಗಬೇಕಾಯಿತು; ಇನ್ನು ಮೇಲೆ ಕಲಿಯುಗದ ಪಾಪಾತಿರೇಕವಾಗದಂತೆ ಭಗವಂತನು ಕಲಿವಿನಾಶಕ ಕಲ್ಕಿಯಾಗುವನಂತೆ! ಪ್ರಿಯವಾಚಕರೇ, ಅತ್ಯಂತವಾತ್ಸಲ್ಯದ ತಾಯಿಯು ತನ್ನ ಪ್ರೀತಿಯ ಮಗುವಿನ ಯೋಗಕ್ಷೇಮದ ಸಲುವಾಗಿ ಹಲಾಲಖೋರನಂಥ ನೀಚಕೆಲಸದಿಂದ, ಸದ್ಬೋಧಮಾಡುವ ಸದ್ಗುರುವಿನ ಉಚ್ಚಕೆಲಸದವರೆಗೆ ಬೇಕಾದಂಥ ನೀಚೋಚ್ಚ ಕೆಲಸಗಳನ್ನು ಸಂತೋಷದಿಂದ ಮಾಡುವಂತೆ, ಭಕ್ತವತ್ಸಲನಾದ ಭಗವಂತನು ಭಕ್ತರಯೋಗಕ್ಷೇಮಕ್ಕಾಗಿ ಬೇಕಾದರೂಪವನ್ನು ತಾಳಿ ಬೇಕಾದಂಥ ಕರ್ಮಗಳನ್ನು ಮಾಡಿ ಬೇಕಾದಂಥ ಕಷ್ಟಗಳನ್ನು ಭೋಗಿಸಿನು. ಆದ್ದರಿಂದ ಭಕ್ತರನ್ನು, ಅಥವಾ ಲೋಕವನ್ನು ಉದ್ಧರಿಸುವದಕ್ಕಾಗಿ ದೇವರಾಗಲಿ, ಸತ್ಪುರುಷರಾಗಲಿ ಸಂಕಲ್ಪಮಾಡಿದಕೂಡಲೆ ಭಕ್ತರ, ಹಾಗು ಲೋಕದ ಕರ್ಮಗಳೇ ಸಂಕಲ್ಪಮಾಡಿದವರಿಗೆ ಪ್ರಾರಬ್ಧರೂಪವಾಗಿ ಪರಿಣಮಿಸುತ್ತವೆ.

ಒಟ್ಟಿಗೆ, ಸಂಕಲ್ಪಮಾಡಿದ ತಪ್ಪಿಗೆ ದೇವರಾಗಲಿ, ಸತ್ಪುರುಷರಾಗಲಿ ತಮಗೆ ಪಾರಬ್ಧರೂಪವಾಗಿ ಪರಿಣಮಿಸಿದ ಲೋಕದ ಕರ್ಮವಿಪಾಕವನ್ನು ಭೋಗಿಸಿಯೇ ತೀರಬೇಕೆಂದಹಾಗಾಯಿತು. ಇದಕ್ಕಾಗಿ ಲೋಕೋದ್ಧಾರಕರ ಕೆಲವುಉದಾಹರಣಗಳನ್ನು ಕೊಡುವಾ. ಕುಮಾರಿಲಭಟ್ಟರು ಬೌದ್ಧರನ್ನು ವಾದದಲ್ಲಿ ಜಯಿಸಿ ವೈದಿಕ ಕರ್ಮಮಾರ್ಗವನ್ನು ಪ್ರಸ್ಥಾಪಿಸುವಾಗ ಆಭಟ್ಟಪಾದರಿಂದ ಅನೇಕಮನುಷ್ಯಸಂಹಾರಯೋಗವು ಒದಗಿತು. ಈ ಹಿಂಸಾಕರ್ಮದ ಫಲವನ್ನು ಅನುಭವಿಸುವದಕ್ಕಾಗಿಯೇ ಅವರು ತುಷಾಗ್ನಿ ಪ್ರವೇಶಮಾಡಲು ಸಿದ್ಧರಾದರು. ಅಷ್ಟರಲ್ಲಿ ಪ್ರತ್ಯಕ್ಷಶಿವಾವತಾರವಾದ ಶ್ರೀ ಶಂಕರಾಚಾರ್ಯರು ಅಲ್ಲಿಗೆ ಹೋಗಿ, ಕುಮಾರಿಲಭಟ್ಟರಿಗೆ ಮೋಕ್ಷವನ್ನು ಕೊಡಲಿಚ್ಛಿಸಿ ತುಷಾಗ್ನಿಪ್ರವೇಶವನ್ನು ಬಿಡಲು ಸೂಚಿಸಿದರು. ಆದಕ್ಕೆ ಕುಮಾರಿಲರು ಸಮ್ಮತಿಸದೆ "ನನ್ನ ಈ ದೀಕ್ಷಾಕಾಲದಲ್ಲಿ ತಮ್ಮ ದರ್ಶನವಾದದ್ದು ಲಾಭಕರವೆಂ"ದು ಹೇಳಿ, ಮುಂದೆ ಕರ್ಮಭೋಗವು ಉಳಿಯದಹಾಗೆತಮ್ಮ ಸಂಕಲ್ಪದಂತೆ ಅಗ್ನಿಪ್ರವೇಶ

ಮಾಡಿದರು. ಇದರಂತೆ, ಸ್ವತಃ ಶ್ರೀ ಶಂಕರಾಚಾರ್ಯರು ಒಬ್ಬ ಕಾಪಾಲಿಕನನ್ನು ವಾದದಲ್ಲಿ ಜಯಿಸಲು, ಆತನು ಮುಖಭಂಗಿತನಾಗಿ ಮಾರಣಕ್ರಿಯೆಯಿಂದ ಶ್ರೀ ಶಂಕರಾಚಾರ್ಯರಿಗೆ ಮೂಲವ್ಯಾಧಿಯು (ಭಗಂದರ) ರೋಗವನ್ನು ಉತ್ಪನ್ನ ಮಾಡಿದನು. ಆಚಾರ್ಯರು ತಮ್ಮ ಈ ಕರ್ಮದ ಫಲವನ್ನು ಭೋಗಿಸದೆ ಬಿಡಲು ಸಮರ್ಥರಾಗಿದ್ದರೂ, ತಮ್ಮ ನಿಜವಾದ ಸಾಮರ್ಥ್ಯವನ್ನೂ, ಪ್ರಾಮಾಣಿಕತನವನ್ನೂ ತೋರಿಸುವದಕ್ಕಾಗಿ ಕೃತಕರ್ಮವಿಪಾಕದ ಶೇಷವು ಉಳಿಯದಂತೆ ೨೧ ದಿವಸಗಳ ವರೆಗೆ ಆರೋಗದ ಮಹಾವ್ಯಥೆಯನ್ನು ಭೋಗಿಸಿದರು! ಇದರಂತೆ, ಮಹಾತ್ಮನಾದ ಏಸುಕ್ರಿಸ್ತನು, ಆಗಿನ ಸಮಾಜದ ಪಾಷಂಡತನಕ್ಕೆ ಬಲಿಯಾಗಿ ಶೂಲಕ್ಕೇರಿಸಲ್ಪಟ್ಟು ಜಗತ್ತಿನ ಪಾಪಕ್ಕಾಗಿ ತನ್ನ ದೇಹವನ್ನು ಕೊಟ್ಟನು. ಮತ್ತು, ಮಹಮ್ಮದ ಪೈಗಂಬರರು ನಾಸ್ತಿಕರಾದ ಅರಬರ ಉಪಟಲಕ್ಕೆ ಗುರಿಯಾಗಿ ಮಕ್ಕೆಯಿಂದ ಮದೀನಾಪಟ್ಟಣಕ್ಕೆ ಓಡಿಹೋಗಿ ಅಲ್ಲಿ ದೇಹಬಿಟ್ಟರು; ಆದರೆ ಅಹಂಕಾರವುಳ್ಳ ಸಾಂಸಾರಿಕರಾದ ನಮಗಾಗುವ ಕರ್ಮಭಾದೆಗೂ, ಅಹಂಕಾರವಿಲ್ಲದ ಸತ್ಪುರುಷರಿಗಾಗಲಿ, ದೇವರಿಗಾಗಲಿ ಆಗುವಕರ್ಮಬಾಧೆಗೂ ಮಹದಂತರವುಂಟು; ಯಾಕೆಂದರೆ, ನಾವು ಸ್ವಾರ್ಥಮೂಲವಾಗಿ ಕರ್ಮವನ್ನು ಭೋಗಿಸುತ್ತೇವೆ, ಅವರು ಪರಾರ್ಥಮೂಲವಾಗಿ ಕರ್ಮವನ್ನು ಭೋಗಿಸುತ್ತಾರೆ; ನಾವು ಅಜ್ಞಾನದಿಂದ ಕರ್ಮವನ್ನು ಭೋಗಿಸುತ್ತೇವೆ, ಅವರು ಜ್ಞಾನದಿಂದ ಕರ್ಮವನ್ನು ಭೋಗಿಸುತ್ತಾರೆ; ನಾವು ಪರತಂತ್ರರಾಗಿ ಕರ್ಮವನ್ನು ಭೋಗಿಸುತ್ತೇವೆ, ಅವರು ಸ್ವತಂತ್ರರಾಗಿ ಕರ್ಮವನ್ನು ಭೋಗಿಸುತ್ತಾರೆ; ನಮ್ಮ ಕರ್ಮಾನುಭವವು ನಮ್ಮ, ಹಾಗು ಜಗತ್ತಿನ ಬಂಧನದ ಹೆಚ್ಚಳಕ್ಕೆ ಕಾರಣವಾಗುತ್ತದೆ, ಅವರ ಕರ್ಮಾನುಭವವು, ಸ್ವತಃ ಅವರು ಮುಕ್ತರಾದ್ದರಿಂದ ಜಗತ್ತಿನ ಉದ್ಧಾರಕ್ಕೆ, ಇಲ್ಲವೆ ಜಗತ್ತಿನ ಬಂಧನದ ಶೈಥಿಲ್ಯಕ್ಕೆ ಕಾರಣವಾಗುತ್ತದೆ!

ಮೇಲೆ ವಿವೇಚಿಸಿದ ತತ್ವದಂತೆ ಪ್ರಕೃತದ ನಮ್ಮಂಥ ಪಾಪಿಗಳನ್ನು ಉದ್ಧರಿಸುವದಕ್ಕಾಗಿ ನಮ್ಮಲ್ಲಿ ಹುಟಿಬಂದ ಶ್ರೀಶೇಷಾಚಲಸದ್ಗುರೂತ್ತಮನು ನಮ್ಮ-ದುಷ್ಕರ್ಮರೂಪವಾದ ಪ್ರಾರಬ್ಧಭೋಗಕ್ಕೆ ಗುರಿಯಾಗಿ ಏಳು ತಿಂಗಳು ಬೇನೆಯನ್ನು ಅನುಭೋಗಿಸಬೇಕಾಯಿತು. ತನ್ನ ದೇಹವು ಸುಟ್ಟುಹೋದರೂ ಚಿಂತೆಯಿಲ್ಲ, ಈ ಬೆಂಕಿಹತ್ತಿದ ಮನೆಯೊಳಗಿನ ಜನರನ್ನು ಹೊರಹೊರಡಿಸಿಯೇ ತೀರುವೆನೆಂದು ಮೈ ಸುಟ್ಟುಕೊಳ್ಳುವ ಪರೋಪಕಾರಿಯಾದ ದಯಾಪರ ಲೌಕಿಕ ಪುರುಷನಂತೆ, ಜನರ ದುಷ್ಕರ್ಮದಯೋಗದಿಂದ ತನಗೆ ಪ್ರಾಪ್ತವಾಗಬಹುದಾದ

ದುಷ್ಟರೋಗಕ್ಕೆ ದೇಹವು ಬಲಿಯಾದರೂ ಚಿಂತೆಯಿಲ್ಲ, ಹಾದಿತಪ್ಪಿ ನಡೆಯುವ ಜನರನ್ನು ಹಾದಿಗೆ ಹಚ್ಚಿಯೇ ತೀರುವೆನೆಂದು ಹೆಣಗುವ ಸದ್ಗುರುವಿನ ಕಾರುಣಿಕತೆಯನ್ನು ಎಷ್ಟೆಂದು ವರ್ಣಿಸೋಣ! ಇಲ್ಲಿ ವಾಚಕರಿಗೆ ಒಂದು ಮಾತಿನ ಶಂಕೆಯು ಬರುವದಾಗಿದೆ. ಶ್ರೀ ಶೇಷಾಚಲಸದ್ಗುರುಗಳು ಮಹಾಸಮರ್ಥರಿದ್ದ ಬಳಿಕ ಲೋಕೋದ್ಧಾರದ ಕಾಂಕ್ಷೆಯಿಂದಾಗಲಿ, ಜನರ ಪ್ರಾರ್ಥನೆಯಿಂದಾಗಲಿ ತಮ್ಮ ದೇಹವನ್ನು ಮತ್ತೆ ನಾಲ್ಕು ಒಪ್ಪತ್ತು ಇಟ್ಟುಕೊಳ್ಳುವದಕ್ಕಾಗಿ ಬೇನೆಯನ್ನು ಕೆಲದಿನಗಳ ಮಟ್ಟಿಗಾದರೂ ತಮ್ಮ ದೇಹವ ಆಕ್ರಮಿಸದಂತೆ ಯಾಕೆ ತಡೆದುನಿಲ್ಲಿಸಲಿಲ್ಲೆಂಬ ಶಂಕೆಯಿಂದ ಅವರು ಪ್ರಶ್ನಮಾಡಿದರೂ ಮಾಡಬಹುದು; ಆದರೆ ಅವರ ಪ್ರಶ್ನೆವನ್ನು ಅಯೋಗ್ಯವೆಂದು ತಿರಸ್ಕರಿಸಲಾಗುವದಿಲ್ಲ. ಶ್ರೀ ಶೇಷಾಚಲಸದ್ಗುರುಗಳು, ತಮಗೆ ಶರಣುಬಂದವರ ಕುಷ್ಟರೋಗ, ಉದರರೋಗ, ಕ್ಷಯರೋಗ ಮೊದಲಾದ ಮಹಾ ಮಹಾ ರೋಗಗಳ ದೂರಮಾಡಿರುವದನ್ನು ನೆನಿಸಿದರೆ, ಅವರಿಗೆ ತಮ್ಮ ರೋಗವನ್ನು ಕೆಲದಿನಗಳ ಮಟ್ಟಿಗಾದರೂ ತಡೆದು ನಿಲ್ಲಿಸುವದು ಅಸಾಧ್ಯವಿದ್ದಿಲ್ಲೆಂದು ಹೇಳಬೇಕಾಗುತ್ತದೆ; ಆದರೆ ಧರ್ಮಮೂರ್ತಿಯೂ-ಧರ್ಮಾಧೀನನೂ ಆದ ಸದ್ಗುರುವು ತಾನಾಗಿ ಸಿದ್ಧವಾಗಿ ಸಕಾಲಕ್ಕೆ ಬಂದಿದ್ದ ಕರ್ಮವಿಪಾಕವನ್ನು ತಡೆದಿದ್ದರೆ ವೈಷಮ್ಯದೋಷಕ್ಕೆ ಗುರಿಯಾಗುತ್ತಿದ್ದನು; ಅಂದಬಳಿಕ ಮಹಾಜ್ಞಾನಿಯಾದ ಆತನು ಹಾಗೆ ಮಾಡಿ ತನ್ನ ಧರ್ಮಕ್ಕೆ ವ್ಯತ್ಯಯವನ್ನು ಯಾಕೆ ತಂದುಕೊಂಡಾನು? ಆ ಸಾಧುಶ್ರೇಷ್ಠನು ತನ್ನ ಸಾಧುಧರ್ಮಕ್ಕೆ ಬಾಧೆತರಲಿಚ್ಛಿಸದೆ, ಸಕಾಲದಲ್ಲಿ ಅತಿಥಿಯಾಗಿ ಬಂದರೋಗಕ್ಕೆ ದೇಹವನ್ನು ತಾನಾಗಿ ಸಂತೋಷದಿಂದ ಈಡುಮಾಡಿದನು! ಶ್ರೀ ಶೇಷಾಚಲಸದ್ಗುರುವು ಸಕಲ ಚರಾಚರಾತ್ಮಕ ಜಗತ್ತು ಈಶ್ವರಸ್ವರೂಪವೆಂದು ಭಾವಿಸಿದಂತೆ, ರೋಗವನ್ನಾದರೂ ಈಶ್ವರಸ್ವರೂಪವೆಂತಲೇ ಭಾವಿಸಿದನು; ಮೇಲಾಗಿ ಸದ್ಗುರುವು ಅತಿಥಿಸೇವಾತತ್ಪರನು. ಅಂದಬಳಿಕ ಸಕಾಲದಲ್ಲಿ ಅತಿಥಿಯಾಗಿ ಬಂದ ರೋಗರೂಪನಾದ ಈಶ್ವರನನ್ನು ತಡೆಯುವದು ಹ್ಯಾಗೆ? ನಿರಾಕರಿಸುವದು ಹ್ಯಾಗೆ? ಆ ರೋಗರೂಪಾತಿಥಿಯು ದೇಹಶೋಷಣಕಾರ್ಯಕ್ಕೆ ವಿಘ್ನಮಾಡುವದಾದರೂ ಹ್ಯಾಗೆ? ಪ್ರಿಯವಾಚಕರೇ, ಧರ್ಮಮೂರ್ತಿಯಾದ ಸದ್ಗುರುವಿಗೆ ಈ ಪ್ರಸಂಗದಲ್ಲಿ ಒದಗಿದ ತೊಂದರೆಗಳನ್ನು ಮನಸ್ಸಿನಲ್ಲಿ ತಂದುಕೊಳ್ಳದೆಯಿರಬೇಡಿರೆಂದಿರಾ! ಶ್ರೀ ಸದ್ಗುರುವು ಸಕಾಲಕ್ಕೆ ಬಂದ ರೋಗರೂಪನಾದ ಈಶ್ವರಸ್ವರೂಪಾತಿಥಿಯನ್ನು ನಿರಾಕರಿಸಬಾರದಾಯಿತು; ಈಗ ದೇಹವಿಡಬೇಡಿರೆಂದು ಹೇಳಿಕೊಳ್ಳುವ ಈಶ್ವರಸ್ವರೂಪರಾದ ಜನರ ಆಜ್ಞೆಯನ್ನು ಮೀರಬಾರದಾಯಿತು;

ಎಷ್ಟೋ ವೈದ್ಯರು ಬಂದು "ನಾವು ಔಷಧ ಕೊಟ್ಟು ರೋಗನಿವಾರಣ ಮಾಡು ವೆವೆಂ"ದು ಹೇಳಲು, ಈಶ್ವರಸ್ವರೂಪರಾದ ಅವರ ಮಾತನ್ನು ಮೀರದೆ ಔಷಧತ-ಕ್ಕೊಳ್ಳಬೇಕಾಯಿತು ಪ್ರಿಯವಾಚಕರೇ, ಈ ಪ್ರಸಂಗದಲ್ಲಿ, ರೋಗ, ಹಾಗು ವೈದ್ಯರು ಕೊಟ್ಟ ಔಷಧ, ಇವುಗಳ ದ್ವಂದ್ವಯುದ್ಧವು ನಡೆದಾಗ, ಇದೊಂದು ಈಶ್ವರಲೀಲೆ ಯೆಂದು ತಿಳಿದು ತನ್ನ ದೇಹವನ್ನು ಯುದ್ಧಭೂಮಿಯಾಗಿ ಈಡುಮಾಡುವಾಗ ಆತನಿಗೆ ಎಷ್ಟು ತಾಪವಾಗುತ್ತಿರಬಹುದೆಂಬದನ್ನು ನೀವೇ ತರ್ಕಿಸಿರಿ! ಇಷ್ಟಾದರೂ ಆ ಮಹಾತ್ಮನು ವ್ಯಥೆತಾಳಲಾರದೆ ಒಮ್ಮೊಮ್ಮೆ ಗಟ್ಟಿಯಾಗಿ ನರಳುವನಲ್ಲದೆ, ರೋಗವನ್ನು ತಿರಸ್ಕರಿಸಲಿಲ್ಲ, ವೈದ್ಯರು ಕೊಟ್ಟ ಔಷಧವನ್ನು ಕಡೆತನಕ, ಅಂದರೆ ಇನ್ನು ತಾಸು ಒಂದುವರೆ ತಾಸಿಗೆ ದೇಹವಿಡುತ್ತಿರಲು, ಅಲ್ಲಿಯವರೆಗೆ ಉದಾಸೀನಮಾಡಲಿಲ್ಲ. ಇನ್ನೂ ಬದುಕಿರಬೇಕೆಂದು ಜನರು ಪ್ರಾರ್ಥಿಸಲು ಅವರನ್ನು ಕುರಿತು—ಮಹಾರಾಜಾ, ದೇಹಸ್ಥಿತಿಯನ್ನು ನೋಡುತ್ತೀರಿ, ಹೀಗೆ ಪ್ರಾರ್ಥಿಸಿದರೆ ನಾನೇನು ಹೇಳಲಿ? ಆಗಲಿ ಮಹಾರಾಜಾ, ಸ್ವಾಮಿಯ ಸಂಕೇತವಿದ್ದಂತೆ ಆಗಲಿ. ನೀವೆಲ್ಲರೂ ಅನುಗ್ರಹಮಾಡಿ ದೇಹವನ್ನು ಉಳಿಸಿಕೊಳ್ಳಿರಿ, ಈ ದೇಹದ ಕೈಯಲ್ಲಿ ಏನಿದೆ! ಎಂದು ವಿನಯೋಕ್ತಿಗಳನ್ನಾಡುತ್ತಿದ್ದನಲ್ಲದೆ, ಶ್ರೀಗುರುವು ಅವರ ಮಾತನ್ನು ಅಲ್ಲಗಳೆಯುತ್ತಿದ್ದಿಲ್ಲ. ರೋಗಬಾಧೆಯಿಂದ ಎಷ್ಟು ವ್ಯಥೆಪಟ್ಟರೂ ತನ್ನ ಶಾಂತವೃತ್ತಿಗೂ, ತನ್ನ ಲೋಕಕಲ್ಯಾಣತತ್ಪರತಾರೂಪ ಕರ್ತವ್ಯಕ್ಕೂ ಚ್ಯುತಿಯನ್ನುಂಟುಮಾಡಲಿಲ್ಲ !!

ಶ್ರೀಶೇಷಾಚಲಸದ್ಗುರುವಿಗೆ ಜಲೋದರದ ಬಾಧೆಯಾಯಿತೆಂಬದನ್ನು ವಾಚಕರಿಗೆ ತಿಳಿಸುವಾಗ, ಸದ್ಗುರುವು ಸಶಾಸ್ತ್ರದ ರೋಗವನ್ನನುಭವಿಸಿದ್ದಕ್ಕಾಗಿ ಬಹಳ ಆಶ್ಚರ್ಯವಾಗುತ್ತದೆ. "ಏನು ಆಗವದು ತಾನಾಗಿ ಆಗಬೇಕು" ಎಂಬದು ಸದ್ಗುರುವಿನ ತತ್ವವಾಗಿತ್ತು. ಈ ತತ್ವದಂತೆಯೇ ರೋಗಪ್ರಾಪ್ತಿಯು ಆತನಿಗಾಯಿತೆಂಬದು ಗರುಡ ಪುರಾಣದಲ್ಲಿ ಕರ್ಮವಿಪಾಕಾಧ್ಯಾಯವನ್ನು ಕೇಳುವಾಗ ಲೇಖಕನಿಗೆ ತೋರಿತು. ಆ ಪುರಾಣದಲ್ಲಿ—" **अभक्ष्य भक्षकौलाल्याद्ब्राह्मणस्या स्महोदर:** ಎಂದು ಹೇಳಿದೆ. ಬ್ರಾಹ್ಮಣನು ಅತ್ಯಂತಲೋಲುಪತೆಯಿಂದ ಅಭಕ್ಷ್ಯಭಕ್ಷಣ ಮಾಡಿದರೆ, ಆತನಿಗೆ ಮಹೋದರ ರೋಗವಾಗುತ್ತದೆಂದು ಹೇಳಿದೆ! ಜನರು ಒಂದು ಲಿಂಬಿಯ ಹಣ್ಣನ್ನು ಕೊಟ್ಟರೂ, ಶ್ರೀಗುರುವು ಅದೊಂದು ಈಶ್ವರಪ್ರಸಾದವೆಂದು ಅತ್ಯಂತಲೋಲುಪತೆಯಿಂದ ಕೈಮುಗಿದು ಗ್ರಹಿಸಿ ಪುನಃ ಕೈಮುಗಿಯುತ್ತಿದ್ದನು! ಮುಂದಿಗೆ ಏನು ಕೊಡಬೇಕಾದರೂ ದೇವರಿಗೆ ಕೊಡುವಂತೆ ಆತನು ಅತ್ಯಂತಭಕ್ತಿ

ಯಿಂದ ವಿನಯಪೂರ್ವಕವಾಗಿ ಕೊಡುತ್ತಿದ್ದನು! ಅನಾದರವು ಆತನ ದಾನ-ಪ್ರತಿಗ್ರಹಕರ್ಮಗಳಲ್ಲಿ ಎಂದಿಗೂ ಕಣ್ಣಿಗೆಬೀಳಲಿಲ್ಲ. ತಮ್ಮ ಕರ್ಮವಿಪಾಕವು ಭೋಗಿಸದೆ ಉಳಿಯಬಾರದೆಂದು ಹಿಂದೆಕೊಟ್ಟ ಸತ್ಪುರುಷರಉದಾಹರಣದಂತೆ ಶ್ರೀಗುರುವು ಆದರದಿಂದ ಮಹೋದರರೋಗವನ್ನು ಅನುಭವಿಸಿದನು! ಪ್ರಿಯವಾಚಕರೇ, ನಮ್ಮ ಸಲುವಾಗಿ ಸತ್ಪುರುಷರು ಇಂಥ ಕಷ್ಟರೋಗವನ್ನು ಭೋಗಿಸಿದ್ದಕ್ಕೆ ನಾವು ಈಗ ಪಶ್ಚಾತ್ತಾಪಪಟ್ಟು ಮಾಡುವದೇನು? ಶ್ರೀ ಸದ್ಗುರುಗಳು ಈ ರೋಗಕ್ಕೆ ಪಾತ್ರರಾಗಬಾರದಾಗಿದ್ದರೆ, ಪಾಪಮಯವಾದ ಈಗಿನ ಕಲಿಕಾಲದಲ್ಲಿ ಪಾಪಮಗ್ನರಾದ ನಮ್ಮ ಉದ್ಧಾರಕ್ಕಾಗಿಅವತರಿಸತಕ್ಕದ್ದೇಇದ್ದಿಲ್ಲ; ಒಂದುಪಕ್ಷದಲ್ಲಿ ಅವತರಿಸಿದರೂ, ಭೂತದಯಾಪರರೂ-ಪರೋಪಕಾರದಕ್ಷರೂ ಆಗಿ ಗುಣತಾರತಮ್ಯವಿಲ್ಲದೆ ಜನರ ಪಾಪಶೋಷಣಕ್ಕಾಗಿ ನಿರಂಕುಶವಾದ ಯಾಚನಾಧರ್ಮವನ್ನು ಅವರು ಸ್ವೀಕರಿಸತಕ್ಕದ್ದಿದ್ದಿಲ್ಲ. ಎಷ್ಟೋಜನ ಸತ್ಪುರುಷರು ದುರನ್ನಗ್ರಹಣದ ದೋಷಕ್ಕೆ ಹೇಸಿ ಪರಾನ್ನಗ್ರಹಣವನ್ನೇ ಮಾಡುವದಿಲ್ಲ: ಕೆಲವರು ಮಾಡಿದರೂ ಶಾಸ್ತ್ರಸಮ್ಮತವಾಗಿ ಪವಿತ್ರವಾದ ಅನ್ನವನ್ನೇ ಗ್ರಹಣಮಾಡುವರು; ಆದರೆ ನಮ್ಮ ಗುರುಗಳು ಹಾಗೆ ಮಾಡಲಿಲ್ಲ. "ಮಹಾರಾಜಾ, ಪ್ರಾಣಿಗಳ ಜಾತಿ-ಗುಣ-ಕರ್ಮಗಳನ್ನು ತಕ್ಕೊಂಡು ಮಾಡುವದೇನು? ಅವುಗಳಲ್ಲಿಯು ಈಶ್ವರತ್ವವನ್ನು ನೋಡಿದರಾಯಿತು" ಎಂದು ಸರ್ವಾತ್ಮಭಾವದ ಮಹಾತ್ಮರಾದ ಶ್ರೀ ಸದ್ಗುರುಗಳು ವಿಧಿನಿಷೇಧವಿಲ್ಲದೆ ಎಲ್ಲರನ್ನು ಯಾಚಿಸಿದರು.

ಸದಾ ಸಂತುಷ್ಟರಾದ ನಮ್ಮ ಗುರುಗಳ ಯಾಚನೆಯ ಮುಖ್ಯಧರ್ಮವೆಂದರೆ, ಕೊಡುವವರ ಸಂತೋಷವನ್ನು ಕಾಯ್ದುಕೊಳ್ಳುವದು! ಶ್ರೀಗುರುಗಳು ಯಾಚಿಸುವಾಗ ಒಬ್ಬರನ್ನು ಕಾಡಲಿಲ್ಲ, ಬೇಡಲಿಲ್ಲ; ದಾಸಭಾವದಿಂದ ಎಲ್ಲರನ್ನು ನಮಿಸುತ್ತ ಅವರವರ ಮನೆಗೆ ಹೋಗಿ ಕುಳಿತುಕೊಳ್ಳಲು, ಕೊಟ್ಟದ್ದನ್ನು ಸಂತೋಷದಿಂದ ಸ್ವೀಕರಿಸಿ ಕೃತಜ್ಞರಾಗುತ್ತಿದ್ದರು. "ಮಹಾರಾಜಾ, ಭಿಕ್ಷುಕಧರ್ಮವು! ಎಲ್ಲ ಅಂಗ್ಯಮೇಲೆ ಆಗಬೇಕು. ನಮ್ಮ ಬೆನ್ನು ನಮಗೆ ಕಾಣುವದಿಲ್ಲ. ಶ್ರೀಸ್ವಾಮಿಯು ತನ್ನ ಸೇವೆಯನ್ನು ಒಂದು ಮುಖಮಾಡಿ ಹ್ಯಾಗೆ ತಕ್ಕೊಳ್ಳುತ್ತಾನೋ ತಿಳಿಯದು ಈ ದೇಹದ ಯೋಗ್ಯತೆಯನ್ನು ಅರಿಯದವರು ಯಾರು! ಮೊದಲು "ಕುಂಟಸ್ವಾಸನೆಂ"ದು ಕರೆದವರೇ ಈಗ "ಸಾಧು"ಯೆಂದು ಕರೆಯುವರು. ಪರೀಕ್ಷಕರು ಭೆಟ್ಟಿಯಾದರೆ ಕಚ್ಚಾನೋ-ಪಕ್ಕಾನೋ ಗೊತ್ತಾಗುವದು. ಜನರು "ಸಾಧು" ಎಂದು ಕರೆಯಲು, ಅವರ ಮಾತಿನ ಗೌರವವನ್ನು ಕಾಯುವದಕ್ಕಾಗಿ

ಅವರ "ಸಾಧು" ಎಂಬ ಎರಡು ಅಕ್ಷರಕ್ಕೆ ಕುಂದು ಬಾರದಂತೆ ನಡಕೊಳ್ಳಬೇಕಾಗಿದೆ, ಈ ದೇಹದಲ್ಲಿ ಸಾಧುತ್ವವೇನಿದೆ! ಇತ್ಯಾದಿ ವಿನಯೋಕ್ತಿಗಳನ್ನು ನುಡಿಯುತ್ತ, ಜಗತ್ತಿನ ಪುರುಷರನ್ನು ಪಾಂಡುರಂಗನ ರೂಪವೆಂತಲೂ ಸ್ತ್ರೀಯರನ್ನು ರುಖಮಾಯಿಯ ರೂಪವೆಂತಲೂ ಭಾವಿಸಿ-"ಮಹಾರಾಜಾ, ಮಹಾರಾಜಾ," "ರಾವಸಾಹೇಬ," "ಆಯಿಾ, ತಾಯಿಾ" ಎಂದು ವಿನಯದಿಂದ ಸ್ತ್ರೀ-ಪುರುಷರನ್ನು ಸಂಬೋಧಿಸುತ್ತ, ಜನರ ಹೃದಯವನ್ನು ಕರಗಿಸಿ ನೋವಾಗದಂತೆ ಅದರೊಳಗಿನ ಲೋಭದ ಕಸವನ್ನು ಕಡಿಮೆಮಾಡಿ ಜೇನಿಯೊಳಗಿನ ಕೂದಲವನ್ನು ತಕ್ಕೊಳ್ಳುವಂತೆ ತಮ್ಮ ಕಾರ್ಯವಮಾಡಿಕೊಳ್ಳುತ್ತಿದ್ದರು. ಒಟ್ಟಿಗೆ ಸದಾ ಸಂತುಷ್ಟರಾದ ಶ್ರೀ ಗುರುಗಳ ಯಾಚಿಸುವಾಗ್ಯೆ ತಮಗ್ಗೆ ತಾಪವಿಲ್ಲ, ಕೊಡುವವರಿಗೆ ತಾಪವಿಲ್ಲ, ಜಗತ್ತು ಈಶ್ವರ ಸ್ವರೂಪವಾಗಿ ತೋರುತ್ತಿರಲು, ಯಾಚಿಸಿದ್ದರಿಂದ ಖಲಮಂದಿರಗಮನದೋಷವು ಇಲ್ಲ; ಆದ್ದರಿಂದ ಜ್ಞಾನಿಗಳು ಹೇಳಿದಂತೆ, ಅಂದರೆ अकृत्वा परसंतापमगत्वा खलमंदिरं । अक्लेशयित्वाचात्मानं यदल्पमपितद्बहु ॥ "ಎಂಬ ಅವರ ಉಕ್ತಿಯಂತೆ, ಶುದ್ಧವಾದ ಅಯಾಚಿತವೃತ್ತಿಯಿಂದ ಶ್ರೀ ಗುರುಗಳು ಯಾಚನೆಯನ್ನು ಮಾಡಿದರು; ಆದರೂ ಯಾಚನಾದ್ರವ್ಯದಕೂಡ ಬಂದ ಜನರ ದುಷ್ಕರ್ಮಗಳ ಪಾಪವನ್ನು ತಾವು ಮಹೋದರರೋಗವನ್ನು ಭೋಗಿಸಿ ತೀರಿಸಿದರು! ಇದಕ್ಕನ ಬೇಕು ಔದಾರ್ಯವೆಂದು!!

ಎಲ್ಲರನ್ನು ಯಾಚಿಸಿದ ಮಾತ್ರದಿಂದ ಶ್ರೀ ಗುರುಗಳಿಗೆ ಅಭಕ್ಷ್ಯಭಕ್ಷಣದ ದೋಷವು ಹ್ಯಾಗೆ ತಟ್ಟಿತೆಂದು ಕೆಲವು ವಾಚಕರು ಶಂಕಿಸಬಹುದು; ಆದರೆ ಈಗಿನ ಕಲಿಕಾಲದ ನಮ್ಮ ಗಳಿಕೆಯನ್ನು ಕುರಿತು ಆಲೋಚಿಸಿದರೆ, ಪಾಪಭೀರುಗಳಾದ ಸಜ್ಜನರು ನಮ್ಮಮನೆಯಲ್ಲಿ ನಿಂತುನೀರು ಕುಡಿಯಲಿಕ್ಕಿಲ್ಲೆಂದು ಒಡಂಬಡಬೇಕಾಗುವದು. ಇದಕ್ಕಾಗಿ ಒಂದು ಸಣ್ಣಕಥೆಯನ್ನು ಸಂಕ್ಷೇಪದಲ್ಲಿ ಕೊಡುವೆವು. ಒಬ್ಬಶ್ರೀಮಂತನು ತನ್ನ ಪ್ರಾಚೀನಪುಣ್ಯಯೋಗದಿಂದ ಆಕಸ್ಮಿಕ ವೈರಾಗ್ಯವನ್ನು ತಾಳಿ ಯತ್ಯಾಶ್ರಮವನ್ನು ಸ್ವೀಕರಿಸಿ ದೇಶಾಟನಮಾಡುತ್ತಲಿದ್ದನು. ಆತನು ಒಂದುಊರಲ್ಲಿ ಶ್ರೀಮಂತನಾದ ಒಬ್ಬ ಕುಲಕರಣಿಯಮನೆಗೆ ಬರಲು, ಕುಲಕರಣಿಯುಭಕ್ತಿಯಿಂದ ಯತಿಗಳಿಗೆ ಭಿಕ್ಷಾವಂದನವನ್ನು ಮಾಡಿ ಅವರನ್ನು ಸತ್ಕರಿಸಿದನು. ಭೋಜನಕಾಲದಲ್ಲಿ ಯತಿಗಳಿಗೆ ಹಲವುಬೆಳ್ಳಿಯಬಟ್ಟಲಗಳನ್ನು ಕೊಟ್ಟಿದ್ದರು. ಹೊಟ್ಟೆತುಂಬ ಉಂಡಮೇಲೆ ಯತಿಗಳಿಗೆ ಒಂದು ಬೆಳ್ಳಿಯಬಟ್ಟಲವನ್ನು ಕದಿಯುವ ಇಚೆಯಾಗಲು, ಅವರು ಯಾವಮಾಯದಿಂದಲೋ ಆಬಟ್ಟಲವನ್ನು ತಮ್ಮ ಕಮಂಡಲಿನಲ್ಲಿ ಇಟ್ಟುಮೇಲೆವು

ಚ್ಚಳ ಮುಚ್ಚಿಕೊಂಡು ಎದ್ದರು. ದಾಮುಇಲ್ಲದ ಶ್ರೀಮಂತರಮನೆಯು ; ಬೆಳ್ಳಿಯ ಬಟ್ಟಲಹೋದದ್ದು ಯಾರಲಕ್ಷ್ಯದಲ್ಲಿಯೂ ಬರಲಿಲ್ಲ. ಯತಿಗಳು ಗ್ರಾಮಾಂತರಕ್ಕೆ ತೆರಳಿದರು. ಮರುದಿನ ಭಿಕ್ಷೆಯಕಾಲವು ಒದಗಲು, ಅವರಿಗೆ ತಾವು ಬೆಳ್ಳಿಯಬಟ್ಟಲು ಕದ್ದಬಗ್ಗೆ ಪಶ್ಚಾತ್ತಾಪವಾಯಿತು. ನಾನು ನನ್ನ ಮನೆಯೊಳಗಿನ ಸಕಲವೈಭವವನ್ನು ತ್ಯಜಿಸಿ ಸನ್ಯಾಸಿಯಾದವನು; ಹೀಗಿದ್ದು ಒಂದು ಕ್ಷುದ್ರಬಟ್ಟಲವನ್ನು ಕದ್ದೆನಲ್ಲ, ಎಂದು ಪಶ್ಚಾತ್ತಾಪಪಟ್ಟು, ಆಗಿನಿಂದಾಗಲೇ ಹೊರಟು ಮರಳಿ ಶಾನಭೋಗನ ಮನೆಗೆಬಂದರು. ಅವರು ಶಾನಭೋಗನ ಮುಂದೆ ಬೆಳ್ಳಿಯಬಟ್ಟಲವನ್ನು ಇಟ್ಟು-ಮಹಾರಾಯಾ, ಈ ನಿನ್ನ ಬಟ್ಟಲವನ್ನು ತೆಗೆದುಕೋ. ನಿನ್ನೆ ಇದನ್ನು ನಾನು ಕದ್ದುಕೊಂಡು ಹೋಗಿದ್ದೆನು. ಈದುರ್ಬುದ್ಧಿಯು ನನಗೆ ಯಾಕೆಉಂಟಾಯಿತೆಂಬದನ್ನು ತಿಳಿಯಲಾರದವನಾಗಿದ್ದೇನೆ ನಿನ್ನನ್ನು ನಾನು ಈಗ ಪ್ರಾರ್ಥಿಸುವದೇನಂದರೆ, ನೀನು ಇಷ್ಟು ಸಂಪತ್ತನ್ನು ಹ್ಯಾಗೆಗಳಿಸಿರುತ್ತೀಎಂಬದನ್ನು ದಯಮಾಡಿಹೇಳು, ಎಂದು ಪ್ರಾರ್ಥಿಸಿದರು. ಯತಿಗಳ ಈ ವಿಲಕ್ಷಣಕೃತಿಯನ್ನು ನೋಡಿ ಆಶ್ಚರ್ಯಮಗ್ನನಾದ ಕುಲಕರಣಿಯು ಸುಳ್ಳು ಹೇಳಲಾರದೆ-ಸ್ವಾಮಿ, ನಾನು ಕಳವು, ದರವಡೆ, ಹಾದಿಯ ಬಡಿಯುವದು ಮೊದಲಾದ ದುಷ್ಟಕೃತಿಗಳಿಂದ ಸಂಪತ್ತನ್ನು ಸಂಪಾದಿಸಿದ್ದೇನೆ, ಎಂದು ಹೇಳಿದನು. ಆಗ ಯತಿಗಳುತಲೆದೂಗಿ-ಸರಿಸರಿ; ಸಮಾಧಾನವಾಯಿತು. “कुक्षौतिष्ठतियस्यान्नंतस्यबुद्धिःप्रवर्तते” ಎಂಬಂತೆ, ನಿನ್ನ ಅನ್ನವು ನನ್ನ ಹೊಟ್ಟೆಯಲ್ಲಿರುವವರೆಗೆ ನನಗೆ ಕಳವು ಮಾಡುವ ಇಚ್ಛೆಯಾಯಿತು. ಈಗ ೨೪ ತಾಸುಗಳಲ್ಲಿ ನಿನ್ನ ಅನ್ನವು ಹೊರಬಿದ್ದುಹೋಗಿ ಅದರ ಕಸುವು ಕಡಿಮೆಯಾದದ್ದರಿಂದ, ನನ್ನ ಆ ದುರಿಚ್ಛೆಯು ಅಳಿದುಹೋಗಿ ಪಶ್ಚಾತ್ತಾಪವಾಯಿತು, ಎಂದು ಹೇಳಿ, ಕುಲಕರಣಿಯಮನೆಯಲ್ಲಿ ಕ್ಷಣವಾದರೂ ನಿಲ್ಲದ ಯತಿಗಳು ಹೊರಟು ಹೋದರು!

ಪ್ರಿಯವಾಚಕರೇ, ನಿಷ್ಕಲಂಕವಾದ ತರುಣಯತಿಯ ಮನಸ್ಸಿನಲ್ಲಿ ಶಾನಭೋಗನಮನೆಯ ದುರನ್ನದ ಮಲವು ಪಕ್ಕನೆ ಹೊಳೆದು ಅಡಗಿದ್ದನ್ನು ನೋಡಿನೀವು ಆಶ್ಚರ್ಯ ಪಡಬಹುದು. ಆದರೆ ದುರನ್ನದಿಂದ ಪುಷ್ಟವಾದ ನಮ್ಮದೇಹಸ್ಥಬುದ್ಧಿಗೂ ಒಮ್ಮೊಮ್ಮೆ ನಮ್ಮದುಷ್ಕರ್ಮಕ್ಕೋಸ್ಕರಪಶ್ಚಾತ್ತಾಪವಾಗುತ್ತಿರುವದನ್ನು ಮನಸ್ಸಿನಲ್ಲಿ ತಂದರೆ, ನಿರ್ಮಲಮನಸ್ಸಿನವರಿಗೆ ಹೀಗೆ ಪಶ್ಚಾತ್ತಾಪವಾದದ್ದೇನು ಆಶ್ಚರ್ಯವಲ್ಲೆಂದು ತೋರಬಹುದು. ಸಾಧಕಸ್ಥಿತಿಯಲ್ಲಿದ್ದ ಯತಿಗೆ ಒಬ್ಬ ಶಾನಭೋಗನ ಮನೆಯ ಒಪ್ಪತ್ತಿನ ಅನ್ನವು ಬಾಧಿಸಿ ಬುದ್ಧಿಯನ್ನು ಕೆಡಿಸಿ ಯತಿಧರ್ಮಕ್ಕೆ ಬಾಧೆಯನ್ನುಂಟುಮಾಡಲು, ಎಷ್ಟೋಗೌಡಶಾನಭೋಗರಮನೆಯ, ಹಾಗು ವಿಧವಿಧದ ಅನ್ಯಾಯದ

ಗಳಿಕೆಯಿಂದ ಸಧನರಾಗಿ ಕೃತಕೃತ್ಯರೆಂದು ಭಾವಿಸುವ ಇತರ ಉದ್ಯೋಗಸ್ಥರ ಮನೆಯ, ಹಾಗು ವತನದಾರರ, ಅದರಂತೆ ಸುಖವಸ್ತುಗಳ ಮನೆಯ ಅನ್ನವನ್ನು ಮೂರು ತಪಗಟ್ಟಲೆ ಗ್ರಹಿಸಿದ ಶ್ರೀ ಸಾಧುಗಳ ಸಾಧುವೃತ್ತಿಯು ಅಚಲವಾಗಿಯುಷ್ಟೇ ಅಲ್ಲ, ಜಗತ್ತಿಗೆ ಹೆಚ್ಚು ಹೆಚ್ಚು ಸ್ಪಷ್ಟವಾಗಿ ತೋರಬೇಕಾದರೆ, ಅವರ ಪರಿಪೂರ್ಣಸಿದ್ಧಸ್ಥಿತಿಯ ಕಲ್ಪನೆಯನ್ನು ನಮ್ಮ ಪುಣ್ಯವಂತರಾದ ವಾಚಕರು ಮಾಡಿಯೇ ಮಾಡಬಹುದು. ನಾವು ಪರಿಸರಿಯಾಗಿ ಮಂದಿಯ ಗೋಣು ಮುರಿದು, ಇಲ್ಲವೆ ಮಂದಿಯನ್ನು ಮೋಸಗೊಳಿಸಿ ದುಡ್ಡನ್ನು ಗಳಿಸಿರಬಹುದು, ಅಣ್ಣತಮ್ಮಂದಿರನ್ನು ವಂಚಿಸಿ ಶ್ರೀಮಂತರಾಗಿರಬಹುದು, ನಾವು ಬಲುಬುದ್ಧಿಶಾಲಿಗಳೆಂತಲೂ, ವಿದ್ಯಾವಂತರೆಂತಲೂ, ಪ್ರಾಮಾಣಿಕರೆಂತಲೂ, ಪರೋಪಕಾರಿಗಳೆಂತಲೂ ಜಗತ್ತಿಗೆ ತೋರಿಸಿ, ಈಶ್ವರದತ್ತವಾದ, ಅಥವ ನಮ್ಮ ಪ್ರಾಚೀನಪುಣ್ಯದ ಯೋಗದಿಂದ ಪ್ರಾಪ್ತವಾಗಿದ್ದ ಆ ಸದ್ಗುಣ, ಸದ್ವೃತ್ತಿಗಳ ಉಪಯೋಗವನ್ನು ಮಂದಿಯ ಅನ್ನವನ್ನು ಕಸಕೊಂಡು ಶ್ರೀಮಂತರಾಗುವಲ್ಲಿ ನಾವು ಮಾಡಿರಬಹುದು. ಇಂಥ ಅನೇಕ ಹೇಳತೀರದ ಅನ್ಯಾಯಗಳನ್ನು ಮಾಡಿದ ನಮ್ಮ ದ್ರವ್ಯವನ್ನು ತಕ್ಕೊಂಡು ಹೋಗಿ, ಅದರಿಂದ ಅತಿಥಿಸೇವ, ವೈದಿಕ ವಿದ್ಯಾದಾನ, ಸ್ವಪರಕುಟುಂಬಪೋಷಣೆ ಮೊದಲಾದ ಪವಿತ್ರಕರ್ಮಗಳನ್ನು ನೆರವೇರಿಸುತ್ತ, ತಾವು ತಂದ ನೀಚಯಾಚನಾ ಧನಧಾನ್ಯಗಳೊಳಗಿನ ದೋಷವನ್ನು ಒತ್ತಟ್ಟಿಗೆ ಇಟ್ಟು, ಅಂತ್ಯಕಾಲದಲ್ಲಿ ಆ ದೋಷದ ಪ್ರಾಯಶ್ಚಿತ್ತವೆಂಬ ಎಲ್ಲರ ಕಲ್ಯಾಣಕ್ಕಾಗಿ ಮಹೋದರರೋಗವನ್ನು ಆದರದಿಂದ ಭೋಗಿಸಿ, ಧರ್ಮಶಾಲೆಯಲ್ಲಿ ಬಿದ್ದುಕೊಂಡ ಮಾರ್ಗಸ್ಥನು ಸಮಯ ಒದಗಿದ ಕೂಡಲೆ ಊರಿಗೆ ಹೋಗುವದಕ್ಕಾಗಿ ಗಂಟು ಕಟ್ಟಿಕೊಂಡು ಕುಳಿತುಕೊಂಡಿದ್ದು, ಕಾಲ ಬಂದ ಕೂಡಲೆ ಧರ್ಮಶಾಲೆಯ ಹಂಗು ಇಲ್ಲದ, ತಟ್ಟನೆ ಹೊರಬೀಳುವಂತೆ, ಶ್ರೀ ಶೇಷಾಚಲಸದ್ಗುರುವಿನ ಆತ್ಮವು ೭ ತಿಂಗಳು ಬೇನೆಯನ್ನನುಭವಿಸಿ, ಸಮಯ ಒದಗಿದಾಗ ಎಲ್ಲರಿಗೆ ಹೇಳಿ ಕೇಳಿ, ಈಶ್ವರ ಧ್ಯಾನಮಾಡುತ್ತ, 'ಶರಣರ ಪರೀಕ್ಷೆಯನ್ನು ಮರಣದಲ್ಲಿ ನೋಡೆ'ನ್ನುವಂತೆ ದೇಹವಿಟ್ಟು ಬ್ರಹ್ಮತ್ವವನ್ನು ಹೊಂದಿತು! ಸಾರಾಂಶ, ಲೋಕದ ಪಾಪವನ್ನು ಅನುಭವಿಸುವದಕ್ಕಾಗಿಯೇ ಶ್ರೀಗುರುವು ರೋಗವನ್ನು ಭೋಗಿಸಿ ದೇಹವನ್ನು ಬಿಟ್ಟನು.

## ೪ನೆಯ ಪ್ರಕರಣ.

### ಸದ್ಗುರುವಿನ ಲೋಕಾನುವರ್ತನವು.

स्थितःस्थितामुच्चलितःप्रयातां निषेदुषीमासनबंधधीरः ॥
जलाभिलाषीजलमाददानां छायेवतांभूपतिरन्वगच्छत् ॥ २-६ ॥
(रघुवंशे).

ಶ್ರೀ ಶೇಷಾಚಲ ಸದ್ಗುರುಗಳು ಸಂತರ ಶ್ರೇಷ್ಠವಾದ ಧರ್ಮವನ್ನು ಅಂಗೀಕರಿಸಿ, ಜಗತ್ತಿನ ಸೇವಕರಾಗಿ, ತಾವು ಯಾಚನೆಯ ದ್ವಾರವಾಗಿಮಾಡಿದ ಜನರ ಪಾಪಶೋಷಣದಿಂದ ಅವರನ್ನು ಪವಿತ್ರೀಕರಿಸಿ, ಅವರ ಪಾಪದ ಫಲವಾದ ಮಹೋದರ ರೋಗವನ್ನು ತಾವು ಭೋಗಿಸಿದರೆಂಬದು ಹಿಂದಿನ ಮೂರುಪ್ರಕರಣಗಳಸಾರವಾಗಿರುವದಷ್ಟೆ? ಆದರೆ ಶ್ರೀಗುರುವು ಇಷ್ಟು ದೀರ್ಘಕಾಲಬೇನೆಯನ್ನು ಭೋಗಿಸಲಿಕ್ಕೆ ಮಹತ್ವದ ಬೇರೆ ೩ ಕಾರಣಗಳಿರಬಹುದೆಂದು ತೋರುತ್ತದೆ. ಅವುಗಳಲ್ಲಿ ೧ನೆಯ ಕಾರಣವಾದ "ಸದ್ಗುರುವಿನ ಲೋಕಾನುವರ್ತನ"ವನು ಕುರಿತು ಈ ಪ್ರಕರಣದಲ್ಲಿ ಬರೆದು, ಉಳಿದ ಎರಡು ಕಾರಣಗಳಾದ "ಸದ್ಗುರುವಿನ ಕಲಿಕಾಲಸಂರೀಕ್ಷಣ", "ಸದ್ಗುರುವಿನಶರಣ್ಯಪ್ರದರ್ಶನ"ಎಂಬವನ್ನು ಕುರಿತು ಕ್ರಮವಾಗಿ ಮುಂದಿನ ೫ ನೇ ೬ ನೇ ಪ್ರಕರಣಗಳಲ್ಲಿ ವಿವರಿಸುವೆವು. ಲೋಕವನ್ನು ಅನುಸರಿಸುವದು, ಅದರಲ್ಲಿ ದಾಸಧರ್ಮದಿಂದ ಲೋಕವನ್ನು ಅನುಸರಿಸುವದು ಸುಲಭವಲ್ಲ. ಸೇವಾಧರ್ಮವು ಪರಮಗಹನವಾದದ್ದೂ, ಯೋಗಿಗಳಿಗೂ ತಿಳಿಯಲಸಾಧ್ಯವಾದದ್ದೂ ಎಂದುದೊಡ್ಡವರು ಹೇಳಿರುವರು. ಕವಿಕುಲಗುರುವಾದ ಕಾಳಿದಾಸನು ಸೇವಾಧರ್ಮದ ಸ್ವರೂಪವನ್ನು ಮೇಲಿನ ಶ್ಲೋಕದಲ್ಲಿ ಯಥಾರ್ಥವಾಗಿ ಹೇಳಿರುವನು. ಸೇವಕನು, ಸೇವ್ಯರನ್ನು ಅವರ ನೆರಳಿನಂತೆ ನಿರಾಲೋಚಿತವಾಗಿ ಅನುಸರಿಸಬೇಕೆಂಬದು ಆತನ ಮುಖ್ಯ ಆಶಯವಾಗಿದೆ. ಇದೇ ಧರ್ಮದಂತೆಯೇ ಶ್ರೀಸದ್ಗುರುವು ಲೋಕದ ಸೇವಕನಾಗಿ ಲೋಕವನ್ನು ಅನುಸರಿಸಿ ನಡೆದನೆಂಬದರಲ್ಲಿ ಸಂಶಯವಿಲ್ಲ. "शुनिचैव श्वपाके च पंडितास्समदर्शिनः" ಎಂಬ ಭಗವದುಕ್ತಿಯಂತೆ ಶ್ರೀಗುರುಗಳು ಸರ್ವತ್ರ ಸಮಭಾವವುಳ್ಳವರಾಗಿ ಲೋಕಾನುವರ್ತನ ಮಾಡಿದರೆಂಬದರಲ್ಲಿ ಸಂಶಯವಿಲ್ಲ. ಅವರು ಒಮ್ಮೆ ಪಶುಗಳನ್ನೂ, ಪಶುಪಾಲಕನನ್ನೂ, ಆರೂಢರನ್ನೂ

ಸಮನಾಗಿ ಅನುವರ್ತಿಸಿದಬಗ್ಗೆ ಒಂದು ಉದಾಹರಣವನ್ನು ಕೊಡುವೆವು. ಒಮ್ಮೆ ಹುಬ್ಬಳ್ಳಿಯ ವಕೀಲರಾದ ಮ. ರಾ. ರಾ. ಜೋಶಿಯವರು ತಮ್ಮ ಹಿರಿಯ ಮಗಳ ಲಗ್ನಕ್ಕೆ ಕರಿಸಿದ್ದರಿಂದ, ಅಲ್ಲಿಗೆ ಶ್ರೀಗುರುಗಳು ಹೋಗಿದ್ದರು. ಅಕ್ಷತಾ ರೋಪಣದಕಾಲಕ್ಕೆ ಶ್ರೀಸಿದ್ಧಾರೂಢರೂ ಅಲ್ಲಿಗೆ ಬಂದಿದ್ದರು. ವಧೂವರರಿಗೆ ಅಕ್ಷ ತಾರೋಪಣವಾದ ಕೂಡಲೆಶ್ರೀಆರೂಢರು ತಮ್ಮಮಠಕ್ಕೆ ಹೊರಡಲು, ಶ್ರೀ ಸಾಧು ಗಳು ಅವರನ್ನು ಹಿಂಬಾಲಿಸಿಕಳಿಸುತ್ತ ಹೋದರು. ಶ್ರೀ ಆರೂಢರು ತಮ್ಮ ಗಾಡಿ ಯನ್ನು ಹತ್ತಿ ಕುಳಿತುಕೊಳ್ಳುವಾಗ, ದಾಸವೃತ್ತಿಯ ಸಾಧುಗಳು ಕೈಜೋಡಿಸಿ ಅವ ರನ್ನು ಕುರಿತು—"ಮಹಾರಾಜಾ, ದರ್ಶನವಾದದ್ದಕ್ಕೆ ಬಹಳ ಸಂತೋಷವಾಯಿತು. ಈಗ ೩೦ ವರ್ಷಗಳ ಹಿಂದೆ ದರ್ಶನವಾಗಿತ್ತು, ಈಗ ಮತ್ತೆ ಆಯಿತು; ಬಹಳ ಸಂತೋಷವು, ಬಹಳ ಸಂತೋಷವು" ಅನ್ನಲು, ಶ್ರೀ ಆರೂಢರು—"ಆತ್ಮಸಾಕ್ಷಾ ತ್ಕಾರವುಳ್ಳವರಿಗೆ ಜಡದೇಹದ ದರ್ಶನದಿಂದ ಪ್ರಯೋಜನವೇನು? " ಎಂದು ಅನ್ನುತ್ತಿರುವಾಗ, ಅವರ ಗಾಡಿಯು ಮುಂದಕ್ಕೆ ಸಾಗಿತು. ಇತ್ತ ಸಾಧುಗಳೂ ತಿರುಗಿದರು. ಈ ಪ್ರಸಂಗವನ್ನು ನೋಡಿ ನೆರೆದ ಜನರಲ್ಲಿ ತರ್ಕವಿತರ್ಕಗಳಿಗೆ ಆರಂಭವಾಯಿತು. "ಸಾಧುಗಳು ವಿನಯದಿಂದ ನಮಸ್ಕರಿಸಿ ಮಾತಾಡಿಸಿದರೂ, ಆರೂಢರು ನಿಂತು ಎರಡು ಮಾತುಗಳನ್ನು ಸಹ ನೆಟ್ಟಗೆ ಆಡಲಿಲ್ಲ; ಸಾಧುಗಳಿಗೆ ತಿರುಗಿ ಅವರು ನಮಸ್ಕಾರವನ್ನೂ ಮಾಡಲಿಲ್ಲ; ಇದು ಯೋಗ್ಯವಲ್ಲ" ಎಂದು ಕೆಲವರೂ, "ಸಾಧುಗಳಿಗಿಂತಲೂ ಆರೂಢರು ಶ್ರೇಷ್ಠರೆ"ಂದು ಕೆಲವರೂ ಹೀಗೆ ತಮಗೆ ಸರಿ ದೋರಿದಂತೆ ಮಾತಾಡಿಕೊಳ್ಳಹತ್ತಿದರು. ಶ್ರೀ ಸಾಧುಗಳ ಶಿಷ್ಯರೆನಿಸುವ ಅಭಿ ಮಾನದ ಮೂರ್ತಿಗಳಾದ ನಮಗೂ ಸಂಶಯವು ಉತ್ಪನ್ನವಾಗಿ, ಶ್ರೀ ಆರೂಢರ ನಡ ತೆಯ ವಿಷಯವಾಗಿ ನಾವು ಕೆಲವರು ಆಕ್ಷೇಪಿಸಹತ್ತಿದೆವು. ಅಷ್ಟರಲ್ಲಿ "ಸ್ವಾಮಿಯ ಎತ್ತುಗಳು ಲಗ್ನಕ್ಕೆ ಬಂದಿವೆ" ಎಂದು ಯಾರೋಶ್ರೀ ಸಾಧುಗಳ ಮುಂದೆ ಹೇಳಿ ದರು. ಆಗ ಸಾಧುಗಳು—"ದರ್ಶನತಕೊಳ್ಳಬೇಕು ಮಹಾರಾಜಾ, ದರ್ಶನವಾಗದೆ ಬಹಳದಿವಸವಾಯಿತು" ಅನ್ನಲು, ರಾವಸಾಹೇಬ ಜೋಶಿ ಪ್ರಿನ್ಸಿಪಾಲರವರ ಗಾಡಿಯ ವನು ಸಾಧುಗಳ ಎತ್ತುಗಳನ್ನು ಗಾಡಿಗೆ ಹೂಡಿಕೊಂಡು ಅಲ್ಲಿಗೆ ಬಂದನು. ಶ್ರೀ ಸಾಧುಗಳ ಎತ್ತುಗಳನ್ನು ಪ್ರಿನ್ಸಿಪಾಲರು ಈ ನೊದಲೆಕೊಂಡುಕೊಂಡಿದ್ದರು. ಆಗ ಶ್ರೀ ಗುರುಗಳು ಎತ್ತುಗಳನ್ನು ನೋಡಿ ನಮಸ್ಕಾರಮಾಡಿ—"ಮಹಾರಾಜಾ, ನೀವು ಈ ದೇಹವನ್ನು ಹೊತ್ತುಕೊಂಡು ಬಹಳ ದಿವಸ ಎಳೆದಾಡಿರುವಿರಿ. ನಿಮ್ಮ ದರ್ಶ ನವಾಯಿತು. ಸಂತೋಷವಾಯಿತು" ಎಂದು ಮತ್ತೊಮ್ಮೆ ಎತ್ತುಗಳನ್ನು ನಮ

ಸ್ಕರಿಸಿ, ಗಾಡಿಯು ಹೊಡಿಯುವವನಿಗೊಂದು ನಮಸ್ಕಾರಮಾಡಿದರು. ಆಗ ಹತ್ತಿರ ನಿಂತಿದ್ದ ನಮಗೆ—"ಆಹಾ! ಶ್ರೀ ಗುರುವು ಜಗತ್ತನ್ನೇ ಈಶ್ವರಸ್ವರೂಪನೆಂದು ಭಾವಿಸಿ, ತಾನು ದಾಸನಾಗಿ ನಡಕೊಳ್ಳುವದು ನಿಜವು! ಅದರಿಂದಲೇ ಈ ಮಹಾತ್ಮನಿಗೆ ಆರೂಢರೂ-ಪಶುಗಳೂ-ಪಶುಪಾಲಕನೂ ಸರಿಯಾಗಿ ವಂದ್ಯರಾದರು! ಅತ್ತ ಮಹಾತ್ಮರಾದ ಆರೂಢರೂ ತಮ್ಮ ಆರೂಢತ್ವವನ್ನನುಸರಿಸಿ ಸಾಮಾನ್ಯ ಜನರಿಗೆ ನಮಸ್ಕರಿಸದೆ ಇರುವಂತೆ, ಶ್ರೀ ಸಾಧುಗಳಿಗೂ ನಮಸ್ಕರಿಸದೆಯಿದ್ದರು! ಇಬ್ಬರೂ ದೊಡ್ಡವರೇ. ಶ್ರೀ ಸಾಧುಗಳು ತಮ್ಮ ಸಾಧುಧರ್ಮವನ್ನು ನಿಸ್ಪೃಹದಿಂದ ಕಾದುಕೊಂಡಂತೆ, ಶ್ರೀ ಆರೂಢರೂ ತಮ್ಮ ಆರೂಢಧರ್ಮವನ್ನು ನಿಸ್ಪೃಹದಿಂದ ಕಾಯ್ದುಕೊಂಡರು. ಇದರಲ್ಲಿ ಅಜ್ಞಾನಿಗಳಾದ ನಾವು ಆಕ್ಷೇಪಿಸುವದು ಅನ್ಯಾಯವಲ್ಲವೆ?" ಎಂಬ ವಿಚಾರವು ಉತ್ಪನ್ನವಾಗಲು, ನಮಗೆ ಸಮಾಧಾನವಾಗಿ ಇಬ್ಬರು ಸತ್ಪುರುಷರ ವಿಷಯವಾಗಿಯೂ ನಮ್ಮಲ್ಲಿ ಸದ್ಭಾವನೆಯು ಉತ್ಪನ್ನವಾಯಿತು! ಇರಲಿ, ಈಗ ಬರೆದದ್ದರ ತಾತ್ಪರ್ಯವಿಷ್ಟೇ. ಶ್ರೀ ಗುರುವು ಜಗತ್ತನ್ನು ಸಮದೃಷ್ಟಿಯಿಂದ ನೋಡಿ, ಕಾಳಿದಾಸನ ಉಕ್ತಿಯಂತೆ ಜಗತ್ತನ್ನೇ ಅನುಸರಿಸಿ ನಡೆಯುತ್ತಿದ್ದನೆಂಬದನ್ನು ವಾಚಕರು ತಿಳಕೊಳ್ಳತಕ್ಕದ್ದು.

ಹೀಗೆ ಶ್ರೀ ಗುರುವು ಲೋಕವನ್ನು ಅನುಸರಿಸಿ ನಡೆದ ಕಾಲದಲ್ಲಿ ಕ್ರೀಡಾಕಾಲ, ತಪಶ್ಚರ್ಯಾಕಾಲ, ಸೇವಾಕಾಲ ಎಂಬ ಮೂರು ವಿಭಾಗಗಳನ್ನು ಕಲ್ಪಿಸಬೇಕಾಗುವದು. ಚಿಕ್ಕಂದಿನಿಂದ ಸರಾಸರಿ ಇಪ್ಪತ್ತು ವರ್ಷದವರಾಗುವವರೆಗೆ ಓರಿಗೆಯುವರ ಸಂಗಡ ಒಂದೇಸವನೆ ಆಟವಾಡುವದರಲ್ಲಿಯೇ ಶ್ರೀ ಗುರುಗಳ ಕಾಲಹರಣವಾಯಿತು. ಈ ಕ್ರೀಡಾಕಾಲದಲ್ಲಿ ತಮ್ಮ ಓರಿಗೆಯುವರನ್ನು ಅನುಸರಿಸಿ ನಡೆಯುವದು ಶ್ರೀ ಗುರುಗಳ ಕರ್ತವ್ಯವಾಗಿತ್ತು. ಆಗ ಅವರು ಓರಿಗೆಯವರೊಡನೆ ಜಗಳಾಡದೆ, ಅವರಿಗೆ ಕೆಟ್ಟ ಮಾತುಗಳನ್ನಾಡದೆ, ಅವರನ್ನು ಬಿಟ್ಟು ತಾವೊಬ್ಬರೇ ಏನೂ ತಿನ್ನದೆ, ಕೇವಲ ಪ್ರೇಮದಿಂದ ನಡೆದು, ಅವರ ಅನುವರ್ತನಮಾಡಿದರು. ಈ ಕ್ರೀಡಾಕಾಲದಲ್ಲಿ, ಆಟದೊಳಗಲ್ಲದೆ ಬೇರೆ ಯಾತರಲ್ಲಿಯೂ ಶ್ರೀ ಗುರುಗಳ ಪ್ರಸಿದ್ಧಿಯಿದ್ದಿಲ್ಲ. ಆಗ ಅವರನ್ನು ಹುಟ್ಟಿದ ತಾಯಿ-ತಂದೆಗಳು ಸೇರುತ್ತಿದ್ದಿಲ್ಲ. ವಿದ್ಯೆಕಲಿಯದೆ ಸಿಕ್ಕಹಾಗೆ ತಿರುಗುವದಕ್ಕಾಗಿ ತಾಯಿ-ತಂದೆಗಳು ಯಾವಾಗಲೂ ಗುರುಗಳನ್ನು ತಿರಸ್ಕರಿಸುತ್ತಿದ್ದರು. ಶ್ರೀ ಸಾಧುಗಳ ವಿದ್ಯಾಗುರುಗಳು ಸಾಧುಗಳ ಮಂದಬುದ್ಧಿಗಾಗಿ ಅವರನ್ನು ಹೀಯಾಳಿಸಿ ಚೆನ್ನಾಗಿ ಥಳಿಸುತ್ತಿದ್ದರು; ಆದರೆ ಶ್ರೀ ಗುರುಗಳು ಗುರುಹಿರಿಯರನ್ನು ತಿರಸ್ಕರಿಸದೆ, ಹೀಯಾಳಿಸದೆ, ಯಾವ ಬಗೆ

ಯಿಂದಲೂ ಅವರ ಕೇಡನ್ನು ಚಿಂತಿಸದೆ ಸಮ-ಭಾವದಿಂದ ನಡೆಕೊಳ್ಳುತ್ತಿದ್ದರು. 'ಬೀಜಕ್ಕೆ ಬಿಡುವ ಕಾಯನ್ನು ಹೀಚಿನಲ್ಲೆ ಪರೀಕ್ಷಿಸೆನ್ನುವಂತೆ, ಶ್ರೀಶೇಷಾಚಲಸದುರೂತ್ತಮರ ಗುಣದ ಪರೀಕ್ಷೆಯನ್ನು ಜ್ಞಾನಿಗಳಾದವರು ಈ ಕ್ರೀಡಾಕಾಲದಲ್ಲಿಯಾದರೂ ಮಾಡಬಹುದಾಗಿತ್ತು; ಯಾಕೆಂದರೆ, ಶ್ರೀ ಗುರುಗಳ ಆಪ್ತರಾದ ಶ್ರೀನರಸಿಂಹಶಾಸ್ತ್ರಿಗಳವರು ಇದಕ್ಕೂ ಮೊದಲೆ, ಅಂದರೆ ಶ್ರೀಗುರುಗಳು ಹುಟ್ಟಿದ್ದನ್ನು ಕೇಳಿದ ಕೂಡಲೆ, ಈತನು ದೈವದಾಸನಾಗುವನೆಂತಲೂ, ನಮಗೆ ಇನ್ನು ಅಪ್ಪಣೆಯಾಯಿತೆಂತಲೂ ಹೇಳಿದರಂತೆ! ಶ್ರೀನರಸಿಂಹಶಾಸ್ತ್ರಿಗಳು ಮರಗೋಡದ ಶ್ರೀ ಮಹಾಸ್ವಾಮಿಗಳಾದ ಶ್ರೀಚಿದಂಬರ ದೀಕ್ಷಿತರ ಸೇವೆಯನ್ನು ಬಹು ದಿವಸಮಾಡಿ ಅನುಗ್ರಹ ಸಂಪಾದಿಸಿದವರಾಗಿದ್ದರು. ಇರಲಿ. ಮುಂದೆ ಹಿರಿಯರಾದ ಶ್ರೀಗುರುಗಳು ಆಟಪಾಟಗಳನ್ನು ಬಿಟ್ಟು, ಭಕ್ತಿಯಿಂದ ಪೂಜಾ-ಪುರಸ್ಕಾರಗಳನ್ನು ಮಾಡಹತ್ತಲು, ಅವರ ತಪಶ್ಚರ್ಯಾಕಾಲಕ್ಕೆ ಆರಂಭವಾಯಿತು. ಈ ತಪಶ್ಚರ್ಯಾಕಾಲದಲ್ಲಿ ಶ್ರೀ ಗುರುಗಳು ಮೊದಮೊದಲು ತಮ್ಮ ಕುಟುಂಬದವರನ್ನು, ಪ್ರಸಂಗವಶಾತ್ ತಮಗೆ ಸಂಬಂಧಿಸಿದ ನೆರೆಹೊರೆಯವರನ್ನೂ, ಬೇರೆ ಜನರನ್ನೂ ಅನುವರ್ತಿಸಬೇಕಾಗುತ್ತಿತ್ತು. ಇವರೆಲ್ಲರನ್ನು ಅನುಸರಿಸಿ ನಡೆಯುವಾಗ ಶ್ರೀಗುರುವಿನ ದಾಸಧರ್ಮವು ಚೆನ್ನಾಗಿ ಪ್ರಕಟವಾಯಿತೆಂದು ಹೇಳಬಹುದು. ಈ ಕಾಲದಲ್ಲಿ ಶ್ರೀಗುರುಗಳ ಕೇವಲ ವಿನೀತರಾಗಿ, ಕಂಡವರಿಗೆ ಕೈಮುಗಿಯುತ್ತ, ಬಹು ಮೃದುನುಡಿಗಳನ್ನು ನುಡಿಯುತ್ತ, ಆಜ್ಞಾಧಾರಕ ಸೇವಕರಂತೆ ಹೇಳಿದ ಮಾತು ಕೇಳುತ್ತ, ಅತ್ಯಂತ ಶಾಂತವೃತ್ತಿಯಿಂದ ನಡೆಕೊಳ್ಳುತ್ತಿದ್ದರು. ಪ್ರಿಯವಾಚಕರೇ, ಮನುಷ್ಯನು ತನ್ನ ತಾಯಿ-ತಂದೆಗಳಿಗೆ ದಾಸನಾಗಿ ನಡೆಯಬಹುದು. ಗುರು-ಹಿರಿಯರಿಗೆ ದಾಸನಾಗಿ ನಡೆಯಬಹುದು; ಆದರೆ ಅರ್ಧಾಂಗನೆಸಹಿತ ತನ್ನ ಕುಟುಂಬಕ್ಕೆ ದಾಸನಾಗುವದು ಲೌಕಿಕದಲ್ಲಿ ಅಭಿಮಾನಕ್ಕೆ ಸಾಲದ ಮಾತೆಂತಲೇ ಹೇಳಬೇಕಾಗುವದು. "ಸಾವಿರ ಕುದುರೆಯ ಸವಾರ, ಮನೆಯ ಹೆಂಡತಿಯ ಪಿಂಜಾರ"ನೆನ್ನುವಂತೆ, ಎಷ್ಟೋ ಜನರು ಅಂತರಂಗದಿಂದ ಹೆಂಡತಿಗೆ ದಾಸಾನುದಾಸರಾಗಿ ನಡೆದರೂ, ಬಹಿರಂಗದಲ್ಲಿ ಇಲ್ಲದ ದೌಲು ತೋರಿಸುವದು ಸಹಜ; ಆದರೆ ಶ್ರೀ ಸದ್ಗುರುವು ಅಂಥ ದಾಂಭಿಕನಲ್ಲ; ದುರಭಿಮಾನಿಯೂ ಅಲ್ಲ; ಮಹಾಜ್ಞಾನಿಯು. ತನ್ನ ಅರ್ಧಾಂಗವಾದ ಕುಟುಂಬವನ್ನು ಅನುಸರಿಸಿ ನಡೆಯದಿರುವದು ನ್ಯಾಯವಾದ ಸ್ವಧರ್ಮವಲ್ಲೆಂದು ತಿಳಿದು, ಆತನು ಜಗತ್ತಿನೊಡನೆ ನಡೆಯುವಂತೆ, ತನ್ನ ಸಾತ್ವಿಕವೃತ್ತಿಗೆ ಸ್ವಾಭಾವಿಕವಾದ ದಾಸವೃತ್ತಿಯಿಂದಲೇ ತನ್ನ ಕುಟುಂಬದೊಡನೆಯಾದರೂ ನಡಕೊಂಡನು!

"ಮಹಾರಾಜಾ, ಹೆಂಡತಿಯು ಹೋಗಿದ್ದರೂ, ಹೆಂಡತಿಯ ಸಂಬಂಧದ ಹೃದಯದೊಳಗಿನ ಅಂಜಿಕೆಯು ಹೋಗಿರುವದಿಲ್ಲ. ಸಾತ್ವಿಕಹೆಂಡಿರೊಡನೆ ಬೇಕಾದ ಹಾಗೆ ನಡಕೊಳ್ಳಬಹುದು; ಆದರೆ ರಾಜಸ-ತಾಮಸಪ್ರಕೃತಿಯ ಹೆಂಡಿರೊಡನೆ ನಡಕೊಳ್ಳುವದು ಬಹು ಕಷ್ಟವು"! ಎಂದು ಶ್ರೀಗುರುವು "मममायादुरत्यया" ಎಂಬ ಭಗವದುಕ್ತಿಯ ಪುನರುಕ್ತಿಯಾಗಿ ಪ್ರಸಂಗವಶಾತ್ ಗಾಂಭೀರ್ಯದಿಂದ ಆಡಿದ್ದನ್ನು ಬಹು ಜನರು ಕೇಳಿರುವರು. ಅದರಂತೆಯೇ ತಮ್ಮ ಕುಟುಂಬದ ಸರಳತನವನ್ನು ಕುರಿತು ಶ್ರೀ ಗುರುಗಳು —"ಆದರೆ, ಕುಟುಂಬವು ನಿಸ್ಪೃಹ; ತಗಲು-ತಾಟು ಸೇರಲಿಕ್ಕಿಲ್ಲ, ಅಂಥವರನ್ನು ನೆರಳಿಗೆ ನಿಲ್ಲಗೊಡಲಿಕ್ಕಿಲ್ಲ, ಖರೇ ಜನರನ್ನು ಕಂಡರೆ ಪ್ರೇಮ ಬಹಳ. ಕೈ ದೊಡ್ಡದು, ಜನರಿಗೆ ಎಷ್ಟು ಉಣಿಸಿದರೂ ತೃಪ್ತಿಯಾಗಲಿಕ್ಕಿಲ್ಲ ತನ್ನ ಮನಸ್ಸಿಗೆ ಬಾರದಿದ್ದರೆ ಯಾರನ್ನೂ ನೋಡುವ ಹಾಗಿಲ್ಲ, ಮುಖ್ಯ ತನ್ನನ್ನು ಅನುಸರಿಸಿ ಜನರು ಹೋಗಲಿಕ್ಕೆ ಬೇಕು. ತನ್ನ ಮಾತು ನಡೆಯಲಿಕ್ಕೆ ಬೇಕು. ಮಹಾರಾಜಾ, ಕುಟುಂಬದ ಕಾಲಲ್ಲಿ ಈ ದೇಹವು ಏಳು ಕೆರೆ ನೀರು ಕುಡಿದದೆ "ಎಂದು ಹೇಳಿದ್ದನ್ನಾದರೂ ಜನರು ಕೇಳಿರಬಹುದು! ಶ್ರೀ ಗುರುವಿನ ಕುಟುಂಬದ ನಿಜವಾದ ಗೌರವದ ಯೋಗ್ಯತೆಯನ್ನು ಮುಂದೆ ೫ನೇ ಪ್ರಕರಣದಲ್ಲಿ ಬರೆಯಬೇಕಾಗಿರುವದರಿಂದ, ಇಲ್ಲಿ ಹೆಚ್ಚಿಗೆ ಬರೆಯುವದಿಲ್ಲ. ಶ್ರೀ ಗುರುಗಳು, ತಮ್ಮ ಕುಟುಂಬವಿರುವ ತನಕ ಅವರ ಮಾತು ಮೀರಲಿಲ್ಲ; ಅವರಿಗೆ ಕೆಟ್ಟ ಮಾತು ಆಡಲಿಲ್ಲ; ಅವರನ್ನು ಏಕವಚನದಿಂದ ಕರೆಯಲಿಲ್ಲ; ಕೆಲಸಮಾಡಲಿಲ್ಲೆಂದು ಅವರಿಗೆ ಸಿಟ್ಟುಮಾಡಲಿಲ್ಲ. ಕುಟುಂಬವು ಸಿಟ್ಟಿನಲ್ಲಿದ್ದರೆ ತಾವು ಮೌನಧಾರಣಮಾಡಿ ಕುಟುಂಬವು ಹೇಳಿದಂತೆ ಕೇಳಬೇಕು; ಸಮಾಧಾನದಿಂದಿದ್ದರೆ ವಿನಯದಿಂದ ಎರಡು ಮಾತುಗಳನ್ನು ಆಡಬೇಕು. ಕುಟುಂಬದ ಎದುರಿಗೆ ಯಾವ ಮನೆಗೆಲಸಮಾಡಲಿಕ್ಕೂ ಶ್ರೀ ಗುರುಗಳು ಅಭಿಮಾನಪಟ್ಟು ಹಿಂದಕ್ಕೆ ಸರಿಯಲಿಲ್ಲ. ಅವರು ತಮ್ಮ ಕುಟುಂಬದ ಎದುರಿನಲ್ಲಿ ಕುಟ್ಟಿದರು, ಬೀಸಿದರು, ಎಂಜಲುಬಳಿದರು, ಮುಸುರಿಯತಿಕ್ಕಿದರು, ಒಂದು ಕಲ್ಲಪರಟೆಯು ಒಡೆದದ್ದಕ್ಕಾಗಿ ಕುಟುಂಬಕ್ಕೆ ಅಂಜಿ ಸತ್ತರು. ಈ ಪ್ರಸಂಗಗಳನ್ನು ನೋಡಿ ಚಪ್ಪಳೆ ಬಡೆದು ನಗುವಜನರ ನಗೆಗೆ ಗುರುಗಳು ಲಕ್ಷಗೊಡಲಿಲ್ಲ; ಈ ಪ್ರಸಂಗದಲ್ಲಿ ಗುರುಹಿರಿಯರು ಮಾಡುವ ತಿರಸ್ಕಾರಕ್ಕೆ ಗುರುಗಳು ಕಿವಿಗೊಡಲಿಲ್ಲ. ಹೀಗೆ ಪಾಮರರಿಗೆ ತೀರ ಅಸಾಧ್ಯವಾದ ಅನುವರ್ತನದಿಂದ ಕುಟುಂಬದೊಡನೆಯಾದರೂ ದಾಸವೃತ್ತಿಯಿಂದ ನಡೆದು, ಶ್ರೀ ಸದ್ಗುರೂತ್ತಮನು ತನ್ನ ಏಕಕ್ರಿಯೆಯನ್ನು ಕಾಯ್ದುಕೊಂಡನು! ಮಹಾತ್ಮನ ಈ ಅಗಾಧವಾದ

ಲೀಲೆಯು, ಪಾಮರರಿಗೆ ಆಗ ಹ್ಯಾಗೆ ತಿಳಿಯಬೇಕು? ಅದೊಂದು ಅವರಿಗೆ ವಿನೋದಪ್ರಸಂಗವಾಗಿ ಪರಿಣಮಿಸಿ ಅವರನ್ನು ಹಾಳುಮಾಡಿ ಬಿಟ್ಟಿತು!!

ಇಂಥ ಮಹಾತೇಜಸ್ವಿಗಳಾದ ಶ್ರೀ ಗುರುಪತ್ನಿಯವರು ಕಾಲಕರ್ಮಕ್ಕನುಸರಿಸಿದೇಹ ಬಿಟ್ಟಬಳಿಕ, ಅವರ ಪವಿತ್ರಸ್ಥಾನವನ್ನು ಉತ್ಸವಮೂರ್ತಿಗಳಾದ ಶಿಷ್ಯರೆನಿಸುವ ನಾವು ಒಬ್ಬೊಬ್ಬರೇ ಆಕ್ರಮಿಸ ಹತ್ತಿದೆವೆಂದು ಹೇಳಬಹುದು. ಲೋಕವೂ ತೆಯುವರು ಇರುವಾಗಲೇ ನಮ್ಮ ಆಗಮನವಾಗಹತ್ತಿತ್ತು. ಸಾಧನಚತುಷ್ಟಯಸಂಪನ್ನರಲ್ಲದೆ, ಹಸಿಬಿಸಿಮುಮುಕ್ಷುರಾದ ಜ್ಞಾನಶೂನ್ಯ ಶಿಷ್ಯರು ನಾವು ಕಾಮನಾಪರರಾಗಿ, ಭ್ರಾಂತಿಯಿಂದ ಹೆಂಡಿರುಮಕ್ಕಳನ್ನು ಉದಾಸೀನಮಾಡಿ ಒಬ್ಬೊಬ್ಬರೇ ತಮ್ಮ ಮನಸೇರಿಕೊಳ್ಳುವದನ್ನು ನೋಡಿ, ಅವ್ವನವರು—“ಮಠದದಿಂಡೆಯರು ಮನೆಯಲ್ಲಿ ಸೇರಿಕೊಳ್ಳಹತ್ತಿದರಪ್ಪಾ” ಎಂದು ತಿರಸ್ಕರಿಸುತ್ತಿದ್ದದ್ದು ವಿಚಾರಮಾಡತಕ್ಕಮಾತಾಗಿದೆ. ಮಹಾತೇಜಸ್ವಿಗಳಾದ ಶ್ರೀ ಗುರುಪತ್ನಿಯವರು ಇರುವತನಕ ಯಾವ ಶಿಷ್ಯರ ಬೇಳೆಯೂ ಬೇಯಲಿಲ್ಲ; ಯಾವ ಸಾಧುಗಳ ಆಟವೂ ನಡೆಯಲಿಲ್ಲ! ಎಲ್ಲರೂ ಗಡಗುಟ ನಡಗುತ್ತಿದ್ದರು! ತಾವು ಇಂಥ ತೇಜಸ್ವಿಗಳಾದದ್ದರಿಂದಲೇ ಅವ್ವನವರು, ಪ್ರಕೃತಿಯು ಪುರುಷನ ಪಾಣಿಗ್ರಹಣಮಾಡಿ, ತನ್ನ ಅಧೀನದಲ್ಲಿಟ್ಟುಕೊಂಡಂತೆ, ಶ್ರೀ ಸದ್ಗುರುವರನ ಪಾಣಿಗ್ರಹಣಮಾಡಿ ಅಧೀನದಲ್ಲಿಟ್ಟುಕೊಂಡರೆಂದು ಹೇಳಬಹುದು. ಅವ್ವನವರು ದೇಹಬಿಟ್ಟಬಳಿಕ ಶ್ರೀ ಗುರುಗಳು ದುರಭಿಮಾನದ ಶಿಷ್ಯರ ಜಗ್ಗಾಟದಲ್ಲಿ ಸಿಕ್ಕು ಒದ್ದಾಡಹತ್ತಿದರು. ಅವ್ವನವರಿರುವತನಕ ಶ್ರೀಗುರುಗಳ ಸಾಧುತ್ವದ ಸಂಗೋಪನವೂ, ಸಂವರ್ಧನವೂ ಬಹಳ ಚೆನ್ನಾಗಿ ಆದವು; ಆದರೆ ಇವೆರಡರ ಹಾನಿಗೂ ನಮ್ಮಂಥ ದುರಭಿಮಾನದ ಶಿಷ್ಯರ ಕೃತಿಗಳು ಕಾರಣವಾಗಲು, ತಮ್ಮ ಸಾಧುತ್ವಕ್ಕೆ ಎಲ್ಲಿ ಕೊರತೆಬರುತ್ತದೋ, ಎಂದು ಶ್ರೀ ಗುರುಗಳು ಪೇಚಾಡಿದ್ದೇನಾಶ್ಚರ್ಯವು? ಸ್ವಾರ್ಥಪರರಾದ ನಮ್ಮಂಥ ಶಿಷ್ಯರಹಿಂಡು, ಶ್ರೀ ಸದ್ಗುರುರೂಪವಾದ ರತ್ನವನ್ನು ಮುತ್ತಿ, ಯೋಗ್ಯ ಪರೀಕ್ಷೆಯಿಲ್ಲದೆ, ಹುಂಬತನದಿಂದ ನನಗೆ, ತನಗೆಂದು ಬಡದಾಡಹತ್ತಿದ ಬಳಿಕ, ಶ್ರೀ ಗುರುವಿಗೆ ತ್ರಾಸವಾಗುವದೇಸರಿ. ಅವ್ವನವರು ದೇಹಬಿಟ್ಟಬಳಿಕ ನಾವು ಶ್ರೀಗುರುವನ್ನು ಸ್ವಸ್ಥ ಕುಳ್ಳಿರಿಸಿದೆವೆಂದು ಶಿಷ್ಯರು ಸಮಾಧಾನಪಡುತ್ತಿರಬಹುದು; ಚಲೋ ಉಣಿಸುಗಳನ್ನು ನೀಡಿದೆವೆಂದು ಹಿಗ್ಗುತ್ತಿರಬಹುದು; ಅತಿಥಿಸೇವೆಯು, ಹಾಗು ಪ್ರಸ್ತಪ್ರಯೋಜನಗಳ, ಅದರಂತೆ ಇಮಾರತುಗಳ ವ್ಯಾಪ್ತಿಯನ್ನು ಹೆಚ್ಚಿಸಿದೆವೆಂದು ಹಿಗ್ಗುತ್ತಿರಬಹುದು; ಭಾಷಾಸೇವೆ–ವಿದ್ಯಾದಾನದಂಥ ಲೋಕಹಿತದ

ಕಾರ್ಯವನ್ನು ನೆಲೆಗೊಳಿಸಿದೆವೆಂದು ಅಭಿಮಾನಪಡುತ್ತಿರಬಹುದು; ಆದರೆ, ಶ್ರೀಗುರುವು ಸ್ವಸ್ಥ ಕುಳಿತು, ಪೌಷ್ಟಿಕಪದಾರ್ಥಗಳನ್ನು ಸ್ವೀಕರಿಸಿದ್ದರಿಂದ, ಆತನ ಪ್ರಕೃತಿಯು ಮೇಲೆ ದುಷ್ಪರಿಣಾಮವಾಗಲಿಕ್ಕೂ, ಇಲ್ಲದ ಅಚ್ಛೆ ಮಾಡಿ ಶ್ರೀ ಗುರುವಿಗೂ-ಲೋಕಕ್ಕೂ ಭೇದಭಾವ ತೋರಿದ್ದರಿಂದ, ಶ್ರೀ ಗುರುವಿನಲ್ಲುಂಟಾದ ಸಂಕೋಚವು ಮೂಲಕ ಅಸಮಾಧಾನಕ್ಕೂ, ಅತಿಥಿಸೇವೆ ಹಾಗು ಪ್ರಸ್ತಪ್ರಯೋಜನಗಳ ವ್ಯಾಪ್ತಿಯು ಹೆಚ್ಚಳದ ಸಂಗಡ ಬಹುಜನರಲ್ಲಿ ಆಲಸ್ಯ, ನಿರುದ್ಯೋಗ, ಅನೀತಿ, ಕೃತಘ್ನತೆ, ಔದ್ಧತ್ಯಗಳು ಹೊಳೆದೋರಲಿಕ್ಕೂ, ಇಷ್ಟವಸ್ತುಗಳ ಹೆಚ್ಚಳದಸಂಗಡ ಸಿಕ್ಕವರು ಅಗ್ರಹಾರದಲ್ಲಿ ಬಂದು ನಿಂತುಕೊಳ್ಳಲಿಕ್ಕೂ, ಪಾಠಶಾಲೆ, ಭಾಷಾಸೇವೆಗಳ ನೆವದಿಂದ ಅಗ್ರಹಾರದಲ್ಲಿ ಇಲ್ಲದ ಗೊಂದಲ-ಉಸಾಬರಿಗಳು ಉತ್ಪನ್ನವಾಗಲಿಕ್ಕೂ, ಯಾರು ಕಾರಣವಾದರೆಂಬುದನ್ನು ಶಿಷ್ಯರಾದ ನಾವು ಆಲೋಚಿಸತಕ್ಕದ್ದು. ಜನರನ್ನು ಸನ್ಮಾರ್ಗಕ್ಕೆ ಹಚ್ಚುವದಕ್ಕಾಗಿ ಬಂದಿದ್ದ ಶ್ರೀ ಸದ್ಗುರುವಿನ ಸುತ್ತುಮುತ್ತು ನೆರೆದ ದುರಭಿಮಾನದ ಶಿಷ್ಯರು, ನಮ್ಮಲ್ಲಿ ಹಾಗು ಜನರಲ್ಲಿ ಸತ್ಪ್ರವೃತ್ತಿಯು ಪೋಷಣವಾಗುವದರ ಕಡೆಗೆ ಲಕ್ಷ್ಯಕೊಡಲಾರದೆ, ಇಷ್ಟು ಗೊಂದಲ ಹಾಕಿದಬಳಿಕ, ಶ್ರೀಗುರುವು ಯಾರ ಗೊಂದಲಗಳನ್ನು ಕೇಳಬೇಕು! ಯಾರಿಗೆ ಸೈ ಅನ್ನಬೇಕು! ಬಹು ಕಷ್ಟವು!! ನಿನ್ನದು ಅಲ್ಲೆಂದು ಹೇಳಿದ ಕೂಡಲೆ ಶಿಷ್ಯರಿಗೆ ಅಸಮಾಧಾನ ವಾಗುವದೇ ಸಿದ್ಧಾಂತವು!! ಹಾಯ್ ಹಾಯ್! ಮಹಾತ್ಮಾ ಸದ್ಗುರೂ! ಮಂದಿಯ ಮನಸ್ಸನ್ನು ನೋಯಿಸಲಾರದ ನಿನಗೆ ಅಧಮರಾದ ನಮ್ಮಿಂದ ಎಷ್ಟು ತ್ರಾಸವಾಯಿತಲ್ಲ! ನಮ್ಮ ಗೊಂದಲದಿಂದ ಬೇನೆಯಲ್ಲಿ ನಿನಗೆ ಅಷ್ಟು ವ್ಯಥೆಯಾಗಿದ್ದರೂ, ನಮ್ಮ ಸಂಗಡ ಆಜ್ಞಾಧಾರಕ ಶಿಷ್ಯನಂತೆ ನಡೆದ ನೀನು, ಆ ವಿಷಯವಾಗಿ ಪಿಟ್ಟೆಂದು ಮಾತಾಡಲಿಲ್ಲವಲ್ಲ!! "ಮಹಾರಾಜಾ, ನಿಮಗೆ ಯಾರಿಗೂ ಅಂತಹತ್ತಗೊಡದೆ ಸ್ವಾಮಿಯು ಅಲಖ್ ಪಾರಾಗಿ ಹೋಗುತ್ತಾನೆ ನೋಡಿರಿ" ಎಂದು ಬಾರಿಬಾರಿಗೆ ಅನ್ನುತ್ತಿರುವಂತೆ, ಕಡೆಗೆ ಹೋಗಿಬಿಟ್ಟ! ಇನ್ನೆಲ್ಲಿಯ ಸದ್ಗುರುವು! ಇನ್ನೆಲ್ಲಿಯ ಸದ್ಬೋಧವು!! ದುರಭಿಮಾನದ ಶಿಷ್ಯರೆಲ್ಲರು ಇನ್ನು ಮೇಲೆ ತಮ್ಮ ತಮ್ಮ ಮನಸ್ಸಿನ ಗ್ರಂಥಿಗಳ ಯೋಗದಿಂದ ತಳಮಳಿಸುತ್ತಿರಬೇಕಾಯಿತು! ಮಹಾಪರಾಧಿಗಳಾದ ನಮಗೆ ಯೋಗ್ಯ ಶಾಸನ ಮಾಡಿದೆ!!

ಪ್ರಿಯವಾಚಕರೇ, ಶಿಷ್ಯರಾದ ನಮ್ಮ ಮಾಯಾವ್ಯವಹಾರಗಳೊಳಗಿನ ದೋಷಗಳ ವಿವೇಚನವು ಸಯುಕ್ತಿಕವಾಗಿಯೂ, ಸಪ್ರಮಾಣವಾಗಿಯೂ ಮುಂದಿನ ೬ ನೆಯ ಪ್ರಕರಣದಲ್ಲಿ ಬರಬೇಕಾಗುವದರಿಂದ, ಅದನ್ನು ಕುರಿತು ಇಲ್ಲಿ ಹೆಚ್ಚಿಗೆ

ಬರೆಯುವದಿಲ್ಲ. ನಿಮ್ಮ ದೋಷಗಳನ್ನು ತಕ್ಕೊಂಡು ಮಾಡುವದೇನೆಂದು ನೀವು ದೊಡ್ಡ ಮನಸ್ಸಿನಿಂದ ಕೇಳಬಹುದು; ನಿರ್ದೋಷರಾದ ನಿಮಗೆ ಮಾತ್ರ ಹಾಗೆ ಕೇಳುವದು ಒಪ್ಪಬಹುದಲ್ಲದೆ, ದೋಷಾಧಿಕರಾದ ನಾವು, ದೋಷರಹಿತರಾಗುವದಕ್ಕಾಗಿ ಶ್ರೀಗುರುವಿನ ಸ್ಥಾನದಲ್ಲಿ ಋತ್ವಿರಲು, ನಮ್ಮ ದೋಷಗಳನ್ನು ಜಗತ್ತಿನಮುಂದೆ ಇಡುವದು ನಮಗೆ ಕಲ್ಯಾಣಕರವಾಗಿರುವದು. ನಮ್ಮ ದೋಷವನ್ನು ಯೋಗ್ಯ ಕಾಲದಲ್ಲಿ ಮುಂದಿಯ ಮುಂದೆ ಹೇಳಲಿಕ್ಕೂ ಒಡಂಬಡದಿದ್ದರೆ, ಇಷ್ಟು ದಿವಸ ಸತ್ಪುರುಷಸ್ಥಾನದಲ್ಲಿ ಇದ್ದು ನಾವು ಮಾಡಿದ ಕಾರಭಾರವಾದರೂ ಏನು! ಇರಲಿ, ಪ್ರಕೃತ್ತಕ್ಕೆ ಶ್ರೀಗುರುವು ದೀರ್ಘಕಾಲ ಬೇನೆಯನ್ನು ಅನುಭವಿಸಲಿಕ್ಕೆ ಶಿಷ್ಯರಾದ ನಾವು ಹ್ಯಾಗೆ ಕಾರಣರಾದೆವೆಂಬದನ್ನು ಈಗ ಹೇಳುವೆವು. ಎಷ್ಟೋ ಗುರುಗಳ ಅಂತಕಾಲದ ವ್ಯಾಧಿಯಲ್ಲಿ ಶಿಷ್ಯರು ಏಕನಿಷ್ಠೆಯಿಂದ ಸೇವಿಸಿ ಅನುಗ್ರಹಪಡೆದ ಹಲವು ಪ್ರಾಚೀನ ಕಥೆಗಳು ಕೇಳಿಕೆಯಲ್ಲಿರುವವಷ್ಟೇ! ಅವುಗಳನ್ನು ಕೇಳಿ ಅನು-ಗ್ರಹಾಕಾಂಕ್ಷಿಗಳಾದ ಶಿಷ್ಯರೆನಿಸುವ ನಾವು, ಶ್ರೀಗುರುವು ವ್ಯಾಧಿಗ್ರಸ್ತನಾದ ಕಾಲದಲ್ಲಿ ನಾಮುಂದೆ-ನೀಮುಂದೆ ಎಂದು ಶ್ರೀ ಗುರುವನ್ನು ಸೇವಿಸಲಿಕ್ಕೆ ಮುಂದುವರೆದೆವು. ಕೆಲವು ಶಿಷ್ಯೋತ್ತಮರೆನಿಸುವವರು, ನಾವೇ ಯಾವತ್ತು ಸೇವೆಯನ್ನು ಮಾಡಿ ಸಂಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕೆಂಬ ದುರ್ವಾಸನೆಯಿಂದ ಅನ್ಯಶಿಷ್ಯರಿಗೆ ಸೇವೆಗೆ ಆಸ್ಪದದೊರೆಯದಂತೆ ತಾವೇ ಎಲ್ಲ ಸೇವೆಗಳನ್ನು ಮಾಡಬೇಕೆಂದು ಆಶೆ-ಪಟ್ಟರು; ಆದರೆ ಅನುಗ್ರಹಾಕಾಂಕ್ಷಿಗಳಾದ ಎಲ್ಲರಿಗೂ ಸೇವೆಬೇಕಾದ್ದರಿಂದ ಎಲ್ಲರೂ ಝಲುಮೆಯಿಂದ ಸೇವಾಕಾರ್ಯದಲ್ಲಿ ಪ್ರವೇಶಿಸಹತ್ತಿದರು. ಅಂದಬಳಿಕ್ಕ ಪ್ರಿಯವಾಚಕರೇ, ಶಿಷ್ಯರ ಈ ಕೋರಿಕೆಯನ್ನು ಲೋಕದಾಸನಾದ ಶ್ರೀ ಗುರುವು ವ್ಯಾಧಿಯನ್ನು ಅನುಭವಿಸುತ್ತ ಪೂರ್ಣಮಾಡಬೇಕಾಯಿತಲ್ಲವೆ? ಶ್ರೀ ಗುರುವು ಶಿಷ್ಯರ ಈ ಬಯಕೆಯನ್ನು ಸಂಪೂರ್ಣಮಾಡುವದಕ್ಕಾಗಿಯೋ ಅನ್ನುವಂತೆ, ಏಳು ತಿಂಗಳು ಬೇನೆಯನ್ನು ಅನುಭವಿಸಿದಾಗ ನಾಲ್ಕುಜನ ಶಿಷ್ಯರು, ಅಂದರೆ ಗುರುಭಕ್ತ ನಾರಾಯಣಭಗವಾನ, ಗು. ಭ. ಶಂಕರಭಗವಾನ, ಗು. ಭ. ಶ್ರೀನಿವಾಸಶಾಸ್ತ್ರಿಗಳು, ಗು. ಭ. ಗಣಪತ್ಯನವರು, ಹಾಗು ಶ್ರೀ ಗುರುಗಳ ಸೊಸೆಯಂದಿರಾದ ತೀ. ಕು. ಸೌ. ಮಾತೃಶ್ರೀ ವೆಂಕೂಬಾಯಿಯವರು ಮಾಡಿದ ಸೇವೆಯು ವರ್ಣಿಸತಕ್ಕದ್ದೇಸರಿ. ಈಗಿನ ಕಾಲದಲ್ಲಿ ಭಕ್ತಿಪುರಸ್ಸರವಾಗಿ ಇಷ್ಟು ಆಸಕ್ತಿಯಿಂದ ಕಷ್ಟಪಟ್ಟು ಸೇವಿಸುವವರು ತೀರ ದುರ್ಲಭವು. ಇವರಲ್ಲಿ ಒಬ್ಬೊಬ್ಬರ ನಿಸ್ಪೃಹಸೇವೆಗಾಗಿ ಲೇಖಕನು ಅವರನ್ನು ಮನಸಾಭಕ್ತಿಯಿಂದ ನಮಿಸುವನು. ೭ ತಿಂಗಳ

ಲ್ಲಿ ಶ್ರೀಗುರುವು ಬೇನೆಯವನೆಂದು ಯಾರಿಗೂ ಕಾಣದಂತೆ, ಈ ಸನ್ಮಾನನೀಯ ಶಿಷ್ಯರು ಸ್ವಚ್ಛತೆ ಮೊದಲಾದವುಗಳನ್ನು ಕಾದು ಸೇವೆಯನ್ನು ಬಹು ದಕ್ಷತೆಯಿಂದಲೂ, ಭಕ್ತಿಯಿಂದಲೂ ಮಾಡಿದರು. ಅದನ್ನು ವರ್ಣಿಸುವದು ಪಾಮರನಾದ ಲೇಖಕನ ಯೋಗ್ಯತೆಗೆ ಸಾಲದು. ಶಿಷ್ಯಚತುಷ್ಟಯದ ಈ ನಿಕಟಸೇವೆಗೆ ಮೆಚ್ಚಿ ಶ್ರೀಗುರುವು ತಾನು ದೇಹಬಿಡಲಿಕ್ಕೆ ೩ ದಿನ ಇರುವಾಗ, ಅಂದರೆ ಭಾದ್ರಪದ ಶುದ್ಧ ಪಂಚಮಿ ಸೋಮವಾರದ ದಿವಸ ನಾಲ್ಕು ತಾಸು ರಾತ್ರಿಯ ಸುಮಾರಕ್ಕೆ ಆ ನಾಲ್ವರು ಶಿಷ್ಯರು, ಹಾಗು ಪುಣ್ಯವತಿಯಾದ ಸೊಸೆಯು ಹೀಗೆ ಐವರೇ ಒಳಗಿಲ್ಲಿರಲು, ಅವರನ್ನು ಕುರಿತು—“ನೀವು ಸೇವೆಯನ್ನು ಬಹಳ ಚನ್ನಾಗಿ ಮಾಡಿದಿರಿ; ಆದ್ದರಿಂದ ನಿಮ್ಮ ಚರಣಗಳನ್ನು ಕೊಡಿರಿ.” ಎಂದು ಕೇಳಲು, ಶಿಷ್ಯರು ಸ್ವಾಭಾವಿಕವಾಗಿ ಸಂಕೋಚಪಡಹತ್ತಿದರು. ಆಗ, ಗುರು-ಶಿಷ್ಯ ತಾರತಮ್ಯವಿಲ್ಲದೆ ಲೋಕಕ್ಕೆ ದಾಸನಾದ ಶ್ರೀಗುರುವು—“ಸಂಕೋಚಪಡಬಾರದು ಮಹಾರಾಜಾ, ನೀವು ಮೊದಲು ಚರಣಕೊಡಿರಿ, ಆ ಮೇಲೆ ನೀವು ಈ ದೇಹದ ಕಡೆಯ ಪಾದಪೂಜೆಯನ್ನು ಮಾಡಿರಿ”, ಎಂದು ಹೇಳಿ, ಶಿಷ್ಯರನ್ನು ನಮಸ್ಕರಿಸಿ, ತನ್ನ ಪಾದಪೂಜೆಯನ್ನು ತಾಂತ್ರಿಕವಾಗಿ ಮಾಡಿಸಿಕೊಂಡು ಚರಣತೀರ್ಥ ಕೊಟ್ಟು ಪ್ರಸಾದಗ್ರಹಣಮಾಡಿರೆಂದು ಆಗ್ರಹದಿಂದ ಅವರೆಲ್ಲರನ್ನೂ ಊಟಕ್ಕೆ ಕಳಿಸಿದರು! ಕೇವಲ ಸಾಧುವಾದ ಪ್ರತ್ಯಕ್ಷ ಹೊಟ್ಟೆಯ ಮಗನಿಗೂ ಲಭಿಸದ ಚರಣತೀರ್ಥಪ್ರಸಾದವನ್ನು, ಪರಮನ್ಯಾಯಿಯೂ, ಕೃತಜ್ಞನೂ, ನಿಸ್ಪೃಹನೂ ಆದ ಸದ್ಗುರುವು, ಪ್ರತ್ಯಕ್ಷ ಕೈ ಮುಟ್ಟಿ ತನ್ನ ಸೇವೆಮಾಡಿದವರಿಗಷ್ಟೇ ಕೊಟ್ಟು, ಅವರನ್ನು ಕೃತಾರ್ಥರಾಗಮಾಡಿದ್ದಕ್ಕಾಗಿಯೂ, ಆ ಕೃತಾರ್ಥತೆಗೆ ಆ ಶಿಷ್ಯಪಂಚಕರು ಪಾತ್ರರಾದದ್ದಕ್ಕಾಗಿಯೂ ಪಾಮರನಾದ ಲೇಖಕನು ಆ ಶಿಷ್ಯಪರಿವೃತನಾದ ಶ್ರೀಗುರುವನ್ನಭಿನಂದಿಸಿ, ಭಕ್ತಿಯಿಂದ ಅವರೆಲ್ಲರನ್ನೂ ನಮಸ್ಕರಿಸುವನು! ಬರೆಯುವ ತಾತ್ಪರ್ಯವಿಷ್ಟೇ, ಶ್ರೀ ಸದ್ಗುರುವಿನ ಸೂಕ್ಷ್ಮವಾದ ದಾಸಧರ್ಮವು ಕಡೆಗೆ ಶಿಷ್ಯರ ಮುಂದೆ ಸಹ ತನ್ನ ಪ್ರಭಾವವನ್ನು ತೋರಿಸದೆಬಿಡಲಿಲ್ಲ!

ಹ್ಯಾಗಾದರೂ ಜಡದೇಹಸೇವಾತತ್ಪರರಾದ ಶಿಷ್ಯರಿಗೆ ಶ್ರೀ ಗುರುಗಳು ಜಡದೇಹರೂಪವಾಗಿಯೇ ತೋರಿದರೆಂದು ಹೇಳಬೇಕಾಗುತ್ತದೆ; ಇದಕ್ಕೆ ಆ ಶಿಷ್ಯರ ಸೇವಾತತ್ಪರತೆಯಿಂದುಂಟಾದ ಪ್ರಮೋದವು ಕಾರಣವಾಗಿರಬಹುದು; ಯಾಕಂದರೆ, ಬಹುದಿನ ಸದ್ಗುರುವಿನ ಸೇವೆಯನ್ನು ಮಾಡಿ ಕೃತಾರ್ಥರಾದ ಶಿಷ್ಯರು ಸಹಮೋಹವಶರಂತೆ ಬೇರೆ ಬೇರೆ ಕಾಲದಲ್ಲಿ ಶ್ರೀ ಗುರುಗಳನ್ನು ಕುರಿತು—“ಇದೊಂದು ಸಾರೆ

ನವರಾತ್ರಿಯಲ್ಲಿ ಸಿಂಹಾಸನವೇರಿ ಪೂಜೆಯನ್ನು ಸ್ವೀಕರಿಸಿ ಬಿಡಬೇಕು. ಇದೊಂದು ವರ್ಷ ಕಡೆಯ ಜಯಂತಿಯನ್ನು ಮಾಡಿ ಬಿಡಬೇಕು. ಈಗ ದಕ್ಷಿಣಾಯನವು, ದೇಹಬಿಡುವದು ಪ್ರಶಸ್ತವಲ್ಲ. ಈ ಮಹಾವ್ಯಾಧಿಯಿಂದ ತಟ್ಟನೆ ಎದ್ದು ಎಲ್ಲ ವೈದ್ಯರ ಮೋರೆಯನ್ನು ಕೆಳಗೆಮಾಡಿ ಬಿಟ್ಟು ಸ್ವಾಮಿಯು ಪ್ರಭಾವವನ್ನು ತೋರಿಸಬೇಕು. ಈ ವೈದ್ಯರ ಔಷಧವನ್ನು ತಕ್ಕೊಂಡರೆ ಗುಣವಾಗುವದು, ಅವಶ್ಯವಾಗಿ ತಕ್ಕೊಳ್ಳಬೇಕು", ಇತ್ಯಾದಿ ರೀತಿಯಾಗಿ ಒಬ್ಬರು ಒಂದು ವಿಧವಾಗಿ ಪ್ರಾರ್ಥಿಸಿದರೆ, ಇನ್ನೊಬ್ಬರು ಇನ್ನೊಂದು ವಿಧವಾಗಿ ಪ್ರಾರ್ಥಿಸುತ್ತಿದ್ದರು! "ನನ್ನ, ಹಾಗು ವೈದ್ಯರ ಆಟವು ನಿಂತಿತು" ಎಂದು ಶ್ರೀಗುರುವು ಹೇಳಿರಲು, ನಾವು ಗುರುಪುತ್ರರೆನಿಸಿಕೊಳ್ಳುವವರೇ ಹೀಗೆ ಪ್ರಾರ್ಥಿಸುವಾಗ, ಶ್ರೀಗುರುವಿನ ಆಪ್ತರಾದ ಹೆಣ್ಣುಮಕ್ಕಳು ವ್ಯಕ್ತವಾಗಿಯಾಗಲಿ, ಗುಪ್ತವಾಗಿಯಾಗಲಿ—"ಮಾಘದಲ್ಲಿ ಮೊಮ್ಮಕ್ಕಳ ಲಗ್ನ ಮಾಡಿ ಹೋಗಬೇಕೆ"ಂದು ಪ್ರಾರ್ಥಿಸಿದ್ದರಲ್ಲಿಯೂ, ಭಾವಿಕರು—"ಶ್ರೀ ಸ್ವಾಮಿಯು ಇನ್ನೂ ನಾಲ್ಕು ಒಪ್ಪತ್ತು ಇದ್ದು ಜಗತ್ತನ್ನು ಉದ್ಧರಿಸಬೇಕೆ"ಂದು ಪ್ರಾರ್ಥಿಸಿದ್ದರಲ್ಲಿಯೂ, ಲೌಕಿಕರು—"ಶ್ರೀ ಸ್ವಾಮಿಯು ಹೋದಬಳಿಕ ಸೇವಾಧರ್ಮವು ನಡೆಯುವದು ಕಷ್ಟವು, ಯಾರಮೇಲಾದರೂ ಅನುಗ್ರಹಮಾಡಿ ಹೀಗೆಯೇ ಸೇವಾಧರ್ಮನಡೆಯುವಂತೆ ಮಾಡಿ ಹೋಗಬೇಕೆಂ"ದು ಪ್ರಾರ್ಥಿಸಿದ್ದರಲ್ಲಿಯೂ ಆಶ್ಚರ್ಯವೇನು? ಈ ಪ್ರಾರ್ಥನೆಗಳೇ ಶ್ರೀ ಗುರುವು ಬೇನೆಯನ್ನು ಬಹು ದಿವಸ ಭೋಗಿಸಲಿಕ್ಕೆ ಕಾರಣವಾದವೆಂದು ಹೇಳಬೇಕಾಗುವದು; ಯಾಕಂದರೆ, ದಾಸಧರ್ಮದ ಶ್ರೀ ಗುರುವು ಪರಮೇಶ್ವರ ಸ್ವರೂಪರಾದ ಇವರೆಲ್ಲರ ಅಪ್ಪಣೆಗಳನ್ನು ಹ್ಯಾಗೆ ಮೀರಬೇಕು? ಮೀರಿ ಹೋದರೆ ತನ್ನ ಲೋಕಾನುವರ್ತನಧರ್ಮಕ್ಕೆ ಬಾಧೆ ಬಂದಂತಾಗಲಿಕ್ಕಿಲ್ಲವೆ? ಹೀಗೆಪ್ರಾರ್ಥಿಸುವವರನ್ನು ಕುರಿತು ಶ್ರೀಗುರುವು—"ಮಹಾರಾಜಾ, ಸ್ವಾಮಿಯು ದೇಹಸ್ಥಿತಿಯನ್ನು ನೋಡೀ ನೋಡಿ ಹೀಗೆ ಪ್ರಾರ್ಥಿಸಿದ ಬಳಿಕ ಏನು ಹೇಳಬೇಕು? ನೀವೇ ಅನುಗ್ರಹ ಮಾಡಿ ದೇಹವನ್ನು ಉಳಿಸಿಕೊಳ್ಳಿರಿ. ಎಂದಾದರೂ ಒಂದುದಿನ ಬಿದ್ದುಹೋಗುವ ದೇಹದಮೇಲೆ ಇಷ್ಟು ಮೋಹವೇಕೆ? ಸ್ವಾಮಿಯು ಎಲ್ಲಿ ಹೋಗುತ್ತಾನೆ? ದೇಹದಿಂದಲ್ಲದಿದ್ದರೆ ವಿದೇಹನಾಗಿ ಇಲ್ಲಿಯೇ ಇರುತ್ತಾನೆಂದು ತಿಳಿಯಿರಿ. ಮಹಾರಾಜಾ, ಸ್ವರ್ಗಾಪೇಕ್ಷಿಗಳಿಗೆ ಉತ್ತರಾಯಣ-ದಕ್ಷಿಣಾಯನಗಳ ವಿಚಾರವು. ಮೊದಲೇ ಮುಕ್ತರಾಗಿದ್ದವರಿಗೆ ದಕ್ಷಿಣಾಯನವೇನು ಉತ್ತರಾಯಣವೇನು? ಗೋ ಬ್ರಾಹ್ಮಣರ ಸೇವೆಯಿಂದ ಈ ದೇಹಕ್ಕೆ ಗುಣವಾದರೆ ಆಗಬೇಕಲ್ಲದೆ, ಔಷಧದಿಂದ ಗುಣವಾಗುವದಿಲ್ಲ. ನೀವು ಅಭಿಮಾನಬಿಟ್ಟು ನಿ

ಸ್ಪೃಹರಾದರೆ, ಅನುಗ್ರಹವಾಗುವದು. ಮೋಹವಿಟ್ಟುಕೊಂಡು ದೇಹಾಭಿಮಾನದಿಂದ ಸೇವೆಮಾಡಿದರೆ, ಹ್ಯಾಗೆ ಅನುಗ್ರಹವಾಗಬೇಕು ಮಹಾರಾಜಾ? ಸಂತೋಷದಿಂದ ಎಲ್ಲರೂ ಅಪ್ಪಣೆ ಕೊಟ್ಟು ಕಳಿಸಿಬಿಡಿರಿ," ಎಂದು ಪ್ರಸಂಗವಶಾತ್ ಪ್ರಾರ್ಥಿಸುತ್ತಿದ್ದನು.

ಲೋಕದ ಈ ಆಗ್ರಹವನ್ನು ಮೀರಲಾರದೆ ದಾವಸ್ಕೃತ್ತಿಯು ಸದ್ಗುರುವು ಎಲ್ಲ ಜನರ ಒಪ್ಪಿಗೆಯನ್ನು ಪರ್ಯಾಯದಿಂದ ಪಡೆದು ತನ್ನ ಲೋಕಾನುವರ್ತನ ಧರ್ಮಕ್ಕೆ ಬಾಧೆಬಾರದಂತೆ ಪಾರಾಗಿ ಹೋದದ್ದನ್ನು ಆಲೋಚಿಸಿದರೆ ಆಶ್ಚರ್ಯವಾಗುವದು. "ನೀನು ನನ್ನ ಸನ್ಯಾಸಗ್ರಹಣಕ್ಕೆ ಒಪ್ಪಿದರೆ, ಈ ಮೊಸಳಿಯು ನನ್ನ ಕಾಲು ಬಿಡುತ್ತದಂತೆ," ಎಂದು ಹೇಳಿ, ಶ್ರೀ ಶಂಕರಾಚಾರ್ಯರು ಸನ್ಯಾಸಗ್ರಹಣಕ್ಕೆ ಉಪಾಯದಿಂದ ತಾಯಿಯ ಒಪ್ಪಿಗೆಯನ್ನು ಪಡೆದಂತೆ, ದುಸ್ಸಹವ್ಯಾಧಿಯ ದೀರ್ಘಕಾಲದ ಅನುಭವದಿಂದ ಬೇರೆ ಬೇರೆ ಜನರ ಒಪ್ಪಿಗೆಯನ್ನು ಬೇರೆ ಬೇರೆ ವಿಧವಾಗಿ ಅವರಿಗೆ ತಿಳಿಯದಂತೆ ಶ್ರೀ ಗುರುವು ಪಡೆದನು! ಶ್ರೀ ಸದ್ಗುರುವಿನ ಈ ಮಾಯಾವ್ಯವಹಾರವನ್ನು ತಿಳಿಯುವದು ನಮ್ಮ ಪಾಮರರ ಯೋಗ್ಯತೆಯೇ? ಆದರೂ ಸದ್ಗುರುವಿನ ಈ ಲೀಲೆಯನ್ನು ಕುರಿತು ಸ್ವಲ್ಪ ಆಲೋಚಿಸುವಾ. ಮೋಹುಗಾರರಂತೆ ಇರುವ ಸಾಮಾನ್ಯ ಜನಸಮೂಹವು—"ಶ್ರೀ ಸಾಧುಗಳು ದೇಹವಿಟ್ಟಬಳಿಕ ಅಗ್ರಹಾರದ ವ್ಯವಸ್ಥೆಯು ಏನಾಗುತ್ತದೋ ನೋಡಬೇಕೆಂದು ಆತುರಪಡುತ್ತಿರುವಾಗ, ಶ್ರೀ ಸದ್ಗುರುವಿನ ನಿರ್ಯಾಣಕ್ಕೆ ಅವರು ಒಂದು ಬಗೆಯಿಂದ ಒಪ್ಪಿಗೆಯನ್ನಿತ್ತ ಹಾಗಾಯಿತು. ಇನ್ನು ಭಾವಿಕರಾದವರು, ದೊಡ್ಡವರ ನಿರ್ಯಾಣಪ್ರಸಂಗವನ್ನು ನೋಡಿ ಧನ್ಯರಾಗಬೇಕೆಂದು ಒಂದೆರಡುಸಾರೆ ಆನಂದವನಕ್ಕೆ ಬಂದು, ಅದು ಸಾಧಿಸದಿರಲು ಮತ್ತೆಯಾವಾಗ ಬರಬೇಕೆಂದು ಗುರುಗಳನ್ನು ಕೇಳುತ್ತಿದ್ದರು; ಅದರಂತೆ ಕೆಲವರು ಕಾರ್ಯನಿಮಿತ್ತ ಊರಿಗೆ ಹೋಗಿ ನಿರ್ಯಾಣ ಪ್ರಸಂಗಕ್ಕೆ ತಪ್ಪದೆ ಬರಬೇಕೆಂದು ಅಗ್ರಹಾರದಪತ್ರವನ್ನು, ಇಲ್ಲವೆ ತಾರನ್ನು ಆತುರದಿಂದ ನೋಡುತ್ತಿದ್ದರು; ಹಾಗೆಯೇ ಕೆಲವರು ಆನಂದವನದಲ್ಲಿಯೇ ಇದ್ದು ನಿರ್ಯಾಣಕಾಲವನ್ನು ಸಮಾಧಾನದಿಂದ ನಿರೀಕ್ಷಿಸಹತ್ತಿದರು. ಇವೆಲ್ಲವುಗಳಯೋಗದಿಂದ ಭಾವಿಕರಾದವರು ಶ್ರೀ ಗುರುವಿನ ನಿರ್ಯಾಣಕ್ಕೆ ಪರ್ಯಾಯದಿಂದ ಒಪ್ಪಿಗೆಯನ್ನಿತ್ತ ಹಾಗಾಯಿತು! ಇನ್ನು ಶ್ರೀ ಗುರುವಿನ ಹೃದಯವನ್ನು ಬಲ್ಲೆವೆಂದು ಅಭಿಮಾನಪಡುವ ನಾವು ಶಿಷ್ಯರು—ಯಾವಕಾರಣದಿಂದಲೋ ಶ್ರೀ ಗುರುವು ಒಮ್ಮೊಮ್ಮೆ ತನ್ನ ನಿರ್ಯಾಣಕಾಲವನ್ನು ಒಡನುಡಿದಂತೆ ಮಾಡಲು, ಅದನ್ನೇ ನಿಜವೆಂದು ನಂಬಿ ಶ್ರೀ

ಗುರುಗಳು ಈ ಸುವಾರಕ್ಕೆ ದೇಹವಿಡುವರು, ಅವಶ್ಯ ಬರಬೇಕು" ಎಂದು ನಮ್ಮ ನಮ್ಮ ಶೇಜಿನವರಿಗೆ ಪತ್ರಗಳನ್ನೂ ತಾರುಗಳನ್ನೂ ಕಳಿಸಿ, ನಮ್ಮ ಮಾತು ನಿಜವಾಗಬೇಕೆಂದು ಇಚ್ಛಿಸುತ್ತಿದ್ದೆವು. ಅದರಂತೆ ಶಿಷ್ಯರಾದ ನಾವು— ದೊಡ್ಡವರು ಅನುಗ್ರಹಮಾಡದೆ ಎಲ್ಲಿ ತಮ್ಮ ಹಚ್ಚಿ ಹೋಗುವರೋ, ಎಂದು ಸಂಶಯಗ್ರಸ್ತರಾಗಿ ಅನುಗ್ರಹದ ಆಶೆಯುರಕತನದಿಂದ ನಮ್ಮ ನಮ್ಮ ಕರ್ತವ್ಯಗಳ ವಿಷಯವಾಗಿ ಔದಾಸೀನ್ಯವನ್ನು ತಾಳಿ ಶ್ರೀ ಗುರುವಿನ ಹಾಸಿಗೆಯ ಸುತ್ತುಮುತ್ತು ಚಿಂತಾಕ್ರಾಂತರಾಗಿ ಕುಳಿತುಕೊಳ್ಳುತ್ತಿದ್ದೆವು. ಅದರಂತೆ ನಾವು ಕೆಲವರು, ಹಗಲು ರಾತ್ರಿ ಸೇವೆ ಮಾಡಿ ನಿದ್ದೆಗೆಟ್ಟು ಕಣ್ಣುಗಳು ಉರಿಯುತ್ತಿರಲು, ಶ್ರಾಂತರಂತೆ! ಅನುವು ದೊರೆದಾಗ ನಿದ್ದೆಮಾಡುತ್ತಿದ್ದೆವು. ಹಾಗೆಯೇ, "ಸ್ವಾಮಿಗೆ ಜಡ್ಡು ಆದದ್ದರಿಂದ ಕೈಕಟ್ಟಿದಹಾಗಾಗಿರುತ್ತದೆಂ"ದು ಪಶ್ಚಾತ್ತಾಪಪಡುತ್ತಿದ್ದೆವು. ಅದರಂತೆ ನಾವು ಕೆಲವರು, ಶ್ರೀ ಗುರುವಿನ ಪಶ್ಚಾತ್ ವ್ಯಕ್ತಿಯನ್ನು ಸುಧಾರಿಸಿಕೊಂಡು ಸಾಧುಗಳಾಗಿ ನಡೆಯುವೆವೆಂದು ಮನಸ್ಸಿನಲ್ಲಿ ಮುಂದಿಗೆ ತಿಸುತ್ತಿದೆವು. ಮತ್ತೆ ಕೆಲವರು ೩೦ ವರ್ಷ ಗುರುಗಳು ಗಂಟಲುಹರಕೊಂಡರೂ ಲಾಭವಾಗಿಕೊಳ್ಳದ ನಾವು; ಶ್ರೀ ಗುರುವಿನ ದೇಹಧಾರಣ ಮಾಡಲಿಕ್ಕೆ, ಪ್ರಾರ್ಥಿಸುವದರಲ್ಲಿ ಪ್ರಯೋಜನವಿಲ್ಲೆಂದು ಉದಾಸೀನರಾಗುತ್ತಿದ್ದೆವು. ಮತ್ತೆ ಕೆಲವರು ನಾವು, ದೊಡ್ಡವರ ಇಚ್ಛೆಗೆ ವಿರುದ್ಧವಾಗಿ ಇಚ್ಛಿಸುವದು ನ್ಯಾಯವಲ್ಲೆಂದು ಭಾವಿಸುತ್ತಿದ್ದೆವು. ಹಾಗೆಯೇ ಕೆಲವರು, ಶ್ರೀ ಗುರುವು ಕಷ್ಟಪಡುವದನ್ನು ನೋಡಲಾರೆವೆಂದು ಮರುಗುತ್ತಿದ್ದೆವು. ಇವೆಲ್ಲ ಲಕ್ಷಣಗಳ ಮೇಲಿಂದ ಶ್ರೀ ಗುರುವಿನ ನಿರ್ಯಾಣಕ್ಕೆ ಶಿಷ್ಯಮಂಡಲದ ಒಪ್ಪಿಗೆಯೂ ಅಪ್ರತ್ಯಕ್ಷವಾಗಿ ದೊರೆತಂತಾಯಿತು. ಅದರಂತೆ, ಮೇಲಿನ ಒಂದಿಲ್ಲೊಂದು ಕಾರಣದಿಂದ, ಅಥವಾ ನಮಗೆ ಗೊತ್ತಿಲ್ಲದ ಬೇರೆಕಾರಣದಿಂದ ಶ್ರೀ ಸದ್ಗುರುಗಳ ಆಪ್ತೇಷ್ಟರೂ ಶ್ರೀ ಗುರುವಿನ ನಿರ್ಯಾಣಕ್ಕೆ ಅಪ್ರತ್ಯಕ್ಷವಾಗಿ ಒಪ್ಪಿಗೆಯನ್ನಿತ್ತಿರಬಹುದು. ಒಟ್ಟಿಗೆ ಶ್ರೀ ಗುರುವಿನ ದೀರ್ಘಕಾಲದ ಬೇನೆಯಲ್ಲಿ ಒಂದಿಲ್ಲೊಂದು ಬಗೆಯಿಂದ ಒಂದಾನೊಂದು ಕಾಲದಲ್ಲಿ ಆತನ ನಿರ್ಯಾಣಕ್ಕೆ ಎಲ್ಲರಿಂದ ಒಪ್ಪಿಗೆಯು ದೊರತಿರಲೇಬೇಕು; ಇಲ್ಲದಿದ್ದರೆ ಧರ್ಮಮೂರ್ತಿಯಾದ ಸದ್ಗುರುವು ದೇಹಬಿಡುತ್ತಿದ್ದನೆ? ಆ ಸಮರ್ಥನು ತನ್ನ ಸೇವಕ ಧರ್ಮಕ್ಕೆ ಹಾನಿಬರುವ ಪ್ರಸಂಗದಲ್ಲಿ ಎಂದೂ ದೇಹಬಿಡತಕ್ಕವನಲ್ಲ. ಎಲ್ಲರ ಒಪ್ಪಿಗೆಯಿದ್ದದ್ದರಿಂದಲೇ, ಶ್ರೀ ಗುರುವು ದೇಹಬಿಡುವಾಗ ಒಬ್ಬರೂ ಕಣ್ಣೀರುಹಾಕಲಿಲ್ಲ! ಭಜನಾದಿಗಳಿಂದ ತಮ್ಮ ಆನಂದಪರವಶತೆಯನ್ನು ಪ್ರಕಟಿಸದೆಯಿರಲಿಲ್ಲ. ಸ್ಮಶಾನಯಾತ್ರೆಯು ಸಾರ

ಗೆಯಲ್ಲಿ ಆತ್ಮಾತುರತೆಯು ಪರವಶತೆಯನ್ನು ತೋರಿಸದೆ ಇರಲಿಲ್ಲ. ಆದ್ದರಿಂದ ಶ್ರೀ ಸದ್ಗುರುವಿನ ಲೀಲಾನಾಟಕದ ಅಂತಃಪ್ರಯಾಗಿ ಹತ್ತಬೇಕು? ಕಡೆಗೂ ಆ ಮಹಾತ್ಮನು ತನ್ನ ಲೋಕಾನುವರ್ತನಧರ್ಮಕ್ಕೆ ಬಾಧೆತರಲಿಲ್ಲ! ಧನ್ಯನು!! ಶ್ರೀ ಶೇಷಾಚಲ ಸದ್ಗುರುವು ಪರಮ ಧನ್ಯನು!!!

## ೫ನೆಯ ಪ್ರಕರಣ.

### ಶ್ರೀ ಗುರುವಿನ ಕಲಿಕಾಲ ನಿರೀಕ್ಷಣವು!

**उदये सविता रक्तो रक्तश्चास्तमये तथा ॥**
**संपत्तौच विपत्तौच महतामेकरूपता ॥ १ ॥**

ಸೂರ್ಯನು ಉದಯಾಸ್ತಕಾಲಗಳೆರಡರಲ್ಲಿಯೂ ಕೆಂಪಾಗಿರುವ ಹಾಗೆ, ದೊಡ್ಡವರು ಸಂಪತ್ತಿನಲ್ಲಿಯೂ, ವಿಪತ್ತಿನಲ್ಲಿಯೂ ಏಕರೂಪರಾಗಿರುವರೆಂದು ಮೇಲಿನ ಶ್ಲೋಕದಲ್ಲಿ ಹೇಳಿರುವಂತೆ, ಪ್ರಬಲವಾದ ಕಲಿಧರ್ಮವನ್ನು ನೋಡಿ, ಮರುಗಿ ಅವತರಿಸಿದ ಶ್ರೀ ಶೇಷಾಚಲ ಸದ್ಗುರುವು, ಕಡೆಗೆ ಜನರಲ್ಲಿ—ವಿಶೇಷವಾಗಿ ತನ್ನ ಸುತ್ತುಮುತ್ತು ಆನಂದವನದಲ್ಲಿ ಕಲಿಧರ್ಮವು ಪ್ರಬಲವಾದದ್ದನ್ನು ನೋಡಿಯೇ ಮರುಗಿ ದೇಹವನ್ನು ಬಿಡಬೇಕಾಯಿತು! ನಮ್ಮ ಈ ವಿಧಾನವನ್ನು ನೋಡಿ ವಾಚಕರು ಆಶ್ಚರ್ಯಪಡಬಹುದು. ಆನಂದವನದಲ್ಲಿ ಅನ್ನದಾನ, ವಿದ್ಯಾದಾನ, ಭಾಷಾಸೇವೆ ಮೊದಲಾದ ಸತ್ಕೃತ್ಯಗಳು ಉತ್ತರೋತ್ತರ ಅಭಿವೃದ್ಧಿವಾಗುತ್ತ ಬಂದಿರಲು, ಕಲಿಧರ್ಮವು ಪ್ರಬಲವಾಯಿತೆಂದು ಹ್ಯಾಗೆ ಹೇಳಬೇಕೆಂದು ಅವರು ಸಂಶಯ ಪಡುತ್ತಿರಬಹುದು. ಮೇಲೆ ಮೇಲೆ ನೋಡುವವರಿಗೆ, ಅಂದರೆ, ಬರಿಯ ಕಾರ್ಯಕ್ಕೆ ಲಕ್ಷಕೊಟ್ಟು, ಯಾವ ಭಾವನೆಯಿಂದ ಕಾರ್ಯವಾಗುತ್ತದೆಂಬುದರ ಕಡೆಗೆ ದುರ್ಲಕ್ಷ ಮಾಡುವವರಿಗೆ, ನಮ್ಮ ಈ ವಿಧಾನವು ಆಶ್ಚರ್ಯಕಾರಕವಾಗಿಯೂ, ಸಂಶಯಾಸ್ಪದವಾಗಿಯೂ ತೋರಬಹುದು. ಕಲಿಪ್ರವೇಶವಾಗುವದರಿಂದಲೇ ಎಲ್ಲ ಅವತಾರಗಳು ಗುಪ್ತವಾಗಿರುತ್ತವೆ. "ವಸ್ತುವು ವ್ಯಕ್ತವಾದರೆ ಮಾಯೆಯು ಗುಪ್ತವಾಗುತ್ತದೆ; ಮಾಯೆಯು ವ್ಯಕ್ತವಾದರೆ ವಸ್ತುವು ಗುಪ್ತವಾಗುತ್ತದೆ." ಎಂದು ಶ್ರೀ ಗುರುವು ಮೇಲೆ ಮೇಲೆ, ಹೇಳುತ್ತ ಬಂದಂತೆ, ಶ್ರೀ ಗುರುವಿನ ಸುತ್ತುಮುತ್ತು ಅಭಿಮಾನಮೂಲವಾದ ಮಾಯಾ ವ್ಯವಹಾರಗಳು

ಪ್ರಬಲವಾಗುತ್ತಾಗುತ್ತ ಬಂದಂತೆ, ಕೃತಯುಗವು ಹೋಗಿ ತ್ರೇತಾಯುಗವೂ, ತ್ರೇತಾಯುಗವು ಹೋಗಿ ದ್ವಾಪರಯುಗವೂ, ದ್ವಾಪರಯುಗವು ಹೋಗಿ ಕಲಿಯುಗವೂ ಸದ್ಗುರುವಿನ ಸುತ್ತು ಮುತ್ತು ಪ್ರಾಪ್ತವಾದವೆಂಬದು ವಿವೇಕಿಗಳಿಗೆ ತೋರದೆ ಹೋಗಲಿಕ್ಕಿಲ್ಲ. ಒಂದೊಂದು ಯುಗದಲ್ಲಿ ಅನಂತ ವರ್ಷಗಳು ಕ್ರಮಿಸುತ್ತ-ಕ್ರಮಿಸುತ್ತ, ಈಗ ಕಲಿಯುಗವು ಪ್ರಾಪ್ತವಾಗಿ ಸರಾಸರಿ ಐದು ಸಾವಿರ ವರ್ಷಗಳು ಆಗಿರಲು, ಈ ಕಲಿಯುಗದಲ್ಲಿ ಶ್ರೀ ಸಾಧುಗಳ ಸುತ್ತುಮುತ್ತು ಚತುರ್ಯುಗಗಳು ಉಂಟಾದವೆಂದು ಹೇಳುವದು ಅಸಂಭವವಾಗಿ ತೋರಬಹುದು; ಆದರೆ ವಾಚಕರು ಹಾಗೆ ಅಸಂಭವವೆಂದು ತಿಳಿಯಲಾಗದು. ವಿಶ್ವಚಾಲಕನಾದ ಪರಮಾತ್ಮನ ಕಾರ್ಯರೂಪವಾದ ಅಮರ್ಯಾದಿತವಿಶ್ವದ ರೂಪಾಂತರದ ಸಂಬಂಧದಿಂದ, ಯುಗಗಳ ಕಾಲಪರಿಗಣನೆಯು ಅನಂತವಾಗಿದ್ದರೂ, ಆ ವಿಶ್ವಚಾಲಕನ ಅಧೀನವಾದ ಒಂದು ಕ್ಷುದ್ರ ಮನುಷ್ಯವ್ಯಕ್ತಿಯು ವ್ಯವಹಾರದ ರೂಪಾಂತರದ ಸಂಬಂಧದಿಂದ ಯುಗಗಳ ಕಾಲಪರಿಗಣನೆಯು ಅಲ್ಪವಾಗಿರುತ್ತದೆಂಬದನ್ನು ಲಕ್ಷದಲ್ಲಿಡಬೇಕಾಗುವದು. ಈ ಮಾತಿನ ಬೋಧವಾಗುವದಕ್ಕಾಗಿ ಒಂದು ವ್ಯಾವಹಾರಿಕ ಉದಾಹರಣವನ್ನು ತಕ್ಕೊಳ್ಳೋಣ,

ಒಬ್ಬ ಮನುಷ್ಯನು ಚಿಕ್ಕತಕ್ಕಡಿಯ ಅಂಗಡಿಯನ್ನು ಹಾಕಿರುತ್ತಾನೆಂದು ಕಲ್ಪಿಸುವಾ. ಮೊದಮೊದಲಿಗೆ ಆ ಮನುಷ್ಯನ ನಾಮ-ರೂಪ-ಕ್ರಿಯೆಗಳು ಕೃತಯುಗದ ಧರ್ಮಕ್ಕೆ ಒಪ್ಪುವಹಾಗೆ ಇರುವವು. ಆಗ ಆತನು ತಾನು ಗೌರವದ ಹೆಸರಿನಿಂದ ಕರೆಯಲ್ಪಡಲಿಕ್ಕೆ ಪಾತ್ರನಲ್ಲೆಂದು ತಿಳಿದಿರುವನು. ಒಂಟಿಹೆಸರಿನಿಂದ ಕರೆದರೂ ಆತನಿಗೆ ಸಿಟ್ಟು ಬರುವದಿಲ್ಲ. ಆಗ ಆತನ ಉಡಿಗೆ ತೊಡಿಗೆಗಳು ಸರ್ವಸಾಧಾರಣವಾಗಿ ನಾಲ್ಕು ಜನರಿಗಿಂತ ಕೀಳುತರದವಾಗಿರುವವು. ಆತನ ಕ್ರಿಯೆಯ ಸಂಬಂಧದಿಂದ ನೋಡಿದರೆ, ಆತನು ವಿಲಾಸಕ್ಕೆ ಮೆಚ್ಚದೆ ಬಡವನಾಗಿ ಉದ್ಯೋಗತತ್ಪರತೆಯಿಂದ ಕಾಲಹರಣ ಮಾಡಲಿಕ್ಕೆ ಮೆಚ್ಚಿರುವನು. ಆಗ ಆ ವ್ಯಾಪಾರಸ್ಥನು ತನ್ನ ವಿಷಯವಾಗಿ ಗಿರಾಕಿಗಳ ಮನಸ್ಸಿನಲ್ಲಿ ಒಳ್ಳೆಯ ಭಾವನೆಯಾಗಬೇಕೆಂದು ಸರಿಯಾದ ಕಲ್ಲು ತಕ್ಕಡಿಗಳನ್ನಿಟ್ಟು, ಉತ್ತಮಪದಾರ್ಥಗಳನ್ನು ಮಾರಲಿಕ್ಕಿಟ್ಟು, ಗಿರಾಕಿಗಳೊಡನೆ ಮೃದುನುಡಿಗಳನ್ನು ನುಡಿಯುತ್ತ, ಸ್ವಲ್ಪ ಮುಂಗೋಲಾಗಿಯೇ ಪದಾರ್ಥಗಳನ್ನು ತೂಗುತ್ತ, ಕೊಡಕೊಳ್ಳುವಲ್ಲಿ ಅತ್ಯಂತ ಪ್ರಾಮಾಣಿಕತನವನ್ನೂ, ನಿರ್ಧಾರವನ್ನೂ ತೋರಿಸಿ, ದಾನಧರ್ಮತತ್ಪರನಾಗಿ, ಮಾಡತಕ್ಕ ಕೆಲಸಗಳನ್ನು ಕಾಲಕಾಲಕ್ಕೆ ಮಾಡುತ್ತ, ಆಯಾಸಾವಾನು

ಗಳನ್ನು ಆಯಾಸ್ಥಳದಲ್ಲಿ ಇಡುತ್ತ ತತ್ಪರತೆಯಿಂದ ತನ್ನ ವ್ಯಾಪಾರವನ್ನು ಸಾಗಿಸುವನು. ಸಾರಾಂಶ, ಕೃತಯುಗದ ಧರ್ಮದಂತೆ ಜನರ ಅನುಕೂಲತೆಯೇ ತನ್ನ ಅನುಕೂಲತೆಯೆಂತಲೂ, ಜನರ ಸುಖವೇ ತನ್ನ ಸುಖವೆಂತಲೂ, ಜನರ ಲಾಭವೇ ತನ್ನ ಲಾಭವೆಂತಲೂ ತಿಳಿದು, ಅಂದರೆ ಜನರಿಗೆ ಶ್ರೇಷ್ಠತ್ವವನ್ನೂ, ತನಗೆ ಕನಿಷ್ಠತ್ವವನ್ನೂ ಕೊಟ್ಟು, ಪರಹಿತಸಾಧನಕ್ಕಾಗಿ ಒಂದೇ ಸವನೆ ತನ್ನ ಸತ್ವಾಭಿವೃದ್ಧಿಯನ್ನು ಮಾಡಿಕೊಳ್ಳುವನು. ಕೃತಯುಗದ ಈ ಸತ್ಯವಾದ, ಹಾಗು ಸತ್ವಯುಕ್ತಧರ್ಮದಿಂದ ಆ ಮನುಷ್ಯನ ವ್ಯವಹಾರವು ಅಭಿವೃದ್ಧವಾಗುತ್ತ ಹೋದಂತೆ, ಅವನ ಮನಸ್ಸು ಬರಬರುತ್ತ ವ್ಯಾಪಾರದಲ್ಲಾಗುವ ಲಾಭದ ಕಡೆಗೆ ಹೊರಳಹತ್ತುತ್ತದೆ. ಇದರಿಂದ ಅವನ ಕರ್ತವ್ಯಜಾಗ್ರತಿಯು ಕಡಿಮೆಯಾಗಿ ಸತ್ಯಧರ್ಮದಲ್ಲಿ ಸ್ವಲ್ಪ ಸ್ವಲ್ಪ ಅಭಿಮಾನವು ಐಬು ದೋರದಂತೆ ಮಿಶ್ರವಾಗಹತ್ತುವದು. ಆಗ ಕೃತಯುಗವು ಹೋಗಿ ತ್ರೇತಾಯುಗವು ಪ್ರಾರಂಭವಾಯಿತೆಂದು ತಿಳಿಯಬೇಕು.

ಈ ಯುಗಭೇದದ ಸಂಗಡ ಆ ವ್ಯಾಪಾರಸ್ಥನ ನಾಮ ರೂಪ ಕ್ರಿಯೆಗಳಲ್ಲಿಯೂ ಭೇದವಾಗುವದು. ನನ್ನನ್ನು ಜನರು ಒಂಟಿಹೆಸರಿನಿಂದ ಯಾಕೆ ಕರೆಯಬೇಕೆಂಬ ಭಾವನೆಯು ಆತನಲ್ಲಿ ಉತ್ಪನ್ನವಾಗುವದು. ತನ್ನ ಊಟ-ಉಡಿಗೆಗಳು ಕೀಳತರದವೆಂದು ಆತನು ಎಣಿಸತೊಡಗುವನು. ನಾನು ವಿಲಾಸಿಯಲ್ಲೆಂತಲೂ, ಬಡತನದಿಂದ ಬಾಳುವೆಮಾಡುವನೆಂತಲೂ ತಿಳಕೊಳ್ಳುವನು. ಆಗ ಆತನ ಕಲ್ಲು-ತಕ್ಕಡಿಗಳೂ, ಅಳತೆ-ಮಾಪುಗಳೂ ಸರಿಯಾಗಿದ್ದು ತೂಕ-ಅಳತೆಗಳು ಮುಂಗೋಲಾಗಿದ್ದರೂ, ಅದರಂತೆ ಆತನ ಕೊಡಕೊಳ್ಳುವ ವ್ಯವಹಾರದಲ್ಲಿ ಪ್ರಾಮಾಣಿಕತನವು ತೋರಿದರೂ ಆತನಿಗೆ ತಾನು ದೊಡ್ಡ ಮನಸ್ಸಿನವನೂ, ಪ್ರಾಮಾಣಿಕನೂ ಎಂಬ ಅಭಿಮಾನವು ಉತ್ಪನ್ನವಾಗುವದು. ಇದರಂತೆ, ದಾನಧರ್ಮ, ಹೊತ್ತಿಗೆ ಸರಿಯಾಗಿ ಕೆಲಸಮಾಡುವದು, ಪದಾರ್ಥಗಳನ್ನು ವ್ಯವಸ್ಥೆಯಿಂದ ಇಡುವದು ಮುಂತಾದ ಕಾರ್ಯಸಾಧಕತೆಯು, ಹಾಗು ಕಾರ್ಯತತ್ಪರತೆಯು ಲಕ್ಷಣಗಳು ಆತನಲ್ಲಿ ಕಂಡುಬಂದರೂ ಇವುಗಳನ್ನು ನಾನು ಮಾಡುವೆನು ಎಂಬ ಅಭಿಮಾನವು ಆತನಲ್ಲಿ ಉತ್ಪನ್ನವಾಗುವದು. ಸಾರಾಂಶ, ತ್ರೇತಾಯುಗದ ಮನುಷ್ಯನಲ್ಲಿ ಸ್ವಾಭಿಮಾನವು ಉತ್ಪನ್ನವಾಗಲು, ತನ್ನ ಸತ್ವವನ್ನು ಅಭಿವೃದ್ಧಿಗೊಳಿಸಿಕೊಳ್ಳಲಾರದೆ. ಕೃತಯುಗದಲ್ಲಿದ್ದ ಸತ್ವವನ್ನು ಮಾತ್ರ ಕಾಯ್ದುಕೊಂಡು, ತಾನು ಪರಹಿತಮಾಡುವವನೆಂದು ತಿಳಕೊಳ್ಳುವನು. ಮುಂದೆ ಆ ವ್ಯಾಪಾರಸ್ಥನ ಮನಸ್ಸು ಲಾಭಾಸಕ್ತ

ವಾಗಿ ಹಲವುಯೋಗ್ಯ ಉಪಾಯಗಳಿಂದ ತನ್ನ ವ್ಯಾಪಾರದ ಲಾಭವನ್ನು ಹೆಚ್ಚಿಸಬೇಕೆಂದು ಊರ್ಜಿಗೊಳ್ಳುವಾಗ, ಅವನ ತ್ರೇತಾಯುಗದ ಸ್ವಾಭಿಮಾನವು ಸದಭಿಮಾನದ ರೂಪವನ್ನು ಹೊಂದಲು, ದ್ವಾಪರಯುಗಕ್ಕೆ ಆರಂಭವಾಗುವದು.

ಈ ದ್ವಾಪರಯುಗದ ಮಹಿಮೆಗನುಸರಿಸಿ, ಆ ವ್ಯಾಪಾರಸ್ಥನು ತನನ್ನು ಜನರು ಬಹುವಚನದಿಂದ ಕರೆದರೆ ಸಂತೋಷಪಡುವನು. ಏಕವಚನದಿಂದ ಕರೆದರೆ, ತನ್ನ ಯೋಗ್ಯತೆಗೆ ಇದು ತಕ್ಕದ್ದಲ್ಲೆಂದು ಅಸಮಾಧಾನಪಡುವನು. ಊಟ-ಉಡಿಗೆಗಳಲ್ಲಿ ಆತನ ವೈಭವದ ಲಕ್ಷಣಗಳು ತೋರಹತ್ತುವವು. ತಾನು ಸುಖೇಚ್ಛೆಯಿಂದ ಉಣ್ಣುವನು, ಆದರಂತೆ ಮುಂದಿಗೆ ಉಣಿಸುವನು. ಕಷ್ಟಪಟ್ಟು ದುಡಿದು ಸುಖಪಡದಿದ್ದರೆ, ದುಡಿದು ಪ್ರಯೋಜನವೇನೆಂಬ ಭಾವನೆಯು ಆತನಲ್ಲಿ ಉತ್ಪನ್ನವಾಗುವದು. ಈ ಯುಗದಲ್ಲಿ ಸರಿಯಾದ ಕಲ್ಲು-ತಕ್ಕಡಿಗಳೂ, ಅಳತೆ-ಮಾಪ್ರಗಳೂ ಇದ್ದರೂ ತೂಕ-ಅಳತೆಗಳು ಮುಂಗೋಲು ಹೋಗಿ ಸಮಕೋಲು ಆಗುವವು. ವ್ಯಾಪಾರವು ಪ್ರಾಮಾಣಿಕತನದ್ದಾಗಿದ್ದರೂ, ಆತನು ತನಗೆ ಅಪ್ರಾಮಾಣಿಕ ಜನರಿಂದಾದ ಹಾನಿಯನ್ನು, ಕಾಲ-ಪ್ರಸಂಗಗಳನ್ನು ನೋಡಿ ಗಿರಾಕಿಗಳಿಂದ ತುಂಬಿಕೊಳ್ಳಲಿಕ್ಕೆ ಯತ್ನಿಸುವನು. ತನ್ನ ಮನಸ್ಸಿಗೆ ಪ್ರಶಸ್ತತೋರಿದರೆ ದಾನಧರ್ಮ ಮಾಡುವನು. ಮಾಡತಕ್ಕ ಕೆಲಸಗಳನ್ನು ಕಾಲಕಾಲಕ್ಕೆ ಮಾಡುತ್ತಿದ್ದರೂ, ತನ್ನ ಕೆಲಸವನ್ನು ಬೇರೆಯವರು ಮಾಡಿದರೆ ಚಿಂತೆಯೇನೆಂಬ ಆಲಸ್ಯಾಂಕುರವು ಆತನ ಮನಸ್ಸಿನಲ್ಲಿ ಉತ್ಪನ್ನವಾಗುವದು. ಆಯಾ ಸಾಮಾನುಗಳನ್ನು ಆಯಾಸ್ಥಳದಲ್ಲಿಟ್ಟರೂ, ಅದಕ್ಕಾಗಿ ಒಮ್ಮೊಮ್ಮೆ ಆತನ ಮನಸ್ಸು ಬೇಸರಿಯುವದು. ಹೀಗೆ ಸದಭಿಮಾನದಿಂದುಂಟಾದ ವಿಷಮತೆಯಿಂದ ಸತ್ಯಧರ್ಮವು ವಿಕೃತವಾಗಿ, ಅದರ ಮನೋರಮತೆಯು ಹೆಚ್ಚಲು, ಅವನ ಸತ್ವವು ಇಳಿಮುಖವಾಗಿ ತಾನು ಸ್ವಪರಹಿತವನ್ನು ಸಾಧಿಸುವೆನೆಂದು ಆ ವ್ಯಾಪಾರಸ್ಥನು ಅಭಿಮಾನಪಡುವನು. ಮುಂದೆ ಆ ವ್ಯಾಪಾರಸ್ಥನ ಮನಸ್ಸು, ಯಾವ ಉಪಾಯದಿಂದಲೇ ಆಗಲಿ, ತನ್ನ ವ್ಯಾಪಾರದ ಲಾಭವನ್ನು ಹೆಚ್ಚಿಸಿ, ತಾನು ಎಲ್ಲ ವ್ಯಾಪಾರಸ್ಥರಿಗಿಂತ ಶ್ರೇಷ್ಠನಾಗಬೇಕೆಂದು ದುರಾಶೆಗೊಳ್ಳಲು, ದ್ವಾಪರಯುಗದಲ್ಲಿದ್ದ ಅವನ ಸದಭಿಮಾನವು ದುರಭಿಮಾನದ ರೂಪವನ್ನು ಹೊಂದಿ, ಕಲಿಯುಗಕ್ಕೆ ಆರಂಭವಾಗುವದು.

ಕಲಿಮಹಿಮೆಯಿಂದ ಆ ವ್ಯಾಪಾರಸ್ಥನು, ತನ್ನನ್ನು ಜನರು ಬರಿಯ ಬಹುವಚನದಿಂದ ಕರೆದರೆ ತೃಪ್ತನಾಗದೆ, ತನ್ನ ಹೆಸರಿಗೆ ಬಹುಮಾನವಾಚಕ ಉಪಪದಗಳನ್ನೂ, ಬಿರುದಾವಳಿಗಳನ್ನೂ ಹಚ್ಚಿದರೆ ಸಂತೋಷಪಡುವನು. ಪ್ರತಿಷ್ಠಾಕಾಂಕ್ಷೆಯಿಂದ ಅಂಥ

ಬಹುಮಾನವಾಚಕ ಶಬ್ದಾದಿಗಳ ಸಂಪಾದನಕ್ಕಾಗಿ ಆತನ ಯತ್ನವು ನಡೆಯತೊಡಗಲು, ಕರ್ತವ್ಯಭ್ರಷ್ಟತೆಯ ರೋಗವು ಉದ್ಭವಿಸಿ, ಅದರಿಂದ ಆತನ ಸತ್ವನಾಶವಾಗುತ್ತ ಹೋಗಿ, ಆತನು ಟೊಳಳಿಹಾದ ದೊಡ್ಡಮುದಿಮರದಂತೆಯೂ, ಸೊಕ್ಕಿಮೆರೆಯುವ ಕವಲೆತ್ತಿನಂತೆಯೂ ಲೋಕಾಡಂಬರವನ್ನು ತೋರಿಸುತ್ತ, ಸಿಂಹನ ಸೋಗಿನಿಂದ ನರಿಯು ಗರ್ಜಿಸಿದಂತೆ ಗರ್ಜಿಸಿ, ಲೋಕವನ್ನು ಬೆದರಿಸತೊಡಗುವನು. ಆತನು ಅತ್ಯಂತಸ್ತೋತ್ರಪ್ರಿಯನೂ, ಆತ್ಮಶ್ಲಾಘನಾತತ್ಪರನೂ ಪರನಿಂದಾಪ್ರವೀಣನೂ ಆಗುವನು. ಆತನು ಅಹಂಕಾರಿಯಾಗಿ ಧರ್ಮವನ್ನು ಅಧರ್ಮವಾಗಿಯೂ, ಅಧರ್ಮವನ್ನು ಧರ್ಮವಾಗಿಯೂ ಕಲ್ಪಿಸಿ, ತಾನು ಕೆಡುವದಲ್ಲದೆ, ತನ್ನ ಬಲೆಗೆ ಬಿದ್ದ ಎಲ್ಲ ವ್ಯಾಪಾರಸ್ಥರನ್ನೂ ಕೆಡಿಸುವನು. ಮುಖ್ಯಮಾತು, ವ್ಯಾಪಾರದಲ್ಲಿ ಲಾಭವಾಗಿ ತನ್ನ ಪ್ರತಿಷ್ಠೆಹೆಚ್ಚಿದರೆ ತೀರಿತೆಂದು ಆತನು ಭಾವಿಸುವನು. ಆತನ ಊಟ-ಉಡಿಗೆ, ದಾನ-ಧರ್ಮ ಮೊದಲಾದವುಗಳಲ್ಲಿ ಡಾಂಭಿಕತನವೂ, ವ್ಯವಹಾರದಲ್ಲಿ ಮೋಸ-ಮೈಗಳ್ಳತನಗಳೂ ತಲೆದೋರುವವು. ಈ ಕಾಲದಲ್ಲಿ ಆತನು ಕೆಲವರಿಗೆ ಸರಿಯಾದ ಕಲ್ಲು-ತಕ್ಕಡಿಗಳು—ಕೆಲವರಿಗೆ ಖೊಟ್ಟಿ ಕಲ್ಲು-ತಕ್ಕಡಿಗಳು, ಕೆಲವರಿಗೆ ಒಳ್ಳೆಯ ಪದಾರ್ಥಗಳ-ಕೆಲವರಿಗೆ ಕೆಟ್ಟ ಪದಾರ್ಥಗಳು, ಕೆಲವರಿಗೆ ಮೃದುನುಡಿಗಳು-ಕೆಲವರಿಗೆ ಬಿರುನುಡಿಗಳು, ಕೆಲವರಿಗೆ ಮುಂಗೋಲುತೂಕ-ಕೆಲವರಿಗೆ ಹಿಂಗೋಲುತೂಕ, ಒಂದುದಿನ ಹೊತ್ತಿಗೆ ಸರಿಯಾಗಿ ಕೆಲಸಮಾಡಿದರೆ, ನಾಲ್ಕುದಿನ ಹೊತ್ತುತಪ್ಪಿ ಕೆಲಸಮಾಡುವದು, ಒಂದು ಕಡೆಯಲ್ಲಿ ವ್ಯವಸ್ಥೆ ತೋರಿದರೆ ಒಂದು ಕಡೆಯಲ್ಲಿ ಅವ್ಯವಸ್ಥೆ, ಒತ್ತಟ್ಟಿಗೆ ಪ್ರಾಮಾಣಿಕತನ, ಇನ್ನೊತ್ತಟ್ಟಿಗೆ ಅಪ್ರಾಮಾಣಿಕತನ. ಹೀಗೆ "ಒಂದು ಕಣ್ಣಲ್ಲಿ ಬೆಣ್ಣೆ, ಒಂದು ಕಣ್ಣಲ್ಲಿ ಸುಣ್ಣ" ಎಂಬಂತೆ, ಹೊತ್ತುಬಿದ್ದಹಾಗೆ ಕೊಡೆಹಿಡಿಯುವನು. ಸಾರಾಂಶ, ಈ ಯುಗದಲ್ಲಿ ದುರಭಿಮಾನಜನಿತ ಸ್ವಾರ್ಥದ ಸಾಮ್ರಾಜ್ಯವು ದೃಢವಾಗಿ, "ತನ್ನ ಹೋಳಿಗೆ ತುಪ್ಪದಲ್ಲಿ ಬಿದ್ದರಾಯಿತು, ಮಂದಿ ಸಾಯಲೊಲ್ಲರೇಕೆ"ಂಬ ಸಿದ್ಧಾಂತವು ಮಾನ್ಯವಾಗಿ ಅಹಂಭಾವವು ಬೆಳೆದು, ಸತ್ಯದನಾಶವು ಭರದಿಂದ ಆಗಹತ್ತಿ ಆ ವ್ಯಾಪಾರಸ್ಥನ ಲೋಕಮಾನ್ಯತೆಯು ನಷ್ಟವಾಗಹತ್ತುವದು. ಕಲಿಯುಗದ ಈ ಸತ್ಯಾಸತ್ಯ ಮಿಶ್ರಣದ ಆ ವ್ಯಾಪಾರಸ್ಥನ ವ್ಯವಹಾರವು ಕೇವಲ ಅಸತ್ಯವನ್ನು ಆಶ್ರಯಿಸಹತ್ತಿತೆಂದರೆ, ಕಲಿಕಾಲವು ಹೋಗಿ ಆತನ ನಾಶಕಾಲವು ಪ್ರಾರಂಭವಾಯಿತೆಂದು ಹೇಳಬಹುದು. ಕೇವಲ ಖೊಟ್ಟಿ ಕಲ್ಲು ತಕ್ಕಡಿಗಳು, ಗಿರಾಕಿಗಳೊಡನೆ ಉದ್ಧಟತನ, ಅವ್ಯವಸ್ಥೆ, ಆಲಸ್ಯ, ದುರಾಲೋಚನೆ, ಅಪ್ರಾಮಾಣಿಕತನ, ದುಷ್ಟ ಸಹ

ನಾಸ, ಧರ್ಮಲಂಡತನ, ಪದಾರ್ಥಗಳಲ್ಲಿ ಮಣ್ಣು ಹರಳು ಕೂಡಿಸಿ ಮಾರುವದು, ಇತ್ಯಾದಿ ವಿನಾಶಕಾರಕ ವ್ಯವಹಾರಗಳನ್ನು ಈಗಿನ ಕಾಲದಲ್ಲಿ ವರ್ಣಿಸಿಹೇಳುವ ಕಾರಣವಿಲ್ಲ. ಸಾರಾಂಶ, ಸತ್ವದ ನಾಶವಾಗಿ, ಅಸತ್ಯ-ಅಪ್ರಾಮಾಣಿಕತನ-ದುರಾಲೋಚನೆ-ಪರಪೀಡೆ ಮೊದಲಾದವುಗಳ ಸಾಮ್ರಾಜ್ಯವಾಯಿತೆಂದರೆ, ಆ ವ್ಯಾಪಾರಸ್ಥನ ವ್ಯಾಪಾರದ ಬುಡಮೇಲು ಆಯಿತೆಂದು ತಿಳಿಯಬೇಕು.

ಪ್ರಿಯವಾಚಕರೇ, ಒಂದು ವ್ಯಕ್ತಿಯ ಈ ಚತುರ್ಯುಗಗಳ ವಿಸ್ತೃತವಿವೇಚನವು, ಶ್ರೀ ಸದ್ಗುರುವಿನ ಲೋಕೋದ್ಧಾರದ ಕಾಲದಲ್ಲಿ ಒದಗಿದ ಚತುರ್ಯುಗಗಳ ಸ್ವರೂಪವು ತಟ್ಟನೆ ಮನಸ್ಸಿನಲ್ಲಿ ಬರಲಿಕ್ಕೆ ಕೇವಲ ಸಹಾಯಕಾರಿಯಾಗಿರುವದರಿಂದ, ಬೇಕಾದರೆ ಅದನ್ನು ನೀವು ಇನ್ನೊಮ್ಮೆ ಮನಸ್ಸುಗೊಟ್ಟು ಓದಬಹದು. ಅದರಂತೆ, ವ್ಯವಹಾರದಲ್ಲಿ ನಿಮ್ಮ ಕಣ್ಣಿಗೆ ಬೀಳುವ ಆರಂಭದ ನೌಕರರು, ಆರಂಭದ ಒಕ್ಕಲತನ, ಆರಂಭದ ಸತ್ಸಮಾಗಮ, ಆರಂಭದ ಉ-ದ್ಯೋಗ, ಆರಂಭದ ಸತ್ಕರ್ಮಗಳು, ಆರಂಭದ ಸಾಧುಗಳು, ಆರಂಭದ ಆರಾಧರು, ಆರಂಭಕಾಲದ ಸ್ನೇಹ ಈಮೊದಲಾದವುಗಳಲ್ಲಿರುವ ಸವಿಯು, ಮುಂದೆ ಬರಬರುತ್ತ ಯಾಕೆ ಉಳಿಯುವದಿಲ್ಲೆಂಬದರ ಕಾರಣವನ್ನು ನೀವು ವಿಚಾರಿಸಬಹುದು. ತನ್ನ ಸುತ್ತುಮುತ್ತು ಯಾವ ಯುಗಧರ್ಮವಿದ್ದರೂ ತಾನು ಯುಗಾಧೀನವಾಗದೆ, ತನ್ನ ಧರ್ಮವನ್ನು ಚತುರ್ಯುಗಗಳಲ್ಲಿಯೂ ಸ್ಪಷ್ಟವಾಗಿ ಕಾಯ್ದುಕೊಂಡು ಹೋಗುವವನೇ ಮಹಾತ್ಮನು, ಅವನೇ ಸದ್ಗುರೂತ್ತಮನು. ಶ್ರೀ ಶೇಷಾಚಲ ಸದ್ಗುರುವು ತನ್ನ ಸುತ್ತುಮುತ್ತು ಉಂಟಾದ ಚತುರ್ಯುಗಗಳಲ್ಲಿಯೂ, ತನ್ನ ಸೇವಕಧರ್ಮವನ್ನು ಕಾಯ್ದುಕೊಂಡದ್ದರಿಂದಲೇ, ಆತನನ್ನು ಸದ್ಗುರೂತ್ತಮನೆಂದು ಚಂದ್ರಿಕೆಯು ಕರೆದಿದ್ದಾಳೆ. ಅದು ಹ್ಯಾಗೆಂಬದನ್ನು ಮುಂದಿನ ವಿವೇಚನದಿಂದ ತಿಳಕೊಳ್ಳಬಹುದು. ಈ ಪ್ರಸಂಗದಲ್ಲಿ ವಾಚಕರು, ಪ್ರತಿಯೊಂದು ಯುಗದಲ್ಲಿ-ಅದು ಜಗಚ್ಚಾಲಕನ ಸೃಷ್ಟಿಗೆ ಸಂಬಂಧಿಸಿದ್ದಿರಲಿ, ಒಬ್ಬ ವ್ಯಕ್ತಿಯ ವ್ಯವಹಾರಕ್ಕೆ ಸಂಬಂಧಿಸಿದ್ದಿರಲಿ, ಅದರಲ್ಲಿ ನಾಲ್ಕುಯುಗದ ಧರ್ಮಗಳೂ ಇರುವವೆಂಬದನ್ನೂ, ಯಾವ ಯುಗಧರ್ಮವು ವಿಶೇಷವಾಗಿರುವದೋ ಆ ಯುಗದ ಹೆಸರೇ ಇಡಿ ಯುಗಕಾಲಕ್ಕೆ ಬರುವದೆಂಬದನ್ನೂ ಮನಸ್ಸಿನಲ್ಲಿಟ್ಟುಕೊಂಡಿರಬೇಕು.

ಇನ್ನು ಶ್ರೀಸದ್ಗುರುವಿನ ಅಸ್ತಿತ್ವದಲ್ಲಿ ಒದಗಿದ ಚತುರ್ಯುಗಗಳನ್ನು, ಕುರಿತು ವಿಚಾರಿಸುವಾ. ನಿರಭಿಮಾನಿಗಳಾದಅಪ್ಪನವರೊಡನೆಶ್ರೀಸದ್ಗುರುವು ಕೇವಲನಿರಭಿಮಾನಿಯಾಗಿ ಸತ್ಕರ್ಮರೂಪದಿಂದವ್ಯವಹರಿಸಿದಕಾಲವನ್ನು ಕೃತಯುಗವೆಂತಲೂ,

ಅಪ್ಪನವರು ಸ್ವಾಭಿಮಾನಿಗಳಾಗಿದ್ದು ತಮ್ಮ ಬಳಿಗೆ ಬಂದ ಶಿಷ್ಯವರ್ಗವನ್ನು ಕೈಯಲ್ಲಿ ತೆಕ್ಕೊಂಡು ಅವರನ್ನು ಒರೆಗೆ ಹಚ್ಚಿ ಪರೀಕ್ಷಿಸುವಾಗ, ಶ್ರೀ ಸದ್ಗುರುವು ಸ್ವಾಭಿಮಾನಿಯಾಗಿ ಸದ್ವ್ಯವಹಾರರೂಪದಿಂದ ವ್ಯವಹರಿಸಿದ ಕಾಲವನ್ನು ತ್ರೇತಾಯುಗವೆಂತಲೂ, ಅಪ್ಪನವರು ದೇಹವಿಟ್ಟ ಬಳಿಕ ಸದಭಿಮಾನದ ಶಿಷ್ಯರು ಸಮಷ್ಟಿಯಿಂದ ನಡೆಯುವಾಗ ಶ್ರೀ ಗುರುವು ಸದ್ಬೋಧರೂಪದಿಂದ ವ್ಯವಹರಿಸಿದ ಕಾಲವನ್ನು ದ್ವಾಪರಯುಗವೆಂತಲೂ, ದುರಭಿಮಾನಿಗಳಾದ ಶಿಷ್ಯರು ವ್ಯಷ್ಟಿಯಿಂದ ನಡೆಯುವಾಗ ಶ್ರೀ ಸದ್ಗುರುವು ದುರಭಿಮಾನಿಯಾಗಿ ನಿರಾಕರಣರೂಪದಿಂದ ವ್ಯವಹರಿಸಿದಕಾಲವನ್ನು ಕಲಿಯುಗವೆಂತಲೂ ಭಾವಿಸಬೇಕಾಗುವದು ನಿರಭಿಮಾನಿಯಾದ ಸದ್ಗುರುವನ್ನು ಚಂದ್ರಿಕೆಯು ಸ್ವಾಭಿಮಾನಿ, ಸದಭಿಮಾನಿ, ದುರಭಿಮಾನಿಯೆಂದು ಕರೆದದ್ದನ್ನು, ವಿಶೇಷವಾಗಿ ದುರಭಿಮಾನಿಯೆಂದು ಕರೆದದ್ದನ್ನು ನೋಡಿ, ಕೆಲವು ವಾಚಕರು ಲೇಖಕನಿಗೆ ದೋಷಕೊಡಬಹುದು; ಆದರೆ ಒಮ್ಮೆಲೆ ಅಷ್ಟು ಅವಸರಮಾಡಬಾರದೆಂದು ಅವರಿಗೆ ಹೇಳಿಕೊಳ್ಳುವೆವು. ಶ್ರೀ ಸದ್ಗುರುವು ಸ್ವಾಭಿಮಾನ-ನಿರಭಿಮಾನಗಳೆರಡಕ್ಕೂ ಸಾಕ್ಷೀಭೂತನಾಗಿರುವನೆಂಬದನ್ನು ವಾಚಕರು ಲಕ್ಷದಲ್ಲಿ ತಂದುಕೊಂಡರೆ, ಆ ಸರ್ವತಂತ್ರಸ್ವತಂತ್ರನಾದ ಸದ್ಗುರುವು, ಲೋಕಕಲ್ಯಾಣಾರ್ಥವಾಗಿ ಪ್ರಸಂಗಬಿದ್ದಂತೆ ನಿರಭಿಮಾನಿಯು-ಸ್ವಾಭಿಮಾನಿಯು-ಸದಭಿಮಾನಿಯು-ದುರಭಿಮಾನಿಯು ಆಗಿ, ತಾನು ಯಾವದಕ್ಕೂ ಸಂಬಂಧಪಡದೆ, ತೊಗರಿಯ ಕಟ್ಟಿಗೆಯಿಂದ ತೊಗರಿಯ ಕಟ್ಟಿಗೆಯನ್ನು ಬಡಿದು ಕಾಳು ಒಕ್ಕುವ ಒಕ್ಕಲಿಗನಂತೆ, ಸದ್ಗುರುವು ಚತುರ್ಯುಗಗಳಲ್ಲಿಯೂ ಅವರವರ ಅಧಿಕಾರದಂತೆ ಜನರ ಕಲ್ಯಾಣಮಾಡಿ, ತಾನು ನಿರ್ಲಿಪ್ತನಾಗಿರುವನೆಂಬ ಮಾತು ಅವರ ಲಕ್ಷದಲ್ಲಿ ಬರಬಹುದು. ಚತುರ್ಯುಗಗಳಲ್ಲಿಯೂ ಸದ್ಗುರುಗಳಿಂದ ಸಚ್ಛಿಷ್ಯರು ಉದ್ಧಾರವಾಗಿರುವರೆಂದು ಪುರಾಣಾಂತರಗಳಲ್ಲಿ ಹೇಳಿದ್ದನ್ನು ವಾಚಕರು ಇಲ್ಲಿ ನೆನಪಿಗೆ ತಂದುಕೊಂಡರೆ, ಅವರ ಯುಗ ನಿರಾಕರಣಬುದ್ಧಿಯ ಕಸುವು ಕೆಲಮಟ್ಟಿಗೆ ಕಡಿಮೆಯಾಗಬಹುದು. "ಮಾಯಾಸಕ್ತತೆಯು ವಿಶೇಷವಾಗಿರುವದರಿಂದ, ಕಲಿಯುಗವು ಕಾಡುಯುಗವೆನಿಸಿಕೊಂಡರೂ, ಆ ಯುಗದಲ್ಲಿ ಈಶ್ವರಾವತಾರಗಳು ಮೇಲೆ ಮೇಲೆ ಆಗುವದರಿಂದ, ಅದರಂಥ ಧನ್ಯವಾದ ಯುಗವು ಮತ್ತೊಂದಿಲ್ಲ"ೆಂದು ಶ್ರೀ ಸದ್ಗುರುವು ಆಗಾಗ್ಗೆ ಹೇಳುತ್ತಿರುವದನ್ನು ವಾಚಕರು ಆಲೋಚಿಸತಕ್ಕದ್ದು. ನಾವು ಹೇಳತಕ್ಕ ತಾತ್ಪರ್ಯವಿಷ್ಟೆ, ಸಮರ್ಥನಾದ ಶ್ರೀ ಶೇಷಾಚಲ ಸದ್ಗುರುವು ಅಂಜುಬುರುಕರಂತೆ, ತಾನು ನಿರಭಿಮಾನಿಯು ಹೋಗಿ ದುರಭಿಮಾನಿಯಾದರೆ ಹ್ಯಾಗೆ,

ಕೃತಯುಗ ಹೋಗಿ ಕಲಿಯುಗ ಬಂದರೆ ಹ್ಯಾಗೆ? ಎಂದು ಆಲೋಚಿಸದೆ, ಜನರ ಕಲ್ಯಾಣಕ್ಕೆ ಲಕ್ಷಗೊಟ್ಟು ಬಂದದ್ದಕ್ಕೆ ಎದುರಾಗಿ ನಿಂತು, ತನ್ನ ದಾಸಧರ್ಮವನ್ನು ಕಾಯ್ದುಕೊಂಡನೆಂದು ವಾಚಕರು ಚೆನ್ನಾಗಿ ಲಕ್ಷದಲ್ಲಿಡತಕ್ಕದ್ದು. ಶ್ರೀ ಸದ್ಗುರುವು ನಿರಭಿಮಾನದ ದಾಸನಾಗಿಯೇ ಸತ್ಕರ್ಮಗಳನ್ನು ಮಾಡುತ್ತ ಕೃತಯುಗದ ಜನರನ್ನು ಉದ್ಧರಿಸಿದನು; ಅದರಂತೆ ಸ್ವಾಭಿಮಾನದ ದಾಸನಾಗಿಯೇ ಸದ್ವ್ಯವಹಾರ ಮಾಡುತ್ತ ತ್ರೇತಾಯುಗದ ಜನರನ್ನು ಉದ್ಧರಿಸಿದನು; ಹಾಗೆಯೇ ಸದಭಿಮಾನದ ದಾಸನಾಗಿಯೇ ಸದ್ಬೋಧಮಾಡುತ್ತ ದ್ವಾಪರಯುಗದ ಜನರನ್ನು ಉದ್ಧರಿಸಿದನು; ಅದೇ ಪ್ರೇರಣೆಗೆ ದುರಭಿಮಾನದ ದಾಸನಾಗಿಯೇ ಅಡ್ಡಹಾದಿಯವರನ್ನು ನಿರಾಕರಿಸುತ್ತ ಕಲಿಯುಗದ ಜನರನ್ನು ಉದ್ಧರಿಸಿದನು. ಪ್ರಿಯವಾಚಕರೇ, ಜ್ಞಾನಿಗಳಿಗೆ ಯಾತರಬಾಧೆಯು, ಯಾತರ ಹಂಗು! ಇದು ಹ್ಯಾಗೆಂಬದನ್ನು ಕ್ರಮವಾಗಿ ಒಂದೊಂದು ಯುಗಪ್ರಸಂಗವನ್ನು ಸಂಕ್ಷೇಪವಾಗಿ ವರ್ಣಿಸಿ ತೋರಿಸುವೆವು.

ನಾವು ಮೇಲೆ ಸಂಕ್ಷೇಪವಾಗಿ ಬರೆದಿರುವ ಶ್ರೀ ಗುರುವಿನ ಅವತಾರಕಾಲದಲ್ಲಿಯ ಕೃತಯುಗದ ಲಕ್ಷಣವನ್ನು ಓದಿ, ಅವ್ವನವರ ಸ್ಥಿತಿಯನ್ನು ಪ್ರತ್ಯಕ್ಷ ನೋಡಿದವರಿಗೂ, ಕಿವಿಯಿಂದ ಕೇಳಿದವರಿಗೂ ಆಶ್ಚರ್ಯವಾಗಿರಬಹುದು. ಅವ್ವನವರು ಅತ್ಯಂತ ಅಭಿಮಾನಿಗಳಾಗಿರಲು, ಅವರು ನಿರಭಿಮಾನಿಗಳಿದ್ದರೆಂದು ಬರೆದದ್ದು ತಪ್ಪೆಂದು ಅವ್ವನವರ ಆಗುರುತಿನವರು ಭಾವಿಸಬಹುದು; ಆದರೆ ನಮ್ಮ ಈ ಬರಹದ ವಿಷಯವಾಗಿ ಆಕ್ಷೇಪಿಸುವವರಿಗೆ, ಅತ್ಯಂತಾಭಿಮಾನಿಗಳೇ ನಿರಭಿಮಾನಿಗಳೆನಿಸುವರೆಂದು ನಾವು ಸ್ಪಷ್ಟವಾಗಿ ಹೇಳುವೆವು. “ಅತಿ ಸರ್ವತ್ರ ವರ್ಜಯೇತ್” ಎಂಬ ನೀತಿಯಂತೆ, ಅತಿ ಗರ್ವಯುತನಾದ ರಾವಣನೂ, ಅತಿ ದಾನಶೂರನಾದ ಬಲಿಚಕ್ರವರ್ತಿಯೂ ಐಹಿಕ ಸುಖದೃಷ್ಟಿಯಿಂದ ಹಾನಿಯನ್ನು ಹೊಂದಿದರೂ, ಅವರ ಅತಿಗರ್ವ, ಅತಿದಾನಗಳಿಂದಲೇ ಕ್ರಮವಾಗಿ ಅವರಿಗೆ ಆತ್ಮೋದ್ಧಾರ, ಸ್ಥಿರಜೀವಿ ಪದವಿಗಳು ದೊರೆತದ್ದರಿಂದ, ಐಹಿಕಸುಖದ ದೃಷ್ಟಿಯಿಂದ ಅವರನ್ನು ನಿರಭಿಮಾನಿಗಳೆಂತಲೇ ಕರೆಯಬೇಕಾಗುವದು; ಯಾಕಂದರೆ, ಅವರು ಐಹಿಕಸುಖಾಪೇಕ್ಷಿಗಳಾಗಿ ತದ್ವಿಷಯಕ ಅಭಿಮಾನಿಗಳಾಗಿದ್ದ ಪಕ್ಷದಲ್ಲಿ, ತಮ್ಮ ಐಹಿಕಹಿತವನ್ನು ಸಾಧಿಸುವದಕ್ಕಾಗಿ ಹಿತಸ್ವರ ಮಾತು ಕೇಳಿ ತಮ್ಮ ಗರ್ವ-ದಾತೃತ್ವ ಗುಣಗಳನ್ನು ಕಡಿಮೆಮಾಡಿಕೊಳ್ಳುತ್ತಿದ್ದರು. “ಇದರಕಾಲಲ್ಲಿ, ಅಂದರೆ ನಮ್ಮ ಗರ್ವ, ದಾತೃತ್ವಗುಣಗಳ ಕಾಲಲ್ಲಿ ಬೇಕಾದದ್ದಾಗಲಿ” ಎಂದು ನಿಸ್ಪೃಹರಾಗಿಯೇ ಮಾಡತಕ್ಕಕಾರ್ಯಗಳನ್ನು ಅವರು ಮಾಡಿದರು. ಇನ್ನು ಪಾರಮಾರ್ಥಿಕ ಹಿತಾಭಿಮಾನವು

ಅವರಲ್ಲಿ ಇತ್ತೆಂದು ಹೇಳಬೇಕಾಗಿದ್ದರೆ, ಅವರು ಕೇವಲ ಗುಣಾಧೀನರಾಗಿ ತಮ್ಮನ್ನು ಸಹ ಮರೆತು ಆಚರಿಸಿದ್ದರಿಂದಲೇ ಅವರಿಗೆ ನಿರಾಲೋಚಿತವಾಗಿ ಪಾರಮಾರ್ಥಿಕಹಿತಗಳು ಪ್ರಾಪ್ತವಾದವು; ಅಂದಬಳಿಕ ಪಾರಮಾರ್ಥಿಕಹಿತದಲ್ಲಿ ಅವರ ಅಭಿಮಾನವಿತ್ತೆಂದು ಹ್ಯಾಗೆ ಹೇಳಬೇಕು? ಒಟ್ಟಿಗೆ ರಾವಣನು ಗರ್ವಪಕ್ಷಪಾತಿಯೂ, ಬಲಿಯು ದಾನಪಕ್ಷಪಾತಿಯೂ, ಅವರಂತೆ ಇತ್ತಕಡೆಯ ಪುರಂದರದಾಸರು ದುಡ್ಡಿನಪಕ್ಷಪಾತಿಗಳೂ, ತುಲಸೀದಾಸರು ಹೆಂಡತಿಯ ಪಕ್ಷಪಾತಿಗಳೂ, ವಾಲ್ಮೀಕಿಗಳು ಹಿಂಸಾಪಕ್ಷಪಾತಿಗಳೂ ಆಗಿ, ಅವರು ಕ್ರಮವಾಗಿ ಸರ್ವದಾ ಗರ್ವ, ದಾನ, ದುಡ್ಡು, ಹೆಂಡತಿ, ಹಿಂಸಾ ಇವುಗಳ ದೃಷ್ಟಿಯಿಂದಲೇ ಜಗತ್ತನ್ನು ನೋಡುತ್ತ ನಿರಭಿಮಾನಿಗಳೆನಿಸಿಕೊಂಡರು. ಅದರಂತೆ, ಮಹಾತ್ಮರಾದ ಶ್ರೀ ಶಂಕರಾಚಾರ್ಯರು ಅದ್ವೈತಪಕ್ಷಪಾತಿಗಳೂ, ಮಹಾತ್ಮರಾದ ಶ್ರೀ ರಾಮಾನುಜಾಚಾರ್ಯರು ವಿಶಿಷ್ಟಾದ್ವೈತಪಕ್ಷಪಾತಿಗಳೂ, ಮಹಾತ್ಮರಾದ ಶ್ರೀ ಮಧ್ವಾಚಾರ್ಯರು ದ್ವೈತಪಕ್ಷಪಾತಿಗಳೂ ಆಗಿ, ಅವರು ಕ್ರಮವಾಗಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ದೃಷ್ಟಿಯಿಂದ ಜಗತ್ತನ್ನು ನೋಡಿ ನಿಸ್ಪೃಹಿಗಳೆನಿಸಿಕೊಂಡರು. ಇವರೆಲ್ಲರ ತೆರದಿಂದ ಶ್ರೀ ಶೇಷಾಚಲ ಸದ್ಗುರುಗಳು ಈಶ್ವರಪಕ್ಷಪಾತಿಗಳೂ, ಶ್ರೀ ಗುರುಪತ್ನಿಯವರಾದ ಅಮ್ಮನವರು ಸ್ಪಷ್ಟ ವಕ್ತೃತ್ವದ ಪಕ್ಷಪಾತಿಗಳೂ ಆಗಿ, ಅವರು ಆಯಾ ದೃಷ್ಟಿಯಿಂದ ಜಗತ್ತನ್ನು ನೋಡುತ್ತಿದ್ದದ್ದರಿಂದ, ಇಬ್ಬರೂ ನಿರಭಿಮಾನಿಗಳೆಂತಲೇ ಎನಿಸಿಕೊಂಡರು. ಸರ್ವತ್ರ ಈಶ್ವರದೃಷ್ಟಿಯುಳ್ಳವರನ್ನು (ಅದ್ವೈತ, ವಿಶಿಷ್ಟಾದ್ವೈತ, ದ್ವೈತಗಳಲ್ಲಿ ಯಾವದೊಂದರಂತೆಯಾಗಲಿ ಈಶ್ವರದೃಷ್ಟಿಯುಳ್ಳವರನ್ನು) ಉದ್ಧೃತರೆಂತಲೂ, ಈಶ್ವರೇತರವಾದ ಯಾವದೊಂದರಲ್ಲಿ ದೃಷ್ಟಿಯುಳ್ಳವರನ್ನು ಕ್ರಿಯಾವಂತರೆಂತಲೂ ಕರೆದರೂ ಅವರೆಲ್ಲರೂ ನಿರಭಿಮಾನಿಗಳೆಂತಲೇ ಎನಿಸಿಕೊಳ್ಳುವರು. ನಮ್ಮ ಈ ಬರಹದ ಮೇಲಿಂದ, ಅಭಿಮಾನಿಗಳೆಂದು ಯಾರಿಗೆ ಅನ್ನಬೇಕೆಂಬದರ ಸ್ಫೂರ್ತಿಯು ವಾಚಕರ ವಿಚಾರದಲ್ಲಿ ಉತ್ಪನ್ನವಾಗಿರಬಹುದು. ಉದ್ಧೃತರೂ-ಕ್ರಿಯಾವಂತರೂ ಅಲ್ಲದವರೆಲ್ಲ, ಅಂದರೆ ಅಹಂಭಾವದಿಂದ ಕೇವಲ ತಮ್ಮ ಸಮಾಧಾನಕ್ಕಾಗಿ ಮನಸ್ಸಿಗೆ ಬಂದಹಾಗೆ ನಡೆಯುವವರೆಲ್ಲ ಅಭಿಮಾನಿಗಳೆನಿಸಿಕೊಳ್ಳುವರು. ಅವರು ಸ್ವಸಮಾಧಾನಪಕ್ಷಪಾತಿಗಳಾಗಿ ಜಗತ್ತನ್ನು ಸ್ವಸಮಾಧಾನದೃಷ್ಟಿಯಿಂದ ನೋಡುವರು. ಚಂಚಲವೃತ್ತಿಯ ಈ ಪಾಮರರನ್ನೇ ಅಭಿಮಾನಿಗಳೆಂದು ಕರೆಯಬೇಕು.

ಪ್ರಿಯವಾಚಕರೇ, ನಮಗೆ ತಿಳಿದಮಟ್ಟಿಗೆ ಅಭಿಮಾನಿಗಳ, ಹಾಗು ನಿರಭಿ

ಮಾನಿಗಳ ಲಕ್ಷಣವನ್ನು ಮೇಲೆ ಹೇಳಿರುವೆವು. ನಮ್ಮ ದೃಷ್ಟಿಯಿಂದ ಅಪ್ಪನವರು ನಿರಭಿಮಾನಿಗಳೇ ಆಗಿರಲಿ, ನಮ್ಮ ವಿಚಾರಕ್ಕೆ ವಿರುದ್ಧವಾದವರ ದೃಷ್ಟಿಯಿಂದ ಅಪ್ಪನವರು ಅತ್ಯಂತ ಅಭಿಮಾನಿಗಳೇ ಆಗಿರಲಿ, ಅವರು ಸ್ಪಷ್ಟ ಮಾತಾಡುವವರಿದ್ದರೆಂದು ಎಲ್ಲರೂ ಒಡಂಬಡಬೇಕಾಗುವದು. ಹಿಂದೆ ಶ್ರೀ ಗುರುವು ತನ್ನ ಮುಖದಿಂದ ತನ್ನ ಕುಟುಂಬದ ಗುಣಗಳನ್ನು ವರ್ಣಿಸಿದ್ದರ ಮೇಲಿಂದ ಅಪ್ಪನವರು, ಯಾರ ಹುಚ್ಚು-ಹುಳುಕುಗಳನ್ನು ತಡೆಯದವರೂ, ತಮ್ಮ ತಪ್ಪನ್ನೂ ಮಂದಿಯ ತಪ್ಪನ್ನೂ ಕೂಡಿಯೇ ಹೊರಗೆ ಹಾಕುವವರೂ, ತಮ್ಮ ತಪ್ಪಿಗೆ ಪಶ್ಚಾತ್ತಾಪವನ್ನೂ, ಮಂದಿಯ ಗುಣಕ್ಕೆ ಅಭಿನಂದನವನ್ನೂ ತೋರಿಸುವವರೂ, ಪ್ರತ್ಯಕ್ಷ ಬ್ರಹ್ಮದೇವರ ಮಗನು (ರುದ್ರನು) ಬಂದರೂ ತಮ್ಮ ಮಾತನ್ನು ಸ್ಪಷ್ಟವಾಗಿ ಬೈಲಿಗಿಡಲಿಕ್ಕೆ ಹೆದರದವರೂ ಇದ್ದರು. ಸೇವಕಧರ್ಮವೆಲ್ಲ ಶ್ರೀ ಸದ್ಗುರುವಿನಲ್ಲಿ ಘನೀಭವಿಸಿದ್ದರಿಂದ, ಅವರ ಅರ್ಧಾಂಗವೆನಿಸುವ ಶ್ರೀ ಗುರುಪತ್ನಿಯವರಲ್ಲಿ ಸೇವ್ಯಧರ್ಮವು ಅತ್ಯಂತವಾಗಿಘನೀಭವಿಸಿತ್ತು. ಅದರಂತೆ, ಶ್ರೀಗುರುಗಳು ಲೋಕದೊಡನೆ ಪ್ರೇಯಸ್ಕರರಾಗಿ ನಡೆದು ಲೋಕಪ್ರಿಯರಾದ್ದರಿಂದ, ಅಪ್ಪನವರು ಲೋಕದೊಡನೆ ಶ್ರೇಯಸ್ಕರವಾಗಿ ನಡೆದು ಶ್ರೀಯಶೋವಂಕರಿಗೆ ಮಾತ್ರ ಪ್ರಿಯರಾಗಿ ನಡೆದರು. ಅದ್ದರಿಂದಲೇ ಅಪ್ಪನವರು ನಿಸ್ಪೃಹರಾದ ತಮ್ಮ ಮಾತೇ ನಡೆಯಬೇಕು, ನಿಸ್ಪೃಹರಾದ ತಮಗೆ ಎಲ್ಲರೂ ನಮೋ ಅನ್ನಬೇಕು, ನಿಸ್ಪೃಹರಾದ ತಾವು ಯಾರಿಗೂ ಸೊಪ್ಪು ಹಾಕಲಾರೆವು, ಎಂಬ ಬಗೆಯಿಂದ ಜಗತ್ತಿನೊಡನೆ ನಡಕೊಂಡರೆಂದು ಹೇಳಬಹುದು. ಅಪ್ಪನವರು ಸಾಮಾನ್ಯರಲ್ಲ; ತಮ್ಮ ತೇಜಸ್ವಿತೆಯ ನಿಸ್ಪೃಹವೃತ್ತಿಯಿಂದ ತಮ್ಮಪತಿಯ ನಿಜವಾದ ಸಾಧುತ್ವವನ್ನು ಜಗತ್ತಿಗೆ ಒಡೆದು ಕಾಣುವಂತೆ ಇಟ್ಟರು, ಗಟ್ಟಿಮುಟ್ಟ ಶಿಷ್ಯರನ್ನು ಆರಿಸಿ ಅಶಿಷ್ಯರಲ್ಲಿಯ ಶ್ರೇಯಸ್ಕರ ಆಚರಣೆಯ ಕಸುವು ಇದ್ದಂತೆ ಅವರ ತರಗತಿಯನು ಹಚ್ಚಿ, ಅವರ ಯಾದಿಯನ್ನು ಮಾಡಿಇಟ್ಟರು; ನಿಜವಾದ ಆಪ್ತರನ್ನು ಹುಡುಕಿತೆಗೆದರು ಅಪ್ಪನವರು ತಮ್ಮ ಶ್ರೇಯಸ್ಕರವಾದ ಆಚರಣೆಯಿಂದ ಜ್ಞಾನಿಗಳಿಗೆ ವಂದ್ಯರಾಗಿಯೂ, ಅಜ್ಞಾನಿಗಳಿಗೆ ನಿಂದ್ಯರಾಗಿಯೂ ತೋರಿದರು. ಮುಮುಕ್ಷುಗಳಿಗೆ ನಿಜವಾದ ಸಾಧುತ್ವದ (ಗುರುತ್ವದ) ದರ್ಶನಮಾಡಿಕೊಡಲಿಕ್ಕೂ, ಅನುಗ್ರಹಪಾತ್ರರಾದ ಶಿಷ್ಯರನ್ನು ಶ್ರೀಸಾಧುಗಳಿಗೆ ಆರಿಸಿ ಕೊಡಲಿಕ್ಕೂ ಅಪ್ಪನವರು ಅತ್ಯುತ್ತಮ ಒರೆಗಲ್ಲಾಗಿದ್ದರು. ಅಂತೇ ಅವರಿರುವತನಕ ಸಿಕ್ಕಸಿಕ್ಕ ಆಪ್ತರಕಾಟವು ಶ್ರೀ ಗುರುವಿಗೆ ಆಗಲಿಲ್ಲ ಸಿಕ್ಕ ಸಿಕ್ಕ ಶಿಷ್ಯರು ಗೊಂದಲಹಾಕಲಿಕ್ಕೆ ಆಸ್ಪದವು ದೊರೆಯಲಿಲ್ಲ. ಮನಸೋಕ್ತವಾದ ಆಚರಣೆಗಳಿಗೆ ಸಲಸಿಗಲಿಲ್ಲ. ಆಗ ಶ್ರೀಗುರು

ವಿನ ಪರಿವಾರವೆಂದರೆ, ಗುರುಶಿಷ್ಯರಿಬ್ಬರನ್ನೂ ಪರೀಕ್ಷಿಸಶಕ್ಯ ಆತನ ಒರೆಗಲ್ಲಾದ ಅವ್ವನವರು, ಕೇವಲ ಆತನ ಆತ್ಮಸ್ವರೂಪರಾದ ಮಕ್ಕಳು, ಹೇಳಿದಹಾಗೆ ಕೇಳಿಕೊಂಡು ಬಿದ್ದಿರುವ ಶಿಷ್ಯರು, ಇಷ್ಟೇ ಜನರು ಇದ್ದರು. ಅಗ್ಗ್ರ ಯೋಗ್ಯ ಅತಿಥಿಗಳೇ ಸತ್ಕಾರಾರ್ಹರಾಗಿ ಶ್ರೀ ಗುರುವಿನ ಒಳಿಗೆ ಬರುತ್ತಿದ್ದರು. ಉಳಿದ ಆಪ್ತೇಷ್ಟರ ಸಂಬಂಧವೂ, ಠಕ್ಕಶಿಷ್ಯರ ಸಂಬಂಧವೂ ದೂರವಾಗಿ ಹೋದವು. ಶ್ರೀ ತುಕಾರಾಮಸಾಧುಗಳ ಕುಟುಂಬದಂತೆಯಿರುವ ಅವ್ವನವರ ಯೋಗ್ಯತೆಯನ್ನ ರಿಯದೆ, ಎಷ್ಟೋ ಜನರು ಅವ್ವನವರನ್ನು ತಿರಸ್ಕರಿಸಿ ಮೋಸಹೋಗಿರುವರು; ಆದರೆ ಲೋಕಮಾತೆಯವರಾದ ಶ್ರೀ ಶುಳಸವ್ವನವರ ಏಕಕ್ರಿಯಾತ್ಮಕವಾದ ವೃತ್ತಿ ಯನ್ನು ಆಲೋಚಿಸುವಾಗ ಲೇಖಕನ ಹೃದಯವು ಭಕ್ತಿರಸದಿಂದ ಉಕ್ಕಿಬರುತ್ತಿರು ವದು! ಸತ್ಪುರುಷರು ತ್ರಿಗುಣಗಳ ಹಂಗುಇಲ್ಲದವರೆಂದು ಹಿಂದೆಯೊಮ್ಮೆ ಹೇಳಿರು ವೆವಷ್ಟೆ? ಆದರೆ ತ್ರಿಗುಣಗಳ ಹೊರತು ಕಾರ್ಯಮಾಡುವದು ಅಸಾಧ್ಯವಾದದ್ದ ರಿಂದ, ಪರೋಪಕಾರಕ್ಕಾಗಿ ಶ್ರೀ ಶೇಷಾಚಲಸದ್ಗುರುವಿನ ಸಮರ್ಥವಾದ ಮುಕ್ತ ಜೀವವು ಕೇವಲ ಸತ್ವಗುಣಾರೋಪಿತವಾಗಿ ಸಾಧುರೂಪವಾಗಿ ಅರ್ಧಾಂಗದಿಂದ ಅವತರಿಸಿ, ಉಳಿದ ರಾಜಸ-ತಾಮಸಗುಣಾರೋಪಿತವಾಗಿ ಉಳಿದ ಅರ್ಧಾಂಗವೆನಿಸುವ ಪತ್ನೀರೂಪದಿಂದ ಅವತರಿಸಿತು! ಒಟ್ಟಿಗೆ ಸತ್ವಗುಣಾಭಿಮಾನಿಯಾದ ಶ್ರೀ ಸದ್ಗು ರುವಿನ ಯೋಗ್ಯತೆಯಷ್ಟೇ ಯೋಗ್ಯತೆಯು, ರಾಜಸ-ತಾಮಸ ಗುಣಾಭಿಮಾನಿಯಾದ ಶ್ರೀ ಗುರುಪತ್ನಿಯದಿತ್ತೆಂದು ಲೇಖಕನು ತಿಳಿದಿರುವನು. ಶ್ರೀ ಸದ್ಗುರುವಿನ ಅರ್ಧಾಂ ಗವು, ಸದ್ಗುರುವೇ ಅಲ್ಲದೆ ಬೇರೆಯಿರಬಹುದೆ? ತ್ರಿಮೂರ್ತಿಗಳೊಳಗೆ ದೇವತ್ವವು ಸಾಧಾರಣವಾಗಿರುವಂತೆ. ಶ್ರೀ ಗುರು-ಶ್ರೀ ಗುರುಪತ್ನಿಯರಲ್ಲಿ ಗುರುತ್ವವು ಸಾಧಾರಣವಾಗಿರುವದು. ಸತ್ವಗುಣಾಭಿಮಾನಿಯಾದ ಶ್ರೀ ವಿಷ್ಣುವಿನಷ್ಟೆ, ರಾಜಸ-ತಾಮಸಗುಣಾಭಿಮಾನಿಗಳಾದ ಶ್ರೀಬ್ರಹ್ಮ-ಶ್ರೀರುದ್ರರುಲೋಕಪ್ರಿಯರಾಗ ದಿದ್ದರೂ, ಅವರು ದೇವತೆಗಳಲ್ಲವೆ? ಇರಲಿ, ನಿರಭಿಮಾನಿಗಳಾದ ಪೂಜ್ಯ ಅವ್ವನವರ ಆಳಿಕೆಯ ಕಾಲದಲ್ಲಿ, ಅಂದರೆ ಕೃತಯುಗದಲ್ಲಿ ಇದ್ದ ಶ್ರೀ ಗುರುವಿನ ಸ್ಥಿತಿಯನ್ನೂ, ಆತನ ಲೋಕಾನುಗ್ರಹಮಾಡಿದ ಕ್ರಮವನ್ನೂ ಇನ್ನು ಸ್ವಲ್ಪದರಲ್ಲಿ ಬರೆಯುವಾ.

ಈ ಕಾಲದಲ್ಲಿ ಶ್ರೀಗುರುವು ಮಾಡಿದಘೋರತಪಶ್ಚರ್ಯವನ್ನೂ, ಶ್ರೀಶಂಕರಾ ಚಾರ್ಯರಂತೆಜ್ಞಾನಿಗಳುಳ್ಳ ತೀರ್ಥಕ್ಷೇತ್ರಗಳಿಗೆಹೋಗಿ ಆತನುಅನುಗ್ರಹಸಂಪಾದಿಸಿ ದ್ದನ್ನೂ,ಮುಮುಕ್ಷುಗಳಿಗೆನಿರಾಲೋಚನೆಯಿಂದ ಅನುಗ್ರಹಮಾಡಿದ್ದನ್ನೂ,ಅಪ್ರಾರ್ಥಿತ ನಾಗಿಭವಿಷ್ಯಾದಿಗಳಕಥನಮಾಡಿದ್ದನ್ನೂ,ತೀರ್ಥ-ಭಸ್ಮಾದಿಗಳಿಂದರೋಗಾದಿಬಾಧೆ

ಗಳ ನಿವಾರಣಮಾಡಿದ್ದನ್ನೂ, ಸ್ವಾಭಾವಿಕವಾಗಿ ಪ್ರಕಟವಾದ ಆತನದೈವಿಕ ಕೃತಿಗಳನ್ನೂ ವರ್ಣಿಸಲಿಕ್ಕೆ ಇಲ್ಲಿ ಸ್ಥಳವಿಲ್ಲದ್ದರಿಂದ ವಿಷಾದಪಟ್ಟು ಬಿಡಬೇಕಾಗಿದೆ. ಅವೆಲ್ಲವುಗಳ ವರ್ಣನವನ್ನು ಶ್ರೀಗುರುಗಳ ತಾತ್ವಿಕವೂ-ರಹಸ್ಯಪೂರ್ಣವೂ-ಗಂಭೀರವೂ-ಮನೋಹರವೂ-ಬೋಧಪ್ರದವೂ ಆದ ವಿಸ್ತೃತಚರಿತ್ರವು ಸಿದ್ಧವಾದ ಬಳಿಕ ವಾಚಕರು ಓದಿ ಧನ್ಯರಾಗಬಹುದು. ಸದ್ಯಕ್ಕೆ ನಿರ್ಯಾಣಪ್ರಸಂಗ ವರ್ಣನೋಚಿತವಾದಷ್ಟು ಶ್ರೀಗುರುವಿನ ಕೃತಯುಗದ ಸಂಗತಿಗಳನ್ನು ತಿಳಿಸುವೆವು. ಈ ಯುಗದಲ್ಲಿ ಶ್ರೀಗುರುವು—ಪ್ರತಿನಿತ್ಯ ಬೆಳಗಿನ ಜಾವದಲ್ಲಿ ಎದ್ದು ತೋಟತೋಟ ತಿರುಗಿ ದ್ವಾದಶಪುಷ್ಪಗಳನ್ನು ತರಬೇಕು; ಅನುಷ್ಠಾನದ ಯಾವತ್ತೂ ಅನುಕೂಲತೆಗಳನ್ನು ಪರರ ಹಂಗುಯಿಲ್ಲದೆ ತಾನೇ ಕೈಮುಟ್ಟ ಮಾಡಿಕೊಳ್ಳಬೇಕು; ಅಲಂಕಾರಯುಕ್ತ ದೇವಪೂಜೆಯಿಂದ ತಾನು ಆನಂದಮಗ್ನನಾಗಿ, ಜನರ ಚಿತ್ತವನ್ನು ಹರಣಮಾಡಬೇಕು; ಪ್ರಸಂಗಬಂದರೆ ಕುಟ್ಟಬೇಕು, ಬೀಸಬೇಕು; ಒಂದೊಂದುದಿನ ಬೆಳತನಕ ನಿಂತು ಭಜನೆಮಾಡುವಾಗ ಚಪ್ಪಾಳೆಬಡೆದುಬಡೆದು ಕೈಯಲ್ಲಿ ರಕ್ತಬರಬೇಕು; ಎರಡೆರಡು ಮೂರುಮೂರು ಉಪೋಷಣಮಾಡಬೇಕು; ಇಳಿಯುಹೊತ್ತಿನಲ್ಲಿ ಒಪ್ಪತ್ತು ಊಟಮಾಡಬೇಕು. ಈ ಯುಗದಲ್ಲಿ ಶ್ರೀಗುರುವು ಮಂದಿಯಸಂಗಡ ಮಾತಾಡುವದೇ ಕಡಿಮೆ. ಅನುಷ್ಠಾನಕಾಲದಲ್ಲಿಯಂತು ಭಾಷಣವು ತೀರವರ್ಜ್ಯ. ಯಾವಾಗಲೂ ಅರ್ಧಮುಚ್ಚಿದಕಣ್ಣುಗಳಿಂದ ಜನರನ್ನು ನೋಡುವದು. ಮುಖಕ್ಕಿಂತ ಜನರ ಪಾದಗಳಮೇಲೆ ಲಕ್ಷಬಹಳ. ಹೋಗುವಾಗ-ಬರುವಾಗ, ಕೂಡ್ರುವಾಗ-ಏಳುವಾಗ, ಮಲಗುವಾಗ-ಎದ್ದುಕುಳಿತುಕೊಳ್ಳುವಾಗ ಭೇದಭಾವವಿಲ್ಲದೆ ಜನರಿಗೆ ತಲೆಬಾಗಿ ನೆಲಕ್ಕೆ ಕೈಮುಟ್ಟ ನಮಸ್ಕರಿಸುವದು ಸ್ವಭಾವಗುಣವಾಗಿಹೋಗಿತ್ತು. ತಮಗೆ ಬಂದ ದಕ್ಷಿಣೆಗಳನ್ನು ಕಾದಿಟ್ಟು, ಗುಡಿ-ಗುಂಡಾರಗಳೊಳಗಿದ್ದ ಬ್ರಾಹ್ಮಣರ ಯೋಗಕ್ಷೇಮಕ್ಕೆ ವೆಚ್ಚಮಾಡುತ್ತಿದ್ದರು. ಧಾತುಸಂವತ್ಸರದ ಬರದಲ್ಲಿ ತಮ್ಮ ಪಾಲಿನ ಆಹಾರದಲ್ಲಿ ಅರ್ಧವನ್ನು ಬಡವರಿಗೆ ಹಂಚಿದರು. ಸಾರಾಂಶ, ಕೃತಯುಗದಲ್ಲಿ ತಮ್ಮ ದೇಹದ ಪರಿವೆಯಿಲ್ಲದೆ, ಅಭಿಮಾನರಹಿತರಾಗಿ, ಮಾಯಾಮೋಹಗಳನ್ನು ಬದಿಗಿಟ್ಟು, ಮಾನಾಪಮಾನಗಳನ್ನು ಲೆಕ್ಕಿಸದೆ ಏಕನಿಷ್ಠೆಯಿಂದ ಘೋರ ತಪಶ್ಚರ್ಯ ಮಾಡಿದರು. ಈ ಗುಪ್ತಕಾಲದಲ್ಲಿ ನಿಜವಾದ ಮುಮುಕ್ಷುಗಳೇ ಶ್ರೀಗುರುವನ್ನು ಕಂಡು ಅನುಗ್ರಹಸಂಪಾದಿಸಿದರೆ ಸಂಪಾದಿಸಬಹುದಾಗಿತ್ತು; ಯಾಕಂದರೆ, ಸಿಕ್ಕವರು ಗುರುಗಳ ಬಳಿಗೆ ಬರಲಿಕ್ಕೆ, ಆಗ ಯಾವ ಮಾಯಾವ್ಯಾಪಾರಗಳೂ ಜನರಲ್ಲಿ ಮೋಹವನ್ನುಂಟುಮಾಡುತ್ತಿದ್ದಿಲ್ಲ. ಇದರ ಮೇಲೆಯೂ

ಅವ್ವನವರಂಥ ಪರೀಕ್ಷಕರು ಕೊಡತಿಯನ್ನು ಹಿಡಕೊಂಡು ಪರೀಕ್ಷಿಸಲಿಕ್ಕೆ ಸಿದ್ಧರಾಗಿದ್ದರು. ಆದ್ದರಿಂದ ಈ ಯುಗದಲ್ಲಿ ಲೋಕಸಂಗ್ರಹವು ತೀರಕಡಿಮೆಯಾಗಿತ್ತು!

ಹೀಗೆ ಸರಾಸರಿ ೨೮-೨೯ ವರ್ಷದವರಿರುವಾಗ ಶ್ರೀ ಗುರುಗಳ ಅನುಷ್ಠಾನಕ್ಕೆ ಆರಂಭವಾಗಿ, ಮುಂದೆ ೭-೮ ವರ್ಷ ಅನುಷ್ಠಾನ ನಡೆದು ಜನರಲ್ಲಿ ಶ್ರೀ ಗುರುಗಳ ದೈವೀಶಕ್ತಿಯು ಪ್ರಸಿದ್ಧಿಯಾದ ಬಳಿಕ ಒಬ್ಬೊಬ್ಬರೇ ಶಿಷ್ಯರು ಬರಹತ್ತಲು, ಶ್ರೀ ಗುರು-ಶ್ರೀ ಗುರುಪತ್ನಿಯರಲ್ಲಿ ಸ್ವಾಭಿಮಾನದ ಜಾಗ್ರತೆಯಾಗಿ ಅವರು ಸೇವೆಮಾಡಬಂದ ಶಿಷ್ಯರನ್ನು ನೋಡಹತ್ತಿ, ತಾವು, ಗುರುಗಳು ಹಾಗು ಇವರು ಶಿಷ್ಯರು ಎಂಬ ದ್ವೈತಭಾವವು ಉತ್ಪನ್ನವಾಗಲು, ತ್ರೇತಾಯುಗಕ್ಕೆ ಆರಂಭವಾಯಿತು. ಈ ಯುಗದಲ್ಲಿ ಶ್ರೀಗುರುವು ಒಬ್ಬೊಬ್ಬ ಶಿಷ್ಯಸಮೇತವಾಗಿ, ಒಬ್ಬೊಬ್ಬ ಸಕುಟುಂಬ ದೇಶಸಂಚಾರ ಮಾಡಿ ಅಯಾಚಿತವೃತ್ತಿಯಿಂದ ಯಾಚಿಸಹತ್ತಿದನು. ಶಿಷ್ಯರು ಪುರಾಣ-ಪುಣ್ಯ ಕಥೆಗಳನ್ನು ಹೇಳಹತ್ತಲು, ಪುರಾಣಮಂಗಳ, ಧನುರ್ಮಾಸ, ವಸಂತಪೂಜೆ ಮುಂತಾದವುಗಳ ನೆವದಿಂದ ಉತ್ತರೋತ್ತರ ಅನ್ನಸಂತರ್ಪಣಾದಿಗಳು ಹೆಚ್ಚಲು, ಈ ಮೊದಲೆ ಸತ್ಕರ್ಮನಿರತನಾಗಿದ್ದ ಶ್ರೀ ಗುರುವು ಸದ್ವ್ಯವಹಾರನಿರತನಾಗಹತ್ತಿದನು. ಈ ಯುಗದಲ್ಲಿ ಶ್ರೀ ಗುರುಗಳು ಮಾಡತಕ್ಕ ಕೆಲಸಗಳನ್ನು ಶಿಷ್ಯರು ಮಾಡಹತ್ತಿದ್ದರಿಂದ, ಗುರುಗಳ ದೇಹದಂಡನವು ಕಡಿಮೆಯಾಗಹತ್ತಿತು. ಈ ಕಾಲದಲ್ಲಿ ಶ್ರೀ ಗುರುಗಳ ಬಳಿಗೆ, ಮನೆಯಲ್ಲಿದ್ದು ಸೇವೆಮಾಡಲಿಕ್ಕೆ ಬಂದ ಶಿಷ್ಯರಲ್ಲಿ ಯಾವತರದ ಹೆಚ್ಚಿನಯೋಗ್ಯತೆಯೂ ಇದ್ದಿಲ್ಲ. ತೀರಆರಂಭಕ್ಕೆ ಬಂದಿದ್ದ ಶಿಷ್ಯನಂತು ಮನೆಯವರಿಂದ ನಿರಾಕರಿಸಲ್ಪಟ್ಟ ಸಾಧಾರಣ ಲೌಕಿಕಸ್ವಹಸ್ತನಾಗಿದ್ದು, ಅರ್ಧಾಂಗವಾಯುವಿನ ವಿಕಾರದಿಂದ ಅಲ್ಪಸ್ವಲ್ಪ ಪರಾಧೀನನಾಗಿದ್ದನೆಂದು ಹೇಳಿದರೂ ಹೇಳಬಹುದಾಗಿತ್ತು. ಉಳಿದ ಶಿಷ್ಯರು, ಪ್ರಾಥಮಿಕಶಾಲೆಯ ಕನಿಷ್ಠ-ಮಧ್ಯಮವರ್ಗದ ಶಿಕ್ಷಕರಾಗಿದ್ದರು. ಮೇಲಾಗಿ ಕೇವಲ ಪಾರಮಾರ್ಥಿಕಹಿತಮಾಡಿಕೊಳ್ಳಲಿಕ್ಕೂ ಅವರು ಬಂದವರಲ್ಲ; ಮತ್ತು ಅಷ್ಟು ಸಂಸಾರದ 'ಅನುಭವವನ್ನೂ ಪಡೆದವರಲ್ಲ. ಸಾಧಾರಣವಾಗಿ ಈಗಿನ ಕಾಲಕ್ಕನುಸರಿಸಿ ಮನಸೋಕ್ತವಾಗಿ ಆಚರಿಸುತ್ತ ಬಂದವರಿದ್ದರು; ಆದರಿಂದಲೇ ಈ ಶಿಷ್ಯರನ್ನು ಕುರಿತು ಮೇಲೆಯೊಂದು ಕಡೆಗೆ, ಸಾಧನ ಚತುಷ್ಟಯ ಸಂಪನ್ನರಲ್ಲದ ಹಸಿಬಿಸಿ ಮನುಷ್ಯರೆಂದು ಹೇಳಿರುತ್ತದೆ! "ಕ್ರಿಯಾಸಿದ್ಧಿಃಸತ್ವೇ ಭವತಿ ಮಹತಾಂ ನೋಪಕರಣೇ" ಎಂಬಂತೆ, ಇಂಥವರ ಯೋಗದಿಂದಲೇ ಶ್ರೀ ಗುರುವು ಬೇಕಾದಂಥ ಕಾರ್ಯಗಳನು! ಸಾಧಿಸಿದ್ದರಿಂದಲ್ಲೆ, ಆತನನ್ನು ಮಹಾತ್ಮನೆಂದು ಕರೆಯಬೇಕಾಯಿತು! ಈಗ

ಬಂದ ಶಿಷ್ಯರ ಸಂಸಾರವಾಸನೆ ಹೋಗಿದ್ದಿಲ್ಲ; ದೇಹಾಭಿಮಾನವು ಅಳಿದಿದ್ದಿಲ್ಲ, ಕೆಲವರಂತೂ ಸಾಧುಗಳ ವಶೀಲಿಯಿಂದ ನೌಕರಿಯನ್ನು ಹಚ್ಚಿಕೊಳ್ಳಬೇಕೆಂದು ಹೋದವರಿದ್ದರು. ಅಂದಬಳಿಕ "ಮಾಡಿದವನನ್ನು ಹೊತ್ತಿತು ಮಣ್ಣುಗೊಂಬೆ"ಯೆನ್ನುವಂತೆ, ಈ ಶಿಷ್ಯರು ಹಾಕಿದ ಸೇವಾಪದ್ಧತಿಗಳು ಅಭಿಮಾನ ಮೂಲಕಗಳಾಗಿರುವವೆಂಬದರಲ್ಲಿ ಸಂಶಯವಿಲ್ಲ; ಆದರೆ ನಿಸ್ಪೃಹರಾದ ಅಪ್ಪನವರು ಇರುವತನಕ ಈ ಶಿಷ್ಯವರ್ಗದ ಗೊಂದಲಕ್ಕೆ ಬಹುತರ ಆಸ್ಪದ ಉಳಿಯಲಿಲ್ಲ. ಮನೆಯಲ್ಲಿ ಬಿದ್ದ ಕೆಲಸ ಮಾಡಬೇಕು, ಅಪ್ಪನವರು ಹೇಳಿದಹಾಗೆ ಕೇಳಬೇಕು, ಹಾಕಿದ್ದು ಉಣ್ಣಬೇಕು, ಇಷ್ಟೇ ಕೆಲಸಗಳು ಶಿಷ್ಯರವಾಗಿದ್ದವು. ಅವರನ್ನು ಆಗ ಗೌರವದ ಹೆಸರಿನಿಂದ ಯಾರೂ ಕರೆಯುತ್ತಿದ್ದಿಲ್ಲ. ಅವರ ಮನೆಯವರು, ತಮ್ಮ ಹುಡುಗರು ಸಂಸಾರಗೇಡು ಮಾಡಿಕೊಂಡರೆಂದು ಆ ಶಿಷ್ಯರನ್ನೂ, ಅವರಸಂಗಡ ಅವರ ಗುರುಗಳನ್ನೂ ಬಾಯಿಗೆ ಬಂದಹಾಗೆ ಬೈಯುತ್ತಿದ್ದರು. ಇದೊಂದು ಹಾಳಲಚೆಂಡವೇ ಬಂದಂತಾಗಿ, ಅಪ್ಪನವರು—"ಮಠದ ದಂಡೆಯರು ಮನೆಯನ್ನು ಸೇರಿಕೊಂಡರಪ್ಪಾ"ಎಂದು ತಿರಸ್ಕರಿಸುತ್ತಿದ್ದರು! ಹೀಗಾಗಿ ಶಿಷ್ಯರಿಗೆ ಎಲ್ಲಕಡೆಯಿಂದಲೂ ತ್ರಾಸವಾಗಿ, ಅವರ ತಪಶ್ಚರ್ಯಕ್ಕೆ ಆರಂಭವಾಯಿತು. ಮುಖ್ಯವಾಗಿ ಅಪ್ಪನವರ ನಿಷ್ಠುರತನ-ನಿಸ್ಪೃಹತ್ವಗಳ ಪುಣ್ಯದಿಂದ ಶಿಷ್ಯರಲ್ಲಿ ನಿಶ್ಚಯ, ಸಹಿಷ್ಣುತೆ, ಸಮಾಧಾನಗುಣ, ಆತ್ಮಸಂಯಮನ, ಗುರುಭಕ್ತಿ ಮೊದಲಾದ ಸದ್ಗುಣಗಳ ಬೀಜಾರೋಪಣವಾಗಿ, ಆ ಗುಣಗಳು ಬೆಳೆಯುತ್ತ ಹೋದಂತೆ ಅವರಲ್ಲಿ ಸತ್ವವು ಹೆಚ್ಚುತ್ತ ಹೋಯಿತು. ಆದರಿಂದ ಅವರಲ್ಲಿಯ ಮಾಯಾ-ಮೋಹಗಳ, ಹಾಗು ಅಭಿಮಾನ-ವಾಸನೆಗಳ ಕಸುವು ಕುಗ್ಗಿ, ಶ್ರೀ ಗುರುಬೋಧದ ರಹಸ್ಯಜ್ಞಾನವು ಮೆಲ್ಲಮೆಲ್ಲನೆ ಅವರಿಗೆ ಆಗಹತ್ತಿತು. ಹೀಗೆ ಶಿಷ್ಯರು ಗುರುಕೃಪೆಯಿಂದ ಹಸಿಬಿಸಿ ಮನುಷ್ಯರು ಹೋಗಿ, ಪೂರ್ಣ ಮನುಷ್ಯರೂ, ಪೂರ್ಣಮನುಷ್ಯರು ಹೋಗಿ ಸಜ್ಜನರೂ ಆಗುತ್ತಿರಲು, ಶಿಷ್ಯರ ವರ್ಚಸ್ಸೇ ಬೇರೆಯಾಯಿತು. ಅವರಿಗೆ ಜನರಲ್ಲಿ ಮಾನ್ಯತೆ ದೊರೆಯಹತ್ತಿತು. ಮನೆಯವರ ಕಾಟವು ಕಡಿಮೆಯಾಯಿತು. ಮರ್ಮಜ್ಞರಾದ ಅಪ್ಪನವರು, ಬರಬರುತ್ತ ಸೌಮ್ಯರೀತಿಯಿಂದ ಅವರನ್ನು ನಡಿಸಿಕೊಳ್ಳಹತ್ತಿದರು. ಹೀಗಾದ್ದರಿಂದ, ಶಿಷ್ಯಮಂಡಲಿಯು ಕೈಬಿಟ್ಟು-ಕಾಲುಬಿಟ್ಟು, ಭಕ್ತಿವಿಜಯ, ದಾಸಬೋಧ, ರಾಮದಾಸೀಶ್ಲೋಕ, ಯೋಗವಾಸಿಷ್ಠ, ಅಧ್ಯಾತ್ಮರಾಮಾಯಣ ಮೊದಲಾದ ಪ್ರಾಕೃತ ಗ್ರಂಥಗಳನ್ನು ಶ್ರೀ ಗುರುವಿನಮುಂದೆ ಓದಹತ್ತಿದರು. ಪ್ರಿಯವಾಚಕರೇ, ಶ್ರೀ ಗುರುಮಹಿಮೆಯನ್ನು ವರ್ಣಿಸುವದೇನು? ತೀರ ಸಾಧಾ

ರಣ ಯೋಗ್ಯತೆಯು ಈ ಶಿಷ್ಯರು, ಇಷ್ಟೇ ಗ್ರಂಥಾವಲೋಕನದಿಂದಲೂ ಶ್ರೀಗುರುಮುಖದಿಂದ ಹೊರಟ ಸುಲಭ ಬೋಧಶ್ರವಣದಿಂದಲೂ ಸುಸಂಸ್ಕೃತರಾಗಿ ಅವರಲ್ಲಿ ವಾಚಾಲತೆಯು ಪ್ರಾಪ್ತವಾಯಿತು. ವಿದ್ವಾಂಸರೆನಿಸಿಕೊಳ್ಳುವವರ ಸಂಗಡ ಅವರು ವಾದಮಾಡಹತ್ತಿದರು. ಅವರ ಸ್ವಾವಲಂಬನವು ಬೆಳೆದು, ಅವರಲ್ಲಿ ಸ್ವನಿಷ್ಠೆಯು ಉತ್ಪನ್ನವಾಯಿತು. ಶ್ರೀ ಗುರುವಿನ ವಿನಯದ ಮಾತುಗಳನ್ನು ಕೇಳಿಕೇಳಿ, ಆತನ ವಿನಯದ ಆಚರಣೆಗಳನ್ನು ನೋಡಿ-ನೋಡಿ, ತಾವು ಶ್ರೀಗುರುವಿನ ವಿನಯದ ಮಾತುಗಳನ್ನೂ, ವಿನಯದ ನಡತೆಯನ್ನೂ ಕಲಿತುಕೊಂಡು, ಶ್ರೀ ಗುರುವಿನಂತೆ ಲೋಕಾಭಿರಾಮರಾಗಿ ತೋರಹತ್ತಿದರು. ಅಷ್ಟರಲ್ಲಿ ಶ್ರೀಗುರುಸಂಕೇತದಂತೆಯೋ, ಶಿಷ್ಯರ ದುರ್ದೈವದಿಂದಲೋ ಅಪ್ಪನವರು ದೇಹವಿಟ್ಟದ್ದರಿಂದ, ಅವರ ಪವಿತ್ರ ಸ್ಥಳವನ್ನು ಮೇಲೆಯೊಮ್ಮೆ ನಾವು ಹೇಳಿದಂತೆ ಈ ಶಿಷ್ಯರು ಆಕ್ರಮಿಸಿದರು!

ಅಪ್ಪನವರದೊಂದು ದೊಡ್ಡ ಭಾರವು ತಲೆಯ ಮೇಲಿನದು ಇಲ್ಲದಹಾಗಾದ್ದರಿಂದ ಶಿಷ್ಯರಿಗೆ ಹರಾಹುರಿಯಾಯಿತು. ಶಿಷ್ಯರಲ್ಲಿ ಎಲ್ಲರೂ ಒಂದೇ ವೃತ್ತಿಯವರೂ, ಒಂದೇ ಯೋಗ್ಯತೆಯವರೂ ಇದ್ದಿಲ್ಲ. ಕೆಲವರು ಅಲ್ಪಸ್ವಲ್ಪ ಸಂಸ್ಕೃತ ಬಲ್ಲವರಿದ್ದರು. ಕೆಲವರು ದುರಭಿಮಾನಿಗಳಿದ್ದರು. ಕೆಲವರು ಹಟಮಾರಿಗಳಿದ್ದರು. ಕೆಲವರು ಅಂಜುಬುರುಕರಿದ್ದರು. ಕೆಲವರು ಸದ್ಗುರುವಿನಲ್ಲಿ ನಿಕಟ ವಿಶ್ವಾಸವುಳ್ಳವರಿದ್ದರು. ಅಂತೇ ಅಪ್ಪನವರು ದೇಹವಿಟ್ಟ ಸ್ವಲ್ಪದಿನಗಳಲ್ಲಿಯೇ ಶಿಷ್ಯರೊಳಗೆ ಪರಸ್ಪರ ವೈಮನಸ್ಸು ಉಂಟಾಗಿ, ಅವರು ತಮ್ಮ ದೃಷ್ಟಿಯಿಂದ ಗದ್ದಲವಾಗದಂತೆ, ತಮ್ಮತಮ್ಮೊಳಗೆ ಮಸೆದಾಡಹತ್ತಿದರು. ಈ ಮಸತವು ಹೆಚ್ಚಾಗುತ್ತಹೋಗಲು, ಉಂಟಾಗುವ ಘರ್ಷಣಜನ್ಯತಾಪವನ್ನು ತಾಳಲಾರದೆ, ಇಬ್ಬರು ಶಿಷ್ಯರು ಶ್ರೀ ಗುರುಸ್ಥಾನವನ್ನು ಬಿಟ್ಟುಹೋಗಿ, ಒಬ್ಬರು ಮೈಸೂರ ಸೀಮೆಯೊಳಗಿನಸಾಗರದಲ್ಲಿ, ಇನ್ನೊಬ್ಬರು ಮದ್ರಾಸಇಲಾಖೆಯೊಳಗಿನ ತಿಪ್ಪಾಪುರವೆಂಬ ಊರಲ್ಲಿ, ಒಂದೊಂದು ಮಠವನ್ನು ಮಾಡಿಕೊಂಡು ಇರಹತ್ತಿದರು. ಸತ್ವಸಂಪನ್ನನೂ-ನಿರ್ಧಾರದ ಸ್ವಭಾವದವನೂ ಆದ ಒಬ್ಬ ಶಿಷ್ಯನು ಮಾತ್ರ ಶ್ರೀ ಗುರುಸನ್ನಿಧಿಯಲ್ಲಿ ನಿಂತು ಅಪ್ಪನವರಂತೆ ಶ್ರೇಯಸ್ಕರನಾಗಿ ನಡೆಯುತ್ತ, ಶ್ರೀ ಗುರುಸೇವೆಯನ್ನು ಮಾಡಹತ್ತಿದನು. ಆಗ ತ್ರೇತಾಯುಗವು ಹೋಗಿ ದ್ವಾಪರಯುಗಕ್ಕೆ ಆರಂಭವಾಯಿತು. ಈ ಪುಣ್ಯವಂತಶಿಷ್ಯನ ಪರಿಚಯವು ಲೇಖಕನಿಗೆ ವಿಶೇಷವಾಗಿಲ್ಲ. ಈ ಯುಗದಲ್ಲಿ ಶಿಷ್ಯಮಂಡಲಿಗೆ ಎಲ್ಲಿಂದಲೋ 'ಭಗವಾನ' ಎಂಬ ಉಪಪದವು ಯುಗಧರ್ಮಕ್ಕನುಸರಿಸಿ ಪ್ರಾಪ್ತವಾಗಿ, ಅವರ ಗಣನೆಯು ಅಲೌಕಿಕ

ಜನರಲ್ಲಿ ಆಗಹತ್ತಿತು. ಭಗವಾನರೆಂದು ಕರೆಯುದಿದ್ದರೆ, ಯುಗಧರ್ಮದಂತೆ ಶಿಷ್ಯರ ಮನಸ್ಸು ನೋಯುತ್ತಿತ್ತೋ ಹ್ಯಾಗೋ ಯಾರಿಗೆಗೊತ್ತು! ಈ ದ್ವಾಪರಯುಗದಲ್ಲಿ ಶ್ರೀಗುರುಸ್ಥಾನದಲ್ಲಿ ನಿಂತ ಶಿಷ್ಯರ ಹೆಸರು ಲಿಂಗಾಭಗವಾನರು. ತಿಪ್ಪಾಪುರಕ್ಕೆ ಹೋದವರು ಶಂಕರಭಗವಾನರು. ಸಾಗರಕ್ಕೆ ಹೋದವರು ನಾರಾಯಣಭಗವಾನರು. ಗು ಭ. ಲಿಂಗೋಭಗವಾನರೊಬ್ಬರೇ ಸೇವೆಮಾಡಹತ್ತಿದ್ದರಿಂದ, ಶ್ರೀಗುರುವು ತನ್ನ ದೃಷ್ಟಿಯನ್ನು ಅವರಲ್ಲಿ ವಿಶೇಷವಾಗಿ ಇಡಬೇಕಾಯಿತು ಶ್ರೀಗುರುವಿನ ಈ ಕೃಪಾದೃಷ್ಟಿಯ ಪ್ರಭಾವದಿಂದ ಗು. ಭ. ಲಿಂಗೋಭಗವಾನರ ಯೋಗ್ಯತೆಯು ಹೆಚ್ಚಿತು. ದೊಡ್ಡ ದೊಡ್ಡ ವಿದ್ವಾಂಸರು ಅವರ ಜ್ಞಾನಕ್ಕೂ, ಸದ್ವೃತ್ತಿಗೂ, ಗುರುಭಕ್ತಿಗೂ, ನಿಸ್ಪೃಹತೆಗೂ ತಲೆದೂಗಹತ್ತಿದರು. ಲಿಂಗೋಭಗವಾನರು ಸ್ವತಃ ಸಂಚಾರಮಾಡಿ ಸೇವೆಯನ್ನು ಧುರಂಧರರಾಗಿ ಸಾಗಿಸಹತ್ತಿದರು. ಅವರು ಕೇವಲ ತಪಸ್ವಿಗಳಾಗಿ ಕಾಲಹರಣ ಮಾಡಿದರಂತೆ. ಗಟ್ಟಿದೋತರ ಉಡಲಿಲ್ಲವಂತೆ, ಸವಿಯುಣಿಸುಗಳನ್ನು ಉಣ್ಣಲಿಲ್ಲವಂತೆ, ಗಾದಿಯಮೇಲೆ ಮಲಗಲಿಲ್ಲವಂತೆ, ಕಡೆತನಕ ದೇಹದಂಡನದ ಸೇವೆಯನ್ನು ಬಿಡಲಿಲ್ಲವಂತೆ. ಶ್ರೀಗುರುವಿನ ಸೇವೆಯಲ್ಲಿ ಕಡೆತನಕ ದೇಹವನ್ನು ಸವಿಸಿದವರಲ್ಲಿ ಶ್ರೀಲಿಂಗೋಭಗವಾನರು ಅಗ್ರಗಣ್ಯರೆಂದು ಹೇಳಲಿಕ್ಕೆ ಬಾಧೆಯಿಲ್ಲ. ಅವರು ದೇಹದವಿಷಯವಾಗಿದುರ್ಲಕ್ಷಮಾಡಿ ದೇಹದಂಡನಮಾಡಿದ್ದರಿಂದ, ಅವರಿಗೆ ಹೊಟ್ಟೆಶೂಲೆಯಬಾಧೆಯು ಉತ್ಪನ್ನವಾಯಿತು. ಶ್ರೀಗುರುಗಳಂತೆ ಈ ಭಗವಾನರು ಪ್ರೇಯಸ್ಕರಾಚರಣೆಯವರಲ್ಲ; ಅವ್ವನವರಂತೆ ಶ್ರೇಯಸ್ಕರಾಚರಣೆಯವರು. ಇವರ ಸೇವಾಪದ್ಧತಿಯು ಬಹುಕಠಿಣವಾದದ್ದು. ಸ್ವತಃ ವೈಮುರಿದು ನಿರಭಿಮಾನದಿಂದ ದುಡಿಯುವವರಾದ್ದರಿಂದ, ಅವರ ಕೈಕೆಳಗೆ ಜನರು ಪೂರಯಿಸುವದು ಕಠಿಣವಾಗಿತ್ತು. ಒಂದುಬಗೆಯಾಗಿ ಲಿಂಗೋಭಗವಾನರನ್ನು ಅವ್ವನವರ ೧ನೇ ನಂಬರಿನ ಪಟ್ಟಶಿಷ್ಯರೆಂದು ಕರೆಯಬಹುದು ಈ ಭಗವಾನರಮೇಲೆಯೂ, ಅವರ ಸಾಧ್ವಿಯಾದ ಕುಟುಂಬದಮೇಲೆಯೂ ಅವ್ವನವರ ಪ್ರೇಮಬಹಳ. ಲಿಂಗೋಭಗವಾನರು ಮಹಾನಿಸ್ಪೃಹಿಗಳು. ಅಥಿತಿಗಳಾಗಿ ಮನೆಗೆಬಂದ ಜನರನ್ನು ಮೊದಲನೆಯ ದಿವಸ ದೇವರೆಂತಲೂ, ಎರಡನೆಯದಿವಸ ಬೀಗರೆಂತಲೂ ಭಾವಿಸಿ ನಡಿಸಿಕೊಂಡು, ಮೂರನೆಯದಿವಸ ಮನೆಯವರೆಂದು ತಿಳಿದು, ಅವರನ್ನು ಕೆಲಸಕ್ಕೆ ಜಗ್ಗುತ್ತಿದ್ದರು! ಹೀಗಾಗಿ ನಿರುದ್ಯೋಗಿಗಳ ಸಂಖ್ಯೆಯು ಶ್ರೀಗುರುಸನ್ನಿಧಿಯಲ್ಲಿ ಆಗಹೆಚ್ಚಲಿಲ್ಲ. ಇದಕ್ಕೆ ಲಿಂಗೋಭಗವಾನರ ಪ್ರಖರವಾದ ವರ್ಚಸ್ಸೇ ಕಾರಣವು.

ಇವರ ಕಾಲದಲ್ಲಿ ಪುರಾಣ, ವಸಂತಪೂಜೆ, ಧನುರ್ಮಾಸ ಮೊದಲಾದ ಧಾರ್ಮಿಕ ಪ್ರಸಂಗಗಳ ಯೋಗದಿಂದ ಸುಲಕ್ಷಣವಾದ ಅನ್ನದಾನವು ನಡೆಯುತ್ತಿತ್ತು. ಅತ್ತ ಶ್ರೀಗುರುಸ್ಥಾನವನ್ನು ಬಿಟ್ಟುಹೋದ ಶ್ರೀನಾರಾಯಣಭಗವಾನ ಹಾಗು ಶ್ರೀ ಶಂಕರಭಗವಾನರಾದರೂ ಶ್ರೀಗುರುವಿನಲ್ಲಿ ವಿಶ್ವಾಸವಿಟ್ಟು, ಶ್ರೀಗುರುಸ್ಥಾನದ ಸೇವೆಗೆ ಧನಸಹಾಯ ಮಾಡುತ್ತ, ಪ್ರಸಂಗವಶಾತ್ ಗುರುಸ್ಥಾನಕ್ಕೆ ಬರುತ್ತ-ಹೋಗುತ್ತ, ಶ್ರೀ ಗುರುಕೃಪೆಯಿಂದ ತಾವಿದ್ದ ಸ್ಥಾನಗಳಲ್ಲಿಯೇ ಧುರಂಧರರಾಗಿ ಅನ್ನದಾನಮಾಡಿ ಲೋಕಪ್ರಸಿದ್ಧರಾದರು! ಹೀಗೆ ದ್ವಾಪರಯುಗದಲ್ಲಿ ಶ್ರೀಗುರುವಿನ ಬಳಿಯಲ್ಲಿಯೂ, ಅತನಿಂದ ದೂರವಾಗಿಯೂ ಭಗವಾನರು ಪ್ರಸಿದ್ಧರಾಗುತ್ತಿರಲು, ಲಿಂಗೋಭಗವಾನರು ತಮ್ಮ ಕುಟುಂಬವು ದೇಹಬಿಟ್ಟ ಬಳಿಕ ದೇಹವಿಟ್ಟರು. ಅವರ ನಿರ್ಯಾಣಪ್ರಸಂಗವು ಸತ್ಪುರುಷರಿಗೆ ಒಪ್ಪುವಂತೆ ಅಪೂರ್ವವಾಗಿ ಆಯಿತೆಂಬದು ಬಹಳ ಸಂತೋಷದ ಸಂಗತಿಯು. ಈಭಗವಾನರಕಾಲದಲ್ಲಿಯೇ ಗಣಪ್ಪ, ಸೀನಪ್ಪ ಎಂಬವೆರಡು ಮಲ್ಲಾಡದ ಹುಡುಗರು ಬಂದು ಸೇವಕರಾಗಿ ನಿಂತು, ಈಗ ಸದ್ಯಕ್ಕೆ ಗಣಪಯ್ಯನವರು ಶ್ರೀನಿವಾಸಶಾಸ್ತ್ರಿಗಳು ಎಂದು ಕರಿಸಿಕೊಳ್ಳುತ್ತಲಿದ್ದಾರೆ.

ಲಿಂಗೋಭಗವಾನರು ದೇಹವಿಟ್ಟ ಬಳಿಕ ಶ್ರೀಗುರುಸ್ಥಾನದ ಕಾರ್ಯಗಳನ್ನು ನಡಿಸುವದಕ್ಕಾಗಿ, ಶ್ರೀ ನಾರಾಯಣಭಗವಾನರೂ, ಶ್ರೀಶಂಕರಭಗವಾನರೂ ಕರಿಸಲ್ಪಟ್ಟರು. ದ್ವಾಪರಯುಗದಲ್ಲಿ ಬಂದ ಈ ಭಗವಾನದ್ವಯರು, ಶ್ರೀಗುರುವು ನಿರ್ಯಾಣಹೊಂದುವವರೆಗೂ ವ್ಯವಹರಿಸಿದ ಸೇವಾಪದ್ಧತಿಯಲ್ಲಿ, ಆನಂದವನವನ್ನು ಜನರು ಸೇರುವಲ್ಲಿ, ಅವರ ನಿತ್ಯಕ್ರಮದಲ್ಲಿ, ಯೋಜನೆಯಲ್ಲಿ, ಹಿಂದೆ ಅಂಗಡಿಕಾರನ ಉದಾಹರಣೆಯಲ್ಲಿ ವಿವರಿಸಿದಂತೆ ಕಲಿಪ್ರವೇಶವಾಗಿ, ಆನಂದವನದವರಲ್ಲಿ ವಿವೇಕಭ್ರಷ್ಟತೆಯೂ ಭ್ರಾಂತಿಯೂ ತಲೆದೋರಿದ್ದರಿಂದ, ಕಲಿಕಾಲವನ್ನು ನಿರೀಕ್ಷಿಸುತ್ತಿದ್ದ ಶ್ರೀ ಶೇಷಾಚಲಸದ್ಗುರೂತ್ತಮನು, ಇನ್ನು ದೇಹಬಿಡುವಪ್ರಸಂಗವು ಒದಗಿದಹಾಗಾಯಿತೆಂದು ತಿಳಿದು, ಧರ್ಮಕ್ಕೆ ಬಾಧೆಬಾರದಂತೆ ದೇಹಬಿಟ್ಟನು! ಕಲಿಯುಗವು ತನ್ನ ಪ್ರಭಾವವನ್ನು ತೋರಿಸದೆಯೂ ಕೆಬಿಟ್ಟೀತ.? ಶ್ರೀ ಗುರುಗಳು ಆಗಾಗ್ಗೆ ನಮಗೆ— "ಮಹಾರಾಜಾ, ಪಾದಮುಟ್ಟಿ ನಮಸ್ಕಾರಮಾಡಿಸಿಕೊಳ್ಳಬೇಡಿರಿ; ಅದರಿಂದ ನಿಮ್ಮ ಇದ್ದಪುಣ್ಯವೂ ಕೊಚ್ಚಿಕೊಂಡುಹೋದೀತು" ಎಂದುಹೇಳುತ್ತಿದ್ದರು. ಆಮಹಾತ್ಮರು ಕಡೆಗೂ ಲೋಕಾಡಂಬರಕ್ಕೆ ಹೋಗಲಿಲ್ಲ. ಹತ್ತು ಮಂದಿಯಂತೆ, ಕೇವಲ ಗೃಹಸ್ಥಾ

"ಶ್ರೀ ಸದ್ಗುರುವಿನ ನಿರ್ಯಾಣೋನ್ಮುಖತೆ"ಯೆಂಬ ೬ನೆಯ ಪ್ರಕರಣದ ೫೫ರಿಂದ ೭೫ರ ವರೆಗಿನ ೨೦ ಪುಟಗಳನ್ನು ಹಲವು ಕಾರಣಗಳಿಂದ ತೆಗೆಯಬೇಕಾಯಿತು.

ಶ್ರವ್ಯಗಳಂತೆ ಇದ್ದರು. ಅವರು—“ಮಹಾರಾಜಾ, ಏನು ಆಗುವದು ತಾನೇ ಆಗಬೇಕಲ್ಲದೆ, ನಾವಾಗಿ ಏನೂ ಮಾಡಬಾರದು.” ಎಂದು ಬಾರಿಬಾರಿಗೆ ಅನ್ನುತ್ತಿದ್ದರು। ಮಾಯೆ ಪ್ರಕಟವಾದ್ದರಿಂದಲೇ ವಸ್ತುವು ಗುಪ್ತವಾಯಿತು।।

## ೭ನೆಯ ಪ್ರಕರಣ.

## ಶ್ರೀ ಗುರುವಿನ ಶರಣ್ಯ-ಪ್ರದರ್ಶನವು.

**देहत्यागिता कीर्ति मागे उरावी ॥ (रामदास)**

ಪ್ರಿಯವಾಚಕರೇ, ಹಿಂದಿನ ಎರಡು ಪ್ರಕರಣಗಳಲ್ಲಿ ಬರೆದಿರುವ ವಿಷಯವನ್ನು ಓದಿ, ಅಗ್ರಹಾರಸ್ಥರಾದ ನಮ್ಮೆಲ್ಲರ ವಿಷಯವಾಗಿ ನಿಮ್ಮಲ್ಲಿ ಒಂದುಬಗೆಯ ಶಂಕೆಯೂ, ಅನಾದರವೂ ಉಂಟಾಗಿರಬಹುದು; ಮತ್ತು ಇನ್ನು ಮೇಲೆ ಅಗ್ರಹಾರದಲ್ಲಿ ಮೊದಲಿನಂತೆ ಸೇವಾಧರ್ಮವೂ, ಪಾಠಶಾಲೆ ಮೊದಲಾದ ಸತ್ಕಾರ್ಯಗಳೂ ನಡೆಯುವವೋ ಇಲ್ಲವೋ, ಎಂದು ನೀವು ಸಂದೇಹಪಡುತ್ತಿರಬಹುದು; ಆದರೆ ನಿಮ್ಮಲ್ಲಿ ಶಂಕೆ, ಅನಾದರ, ಸಂದೇಹ ಇವು ಉತ್ಪನ್ನವಾಗಬೇಕೆಂದು ಚಂದ್ರಿಕೆಯು ತನ್ನ ಆಶ್ರಯಸ್ಥಾನವಾದ ಆನಂದವನದೊಳಗಿನವರ ದೋಷಗಳನ್ನು ಬೈಲಿಗಿಟ್ಟಿರುವದಿಲ್ಲ; ಶ್ರೀ ಶೇಷಾಚಲ ಸದ್ಗುರುವು ದೇಹಬಿಡುವಾಗ—“ಮಹಾರಾಜಾ, ಈಗಿನ ಹತ್ತುಪಾಲು ಹೆಚ್ಚು ಅಗ್ರಹಾರದಲ್ಲಿ ಸೇವಾಧರ್ಮವೂ, ಸತ್ಕಾರ್ಯಗಳೂ ನಡೆಯುವವು; ಆದರೆ ನೀವು ಧರ್ಮವನ್ನು ಮಾತ್ರ ಕಾಯಿರಿ” ಎಂದು ಹೇಳಿದ್ದನ್ನು ಪೂರ್ಣವಾಗಿ ನಂಬಿ, ಅದಕ್ಕೆ ಅನುಕೂಲವಾಗಿ ಅಗ್ರಹಾರಸ್ಥರು ವರ್ತಿಸಲೆಂದು ಅವರ ದೋಷಗಳನ್ನು ಬೈಲಿಗಿಟ್ಟಿರುವಳು. ಚಂದ್ರಿಕೆಯು ಅಗ್ರಹಾರದವರ ಗುಣಗಳನ್ನು ವರ್ಣಿಸುವದು ಅಷ್ಟು ಅವಶ್ಯವಲ್ಲ. “आचारः परमो धर्मः” ಎಂಬ ಮನುವಿನ ಉಕ್ತಿಯಂತೆ, ಪರಿಶುದ್ಧ ಆಚರಣೆಯು ಶ್ರೇಷ್ಠಧರ್ಮವಾಗಿದ್ದು, ಧರ್ಮವಿದ್ದಲ್ಲಿ ದೇವರಿರುವದರಿಂದ, ಆನಂದವನಸ್ಥರು ತಮ್ಮ ಅಭಿಮಾನಮೂಲವಾದ ದೋಷಗಳನ್ನು ಕಳೆಚಿಬಿಟ್ಟು, ಅವರು ಈಗಿನದಕ್ಕಿಂತಲೂ ಹೆಚ್ಚು ಆಚಾರ-ವಿಚಾರಸಂಪನ್ನರೂ, ತಪಸ್ವಿಗಳೂ, ನಿಸ್ಪೃಹರೂ ಆಗಿ, ಶ್ರೀಗುರ್ವನುಗ್ರಹಕ್ಕೆ ಪಾತ್ರರಾಗುವಂತೆ ಅವರನ್ನು ಎಚ್ಚರಗೊಳಿಸುವದು ಚಂದ್ರಿಕೆಗೆ ಅವಶ್ಯವಾಗಿರುವದು. ಹಾಗಾಗದಿದ್ದರೆ, ಶ್ರೀಸದ್ಗುರುವು ಹೇಳಿದಂತೆ ಈಗಿನದಕ್ಕಿಂತ ಹತ್ತುಪಟ್ಟು

ಉಜ್ವಲವಾಗಿ ಸತ್ಕಾರ್ಯ ಮಾಡಲು ಅವರು ಯಾಕೆ ಸಮರ್ಥರಾದಾರು? ಅಗ್ರಹಾರದವರು ತಮ್ಮಲ್ಲಿಯ ದೋಷಗಳನ್ನು ಮುಚ್ಚಿಕೊಳ್ಳತಕ್ಕವರಲ್ಲ; ಅವನ್ನು ಬೈಲಿಗಿಟ್ಟು ತಮ್ಮಲ್ಲಿಯ ಗುಣಸಮುಚ್ಚಯದಿಂದ ಲೋಕಾದರಣೀಯರಾಗಿ, ಲೋಕಾಶ್ರಯ ಪಡೆದು, ಲೋಕಸೇವೆಯನ್ನು ಮಾಡಿ ಆನಂದಪಡತಕ್ಕವರು! ಮುಂದಿ ಕಿವಿಹಿಂಡುವದಕ್ಕಿಂತ ಮೊದಲೇ ತಮ್ಮ ತಪ್ಪಿಗಾಗಿ ತಮ್ಮ ಕಿವಿಹಿಂಡಿಕೊಳ್ಳುವಷ್ಟು ಸತ್ವವನ್ನು ಶ್ರೀ ಶೇಷಾಚಲ ಸದ್ಗುರುವು ಅವರಲ್ಲಿಟ್ಟಿದ್ದಕ್ಕಾಗಿ ನೀವು ಸಮಾಧಾನಪಟ್ಟು ಅವರಲ್ಲಿ ನಂಬಿಗೆಯನ್ನಿಡತಕ್ಕದ್ದು. ಬೇಕಾದವರು ಆನಂದವನಾಗ್ರಹಾರವನ್ನು ದೂರಿಂದ ನೋಡಲಿ, ಸನಿಯಕ್ಕೆ ಬಂದು ನೋಡಲಿ, ಅದಕ್ಕೆ ಪೆಟ್ಟು ಹಾಕಿ ನೋಡಲಿ, ಅದನ್ನು ಕಾಸಿನೋಡಲಿ, ಅದಕ್ಕೆ ಸಲಾಕಿ ಕೊಡೆದು ನೋಡಲಿ, ಚೊಕ್ಕ ಚಿನ್ನದಂತೆ ಅದು ನಿರ್ದೋಷವಾಗಬೇಕೆಂದು ಶ್ರೀ ಶೇಷಾಚಲಸದ್ಗುರುನಾಥರ ಶಿಷ್ಯರು ಯತ್ನಿಸತೊಡಗಿರುವರು. ಶ್ರೀ ಗುರುವಿನ ಕರುಣಾಯ ಆತನು ಹೇಳಿದಂತೆ ಸಮಾಜವೇ ಗುರುವಾಗಿರುವದರಿಂದ, ಆ ಗುರುಸ್ವರೂಪವಾದ ಸಮಾಜವು ನಮ್ಮನ್ನು ತಿದ್ದಲೆಂತಲೂ, ತಮ್ಮ ಉಜ್ವಲಧರ್ಮಕಾರ್ಯಕ್ಕೆ ಆ ಸಮಾಜವು ಈಗಿನದಕ್ಕಿಂತ ಹೆಚ್ಚು ಸಹಾಯಮಾಡಿ ಪುಣ್ಯಭಾಗಿಯಾಗಲೆಂತಲೂ, ಆ ಶಿಷ್ಯರು ತಮ್ಮ ಪತ್ರಿಕೆಯಾದ ಚಂದ್ರಿಕೆಯ ಮುಖಾಂತರ ಇಷ್ಟು ವಿಸ್ತೃತವಾಗಿ ನಿರ್ಯಾಣಮಹೋತ್ಸವಪ್ರಸಂಗವನ್ನು ಬರೆಸಿರುತ್ತಾರೆ. "**निंदकाचे घर असावे सेजार**" ಎಂಬ ತುಕಾರಾಮಸಾಧುವಿನ ಉಕ್ತಿಯನ್ನು ಆನಂದವನಸ್ಥರಾದ ಶಿಷ್ಯರು ಬಹು ಚೆನ್ನಾಗಿ ಪಾಲಿಸಿರುವರು. ತಮಗೆ, ತಮಗಿಂತ ಹೆಚ್ಚು ಸಮೀಪದವರು ಅನ್ಯರಿರುವ ಸಂಭವವಿಲ್ಲದ್ದರಿಂದ, ತಮ್ಮ ನಿಂದೆಯನ್ನು ತಾವೇ ಮಾಡಿಕೊಂಡಿದ್ದಾರೆ. ಅವರಿಗೆ ನಿಂದಕರ ಮನೆಯು ಸಮೀಪದಲ್ಲಿರುವ ಅವಶ್ಯವಿಲ್ಲ; ಇದ್ದರೆ ಬಾಧಕವೂ ಅಲ್ಲ. ಅಗ್ರಹಾರದವರು ಸತ್ವಸ್ಥರಾಗಿ, ಗುರ್ವಾಜ್ಞಾಪಾಲಕರಾಗಿ, ಗುರುಸತ್ಯನಿಷ್ಠರಾಗಿ, ಗುರುವಾಕ್ಯಪ್ರಮಾಣರಾಗಿ ಇರುವತನಕ, ಅವರು ತಮ್ಮ ದೋಷಗಳನ್ನು ತಾವು ಬೈಲಿಗಿಡಲಿಕ್ಕೆ ಯಾಕೆ ಹೆದರುವರು? ಈ ನಿಸ್ಪೃಹ ಶಿಷ್ಯರು ಸಲಿಗೆಯಿಂದಾಗಲಿ, ಬಲುಮೆಯಿಂದಾಗಲಿ ಸಮಾಜದ ಕೈಹಿಡಿದು ಅದರ ಸಹಾಯವನ್ನು ಪಡೆದು ಸಮಾಜಸೇವೆಯನ್ನು ನಿರ್ದೋಷವಾಗಿ ಮಾಡ್ಯಾರು!

ವಾಚಕರಿಗೆ ಹೇಳುವ ತಾತ್ಪರ್ಯವಿಷ್ಟೇ, ಚಂದ್ರಿಕೆಯು ಬಹುವಿಚಾರ ಪೂರ್ವಕವಾಗಿ ಪ್ರಕಟಿಸಿರುವ ಈ ವಿಸ್ತೃತಲೇಖವು ಮಹತ್ವದ್ದಾಗಿದೆ, ವಿಚಾರಣೀಯವಾಗಿದೆ, ಪರಿಣಾಮಕಾರಿಯಾಗಿದೆ, ಮಾರ್ಗದರ್ಶಕವಾಗಿದೆ; ಪ್ರಾಗತಿಕಲೋಕಾತ್ಮಕವೂ

ಆಗಿದೆ; ಆದ್ದರಿಂದ ಸಂಪೂರ್ಣ ಓದಿ, ಇದರ ವಿಷಯವನ್ನು ಆಕಲನಮಾಡಿ, ಒಮ್ಮೆ ಓದಿ ಆಕಲನವಾಗದಿದ್ದರೆ, ಮತ್ತೊಮ್ಮೆ ಓದಿ, ಆಮೇಲೆ ಭಾವಿಸುವದನ್ನು ಭಾವಿಸಿಕೊಳ್ಳಬೇಕು. ವಾಚಕರಿಗೆ ಇದಕ್ಕಿಂತ ಹೆಚ್ಚಿಗೆ ಹೇಳಬೇಕಾಗಿಲ್ಲದೆ ಚಂದ್ರಿಕೆಯು ಪ್ರಕೃತವಿಷಯವನ್ನು ಅನುಸರಿಸುವದು.

ಶ್ರೀಗುರುಗಳು ನೇರ ನೇರವಾಗಿ "ಈಗೇನು ನೋಡುವಿರೋ ಮಕ್ಕಳಿರಾ, ಶರಣರ ಪರೀಕ್ಷೆಯನ್ನು ಮರಣಕಾಲದಲ್ಲಿ ಮಾಡಿರಿ" ಎಂದು ಹೇಳುತ್ತಿದ್ದರು. ತಮಗೆ ಬೇಕಾದದ್ದು ಮಾಡುವ ಸಾಮರ್ಥ್ಯವಿದ್ದರೂ, ಗುರುಗಳು ಬೈಲಾಡಂಬರಕ್ಕಾಗಿ ಯಾವ ದೈವಿಕ ಕೃತಿಗಳನ್ನೂ ತಾವಾಗಿ ತೋರಿಸಲಿಲ್ಲ. ಇದಕ್ಕೆ ಕಾರಣವುಂಟು. ಸೇವಕರು ಒಡೆಯನ ಮುಂದೆ ಇಲ್ಲದ ಪೌರುಷ ತೋರಿಸುವದು ಯೋಗ್ಯವೇ? ಆದರಂತೆ, ಲೋಕಸೇವಕನಾದ ಸದ್ಗುರುವು, ತನ್ನ ಅಲೌಕಿಕ ಸಾಮರ್ಥ್ಯವನ್ನು, ತನಗೆ ಸೇವ್ಯವಾಗಿರುವ ಜಗತ್ತಿನ ಮುಂದೆ ಎಂದೂ ಬುದ್ಧಿಪೂರ್ವಕ ತೋರಿಸಲಿಲ್ಲ! ಮಾರುತಿಯು, ತನ್ನ ಸ್ವಾಮಿಯಾದ ಶ್ರೀರಾಮಚಂದ್ರನ ಕಾರ್ಯವನ್ನು ಕೈಕೊಂಡು ಮಾಡುವಾಗ, ಆತನ ಸಮುದ್ರೋಲ್ಲಂಘನಾದಿ ಮಹಾ ಮಹಾದೈವಿಕಕೃತ್ಯಗಳು ತಾವಾಗಿ ಪ್ರಕಟವಾದಂತೆ, ಶ್ರೀ ಶೇಷಾಚಲ ಸದ್ಗುರುರೂಪನಾದ ಲೋಕದಾಸನು, ಲೋಕೋದ್ಧಾರರೂಪವಾದ ತನ್ನ ಲೋಕಸೇವೆಯನ್ನು ಕೈಕೊಂಡು ಮಾಡುತ್ತಿರುವಾಗ, ಹಲವು ದೈವಿಕಕೃತಿಗಳು ತಾವಾಗಿ ಪ್ರಕಟವಾದವು. ಅವನ್ನೆಲ್ಲ, ಶ್ರೀ ಸದ್ಗುರುಗಳ ಸಾದ್ಯಂತವಾದ ವಿಸ್ತೃತಚರಿತ್ರವು ಸಿದ್ಧವಾದ ಬಳಿಕ ವಾಚಕರು ನೋಡಿಕೊಳ್ಳಬಹುದು. ಸದ್ಯಕ್ಕೆ ಶ್ರೀ ಗುರುವು ಪ್ರಾಯೋಪವೇಶನ ಬುದ್ಧಿಯುಳ್ಳವನಾಗಿ, ಏಳು ತಿಂಗಳು ಬೇನೆಯನ್ನು ಅನುಭವಿಸಿದಾಗ ತಾನಾಗಿ ಒದಗಿದ ಆತನ ಒಂದೆರಡು ದೈವಿಕಕೃತಿಗಳನ್ನು ಇಲ್ಲಿ ಉಲ್ಲೇಖಿಸುವೆವು; ಯಾಕಂದರೆ, ಕಲಿಯುಗದಿಂದ ಭ್ರಷ್ಟರಾದ ನಮ್ಮೆಲ್ಲರಿಗೆ ಕಟ್ಟಕಡೆಗೆ ತನ್ನ ಅಲೌಕಿಕಸಾಮರ್ಥ್ಯದ ಕುರುಹನ್ನು ತೋರಿಸಿ ಧರ್ಮಜಾಗೃತಿಯನ್ನುಂಟುಮಾಡದೆ ಹೋಗುವದು ಆತನ ಧರ್ಮಕ್ಕೆ ಸಮ್ಮತವಾದದ್ದಲ್ಲ. "ದೊಡ್ಡವರು ತಾವಾಗಿ ಬೈಲಿಗೆ ಬಿದ್ದ ಬಳಿಕ ಭೂಮಿಯಲ್ಲಿ ನಿಲ್ಲುವದಿಲ್ಲ"ವೆಂಬ ಬಗ್ಗೆ ಎಷ್ಟೋ ಉದಾಹರಣಗಳನ್ನು ಗುರುಗಳು ಹೇಳುತ್ತಿದ್ದರು. ಇಂಥವರು ಕಡೆಗೆ ಯಾವ ಅಲೌಕಿಕಕೃತಿಯ ಅನುಭವ ಮಾಡಿಕೊಡುವರೆಂದು ನಾವೆಲ್ಲರು ಹಾದಿಯನ್ನು ನೋಡಹತ್ತಿದೆವು. ಶ್ರೀ ಗುರುವು ಅಲೌಕಿಕ ರೀತಿಯಿಂದ ಏಳು ತಿಂಗಳು ಬೇನೆಯನ್ನನುಭವಿಸಿ, ಎಣ್ಣೆತೀರಿ ದೀಪವು ಕ್ರಮವಾಗಿ ಸಣ್ಣಾಗುತ್ತ ಸಣ್ಣಾಗುತ್ತ ತಾನಾಗಿ ಶಾಂತವಾಗುವಂತೆ, ಶ್ರೀ ಗುರುವು

ಒಂದುದಿನ ತನ್ನ ದೇಹವು ತಾನಾಗಿ ಉರುಳಿಬೀಳುವಂತೆ ಪಡಿಸಿದ್ದು ಮೂಢರಾದ ನಮಗೆ ಅಲೌಕಿಕವಾಗಿ ತೋರಲಿಲ್ಲ! ಹೆಚ್ಚೇನು ಮಾಘಮಾಸದಿಂದ ಅನ್ನವು ಕಟ್ಟುತ್ತ ಕಟ್ಟುತ್ತ ಬಂದು, ಅತ್ಯಲ್ಪ ಅನ್ನಗ್ರಹಣದಿಂದ ಎರಡು ತಿಂಗಳವರೆಗೂ, ಅದರಂತೆ, ಕ್ಷೀರ ನಿರಶನದಿಂದ, ಆದೇಕೆ ಒಂದು ಗುಟುಕು ನೀರು ಸಹ ಹೊಟ್ಟೆಯಲ್ಲಿ ಉಳಿಯದೆಯಿದ್ದಾಗ ಸರಾಸರಿ ಒಂದುವರೆತಿಂಗಳವರೆಗೂ ದೇಹಧಾರಣಮಾಡಿ, ಪ್ರಾಣಿಯು ಲೇಶವಾದರೂ ಕುಗ್ಗದೆ, ಪ್ರಸಂಗವಶಾತ್ ಅರ್ಧತಾಸು-ತಾಸುಗಳ ವರೆಗೆ ಬೇನೆಯಿಲ್ಲದವರಂತೆ ಕುಳಿತುಕೊಂಡು, ತಮ್ಮ ಸ್ವಾಭಾವಿಕವಾದ ಮುಖಕಾಂತಿಯು ಅಚ್ಚಳಿಯದೆಯಿರಲು, ಬೋಧಮಾಡುವದು ದೈವೀಶಕ್ತಿಯಲ್ಲದೆ ಮತ್ತೇನು? ಇಂಥ ಕ್ಷೀಣಸ್ಥಿತಿಯಲ್ಲಿ, ಶ್ರೀಗುರುಗಳು ಇನ್ನು ತಾಸೆರಡುತಾಸಿಗೆ ದೇಹಬಿಡುವಾಗ ಎದ್ದು ಕುಳಿತು ಸಮಯೋಚಿತ ಬೋಧಮಾಡಿದರು. ಮುಂದೆ ಮಲಗಿಕೊಂಡು ದಿನದಂತೆ ಆರತಿಯನ್ನು ಮಾಡಿಸಿಕೊಂಡರು! ಇಷ್ಟು ದಿವಸ ಹಲವರ ಮರಣಕಾಲವನ್ನು ನಿರೀಕ್ಷಿಸಿದ ನಾವು, ಇದು ಗುರುಗಳ ದೈವಿಕ ಸಾಮರ್ಥ್ಯವೆಂದು ತಿಳಕೊಳ್ಳಬಾರದೇನು? ಆದರೆ ಇದು ಶ್ರೀ ಗುರುಗಳ ನಿತ್ಯಕ್ರಮವಾದದ್ದರಿಂದ, ಅಲೌಕಿಕತೆಯ ಭಾವನೆಯು ಮೂಢರಾದ ನಮ್ಮಲ್ಲಿ ಆಗ ಹುಟ್ಟಲಿಲ್ಲ!

ಪ್ರಾಣಿಗಳಿಗೆ ಮರಣಕ್ಕಿಂತ ಹೆಚ್ಚಿನ ಭಯವಿಲ್ಲವಷ್ಟೆ? ಆದರೆ ಶ್ರೀ ಶೇಷಾಚಲಸದ್ಗುರುವು, ಧರ್ಮಶಾಲೆಯಲ್ಲಿ ಗಂಟು ಕಟ್ಟಿಕೊಂಡು ಮಾರ್ಗ ನಿರೀಕ್ಷಿಸುತ್ತ ಕುಳಿತ ಪಾಂಥಸ್ಥನಂತೆ, ತನ್ನ ನಿರ್ಯಾಣಕಾಲವನ್ನು ನಿರೀಕ್ಷಿಸುತ್ತ, ತಾನು ಇಂಥ ದಿವಸವೇ ದೇಹಬಿಡುತ್ತೇನೆಂದು ಹೇಳಿಬಿಟ್ಟರು, ಮರಣಕಾಲವು ಸರಾಸರಿ ಮೂರು ತಿಂಗಳು ಇರುತ್ತಲೆ ತನ್ನ ಔರ್ಧ್ವದೇಹಿಕ ಕರ್ಮಗಳ ಸೌರಣೆಯನ್ನು, ಒಬ್ಬ ಸೋಸಿನಮನುಷ್ಯನು ತನ್ನ ಲಗ್ನ-ಮುಹೂರ್ತಗಳ ಸೌರಣೆಮಾಡುವಂತೆ ಮಾಡಹತ್ತಿದನು. ತಮ್ಮ ನಿರ್ಯಾಣಕಾಲದಲ್ಲಿ ಒಂದು ಕಣ್ಣೀರು ಉದುರಿಸಿದವರು ನರಕಕ್ಕೆ ಗುರಿಯಾಗುವರೆಂತಲೂ, ಮಂಗಲಕಾರ್ಯಬದಗಿದಂತೆ ಆನಂದದಿಂದ ನರ್ತನಮಾಡುತ್ತ, ಸೇವಾತತ್ಪರರಾಗುವವರು ಧನ್ಯರೆಂತಲೂ ಬಾರಿಬಾರಿಗೂ ಹೇಳುತ್ತಲಿದ್ದರು. ಅವರು—"ಮಹಾರಾಜಾ, ದೇಹವುನಾಶವಂತವು ದೊಡ್ಡವರು ಇರುವತನಕ ನಿಮ್ಮ ಹಿತ್ತಲದ ಹೂವಿನಗಿಡವಾಗುವರು. ದೊಡ್ಡವರ ಮಾತು ದುರ್ಲಕ್ಷ ಮಾಡಬೇಡಿರಿ. ದೊಡ್ಡವರಂತೆನೀವು ಆದ ಹೊರತು, ದೊಡ್ಡವರ ಗುರುತು ನಿಮಗೆ ಆಗುವದಿಲ್ಲ. "ಕಳ್ಳನಹೆಜ್ಜೆ ಕಳ್ಳನೇ ಬಲ್ಲನೆ"ನ್ನುವಂತೆ, ದೊಡ್ಡವರ ಧರ್ಮವನ್ನು ದೊಡ್ಡವರೇ ತಿಳಿಯುವರು. ನೀವು ತಪಗಟ್ಟಲೆ ಒರಿಯ. ಸತ್ಸಂಗಮಾಡಿದಿರಿ; ಆದರೆ ನಿಸ್ಸಂಗರಾ

ಗಲಿಲ್ಲ; ನಿಮ್ಮಲ್ಲಿ ವಿವೇಕವು ಹುಟ್ಟಲಿಲ್ಲ. ಮಹಾರಾಜಾ, ಇಂಥ ನೀವು ಧರ್ಮವನ್ನು ಹ್ಯಾಗೆ ಕಾಯುವಿರಿ? ಒಂದಾದರೂ ಮೂರ್ತಿಯಾದೀರೆಂದು ಸ್ವಾಮಿಯು ನೋಡಿದನು; ಆದರೆ ಹಾಗಾಗಲಿಲ್ಲ. ನಿಮ್ಮ ಸಂಸಾರ ವಾಸನೆಯುಳಿಯಲಿಲ್ಲ, ದೇಹಾಭಿಮಾನವು ಹೋಗಲಿಲ್ಲ; ಅಂದಬಳಿಕ ಸತ್ಸಮಾಗಮವು ಹ್ಯಾಗಾಗುವದು ಮಹಾರಾಜಾ! ಸತ್ಪುರುಷರು ಮಾತ್ರ ಜನ್ಮತಾಳಬೇಕಾಗುವದು. ಈ ದೇಹವು ಮೋಕ್ಷವನ್ನು ಬೇಡುವದಿಲ್ಲ; ಕೃತಾರ್ಥನಾಗಬೇಕೆಂದು ಇಚ್ಛಿಸುವದಿಲ್ಲ; ಸ್ವರ್ಗವನ್ನು ಬಯಸುವದಿಲ್ಲ; ಹೀಗೆಯೇ ಬೇಕಾದಷ್ಟು ಸಾರೆ ಹುಟ್ಟಿಬರಲೊಲ್ಲದೇಕೆ." ಎಂದು ಬೋಧಿಸುತ್ತ, ಮಹಾಜ್ಞಾನಿಗಳಾದ ತಾವು ಸ್ವತಃ ನಿಸ್ಪೃಹರಾಗಿದ್ದರೂ, ತಮ್ಮ ವರ್ಣಾಶ್ರಮ ಧರ್ಮಕ್ಕನುಸರಿಸಿ, ಲೋಕಶಿಕ್ಷಣಾರ್ಥವಾಗಿ ಸುಕರ್ಮಠರಂತೆ— "ಬ್ರಾಹ್ಮಣರಿಗೆ ಹೀಗೆ ಹೀಗೆ, ಇಂಥ ಇಂಥ, ಇಷ್ಟು ಗೋದಾನಗಳನ್ನು ಕೊಡಬೇಕು; ಚಿತ್ರಶಾಖೆಯು ಇಷ್ಟು ಇಷ್ಟು ಬ್ರಾಹ್ಮಣರನ್ನು ಪೂರ್ವಭುಕ್ತಕ್ಕೆ ಕೂಡ್ರಿಸಬೇಕು; ಅವರ ಸತ್ಕಾರದ ಪದಾರ್ಥಗಳು ಇಂಥ ಇಂಥವಿರಬೇಕು; ಅವರಿಗೆ ಇಷ್ಟು ಇಷ್ಟು ದಕ್ಷಿಣೆಗಳನ್ನು ಕೊಡಬೇಕು. ಬ್ರಾಹ್ಮಣರಿಗೆ ಇಂಥ ಇಂಥ ದಾನಗಳನ್ನು ಕೊಡಬೇಕು. ಪ್ರಕಾರ ಸಮಾರಾಧನೆಯ ದಿವಸ ಚಿತ್ರಶಾಖೆಯು ಬ್ರಾಹ್ಮಣರನ್ನು ಹೀಗೆ ಹೀಗೆ ದಕ್ಷಿಣಾಸಂಭಾವನೆಗಳಿಂದ ಸಂತೋಷಗೊಳಿಸಬೇಕು. ಜಾತಿಭೇದವಿಡದೆ, ಭೋಜನ-ದಕ್ಷಿಣೆಗಳಿಂದ ಮನುಷ್ಯಮಾತ್ರರನ್ನು ಹೀಗೆ ಹೀಗೆ ತೃಪ್ತಿಗೊಳಿಸಬೇಕು." ಇತ್ಯಾದಿ ಕೌತುಕಗಳನ್ನು ಯಾವಾಗಲೂ ಆಡುತ್ತಿದ್ದರು. "ಮಹಾರಾಜಾ, ಕಲಿಯುಗದಲ್ಲಿ ನಿಜವಾದ ಬ್ರಾಹ್ಮಣಸೇವೆಯು ದುರ್ಲಭವು. ಜಗತ್ತು ಮಾಡುವ ಸೇವೆಯೆಲ್ಲ ಲೌಕಿಕವು. ಸ್ವಾಮಿಯ ಔರ್ಧ್ವದೇಹಿಕ ಕರ್ಮೋಚಿತವಾದ ಸಾಮಾನುಗಳನ್ನು ಈ ದೇಹವಿರುತ್ತಿರಲು ಆತನು ಸಿದ್ಧಗೊಳಿಸಿಕೊಡುವನು. ಎಂದು ಹೇಳಿ, ದಕ್ಷಿಣೆಯ ೧೫೦೦ ರೂಪಾಯಿಗಳನ್ನು, ಬೇರೆ ಎಲ್ಲ ಸಾಮಾನುಗಳನ್ನೂ ಸಿದ್ಧಪಡಿಸಿದರು. ಇದನ್ನಾದರೂ ನಾವು ಅಲೌಕಿಕಕೃತಿಯೆಂದು ಭಾವಿಸಿ ತೃಪ್ತಿಪಡಬೇಕಾಗಿತ್ತು; ಆದರೆ ಹಾಗಾಗಲಿಲ್ಲ. ಇದೊಂದು ಶ್ರೀ ಸ್ವಾಮಿಯ ಚಾಳಿಯೆಂದು ತಿಳಿದು, ಅಗದುರ್ಲಕ್ಷಿಸಿ, ಆತನು ಅಲೌಕಿಕ ಚಮತ್ಕಾರವನ್ನೇನು ತೋರಿಸುವನೆಂದು ಎದುರು ನೋಡಹತ್ತಿದೆವು.

ಶ್ರೀಸ್ವಾಮಿಯ ಇಚ್ಛೆಯೆಂದು ತಿಳಿದು, ಪ್ರೇಸಿನವರು ವರ್ಷ ಶ್ರಾವಣ ಸೋಮವಾರಗಳನ್ನು ಮಾಡುತ್ತ ಬಂದಿದ್ದರು. ಈ ಸಾರೆ ಶ್ರೀಸ್ವಾಮಿಯವರು ವ್ಯಾಧಿಪೀಡಿತರಾಗಿ ಅತ್ಯವಸ್ಥೆಯಲ್ಲಿದ್ದಂತೆಯಿದ್ದರೂ ಕಡೆಯ ಸೇವೆಯು ಬಿಡಬಾರದೆಂದು ಮೊದಲನೆಯ

ಸೋಮವಾರದ ದಿವಸ ಪ್ರೇಸಿನ ನೌಕರರೆಲ್ಲರು ಕೂಡಿ ಅಗ್ರಹಾರದ ಜನರ ಮಟ್ಟಿಗೆ ಸಂತರ್ಪಣ ಮಾಡಿದರು. ಇನ್ನು ಮುಂದಿನ ಸೋಮವಾರ ಶ್ರೀಸ್ವಾಮಿಯವರು ಇರುವರೋ ಇಲ್ಲವೋ ಎಂದು ತಿಳಿದು, ಎರಡನೆಯ ಸೋಮವಾರ ಊರೊಳಗೆಲ್ಲ ಆಮಂತ್ರಣ ಹೇಳಿ ಪ್ರೇಸಿನ ಖರ್ಚಿನಿಂದ ಸಂತರ್ಪಣ ಮಾಡಿದರು. ಅಂದು ಸ್ವಲ್ಪ ದುರ್ಲಕ್ಷವಾದದ್ದರಿಂದ ಪ್ರಸ್ತವು ಅಷ್ಟು ಸಮಾಧಾನಕರವಾಗಿ ಆಗಲಿಲ್ಲ. ಇದರಿಂದ ಗಳಗನಾಥ ಇವರ ಮನಸ್ಸಿಗೆ ಸಮಾಧಾನವಾಗದೆ, ಅವರು ಅಭಿಮಾನದಿಂದ ಆಗಡಿಯ ಊರಿಗೂ ಕನವಳ್ಳಿಯ ಊರಿಗೂ ಹೇಳಿ ೩ನೆಯ ಸೋಮವಾರವನ್ನು ಪ್ರೇಸಿನ ಖರ್ಚಿನಿಂದ ಮಾಡಬೇಕೆಂದು ಮಾಡಿದರು. ಅವರು ಒಂದು ದಿನ ರಾತ್ರಿ ಶ್ರೀಗುರುಗಳ ಬಳಿಯಲ್ಲಿ ಕುಳಿತಿರಲು, ಶ್ರೀಗುರುಗಳು ಎದ್ದು ಕುಳಿತು ಗಳಗನಾಥ ಇವರನ್ನು ಕರೆದು, ಎಲ್ಲ ಗೊತ್ತಿದ್ದವರಂತೆ— ಮಹಾರಾಜಾ, ಊರಪ್ರಸ್ತ ಮಾಡುವದು ಬಹಳ ಕಷ್ಟ. ದೇಹದಂಡನ ಮಾಡಬೇಕು, ದುಡ್ಡು ಖರ್ಚು ಮಾಡಬೇಕು; ಅಗ್ರಹಾರದ ಮಟ್ಟಿಗೆ ಮಾಡಿದರೆ ತ್ರಾಸವಿಲ್ಲ. ಅನ್ನಲು, ಗಳಗನಾಥ ಇವರು, ನಾಳಿನ ಸೋಮವಾರ ಮತ್ತೆ ಊರಿಗೆಲ್ಲ ಹೇಳಿ ಪ್ರಸ್ತ ಮಾಡಬೇಕೆಂದು ಮಾಡಿದೆ, ಅನ್ನಲು, ಆನಂದದಿಂದ ಶ್ರೀಗುರುಗಳ ಕಂಠವು ಬಿಗಿದಂತೆ ಆಗಿ ಅವರು ಗಳಗನಾಥ ಇವರನ್ನು ಕರೆದು— ಬೇಡ ಮಹಾರಾಜಾ, ಅಗ್ರಹಾರದ ಮಟ್ಟಿಗೆ ಮಾಡಿರಿ, ಎಂದರು. ಆದಕ್ಕೆ ಗಳಗನಾಥ ಇವರು— ಬರಬರುತ್ತ ಅಧಿಕವಾಗಬೇಕು, ಕಡಿಮೆಯಾದರೆ ಹ್ಯಾಗೆ? ಅನ್ನಲು, ಗುರುಗಳು— ಹಾಗೆ ತಿಳಿಯಬಾರದು ಮಹಾರಾಜಾ, ಭಾವನೆಯಿಂದ ಮಾಡಿಸಿದ ಒಬ್ಬ ಬ್ರಾಹ್ಮಣಭೋಜನವು, ನೂರು ಮಂದಿ ಬ್ರಾಹ್ಮಣಭೋಜನಕ್ಕೆ ಸರಿಯಾಗುವದು, ಎಂದು ಹೇಳಿದರು; ಆದರೆ ದುರಭಿಮಾನಸ್ವಭಾವದ ಗಳಗನಾಥ ಇವರು ಕೇಳದೆ ೩ನೆಯ ಸೋಮವಾರ ಊರಪ್ರಸ್ತಮಾಡಲಿಕ್ಕೆ ಹವಣಿಸಿದರು. ಆದಿತ್ಯವಾರ ರಾತ್ರಿ ಪ್ರಸ್ತದ ಉಂಡಿಗಳನ್ನು ಮಾಡುತ್ತಿರುವಾಗ, ಸುಮಾರು ೪-೪॥ ತಾಸು ರಾತ್ರಿಯಾಗಿರಲು, ಶ್ರೀಗುರುಗಳ ಸೇವೆಯಿಂದಿರುವ ಶ್ರೀ. ಕು. ಸೌ. ಮಾತೃಶ್ರೀ ವೆಂಕೂಬಾಯಿಯವರಿಗೆ ಒಮ್ಮೆಲೆ ಪಿತ್ತವಿಕಾರವಾದಂತಾಗಿ, ಮಾತು ಬಂದಾಗಿ ಬೆಳತನಕ ಅವರು ಶ್ರಮಪಟ್ಟರು. ಇದರಿಂದ ಗಳಗನಾಥ ಇವರ ಮನಸ್ಸಿಗೆ ನೊಣ ಕಡಿದ ಹಾಗಾಯಿತು. ಶ್ರೀಗುರುಗಳ ಆಜ್ಞೆ ಮೀರಿ ಪ್ರಸ್ತದ ಕಾರ್ಯಕ್ಕೆ ಹಮ್ಮ ತಕ್ಕದ್ದದ್ದಲ್ಲೆಂದು ಅವರು ನೆನೆಸಹತ್ತಿದರು; ಆದರೂ ಅವರು ತಮ್ಮ ನಿಶ್ಚಯವನ್ನು ಬಿಡಲಿಲ್ಲ. ಪ್ರಸ್ತವನ್ನು ಮಾಡಿಯೇ ತೀರಬೇಕೆಂದು ನಿಶ್ಚಯಿಸಿ ಉಂಡಿಯ ಕೆಲಸ ರಾತ್ರಿ ತೀರಿಸಿ ಅಡಿಗೆಯ ಯಾವತ್ತು ಸಾಮಾನುಗಳನ್ನು ಸಿದ್ಧಗೊಳಿಸಿ, ಮರುದಿನ, ಅಂದರೆ ಸೋಮವಾರ ೩ ಗಂಟೆಯ ಸು

ಮೂರಕ್ಕೆ ಊರಲ್ಲಿ ಆಮಂತ್ರಣ ಹೇಳುವುದಕ್ಕಾಗಿ ಶ್ರೀಗುರುಗಳ ಅನುಜ್ಞೆಯನ್ನು ಪಡೆಯುವುದಕ್ಕಾಗಿ ಅವರ ಬಳಿಗೆ ಹೋದೆನು. ಆಗಿನ ಅಸಮಾಧಾನಕರ ಸ್ಥಿತಿಯನ್ನು ವರ್ಣಿಸಲಾಗಲಿಲ್ಲ. ಅತ್ತ, ಶ್ರೀ. ಕು. ಸೌ. ಸಾತ್ವಿಶ್ರೀ ವೆಂಕಮಾಬಾಯಿಯವರು ಮಲಗಿದ್ದರು. ಇತ್ತ ಶ್ರೀ ಗುರುಗಳು ವೃಷ್ಟಿದಾಸರ ಮುಸುಕಿನಲ್ಲಿ ಸ್ವಸ್ಥವಾಗಿ ಮಲಗಿಕೊಂಡಿದ್ದು, ಮುಸುಕಿನೊಳಗೆ ನಾರಾಯಣಭಗವಾನರೂ, ಶಂಕರಭಗವಾನರೂ ಕುಳಿತುಕೊಂಡಿದ್ದರು. ಪಂದಿಯೊಳಗೆ ೧೦।೧೨ ಜನರು ಚಿಂತೆಮಾಡುತ್ತ ಕುಳಿತಿದ್ದರು. ಪಂದಿಯ ಹೊರಗೆ ೧೦।೨೦ ಜನರು ಚಿಂತೆಯಿಂದ ಕುಳಿತಿದ್ದರು. ಈ ಸ್ಥಿತಿಯಲ್ಲಿ ಗಳಗನಾಥ ಇವರು ಯಾರ ಸಂಗಡ ಮಾತಾಡಬೇಕು! ಅವರನ್ನಾದರೂ ಯಾರು ಮಾತಾಡಿಸಬೇಕು? ಇದನ್ನು ನೋಡಿ ಗಳಗನಾಥ ಇವರು ಸ್ವಲ್ಪ ಹೊತ್ತು ಕುಳಿತ ಬಳಿಕ, ಅವರ ಜೀವಕ್ಕೆ ಸಂತಾಪವಾದಂತಾಯಿತು, ಅವರು ಮುಸುಕಿನೊಳಗೆ ಕುಳಿತಿದ್ದ ನಾರಾಯಣಭಗವಾನರನ್ನು ಕರೆದು—ನೀವು ಇಷ್ಟು ತಿಳಿದವರಿದ್ದು, ಇಬ್ಬರು ಮುಸುಕಿನಲ್ಲಿ ಕುಳಿತಿರುವಿರಲ್ಲ! ಶ್ರೀಸ್ವಾಮಿಗೆ ಉಸಿರು ಯೆಲ್ಲಿಂದ ಬರಬೇಕು? ನಿಮ್ಮ ಉಸುರನ್ನು ಅವರು ಧ್ವನಿಸಬೇಕೇ! ಅನ್ನಲು, ಇಬ್ಬರು ಭಗವಾನರೂ ಹೊರಗೆ ಬಂದರು. ನಾನೀಗಲೆ ಊರಲ್ಲಿ ಆಮಂತ್ರಣ ಹೇಳಿಬರುವೆನೆಂದು ಅವರಿಗೆ ಹೇಳಿ, ಗಳಗನಾಥ ಇವರು ಹೊರಟರು. ಅವರ ಮನಸ್ಸಿಗೆ ಬಹಳ ಅಸಮಾಧಾನವಾಗಿತ್ತು. ಊರಲ್ಲಿ ಆಮಂತ್ರಣ ಹೇಳಿದ ಬಳಿಕ ಏನಾದರೂ ವಿಪರೀತವಾದರೆ, ಎಷ್ಟು ಅಪಕೀರ್ತಿಯಾಗಬಹುದಲ್ಲ, ಎಂದು ಅವರು ಚಿಂತಿಸಿದರು. ಆದರೂ ಅವರು ತಮ್ಮ ನಿಶ್ಚಯವನ್ನು ಬಿಡದೆ, ಶ್ರೀಗುರುಗಳ ಆಶಕವನ್ನು ಗಟ್ಟಿಯಾಗಿ ಅನ್ನುತ್ತ ಊರೊಳಗೆ ನಡೆದರು. ಈಗ ಅವರ ಮನಸ್ಸಿನ ಸ್ಥಿತಿಯು ವಿಚಿತ್ರವಾಗಿ, ಅವರಲ್ಲಿ ಎಂದೂ ಹುಟ್ಟದಿದ್ದಂಥ ಭಕ್ತಿಯು ಮೊಳೆದೋರಿದಂತಾಗಲು, ಅವರು ಶ್ರೀ ಸ್ವಾಮಿಯವರು ಸ್ಥಾಪಿಸಿದ ಲಕ್ಷ್ಮೀಪತಿಯ ಗುಡಿಗೆ ಹೋಗಿ, ಆತನನ್ನು ಭಕ್ತಿಯಿಂದ ಸದ್ಗದಿತಕಂಠರಾಗಿ ಪ್ರಾರ್ಥಿಸಿ—'ನಾರಾಯಣಾ, ವೇಂಕಟೇಶಾ, ಶ್ರೀ ಸ್ವಾಮಿಯವರಿಗೆ ಅಸ್ವಾಸ್ಥ್ಯವಿದೆ; ತಪ್ಪಿಂದ ನೀನು ಅಪ್ರಾರಕ್ಕೆ ಬಂದು ನಿಂತು ಇಂದಿನ ಪ್ರಸ್ತವ ಮಾಡಿಸಬೇಕು. ಶ್ರೀ ಸ್ವಾಮಿಯವರಿಗೆ ಆರೋಗ್ಯವಾಗಬೇಕು" ಎಂದು ಬೇಡಿಕೊಂಡು, ಅರ್ಚಕರಾದ ವೇ. ರಾ. ರಾ. ವೆಂಕಣಭಟ್ಟ ರಾಜಪುರೋಹಿತ, ಇವರ ಕಡೆಯಿಂದ ಆಮಂತ್ರಣಾಕ್ಷತೆಗಳನ್ನು ಲಕ್ಷ್ಮೀಪತಿಗೆ ಕೊಡಿಸಿ, ಒಂದು ಪೂರ್ಣವಾದ ನಾರಿಕೇಲಫಲವನ್ನು ಲಕ್ಷ್ಮೀಪತಿಯ ಉಡಿಯಲ್ಲಿಡಿಸಿ, ಪ್ರಸ್ತವು ಯಥಾಸಾಂಗವಾದ ಬಳಿಕ ಸಂಜೆಯ ಮುಂದ ಈ ಫಲವನ್ನು ತೆಗೆದುಕೊಂಡುಹೋಗುವೆ

ನೆಂದು ಹೇಳಿ, ಊರ ಎಲ್ಲ ಬ್ರಾಹ್ಮಣರಿಗೆ ಆಮಂತ್ರಣಕೊಟ್ಟರು. ಆಮಂತ್ರಣದ ಕೆಲಸ ತೀರಿದ ಬಳಿಕ ಅವರು ಶ್ರೀ ಗುರುಗಳ ಬಳಿಗೆ ಹೋದರು; ಅಷ್ಟರಲ್ಲಿ ತೀ. ಕ. ಸೌ. ಮ. ವೆಂಕೂಬಾಯಿಯವರು ಹೇಳು ಹಾಕಿಸಿಕೊಳ್ಳುತ್ತ ಕುಳಿತುಕೊಂಡಿದ್ದರು. ಶ್ರೀ ಸ್ವಾಮಿಯವರೂ ಎದ್ದು ಕುಳಿತುಕೊಂಡಿದ್ದರು. ಆಗ ಗಳಗನಾಥರಿಗೆ ಎಷ್ಟು ಆನಂದವಾಗಿರಬಹುದೆಂಬುದನ್ನು ವಾಚಕರೇ ತರ್ಕಿಸತಕ್ಕದ್ದು.

ಮುಂದೆ ಉತ್ಸಾಹದಿಂದ ಎಲ್ಲ ಕಾರ್ಯಗಳು ನಡೆದವು. ನಾಲ್ಕು ಗಂಟೆಯ ಸುಮಾರಕ್ಕೆ ಭೋಜನಕ್ಕೆ ಸಮಾರಂಭದ ಎಲೆ ಹಾಕಿದರು. ಕರೆಕಳಿಸಿದ ಪ್ರಕಾರ ಊರ ಜನರೆಲ್ಲ ಬಂದಿದ್ದರು. ಬಡಿಸುವದೆಲ್ಲ ಆಯಿತು. ಇನ್ನು ಉದಕ ಬಿಡುವ ಸಮಯ; ಅಷ್ಟರಲ್ಲಿ ಮೂರನಾವುದ ಜಟಾಧಾರಿಪುರುಷನೊಬ್ಬನು ಮಹಾದ್ವಾರದೊಳಗಿಂದ ಅಕಸ್ಮಾತ್ತಾಗಿ ಒಳಗೆ ಬಂದನು. ಆತನನ್ನು ಮೊಟ್ಟಮೊದಲು ಗಳಗನಾಥ ಇವರು ನೋಡಿ, ಓಡುತ್ತ ಆತನ ಬಳಿಗೆ ಹೋಗಿ ನಮಸ್ಕಾರಮಾಡಿದರು. ಆಗ ಆ ಜಟಾಧಾರಿಪುರುಷನು, ಗಳಗನಾಥ ಇವರನ್ನು ಕುರಿತು—ನಾನು ತಿರುಪತಿ ಗೋವಿಂದರಾಜಪಟ್ಟಣದವನು. ರಾಮಾನುಜನು. ನಿಮ್ಮಲ್ಲಿ ಊಟಮಾಡುವೆನು ಈಗಿನ ಪಂಗ್ತಿ ಸಾಗಲಿ, ಹಿಂದುಗಡೆ ನಾನು ಕೂಡುವೆನು, ಎಂದು ಹೇಳಿ, ಮಹಾದ್ವಾರದ ಬಂಕದ ಕಂಬಕ್ಕೆ ಆತು ಪೂರ್ವಾಭಿಮುಖವಾಗಿ ಕುಳಿತುಕೊಂಡು, ಬ್ರಾಹ್ಮಣಭೋಜನವಾಗುವದನ್ನು ನೋಡಹತ್ತಿದನು! ಮೊದಲನೆಯ ಪಂಗ್ತಿಯಾಯಿತು. ೨ನೆಯ ಪಂಗ್ತಿಗೆ ಬಸ್ತಿಟ್ಟಾಗ ಆ ಜಟಾಧಾರಿಪುರುಷನಿಗೆ ಎಲೆಹಾಕಿ ಬಡಿಸಿತು. ಎಲ್ಲರ ಸಂಗಡ ಆತನು ಊಟಕ್ಕೆ ಕುಳಿತುಕೊಂಡನು. ಅರ್ಧ ಊಟವಾದ ಬಳಿಕ ಗಳಗನಾಥ ಇವರ ಮನಸ್ಸಿನಲ್ಲಿ ಪಕ್ಕನೆ—ಆಹಾ! ಶ್ರೀ ಲಕ್ಷ್ಮೀಪತಿಗೆ ಆಮಂತ್ರಣಕೊಟ್ಟೆನು; ಆದರೆ ಆತನನ್ನು ಎಲ್ಲರ ಸಂಗಡ ಊಟಕ್ಕೆ ಕರಿಸಲಿಲ್ಲ! ಆದರೂ ಆತನು ಕರುಣಾಳುವಾಗಿ ನನ್ನ ತಪ್ಪು ಎಣಿಸದೆ ಊಟಕ್ಕೆ ಬಂದಿದ್ದಾನೆ. ನಾನು ಪ್ರಾರ್ಥಿಸಿದಂತೆ ಮೊದಲನೆಯ ಪಂಗ್ತಿಯ ಬ್ರಾಹ್ಮಣಭೋಜನಮಾಡಿಸಿ, ಎರಡನೆಯ ಪಂಗ್ತಿಗೆ ಕುಳಿತಿದ್ದಾನೆ. ಎಂಬ ಸಂಗತಿಯು ಹೊಳೆಯಲು, ಗಳಗನಾಥ ಇವರ ಮೈ ಮೇಲಿನ ಕೂದಲುಗಳು ನೆಟ್ಟಗಾದವು. ಶ್ರೀ ಸದ್ಗುರುವಿನ ಮಹಾ ಮಹಿಮೆಯನ್ನು ಸ್ಮರಿಸಿ ಅವರ ಕಂಠವು ಸದ್ಗದಿತವಾಯಿತು. ಅವರು ಕೂಡಲೆ ಈ ವರ್ತಮಾನವನ್ನು ಶ್ರೀ ಪರಮೇಶ್ವರ ದೀಕ್ಷಿತರ ಮುಂದೆ ಹೇಳಲು, ಅವರಿಗೂ ಬಹಳ ಆಶ್ಚರ್ಯವಾಗಿ ಸಂತೋಷವಾಯಿತು. ಗಳಗನಾಥ ಇವರು ಆ ಜಟಾಧಾರಿಪುರುಷನನ್ನು ಸಾಕ್ಷಾತ್ ಲಕ್ಷ್ಮೀಪತಿಯೆಂದು ಭಾವಿಸಿ, ಆತನ ಎಂಜಲ-ಗೋಮಯ

ವನ್ನು ಸ್ತುತಿ ಮಾಡಿದರು. ಜಟಾಧಾರಿಗೆ ಮಲಗಿಕೊಳ್ಳಲಿಕ್ಕೆ ಸ್ಥಳವಾಯಿತು. ಮರುದಿನ ಆತನು ಆನಂದವನದಲ್ಲಿದ್ದು, ಗಳಗನಾಥ ಇವರನು ಬಹು ಪರಕವಾಗಿ ಬೋಧಿಸಿದನು. ಹರಿಹರದಿಂದ ಹೋಗುವವನು ಯಾಕೋ ಮನಸ್ಸಿಗೆ ಬರುವ ಹಾಗಾದ್ದರಿಂದ ಇಲ್ಲಿಗೆ ಬಂದೆನೆಂದು ಜಟಾಧಾರಿಯು ಹೇಳಿದನು. ಇದನ್ನಾದರೂ ಗಳಗನಾಥ ಇವರು ಅಲೌಕಿಕಕೃತ್ಯವೆಂದು ತಿಳಿಯಬಹುದಾಗಿತ್ತು; ಆದರೆ ಜಟಾಧಾರಿಯು,-"ಇತ್ತಕಡೆಗೆ ನಾನು ಹಿಂದಕ್ಕೆ ಬಂದಿದ್ದೆನು, ಇಲ್ಲಿ ಬಹುಜನರ ಗುರುತು ನನಗೆ ಅದೆ," ಎಂದು ಹೇಳಿದ್ದರಿಂದ ಗಳಗನಾಥ ಇವರ ಮನಸ್ಸಿನಲ್ಲಿ ಸ್ವಲ್ಪ ಸಂಶಯವು ಉತ್ಪನ್ನವಾಯಿತು; ದರ್ಶನಕೊಟ್ಟ ಕೂಡಲೆ ಅಲ್ಲಿಂದಲ್ಲೇ ಅದೃಶ್ಯನಾಗಿದ್ದರೆ ಗಳಗನಾಥ ಇವರಿಗೆ ಪೂರ್ಣ ವಿಶ್ವಾಸವಾಗುತ್ತಿತ್ತು!! ಅವಿಶ್ವಾಸದ ಜನರ ಮಾತು ಹೀಗೆಯೋ ಸರಿ!

ಗಳಗನಾಥ ಇವರಿಗೆ, ಶ್ರೀಗುರುವು ಕಟ್ಟಕಡೆಯಲ್ಲಿ ತನ್ನ ಕುರುಹು ಏನು ತೋರಿಸುವನೋ ಎಂಬ ಭ್ರಾಂತಿಯು ಇನ್ನೂ ಹೋಗಲಿಲ್ಲ. ಆ ಬಗ್ಗೆ ಅವರು ಮಂದಿಯನು ವಿಚಾರಿಸುತ್ತಿದ್ದರು. ಆಗ ಗಣಪಯ್ಯನವರು ಗಳಗನಾಥ ಇವರನ್ನು ಕುರಿತು-"ನಿನ್ನೆ ಒಂದು ಚಮತ್ಕಾರವಾಯಿತು. ಸುಮಾರ ೫॥ ತಾಸು ರಾತ್ರಿಯಾಗಿರಬಹುದು, ಆಗ ಶ್ರೀಗುರುಗಳು ಒಮ್ಮೆಲೆ ನನ್ನನು ಕುರಿತು ಏನೂ ಸಂಬಂಧವಿಲ್ಲದೆ—ಗಣಪಯ್ಯಾ, ಹೋಗು, ಎಮ್ಮೆಯನ್ನು ನೋಡಿಕೊಂಡು ಬಾ ಎಂದು ಹೇಳಿದರು. ಆದಕ್ಕೆ ನಾನು—ಆಗಲೆ ಹೋಗಿಬಂದಿದ್ದೇನೆ ಎಮ್ಮೆಯು ಈಯಲಿಕ್ಕೆ ಇನ್ನೂ ಒಂದೆರಡುದಿವಸಗಳು ಬೇಕು, ಎಂದು ಹೇಳಿದೆನು. ಆದಕ್ಕೆ ಗುರುಗಳು—ಹಾಗಲ್ಲಪ್ಪಾ, ಹೋಗಿ ನೋಡಿಕೊಂಡು ಬಾ ಅನ್ನಲು, ನಾನು ಹೋಗಿ ನೋಡುವಾಗ ಎಮ್ಮೆಯು ಕರಹಾಕಿ ಮಲಗಿತ್ತು" ಎಂದು ಹೇಳಿದರು. ಇದನ್ನು ಕೇಳಿ ಗಳಗನಾಥ ಇವರಿಗೆ ಆಶ್ಚರ್ಯವಾಯಿತು; ಆದರೂ ಅಷ್ಟು ಮಹತ್ವದ ಪ್ರಸಂಗವಲ್ಲೆಂದು ಅವರು ದುರ್ಲಕ್ಷಿಸಿದರು. ಒಂದು ದಿನ ಹಗಲು ಆರುತಾಸಿನ ಸುಮಾರಕ್ಕೆ ಶ್ರೀಗುರುಗಳ ಬಳಿಯಲ್ಲಿ ಶ್ರೀ ನಾರಾಯಣಭಗವಾನರೂ, ಗಳಗನಾಥ ಇವರೂ ಕುಳಿತುಕೊಂಡಿರುವಾಗ ಗುರುಗಳು ಮಲಗಿದಲ್ಲಿಯೇ—ಮಹಾರಾಜಾ, ಸುಮ್ಮನೆ ಯಾಕೆ ಕುಳಿತುಕೊಂಡಿರಿ? ಹೋಗಿರಿ. ಹೊರಗೆ ಭೋಜನ ನಡೆದದೆ. ನೀರುಗೀರು ಕೇಳಿರಿ, ಎಂದು ಹೇಳಿದರು. ಕೂಡಲೆ ಭಗವಾನರೂ, ಗಳಗನಾಥ ಇವರೂ ಹೊರಗೆ ಹೋಗಲು, ನೀರು ಕೇಳಲಿಕ್ಕೆ ಯಾರೂ ಇದ್ದಿಲ್ಲ; ಇದರಿಂದ ಗಳಗನಾಥ ಇವರಿಗೆ ಮತ್ತೆ ಆಶ್ಚರ್ಯವಾಯಿತು; ಆದರೂ ಶ್ರೀಗುರುಗಳು ನಿತ್ಯದಲ್ಲಿ ಹೇಳುವ ಸಾಂಪ್ರದಾಯವೆಂದು ಅವರು

ಇದನ್ನೂ ದುರ್ಲಕ್ಷಿಸಿದರು. ಒಂದು ದಿನ ಶ್ರೀ ಸ್ವಾಮಿಯವರ ತಮ್ಮಂದಿರಾದ ವೇ. ರಾ. ರಾ. ಶ್ರೀಧರಭಟ್ಟರಿಗೂ, ಸೇವಕ ಜನರಲ್ಲಿಯೆಲ್ಲರಿಗೂ ಸ್ವಲ್ಪ ವಾದಿಸಾಟವಾಗಿ, ಮಧ್ಯಾಹ್ನದಿಂದ ಸಂಜೆಯವರೆಗೆ ಎಲ್ಲರೂ ಆ ವಿಷಯವನ್ನು ಕುರಿತು ಜನರು ಗುಜುಗುಟ್ಟುತ್ತಿದ್ದರು. ಮುಂದೆ ಸರಾಸರಿ ನಾಲ್ಕು-ನಾಲ್ಕುವರೆ-ಐದು ತಾಸು ರಾತ್ರಿಯ ಸುಮಾರಕ್ಕೆ ಶ್ರೀ ಗುರುಗಳು ತಮ್ಮ ತಮ್ಮಂದಿರನ್ನು ಕರೆಸಿದರು. ಆ ಶ್ರೀಗುರುಗಳ ಕೋಣೆಯಲ್ಲಿ ಬಹಳ ಜನರು ಕುಳಿತುಕೊಂಡಿದ್ದರು. ಆಗ ಗಳಗನಾಥ ಇವರೂ ಅಲ್ಲಿ ಇದ್ದರು. ಆಗ ಶ್ರೀಗುರುಗಳು ಜನರನ್ನು, ಮುಖ್ಯವಾಗಿ ತಮ್ಮ ತಮ್ಮಂದಿರನ್ನು ಉದ್ದೇಶಿಸಿ— ಸ್ವಾಮಿಯು ಬೇನೆಯಿಂದ ವ್ಯಥೆಪಡುತ್ತಿರಲು, ಮಧ್ಯಾಹ್ನದಿಂದ ಸಂಜೆಯವರೆಗೆ ಗುಜುಗುಟ್ಟುತ್ತಿರುವಿರಲ್ಲ, ಏನದು? ಮಹಾರಾಜಾ, ಸ್ವಾಮಿ ಇರತಕ್ಕವೇ ಹೀಗಾದ ಬಳಿಕ ಮುಂದೆ ಗತಿಯೇನು? ಮುಂದೆ ಸೇವಾಧರ್ಮವನ್ನು ಹ್ಯಾಗೆ ಕಾಯ್ದುಕೊಂಡೀರಿ? ಇಲ್ಲದಿದ್ದರೆ, ಅಗ್ರಹಾರದಲ್ಲಿದ್ದದ್ದನ್ನೆಲ್ಲ ಹಂಚಿಕೊಂಡು ಬಿಡಿರಿ. ಸ್ವಾಮಿಗೇನು ಅದರ ಗೊಡವೆ ಇಲ್ಲ. ಹೇಳಿರಿ, ಯಾರು ಮುಖ್ಯರಾಗಿ ಹ್ಯಾಗೆ ಹಾಗೆ ನಡೆಯುವಿರಿ, ಅನ್ನಲು, ಅವರಲ್ಲಿ ಕೆಲವರು, ಚಿದಂಬರಮಹಾರಾಜರನ್ನು, (ಗುರುಗಳ ಪುತ್ರರನ್ನು) ಮುಂದೆ ಮಾಡಿಕೊಂಡು ನಡೆಯುವವೆಂದು ಹೇಳಿದರು. ಅದಕ್ಕೆ ಗುರುಗಳು—ಅತಸು ದಾಸಧರ್ಮದಿಂದ ಇರತಕ್ಕವರು. ದತ್ತ ಯಾರ ಮಕ್ಕಳಾಗಿರಿ? ಇತ್ಯಾದಿ ಮಾತುಗಳನ್ನು ಸ್ವಾಭಾವಿಕವಾದ ತಮ್ಮ ಗಂಭೀರ ಸ್ವರದಿಂದ ನಿರಹಂಕಾರಿಗಳಂತೆ ಸುಮಾರು ಅರ್ಧತಾಸಿನ ವರೆಗೆ ಮಾತಾಡಿದರು! ಆಗ ಬೇರೆ ಬೇರೆ ಶಿಷ್ಯರು ಆಡಿದ ಮಾತುಗಳನ್ನು ಇಲ್ಲಿ ಹೇಳಲಿಕ್ಕೆ ಸ್ಥಳವಿಲ್ಲ. ಈ ಪ್ರಸಂಗದಲ್ಲಿ ಮಾತ್ರ ಗಳಗನಾಥ ಇವರ ಮನಸ್ಸಿಗೆ ಶ್ರೀ ಗುರುವಿನ ಮಹಿಮೆಯ ಬಗ್ಗೆ ನಂಬಿಗೆಯಾಗಿ, ಶ್ರೀ ಗುರುವು ದೇಹಲಕ್ಷಣದಿಂದ ಬೇನೆಯನ್ನನುಭವಿಸುತ್ತಿದ್ದರೂ, ವಿದೇಹಲಕ್ಷಣದಿಂದ ಎಲ್ಲಕಡೆಗೆ ನೋಡುತ್ತಾನೆಂದು ಅವರು ನಿಶ್ಚಯಿಸಿದರು. ಈ ಮೊದಲು ನಡೆದ ಸಂಗತಿಗಳು ಅವರಿಗೆ ಈಗ ಮಹತ್ವದವಾಗಿ ತೋರಿದವು. ಹೀಗಿರಲು, ಶ್ರೀ ಗುರುವು ದೇಹವಿಡುವದಕ್ಕೆ ೩ ದಿವಸವಿರುವಾಗ, ಅಂದರೆ, ಸೋಮವಾರ ೬|೭ ತಾಸು ರಾತ್ರಿಯ ಸುಮಾರಕ್ಕೆ ಒಂದು ಚಮತ್ಕಾರದ ಸಂಗತಿಯು ಒದಗಿತು. ಈ ಮೊದಲೇ ಶ್ರೀ ಗುರುಗಳು ತಮ್ಮ ನಿರ್ಯಾಣ ಕಾಲವನ್ನು ವ್ಯಾವಹಾರಿಕರಂತೆ ಅನಿಶ್ಚಿತ ರೀತಿಯಿಂದ ಎಷ್ಟೋ ಸಾರೆ ಹೇಳಿದ್ದರು. ಅವೆಲ್ಲ ಸುಳ್ಳಾದದ್ದರಿಂದ, ಗಳಗನಾಥರೇ ಮೊದಲಾದ ಬಹುಜನರಿಗೆ ವಿಕಲ್ಪವು ಉತ್ಪನ್ನವಾಗಿತ್ತು; ಆದರೂ ಶ್ರೀಗುರುಗಳು ನಿರ್ಯಾ

ಣಕಾಲವನ್ನು ನಿಶ್ಚಯವಾಗಿ ಹೇಳಿಹೋಗುವೆನೆಂದು ವಚನಕೊಟ್ಟಿದ್ದರು. ಮೇಲೆ ಹೇಳಿದಂತೆ ಸೋಮವಾರ ರಾತ್ರಿ ೬–೭ ತಾಸಿನ ಸುಮಾರಕ್ಕೆ ಎಲ್ಲರೂ ನಿದ್ರೆಹತ್ತಿ ಮಲಗಿದ್ದರು. ಶ್ರೀಶಂಕರಭಗವಾನರೊಬ್ಬರು ಮಾತ್ರ ಗುರುಗಳ ಬಳಿಯಲ್ಲಿ ಕುಳಿತಿದ್ದರು. ಆಗ ಗುರುಗಳು ತಮ್ಮೊಳಗೆ—"ಶಿವಚಿದಂಬರ—ಶಿವಚಿದಂಬರ! ದತ್ತ ದತ್ತ;" ಎಂದು ನಾಮೋಚ್ಚಾರ ಮಾಡಿ—"ಚಿದಂಬರಾ, ಇನ್ನು ಅಪ್ಪಣೆಯೇನಪ್ಪಾ, ಅಪ್ಪಣೆಯೇ? ಇನ್ನು ಮೂರು ದಿವಸ ಉಳಿಯಿತೇ" ಎಂದು ನುಡಿಯುತ್ತಿರಲು, ಶಂಕರಭಗವಾನರು ಗಾಬರಿಯಾಗಿ, ನಾರಾಯಣಭಗವಾನರನ್ನು ಎಬ್ಬಿಸಿದರು ತಿರುಗಿ ಗುರುಗಳು ಯಾವ ಮಾತನ್ನೂ ಆಡಲಿಲ್ಲ. ಪ್ರಿಯವಾಚಕರೇ! ಶ್ರೀಗುರುಗಳು ಲೌಕಿಕಾಡಂಬರಕ್ಕೆ ಎಷ್ಟು ಹೇಸುತ್ತಿದ್ದರೆಂಬುದನ್ನು ನೋಡಿರಿ! ಒಬ್ಬನನ್ನು ಉದ್ದೇಶಿಸಿ ಭವಿಷ್ಯ ಹೇಳುವದು ಸಹ ಅವರಿಗೆ ಅಭಿಮಾನಸೂಚಕವಾಗಿ ತೋರಿತು. ಅಂತೆಯೇ ಅವರು ತಮ್ಮ ದಾಸಧರ್ಮವನ್ನು ಕುಂದಿಲ್ಲದೆ ಕಡೆಯನಕ ಪಾಲಿಸಿದರೆಂದು ಹೇಳಬೇಕಾಗುವದು. ಈ ಸಂಗತಿಯಿಂದ ಗಳಗನಾಥ ಇವರಿಗೆ ಬಹಳ ಸಮಾಧಾನವಾಗಿ, ಶ್ರೀಗುರುವಿನಲ್ಲಿ ಅವರ ವಿಶ್ವಾಸವು ಹೆಚ್ಚಿದಂತೆ ಆಯಿತು; ಆದರೂ ಕಟ್ಟಕಡೆಗೆ ಶ್ರೀಗುರುಗಳು ಏನು ಕೌತುಕ ತೋರಿಸುತ್ತಾರೋ ನೋಡಬೇಕೆಂಬ ಮನದ ಆತುರವು ಹೋಗಲಿಲ್ಲ.

ಕರುಣಾಳುವಾದ ಶ್ರೀಸದ್ಗುರು ಈ ಆಶೆಯನ್ನೂ ನಿರಾಶೆಯಾಗಗೊಡಲಿಲ್ಲ. "ಮಹಾರಾಜಾ, ಮರಣಕಾಲದಲ್ಲಿ ವಿಸ್ಮೃತಿಯಾಗಬಾರದು, ಇದೇ ಮುಖ್ಯ ಧರ್ಮವು" ಎಂದು ಒಮ್ಮೆ ಗಳಗನಾಥ ಇವರ ಮುಂದೆ ಶ್ರೀಗುರುಗಳು ಅಂದಿದ್ದರು. ಅದನ್ನು ಗಳಗನಾಥ ಇವರು ಲಕ್ಷದಲ್ಲಿಟ್ಟಿದ್ದಲ್ಲದೆ, "ಯಾರಯಾರಿಗೆ ದರ್ಶನ ಕೊಡಬೇಕೆಂದು ಸ್ವಾಮಿಯು ದೇಶಸ್ಥಾನಾ ಮಾಡಿರುವನೋ" ಎಂದು ಗುರುಗಳು ಹೇಳಿದ್ದನ್ನೂ ಅವರು ಲಕ್ಷದಲ್ಲಿಟ್ಟಿದ್ದರು. ಮುಂದೆ ಶ್ರೀಸದ್ಗುರುನಾಥನು ಮರಣೋನ್ಮುಖನಾಗಿ ಈಶ್ವರ ನಾಮಘೋಷವನ್ನು ಉಚ್ಚರಿಸುತ್ತ "ಸಂಪಾವಿರೂಪಾಕ್ಷಾ, ಕಾಶೀವಿಶ್ವನಾಥಾ" ಎಂದು ನುಡಿಯುತ್ತಿರಲು, ಅದೇಕಾಲಕ್ಕೆ ಕಾಶಿಯಿಂದ ಭಾಗೀರಥಿಯನ್ನು ತಕ್ಕೊಂಡು ಬಂದಿದ್ದ ಮನುಷ್ಯರು ಗಾಡಿಯಿಂದ ಇಳಿದು ಒಳಗೆ ಬಂದರು. ಅವರಲ್ಲಿ ಒಬ್ಬನು ಗಂಡಸು, ಒಬ್ಬಳು ಹೆಂಗಸು (ವಿಧವೆ) ಅವರನ್ನು ನೋಡಿ ಗಳಗನಾಥ ಇವರು ಭಕ್ತಿಪರವಶರಾದರು. ಅವರ ಮುಖದಿಂದ ಮಾತುಗಳು ಹೊರಡದಾದವು. ಇರಲಿ, ಅದನ್ನು ವರ್ಣಿಸುವದಕ್ಕೆ ಮುಂದಿನ ಪ್ರಕರಣವಿರುವದು. ಸದ್ಯಕ್ಕೆ ಇಲ್ಲಿ ಕಾಶಿಯಿಂದ ಭಾಗೀರಥಿಯು ಬಂದದ್ದರ ವರ್ಣನವನ್ನಷ್ಟು ಕೊಟ್ಟು ಈ ಪ್ರಕರಣವನ್ನು ಮುಗಿಸುವೆವು.

ಶ್ರೀ ಕಾಶೀಕ್ಷೇತ್ರದಿಂದ ಶ್ರೀ ಭಾಗೀರಥಿಯು ಶ್ರೀ ಗುರುಗಳ ನಿರ್ಯಾಣ ಕಾಲಕ್ಕೆ ಬಂದವರಿಬ್ಬರಲ್ಲಿ, ಗಂಡಸಿನ ಹೆಸರು ವೆಂಕಟಕೃಷ್ಣ ಜೋಯಿಸರು ಉರ್ಫ ಶಾಮಭಟ್ಟರು. ಇವರ ಊರು ಹಾಸನಡಿಸ್ಟ್ರಿಕ್ಟ ನಾಲಗಾವಿಹೋಬಳಿ "ನಿಟ್ಟೂರು"ಎಂಬದು. ಇವರು ಕಾರ್ತಿಕದಲ್ಲಿ ಹರಿಹರದಿಂದ ಕಾಶಿಗೆ ಹೋಗಿ, ಮಾಘದಲ್ಲಿ ಕಾಶಿಯಲ್ಲಿದ್ದರು. ಶ್ರಾವಣದಲ್ಲಿ ಅವರ ಗಯಾಯಾತ್ರೆಯಾಯಿತು. ಗೋಕುಲಾಷ್ಟಮಿಯದಿವಸ ಕಾಶಿಯಲ್ಲಿರುವಾಗ ಅಂದು ಬೆಳಗಿನಜಾವದಲ್ಲಿ ಒಬ್ಬ ಗೋಸಾವಿಯು ಅವರ ಕನಸಿನಲ್ಲಿ ಬಂದು—ನಿನ್ನ ಕೆಲಸವಾಯಿತು; ಇಲ್ಲಿಂದ ಹೊರಟು ಹೋಗತಕ್ಕದ್ದು; ಇನ್ನು ಮೇಲೆ ಇದ್ದರೆ ಕಾಯಿಲೆ ಬೀಳುವಿರಿ ಎಂದು ಹೇಳಿ, ರುದ್ರಾಕ್ಷಿಯ ಸರವನ್ನು ಕೊಟ್ಟಹಾಗಾಯಿತಂತೆ. ಈ ಸ್ವಪ್ನವನ್ನು ಅವರು ಕಣಕಟ್ಟೆ ನಾರಾಯಣಪ್ಪನವರಮುಂದೆ ಹೇಳಲು, ಅವರು—ನಿಮಗೆ ಕಾಳಭೈರವನ ಅಪ್ಪಣೆಯಾಯಿತು. ಇನ್ನು ಇಲ್ಲಿ ನಿಲ್ಲಬೇಡಿರಿ. ಕಾರ್ತಿಕಕ್ಕೆ ನಿಮ್ಮ ಊರಿಗೆ ಹೋಗಬೇಕೆಂಬ ಇಚ್ಛೆ ನಿಮಗಿದ್ದರೆ, ಅಲ್ಲಿಯವರೆಗೆ ಅಗಡಿಯಲ್ಲಿರಿ. ಹೋಗುವಾಗ ಈ ಸುಬ್ಬಮ್ಮನನ್ನು ಸಂಗಡ ಕರಕೊಂಡು ಹೋಗಿರಿ, ಎಂದು ಹೇಳಿದರಂತೆ! ಸುಬ್ಬಮ್ಮನ ಊರು ಸಿವಮೊಗ್ಗಾ ಡಿಸ್ಟ್ರಿಕ್ಟ ಸಾಗರ ತಾಲೂಕ "ಕಾನಗೋಡು" ಗ್ರಾಮ. ಅವರು ಆ ಊರ ನರಸಿಂಹಗಿರಿಯಪ್ಪನವರ ಮಗಳು ಸುಬ್ಬಮ್ಮನವರು ಎರಡು ಸಾರೆ ಕಾಶೀಯಾತ್ರೆ ಮಾಡಿರುವರು. ಅವರು ಈ ಸಾರೆ ಯಾತ್ರೆಗೆ ಹೋಗುವಾಗ ಅಗಡಿಗೆ ಬಂದು ಶ್ರೀ ಸ್ವಾಮಿಯವರ ದರ್ಶನ ತಕ್ಕೊಂಡಿದ್ದರಂತೆ; ಅವರು ದರ್ಶನಕ್ಕೆ ಬಂದಾಗ ಶ್ರೀಗುರುಗಳು—"ಅತಿಥಿಸೇವೆ ಮಾಡಿಕೊಂಡು ಊರಲ್ಲಿ ಇದ್ದರೆ, ಅದೇ ಕಾಶಿಯಯಾತ್ರೆಯು. ಬಡಭಾವಿಕನು ಕಳಿಸಿಕೊಟ್ಟ ಒಂದುದುಡ್ಡನ್ನು ಭಾಗೀರಥಿಯು ಪ್ರತ್ಯಕ್ಷ ಸ್ವೀಕರಿಸಿದಳು; ಆದರೆ ಶ್ರೀಮಂತನು ಸ್ವತಃ ಕೊಟ್ಟ ಧನರಾಶಿಯನ್ನು ಸ್ವೀಕರಿಸಲಿಲ್ಲ. ಭಾವನೆಯಿಲ್ಲದ ಯಾತ್ರೆಯಿಂದೇನು ಪ್ರಯೋಜನ? ಆದರೂ ಯಾತ್ರೆಗೆ ಹೋಗಬೇಕೆಂದು ಬಂದಿರುವಿರಿ, ಹೋಗಿಬನ್ನಿ", ಎಂದು ಹೇಳಿದರಂತೆ! ಆಗ ಸುಬ್ಬಮ್ಮನು, ನನಗೆ ಯಾತ್ರೆಮಾಡಿ ತಿರುಗಿ ಗುರುದರ್ಶನಕ್ಕೆ ಅಗಡಿಗೆ ಬರಬೇಕೆಂಬ ಇಚ್ಛೆಯಿದೆ. ಎಂದು ಗುರುಗಳನ್ನು ಕೇಳಿಕೊಳ್ಳಲು, ಹೋಗಿರಿ ಬರುತ್ತೀರಿ. ಎಂದು ಗುರುಗಳು ಹೇಳಿದರಂತೆ! ಸುಬ್ಬಮ್ಮನವರು ಕಾಶಿಯಲ್ಲಿ ಬಹಳ ಕಷ್ಟಪಟ್ಟರಂತೆ. ಇರಲಿ. ನಾರಾಯಣಪ್ಪನವರ ಹೇಳಿಕೆಯ ಪ್ರಕಾರ ನಮ್ಮ ಶಾಮಭಟ್ಟರು ಸುಬ್ಬಮ್ಮನನ್ನು ಕರಕೊಂಡು ಶ್ರಾವಣ ಶ॥೧೧ ದಿವಸ ಕಾಶಿಯಿಂದ ಹೊರಟರು; ಮುಂದೆ ಶನಿವಾರ ನಾಶಿಕದಲ್ಲಿ ಇಳಿದು ಶ್ರೀಭಾಗೀರಥಿಯನ್ನು ತುಂಬಿಕೊಂಡು, ಮುಂದೆ ಭಾದ್ರಪದ ಶುದ್ಧ ೬

ಮಂಗಳವಾರ ರಾತ್ರಿ ೩|| ಗಂಟೆಗೆ ಹಾವೇರಿ ಸ್ಟೇಶನಿಗೆ ಬಂದರು. ಪಾಪ! ಹಿರಿಯದವರು, ರಾತ್ರಿಯ ಕೆಲಸ, ಸ್ಟೇಶನಿನಲ್ಲಿ ಗಾಡಿಗಳಿಲ್ಲ. ಬೆಳಗಾದ ಬಳಿಕ ನೋಡೋಣವೆಂದು ಅವರಿಬ್ಬರು ತೂಕಡಿಸುತ್ತ ಕುಳಿತಿರಲು, ಒಬ್ಬ ಟಾಂಗೆಯವನು ಬೆಳಗಿನ ೫|| ಗಂಟೆಯ ಸುಮಾರಕ್ಕೆ ಸ್ಟೇಶನಕ್ಕೆ ಬಂದು, ಆಗಡಿಗೆ ಹೋಗುವವರು ಯಾರಾದರೂ ಇರುತ್ತೀರೋ ಹ್ಯಾಗೆ? ಎಂದು ಗಟ್ಟಿಯಾಗಿ ಕೂಗಿದನಂತೆ. ಆಗ ನಮ್ಮ ಇಬ್ಬರು ಪುಣ್ಯವಂತ ಯಾತ್ರಿಕರು ಗಡಬಡಿಸಿ ಆತನ ಬಳಿಗೆ ಹೋಗಲು, ತಲೆಗೆ ನಾಲ್ಕು ಆಣೆಗೊಪ್ಪಿ ಮಾಡಿ ಟಾಂಗೆಯವನು ಆನಂದವನಕ್ಕೆ ೮ ಗಂಟೆಯ ಸುಮಾರಕ್ಕೆ ಅವರನ್ನು ಕರಕೊಂಡು ಬಂದನು. ಆ ಭಾಗ್ಯಶಾಲಿಗಳು ತಂದ ಭಾಗೀರಥಿಯನ್ನೇ ಶ್ರೀಗುರುಗಳ ಮುಖದಲ್ಲಿ ಪ್ರಾಣೋತ್ಕ್ರಮಣಕಾಲಕ್ಕೆ ಪ್ರತಿಸಾಧುಗಳಾದ ಅವರ ಚಿರಂಜೀವರು ಹಾಕಿದರು! ಆ ಭಾಗ್ಯಶಾಲಿಗಳು ತಂದ ಭಾಗೀರಥಿಯಿಂದಲೇ ಶ್ರೀಗುರುಗಳ ಮಂಗಲಸ್ವರೂಪವಾದ ಶವಕ್ಕೆ ಸ್ನಾನ ಮಾಡಿಸಿದರು!! ಇವರಿಬ್ಬರ ವಯಸ್ಸು ಕ್ರಮವಾಗಿ ೭೦-೪೦ ವರ್ಷಗಳಿದ್ದು ಇಬ್ಬರೂ ಅಶಕ್ತರಿದ್ದರು. ಅದು ಹ್ಯಾಗೆಂಬುದನ್ನು ಮುಂದಿನ ಪ್ರಕರಣದಲ್ಲಿ ನೋಡಿಕೊಳ್ಳಬಹುದು.

## ೮ನೆಯ ಪ್ರಕರಣ.

## ಶ್ರೀ ಗುರುವಿನ ನಿರ್ಯಾಣವು!

"ಶರಣರ ಪರೀಕ್ಷೆಯನ್ನು ಮರಣದಲ್ಲಿ ಮಾಡು."

ಮನುಷ್ಯಮಾತ್ರ — ದೇಹ, ಇಂದ್ರಿಯಗಳು, ಪಂಚಪ್ರಾಣಗಳು, ಆತ್ಮಾ ಇವುಗಳ ಸಂಕಲನವಾಗಿರುವನಷ್ಟೇ? ಅದರಂತೆ ಆನಂದವನಪ್ರಕಾರದ ಧಾರ್ಮಿಕಸಂಸ್ಥಾರೂಪಪುರುಷನು, ಆನಂದವನರೂಪ ದೇಹ, ಶಿಷ್ಯರೂಪ ಇಂದ್ರಿಯಗಳು, ವಿದ್ಯಾರ್ಥಿರೂಪ ಪಂಚಪ್ರಾಣಗಳು, ಶ್ರೀ ಸದ್ಗುರುರೂಪ ಆತ್ಮಾ ಇವುಗಳ ಸಂಕಲನದಿಂದ ಆಗಿರುತ್ತಾನೆಂದು ಹೇಳಬಹುದು. ಆ ಆತ್ಮಾನು ವ್ಯಾಧಿಗ್ರಸ್ತನಾದ ಕೂಡಲೆ ಮೊದಲು ಆತನಿಗೆ ದೇಹವು ಭಾರವಾಗಿ, ಬರಬರುತ್ತ ಇಂದ್ರಿಯಗಳ ವ್ಯಾಪಾರವು ಕುಗ್ಗುತ್ತ ಹೋಗಿ, ಅವು ತೀರ ಸತ್ವಹೀನವಾಗಲು, ಪಂಚಪ್ರಾಣಗಳು ಹೊರಟುಹೋಗುತ್ತವೆ. ಆಮೇಲೆ ಆತ್ಮಾನು ದೇಹದಿಂದ ಪ್ರಯಾಣಮಾಡುವನು. ಆಗ ದೇಹವು ಪರಾಧೀನವಾಗಿ ಅದಕ್ಕೆ ಶವಸಂಜ್ಞೆಯು ಬಂದು, ಮನುಷ್ಯರ ಅಸ್ತಿತ್ವವು ನಷ್ಟವಾಗುತ್ತದೆ. ಇದೇ ಮಾತು ಆನಂದವನದ ಸಂಸ್ಥೆಗೂ ಹತ್ತುವದು. ಆ ಸಂ-

ಸ್ಥೆಯ. ಅಶಕ್ತವಾದ ಶ್ರೀ ಶೇಷಾಚಲ ಸದ್ಗುರೂತ್ತಮನು ಕಳೆದ ಮಾಘಮಾಸದಿಂದ, ಲೋಕದ ಪಾಪವನ್ನು ಭೋಗಿಸುವದೇ ಮೊದಲಾದ ಕಾರಣಗಳಿಂದ ವ್ಯಾಧಿಗ್ರಸ್ತನಾಗಲು, ಆತನಿಗೆ ಕಲಿಕಾಲ ದೂಷಿತವಾದ ಅಗ್ರಹಾರದ ಪರೋಪಕಾರ ಸಂಸ್ಥೆಯು ಭಾರವಾಗಹತ್ತಿತು. ಆತನು ಆ ಸಂಸ್ಥೆಯನ್ನು ನಿರಾಕರಿಸಹತ್ತಿದನು, ಇಂದ್ರಿಯರೂಪ ಶಿಷ್ಯರನ್ನು ಹಳಿಯಹತ್ತಿದನು, ಪಂಚಪ್ರಾಣವೆನಿಸುವ ವಿದ್ಯಾರ್ಥಿಗಳಿಗೆ ಹೇರಿಡಹತ್ತಿದನು, ಆತ್ಮನಸ್ವರೂಪನಾದ ತನ್ನನ್ನು "ನಾನು ಹುಟ್ಟಿಬಂದು ವ್ಯರ್ಥವಾಯಿತಲ್ಲ!" ಎಂದು ನಿರಾಕರಿಸಿಕೊಳ್ಳಹತ್ತಿದನು! ಈ ಕಲಿಕಾಲದಲ್ಲಿ ಆತನ ಸದ್ಬೋಧವ್ಯಾಪಾರವು ಭರದಿಂದ ಸಾಗಿತು. ಜಡ್ಡಿನಲ್ಲಿ ಬಹಳ ಮಾತಾಡಿದರೆ ಆಯಾಸವಾಗುತ್ತದೆಂದು ಯಾರಾದರೂ ಹೇಳಿದರೆ, ಅದಕ್ಕೆ ಶ್ರೀ ಗುರುಗಳು—"ಈಗಲೇ ಈ ದೇಹವು ಬಿದ್ದುಹೋಗಲಿ ಮಹಾರಾಜಾ; ಸ್ವಾಮಿಯು ಭಾಷಣವೆಬ್ಬಿಸಿದಾಗ ಈ ದೇಹವು ಸುಮ್ಮನೆ ಕೂಡ್ರಲಾರದು. ಈ ದೇಹಕ್ಕೇನು ಸ್ವತಂತ್ರವದೆ! ಅದೊಂದು ಮೃದಂಗವಿದ್ದಹಾಗೆ. ಮೂಲೆಯಲ್ಲಿಟ್ಟುಬಿಟ್ಟರೆ ಮೃದಂಗವು ಸುಮ್ಮನೆ ಇದ್ದು ಬಿಡುತ್ತದೆ. ಆದರೆ ಬಾರಿಸುವವರು ಬಂದು ಬಾರಿಸಿದರೆ, ಅದು ಸುಮ್ಮನೆ ಇರಬಹುದೇನು? ಶ್ರೀ ಸ್ವಾಮಿಯು ನುಡಿಸಿದ ಭಾಷಣಗಳು ಈ ದೇಹದ ಕರ್ಣಕ್ಕೆ ಅಲಂಕಾರವಿಟ್ಟ ಹಾಗಾಗುತ್ತವೆ. ಆ ಭಾಷಣ ಕೇಳಿ ನಿಮಗೆ ಸಂತೋಷವಾಗಿದ್ದರೂ ಈ ದೇಹಕ್ಕೆ ಪರಮಾನಂದವಾಗುತ್ತದೆ. ದೇಹವು ಉದುರುತ್ತದೆಂಬ ಕಾರಣದಿಂದಲೋ ಏನೋ, ಸ್ವಾಮಿಯು ಈಗ ಭಾಷಣಗಳನ್ನು ಬಹಳ ಎಬ್ಬಿಸುತ್ತಿದ್ದಾನೆ. ಅದರ ಶ್ರವಣದ ಆನಂದದಲ್ಲಿ ಈ ದೇಹಕ್ಕೆ, ಅನ್ನ ಬೇಕಾಗಿಲ್ಲ, ನೀರು ಬೇಕಾಗಿಲ್ಲ! ಹೊಟ್ಟೆ ತುಂಬಿಹೋಗುತ್ತದೆ. ಆ ಆನಂದದ ಗುಂಗಿನಲ್ಲಿ ಒಂದೊಂದು ದಿನ ಬೆಳತನಕ ನಿದ್ದೆ ಬರುವದಿಲ್ಲ ಮಹಾರಾಜಾ!" ಎಂದು ನುಡಿಯುತ್ತಿದ್ದರು! ಅತಿಸಾರದ ವ್ಯಾಧಿಯು ದಿನದಿನಕ್ಕೆ ಹೆಚ್ಚುತ್ತಹೋಯಿತು. ಯಾವಾಗಲೂ ಕುಳಿತು ಬೋಧಮಾಡುವ ಪದ್ಧತಿಯುಳ್ಳ ಶ್ರೀ ಗುರುಗಳು, ಬೇನೆಯ ಆಯಾಸದಿಂದ ಯಾವಾಗಾದರೂ ಮಲಗಿಕೊಳ್ಳಹತ್ತಿದರು. ಹಗಲು ಎಂದೂ ಹಾಸಿಗೆಯ ಮೇಲೆ ಮಲಗಿಕೊಳ್ಳದ ಶ್ರೀ ಗುರುವು, ಹೀಗೆ ಯಾವಾಗಾದರೂ ತನ್ನ ವಿಸ್ತೃತವಾದ ಆಸನದ ಮೇಲೆ ಮಲಗುವದನ್ನು ನೋಡಿ, ಆನಂದವನಸ್ಥರಿಗೆ ವ್ಯಸನವಾಗಹತ್ತಿತು. ಪ್ರಿಯವಾಚಕರೇ, ನಮ್ಮ ಶೇಷಾಚಲ ಸದ್ಗುರುವು ಅಜಾತಶತ್ರುವು, ಕರುಣಾರಾಶಿಯು; ಆ ಮೂರ್ತಿಯನ್ನು ನೋಡಿದ ಕೂಡಲೆ ಜನರ ಪ್ರೇಮವು ಉಕ್ಕಿಬರುತ್ತಿತ್ತು! ಅಂಥವನು ಹೀಗೆ ಅಪರೂಪವಾಗಿ

ಮಲಗಿರುವದನ್ನು ನೋಡಿ ಆನಂದವನದ ಜನರು, ಅಂದರೆ, ಪರೋಪಕಾರಸಂಸ್ಥೆಯ ಇಂದ್ರಿಯರೂಪ ಶಿಷ್ಯರು, ತಮ್ಮ ಕರ್ತವ್ಯವನ್ನು ಬಿಟ್ಟು ಶ್ರೀಗುರುವಿನ ಬಳಿಯಲ್ಲಿ ಕುಳಿತುಕೊಳ್ಳಹತ್ತಿದರು. ತಾವು ಹೀಗೆ ಮಲಗಿದರೆ ಸೇವಾಕಾರ್ಯಕ್ಕೆ ವಿಘ್ನ ಒದಗುವದೆಂದು ತಿಳಿದು, ಬಲುಮೆಯಿಂದ ಶ್ರೀ ಗುರುವು ಎದ್ದು ಕುಳಿತುಕೊಳ್ಳಹತ್ತಿದನು. ಅದರಿಂದ ಆನಂದವನಸ್ಥರು ಧೈರ್ಯಶಾಲಿ, ತಮ್ಮ ತಮ್ಮ ಕಾರ್ಯದಲ್ಲಿ ತೊಡಗುವರು. ಆಗ ಶ್ರೀ ಗುರುವಿನ ಸ್ನಾನ-ಸಂಧ್ಯಾದಿಕರ್ಮಗಳು ಯಥಾಪ್ರಕಾರವಾಗಿ ನಡೆದಿದ್ದವು. ಬೋಧವ್ಯಾಪಾರವು ಭರದಿಂದ ಸಾಗಿತ್ತು. ಆದರೆ ಈ ಸ್ಥಿತಿಯು ಎಷ್ಟು ದಿವಸ ನಡೆಯಬೇಕು? ಒಂದು ದಿವಸ ಹೊಟ್ಟೆಶೂಲಿಯೆದ್ದು, ವಾಂತಿಯಿಂದ ಶ್ರೀಗುರುವು ಬಹಳ ನಿತ್ರಾಣನಾದನು. ಆಗ ಆತನು—ಮಹಾರಾಜಾ ಸ್ವಾಮಿಗೆ ತನ್ನ ದೇಹವು ಜಡವಾಗಹತ್ತಿತು. ಯಾವಾಗಲೂ ಕುಳಿತು ಕೊಳ್ಳುವ ತ್ರಾಣವುಳಿಯಲಿಲ್ಲ; ಮಲಗಿಕೊಳ್ಳುವೆನು, ಎಂದು ಹೇಳಿ, ಹಾಸಿಗೆ ಹಾಸಿಸಿ ಮಲಗಿಕೊಳ್ಳಹತ್ತಿದನು. ಹಾಸಿಗೆಯು ಮತ್ತು ಪರದೆಯು ಬರಲು, ಆನಂದವನದ ಜನರ ಸತ್ವನಾಶವಾಗಹತ್ತಿ ಪರೋಪಕಾರಸಂಸ್ಥಾರೂಪ ಪುರುಷನ ಇಂದ್ರಿಯರೂಪಶಿಷ್ಯರು, ಕರ್ತವ್ಯಮೂಢರಾದವರಾಗಿ ಶ್ರೀಗುರುಗಳ ಸುತ್ತುಮುತ್ತು ಕುಳಿತುಕೊಳ್ಳಹತ್ತಿದರು. ಇದು ಶ್ರೀ ಸದ್ಗುರುವಿನ ವ್ಯಾಧಿಕಾಲದಲ್ಲಾದ ಆನಂದವನಸ್ಥರ ಸತ್ವದ ಮೊದಲನೆಯ ಸಾರೆಯ ಹ್ರಾಸವೆಂದು ಹೇಳಬಹುದು. ಈ ಹ್ರಾಸಕಾಲದಲ್ಲಿ ಶಿಷ್ಯರು ಸಂಚಾರಕ್ಕೆ ಹೋಗಲಿಕ್ಕೆ ಹಿಂದುಮುಂದು ನೋಡಹತ್ತಿದರು. ಪಟುಶಿಷ್ಯರು, ನಾವು ಇನ್ನು ಗುರುಗಳನ್ನು ಬಿಟ್ಟು ಅಗಲುವ ಹಾಗಿಲ್ಲೆಂದು ಹೇಳಿ, ಉಳಿದಶಿಷ್ಯರನ್ನು ಬಲುಮೆಯಿಂದ ಸಂಚಾರಕ್ಕೂ, ಬೇರೆ ಬೇರೆ ಕೆಲಸಗಳಿಗೂ ಕಳಿಸಹತ್ತಿದರು. ಬರಬರುತ್ತ ಶ್ರೀ ಗುರುವಿನ ಬೇನೆಯು ಹೆಚ್ಚಾಗಲು, ಶಿಷ್ಯವರ್ಗವು ಗಡಬಡಿಸಿ ಯಾರು ಹೇಳಿದರೂ ಸಂಚಾರಕ್ಕೆ ಹೋಗದಹಾಗಾಗಿ, ಶ್ರೀ ಗುರುವಿನ ಸುತ್ತು ಮುತ್ತು ಕುಳಿತುಕೊಳ್ಳಹತ್ತಿತು. ಈ ಅವಸರದಲ್ಲಿ ಮತ್ತೊಮ್ಮೆ ಶ್ರೀ ಗುರುವಿಗೆ ಹೊಟ್ಟೆಶೂಲಿಯೆದ್ದು ಮತ್ತಿಷ್ಟು ಶಕ್ತಿಪಾತವಾಯಿತು. ಇಷ್ಟು ಆಗುವದರೊಳಗೆ, ಬೇನೆಯು ಬಿಡುದೋರದಂತೆ ಜಯಂತಿಯ ಕಾರ್ಯವಾಗಿತ್ತು. "ಅಹಾ! ಶ್ರೀ ಗುರುವು ವ್ಯಾಧಿಗ್ರಸ್ತನಾದನಲ್ಲ!" ಎಂಬ ಅಸಮಾಧಾನದಿಂದ ವೈಶಾಖಮಾಸವು ಕಳೆದು ಹೋಗಿತ್ತು. "ಅಯ್ಯೋ! ಶ್ರೀ ಗುರುವಿನ ಬೇನೆಯು ಹೆಚ್ಚಾಯಿತಲ್ಲ!" ಎಂಬ ದುಃಖೋದ್ಗಾರದಿಂದ ಜ್ಯೇಷ್ಠಮಾಸವು ಕ್ರಮಿಸಿಹೋಗಿತ್ತು; "ಎಲ, ಇದೇನು ಬಂತು! ಇನ್ನು ಶ್ರೀ ಗುರುವು

ಸ್ಥಿಯು ಅಕ್ಕವಾದ ಶ್ರೀ ಶೇಷಾಚಲ ಸದ್ಗುರೂತ್ತಮನು ಕಳೆದ ಮಾಘಮಾಸದಿಂದ, ಲೋಕದ ಪಾಪವನ್ನು ಭೋಗಿಸುವದೇ ಮೊದಲಾದ ಕಾರಣಗಳಿಂದ ವ್ಯಾಧಿಗ್ರಸ್ತನಾಗಲು, ಆತನಿಗೆ ಕಲಿಕಾಲ ದೂಷಿತವಾದ ಅಗ್ರಹಾರದ ಪರೋಪಕಾರಸಂಸ್ಥೆಯು ಭಾರವಾಗಹತ್ತಿತು. ಆತನು ಆ ಸಂಸ್ಥೆಯನ್ನು ನಿರಾಕರಿಸಹತ್ತಿದನು, ಇಂದ್ರಿಯರೂಪ ಶಿಷ್ಯರನ್ನು ಹಳಿಯುತ್ತಿದನು, ಪಂಚಪ್ರಾಣವೆನಿಸುವ ವಿದ್ಯಾರ್ಥಿಗಳಿಗೆ ಹೆದರಿಸಹತ್ತಿದನು, ಆತ್ಮನಸ್ವರೂಪನಾದ ತನ್ನನ್ನು “ನಾನು ಹುಟ್ಟಿ ಬಂದು ವ್ಯರ್ಥವಾಯಿತಲ್ಲ!” ಎಂದು ನಿರಾಕರಿಸಿಕೊಳ್ಳಹತ್ತಿದನು! ಈ ಕಲಿಕಾಲದಲ್ಲಿ ಆತನ ಸದ್ಬೋಧವ್ಯಾಪಾರವು ಭರದಿಂದ ಸಾಗಿತು. ಇದ್ದನಲ್ಲಿ ಬಹಳ ಮಾತಾಡಿದರೆ ಆಯಾಸವಾಗುತ್ತದೆಂದು ಯಾರಾದರೂ ಹೇಳಿದರೆ, ಅದಕ್ಕೆ ಶ್ರೀ ಗುರುಗಳು—“ಈಗಲೇ ಈ ದೇಹವು ಬಿದ್ದುಹೋಗಲಿ ಮಹಾರಾಜಾ; ಸ್ವಾಮಿಯು ಭಾಷಣವೆಬ್ಬಿಸಿದಾಗ ಈ ದೇಹವು ಸುಮ್ಮನೆ ಕೂಡ್ರಲಾರದು. ಈ ದೇಹಕ್ಕೇನು ಸ್ವತಂತ್ರವದೆ? ಅದೊಂದು ಮೃದಂಗವಿದ್ದಹಾಗೆ. ಮೂಲೆಯಲ್ಲಿಟ್ಟು ಬಿಟ್ಟರೆ ಮೃದಂಗವು ಸುಮ್ಮನೆ ಇದ್ದುಬಿಡುತ್ತದೆ. ಆದರೆ ಬಾರಿಸುವವರು ಬಂದು ಬಾರಿಸಹತ್ತಿದರೆ, ಅದು ಸುಮ್ಮನೆ ಇರುವುದೇನು? ಶ್ರೀ ಸ್ವಾಮಿಯು ನುಡಿಸಿದ ಭಾಷಣಗಳು ಈ ದೇಹದ ಕರ್ಣಕ್ಕೆ ಅಲಂಕಾರವಿಟ್ಟ ಹಾಗಾಗುತ್ತವೆ. ಆ ಭಾಷಣ ಕೇಳಿ ನಿಮಗೆ ಸಂತೋಷವಾಗಿದ್ದರೂ ಈ ದೇಹಕ್ಕೆ ಪರಮಾನಂದವಾಗುತ್ತದೆ. ದೇಹವು ಉದುರುತ್ತದೆಂಬ ಕಾರಣವೆಂದಲೋ ಏನೋ, ಸ್ವಾಮಿಯು ಈಗ ಭಾಷಣಗಳನ್ನು ಬಹಳ ಎಬ್ಬಿಸಹತ್ತಿದ್ದಾನೆ. ಅದರ ಶ್ರವಣದ ಆನಂದದಲ್ಲಿ ಈ ದೇಹಕ್ಕೆ, ಅನ್ನ ಬೇಕಾಗಿಲ್ಲ. ನೀರು ಬೇಕಾಗಿಲ್ಲ! ಹೊಟ್ಟೆತುಂಬಿದಹಾಗಾಗುತ್ತದೆ. ಆ ಆನಂದದ ಗುಂಗಿನಲ್ಲಿ ಒಂದೊಂದು ದಿನ ಬೆಳತನಕ ನಿದ್ದೆ ಬರುವದಿಲ್ಲ ಮಹಾರಾಜಾ!” ಎಂದು ನುಡಿಯುತ್ತಿದ್ದರು! ಅತಿಸಾರದ ವ್ಯಾಧಿಯು ದಿನದಿನಕ್ಕೆ ಹೆಚ್ಚುತ್ತಹೋಯಿತು. ಯಾವಾಗಲೂ ಕುಳಿತು ಬೋಧಮಾಡುವ ಪದ್ಧತಿಯುಳ್ಳ ಶ್ರೀ ಗುರುಗಳು, ಬೇನೆಯ ಆಯಾಸದಿಂದ ಯಾವಾಗಾದರೂ ಮಲಗಿಕೊಳ್ಳಹತ್ತಿದರು. ಹಗಲು ಎಂದೂ ಹಾಸಿಗೆಯ ಮೇಲೆ ಮಲಗಿಕೊಳ್ಳದ ಶ್ರೀ ಗುರುವು, ಹೀಗೆ ಯಾವಾಗಾದರೂ ತನ್ನ ವಿಸ್ತೃತವಾದ ಆಸನದ ಮೇಲೆ ಮಲಗುವದನ್ನು ನೋಡಿ, ಆನಂದವನಸ್ಥರಿಗೆ ವ್ಯಸನವಾಗಹತ್ತಿತು. ಪ್ರಿಯವಾಚಕರೇ, ನಮ್ಮ ಶೇಷಾಚಲ ಸದ್ಗುರುವು ಅಜಾತಶತ್ರುವು, ಕರುಣಾರಾಶಿಯು; ಆ ಮೂರ್ತಿಯನ್ನು ನೋಡಿದ ಕೂಡಲೆ ಜನರ ಪ್ರೇಮವು ಉಕ್ಕಿಬರುತ್ತಿತ್ತು! ಇಂಥವನು ಹೀಗೆ ಅಪರೂಪವಾಗಿ

ಮಲಗಿರುವದನ್ನು ನೋಡಿ ಆನಂದವನದ ಜನರು, ಅಂದರೆ, ಪರೋಪಕಾರಸಂಸ್ಥೆಯ ಇಂದ್ರಿಯರೂಪ ಶಿಷ್ಯರು, ತಮ್ಮ ಕರ್ತವ್ಯವನ್ನು ಬಿಟ್ಟು ಶ್ರೀಗುರುವಿನ ಬಳಿಯಲ್ಲಿ ಕುಳಿತುಕೊಳ್ಳಹತ್ತಿದರು. ತಾವು ಹೀಗೆ ಮಲಗಿದರೆ ಸೇವಾಕಾರ್ಯಕ್ಕೆ ವಿಘ್ನ ಒದಗುವದೆಂದು ತಿಳಿದು, ಜುಲುಮೆಯಿಂದ ಶ್ರೀ ಗುರುವು ಎದ್ದು ಕುಳಿತುಕೊಳ್ಳಹತ್ತಿದನು. ಅದರಿಂದ ಆನಂದವನಸ್ಥರು ಧೈರ್ಯಶಾಲಿ, ತಮ್ಮ ತಮ್ಮ ಕಾರ್ಯದಲ್ಲಿ ತೊಡಗುವರು. ಆಗ ಶ್ರೀ ಗುರುವಿನ ಸ್ನಾನ-ಸಂಧ್ಯಾದಿಕರ್ಮಗಳು ಯಥಾಪ್ರಕಾರವಾಗಿ ನಡೆದಿದ್ದರೂ ಬೋಧವ್ಯಾಪಾರವು ಭರದಿಂದ ಸಾಗಿತ್ತು. ಆದರೆ ಈ ಸ್ಥಿತಿಯು ಎಷ್ಟು ದಿವಸ ನಡೆಯಬೇಕು? ಒಂದುದಿನ ಹೊಟ್ಟೆಶೂಲಿಯೆದ್ದು, ವಾಂತಿಯಿಂದ ಶ್ರೀಗುರುವು ಬಹಳ ನಿತ್ರಾಣನಾದನು. ಆಗ ಆತನು—ಮಹಾರಾಜಾ, ಸ್ವಾಮಿಗೆ ತನ್ನ ದೇಹವು ಜಡವಾಗಹತ್ತಿತು. ಯಾವಾಗಲೂ ಕುಳಿತುಕೊಳ್ಳುವ ತ್ರಾಣವುಳಿಯಲಿಲ್ಲ; ಮಲಗಿಕೊಳ್ಳುವೆನು, ಎಂದು ಹೇಳಿ, ಹಾಸಿಗೆ ಹಾಸಿಸಿ ಮಲಗಿಕೊಳ್ಳಹತ್ತಿದನು. ಹಾಸಿಗೆಯ ಸುತ್ತು ಪರದೆಯು ಬರಲು, ಆನಂದವನದ ಜನರ ಸತ್ವ ನಾಶವಾಗಹತ್ತಿ ಪರೋಪಕಾರಸಂಸ್ಥಾರೂಪ ಪುರುಷನ ಇಂದ್ರಿಯರೂಪಶಿಷ್ಯರು, ಕರ್ತವ್ಯಮೂಢರಾದವರಾಗಿ ಶ್ರೀಗುರುಗಳ ಸುತ್ತುಮುತ್ತು ಕುಳಿತುಕೊಳ್ಳಹತ್ತಿದರು. ಇದು ಶ್ರೀ ಸದ್ಗುರುವಿನ ವ್ಯಾಧಿಕಾಲದಲ್ಲಾದ ಆನಂದವನಸ್ಥರ ಸತ್ವದ ಮೊದಲನೆಯ ಸಾರೆಯ ಹ್ರಾಸವೆಂದು ಹೇಳಬಹುದು. ಈ ಹ್ರಾಸಕಾಲದಲ್ಲಿ ಶಿಷ್ಯರು ಸಂಚಾರಕ್ಕೆ ಹೋಗಲಿಕ್ಕೆ ಹಿಂದುಮುಂದು ನೋಡಹತ್ತಿದರು. ಪಟುಶಿಷ್ಯರು, ನಾವು ಇನ್ನು ಗುರುಗಳನ್ನು ಬಿಟ್ಟು ಅಗಲುವ ಹಾಗಿಲ್ಲೆಂದು ಹೇಳಿ, ಉಳಿದಶಿಷ್ಯರನ್ನು ಜುಲುಮೆಯಿಂದ ಸಂಚಾರಕ್ಕೂ, ಬೇರೆ ಬೇರೆ ಕೆಲಸಗಳಿಗೂ ಕಳಿಸಹತ್ತಿದರು. ಬರಬರುತ್ತ ಶ್ರೀ ಗುರುವಿನ ಬೇನೆಯು ಹೆಚ್ಚಾಗಲು, ಶಿಷ್ಯವರ್ಗವು ಗಡಬಡಿಸಿ ಯಾರು ಹೇಳಿದರೂ ಸಂಚಾರಕ್ಕೆ ಹೋಗದಹಾಗಾಗಿ, ಶ್ರೀ ಗುರುವಿನ ಸುತ್ತು ಮುತ್ತು ಕುಳಿತುಕೊಳ್ಳಹತ್ತಿತು. ಈ ಅವಸರದಲ್ಲಿ ಮತ್ತೊಮ್ಮೆ ಶ್ರೀ ಗುರುವಿಗೆ ಹೊಟ್ಟೆಶೂಲಿಯೆದ್ದು ಮತ್ತಷ್ಟು ಶಕ್ತಿಪಾತವಾಯಿತು. ಇಷ್ಟು ಆಗುವದರೊಳಗೆ, ಬೇನೆಯು ಐಬುದೋರದಂತೆ ಜಯಂತಿಯು ಕಾರ್ಯವಾಗಿತ್ತು. "ಅಹಾ! ಶ್ರೀ ಗುರುವು ವ್ಯಾಧಿಗ್ರಸ್ತನಾದನಲ್ಲ!" ಎಂಬ ಅಸಮಾಧಾನದಿಂದ ವೈಶಾಖಮಾಸವು ಕಳೆದುಹೋಗಿತ್ತು. "ಅಯ್ಯೋ! ಶ್ರೀ ಗುರುವಿನ ಬೇನೆಯು ಹೆಚ್ಚಾಯಿತಲ್ಲ!" ಎಂಬ ದುಃಖೋದ್ಗಾರದಿಂದ ಜ್ಯೇಷ್ಠಮಾಸವು ಕ್ರಮಿಸಿಹೋಗಿತ್ತು; "ಎಲ, ಇದೇನು ಬಂತು! ಇನ್ನು ಶ್ರೀಗುರುವು

ಬೇನೆಯಿಂದ ಏಳುವದು ಹ್ಯಾಗೋ, ಏನೋ," ಎಂಬ ಶಂಕೆಯಿಂದ ಆಷಾಢವೂ ಸಪ್ಪೂ ಹಿಂಗಾತೊಡಗಿತು. ಆಷಾಢ ವದ್ಯ ೨೮ ದಿವಸ ಶ್ರೀ ಗುರುಗಳ ಹಿರಿಯರ ಕಾಲಶ್ರಾದ್ಧವು ಇರಲು, ಶ್ರೀ ಗುರುವು ಸ್ನಾನಮಾಡಿ, ಭಸ್ಮಧಾರಣಮಾಡಿಕೊಂಡು, ಆಸನದ ಮೇಲೆ ಕುಳಿತಾಗ, ಅವರ ದೇಹವು ಕೃಶವಾಗಿದ್ದರೂ ಬೇನೆಯ ಲಕ್ಷಣವು ಲೇಶವಾದರೂ ತೋರಲಿಲ್ಲ. ಶ್ರಾದ್ಧಕ್ರಿಯೆಗೆ ಯಾವ ಬಗೆಯ ವಿಘ್ನವೂ ಒದಗಲಿಲ್ಲ. ಇದು ಆಶ್ಚರ್ಯದ ಸಂಗತಿಯೇ ಸರಿ!

ಈ ಅವಧಿಯಲ್ಲಿ ಶ್ರೀಗುರುಗಳ ರೋಗನಿವಾರಣವಾಗಬೇಕೆಂದು ಸಣ್ಣಪುಟ್ಟ ವೈದ್ಯರು ಔಷಧ ಕೊಡುತ್ತ ಬಂದಿದ್ದರು. ಹುಬ್ಬಳ್ಳಿಯಿಂದ ಮ. ರಾ. ರಾ. ದೇವಧರಡಾಕ್ಟರರನ್ನು ಅಧಿಕ ಶ್ರಾವಣದಲ್ಲಿ ಕರಿಸಲು, ಅವರು ಬಂದು ಪರೀಕ್ಷಿಸಿ—"ಇದು ಅಲ್ಸರವು; ಅಸಾಧ್ಯವಾಗಿದೆ; ನಮಗೆ ಮೀರಿದ್ದೇರಿ. ಒಳ್ಳೇ ಡಾಕ್ಟರರನ್ನು, ಯುರೋಪದೇಶೀ ವೈದ್ಯರನ್ನು ಕರೆಸಿ ತೋರಿಸಿರಿ. ಮಳೆಗಾಲ ಬರುವದರೊಳಗೆ ವ್ಯವಸ್ಥೆ ಮಾಡಿರಿ; ಇಲ್ಲದಿದ್ದರೆ ಹೊಟ್ಟೆಯಲ್ಲಿ ಸೀಳಾಗುವದು, ಎಂದು ಹೇಳಿದರು. ಆಮೇಲೆ ಚಿತ್ರಕಲ್ಲದುರ್ಗದ ವೈದ್ಯರೊಬ್ಬರು ದೀರ್ಘಪ್ರಯತ್ನದಿಂದ ರೋಗನಿವಾರಣ ಮಾಡೇ ತೀರುವೆವೆಂಬ ನಂಬಿಗೆಯಿಂದ ತಿಂಗಳಾವೃತ್ತಿ ಔಷಧ ಕೊಟ್ಟರು; ಆದರೆ ರೋಗವು ಹೆಚ್ಚುವದಾಗಿ ಹೆಚ್ಚುತ್ತ ಹೋಯಿತಲ್ಲದೆ, ಕಡಿಮೆಯಾಗಲಿಲ್ಲ. ಹೊರಗೆ ಹೆಚ್ಚಾಯಿತು! ಹೊಟ್ಟೆ ಬೆಳ್ಳಗಾಗದೆ, ಉಬ್ಬುತ್ತ ನಡೆಯಹತ್ತಿತು. ಶ್ರೀಗುರುಗಳು ಆಷಾಢಮಾಸದ ಮೊದಲಿನಲ್ಲಿ—ಮಹಾರಾಜಾ, ಇನ್ನು ನಮ್ಮ ಆಟ ನಿಂತಿತು; ವೈದ್ಯರ ಆಟವೂ ನಿಂತಿತು, ಎಂದು ಹೇಳಿದರು; ಆದರೂ ಉಪಾಯ ಮಾಡುವವರಿಗೆ ಗುರುಗಳು ಬೇಡೆನ್ನಲಿಲ್ಲ; ವೈದ್ಯ ನೋಡುವವರಿಗೆ ವಿಶ್ವಾಸದಿಂದ ಕೈ ತೋರಿಸದೆಯಿರಲಿಲ್ಲ; ಕೊಟ್ಟ ಔಷಧವನ್ನು ಆಚಿತನಕ ತಕ್ಕೊಳ್ಳದೆಯಿರಲಿಲ್ಲ; ಆದರೆ, ಹೀಗೆ ಮಾಡಿರಿ, ಇಂಥ ವೈದ್ಯರನ್ನು ಕರೆಸಿರಿ, ಎಂದು ಮಾತ್ರ ಎಂದೂ ಹೇಳಲಿಲ್ಲ. ಹೀಗಿರುವಾಗ ಶ್ರಾವಣಮಾಸವು ಬಂದಿತು. ಮೊದಲನೆಯ ಗುರುವಾರದ ದಿವಸ ಬೇನೆ ಹೆಚ್ಚಾದಂತೆ ತೋರಿತು. ಆ ದಿನ ಗುರುಗಳು—ಮಹಾರಾಜಾ, ನಾಳಿನ ಶುಕ್ರವಾರದ ಸೇವೆಯು ನಡೆಯುವದೋ ಇಲ್ಲವೋ, ಎಂದು ಅನಲು, ಎಲ್ಲರೂ ಗಾಬರಿಯಾದರು; ಆದರೆ ಸಂಜೆಯಮುಂದೆ ಶ್ರೀ ಗೌರಿಯು ಗಡಿಗೆಯನ್ನು ತಂದು, ಶ್ರೀ ಗುರುಗಳ ಮುಂದೆ ಇಡಲು, ಅವರು ಭಕ್ತಿಯಿಂದ ಕೈಮುಗಿದು—"ಇನ್ನೇನು ಚಿಂತೆಯಿಲ್ಲ, ಅಮ್ಮನವರ ದರ್ಶನವಾಯಿತು" ಎಂದು ಹೇಳಿದರು. ಲೌಕಿಕರ ನಡತೆಗೆ ಶ್ರೀಗುರುವಿನ ನಡತೆಯು ಎಂದೂ ಭಿನ್ನವಾಗಿದ್ದಿಲ್ಲ; ದೇಹವಿಡಲಿಕ್ಕೆ ಇನ್ನೂ ಮೂರು ತಿಂಗಳು ಇರುವಾಗ ಗು

ರುಗಳು ಒಂದು ದಿನ ಹೇಳುವದನ್ನು–ಕೇಳುವದನ್ನೆಲ್ಲ ಮುಗಿಸಿಬಿಟ್ಟಿದ್ದರು. ಆದಿನ ಲೇಖಕನು ಗುರುಗಳಬಳಿಯಲ್ಲಿ ಇದ್ದಿಲ್ಲ. ಶ್ರೀಗುರುಗಳ ಪ್ರತ್ಯಕ್ಷಮಗನಾಬಳಿಯಲ್ಲಿದ್ದಿಲ್ಲವಂತೆ! ಆ ದಿನ ಗುರುಗಳು ಶಿಷ್ಯರನ್ನು ಕರೆದು–ಇನ್ನು ಈ ದೇಹವು ಉಳಿಯುವ ಲಕ್ಷಣ ತೋರುವದಿಲ್ಲ. ನನ್ನ ಸ್ಥಳದಲ್ಲಿ ನಾರಾಯಣಾಚಾರ್ಯರನ್ನು ತಿಳಿಯಿರಿ. ಮೊಮ್ಮಕ್ಕಳ ಲಗ್ನವನ್ನು ಹೀಗೆ ಹೀಗೆ ಮಾಡಿರಿ. ಪರೋಪಕಾರವನ್ನು ಹೀಗೆ ಹೀಗೆ ಮಾಡಿರಿ; ಚಿದಂಬರಮೂರ್ತಿಯು ಯಾವ ಪಾಪವನ್ನೂ ಅರಿಯದವನು. ಅವನನ್ನು ನಿಮ್ಮ ಚಿರಂಜೀವನೆಂದು ಭಾವಿಸಿ ನಡೆಯಿರಿ. ಅನಾಥರಾದ್ದರಿಂದ ಇವರನ್ನು ಸಂರಕ್ಷಣಮಾಡಿರಿ, ಕರ್ಮಕ್ಕೆ ಬದ್ಧರಾದ್ದರಿಂದ [illegible]ವರನ್ನು ನೋಡಿರಿ, ಇತ್ಯಾದಿ ಕೇವಲ ಲೌಕಿಕೋಕ್ತಿಗಳನ್ನು ನಮ್ಮಂಥ ಮೂಢರಿಗೆ ದಿಗಿಲು ಬೀಳುವಂತೆ, ಲೌಕಿಕಮನುಷ್ಯರು ತಮ್ಮ ಆಪ್ತರ ಮೇಲಿನ ಅವಿಶ್ವಾಸದಿಂದ ಹೇಳುವ ತೆರದಿಂದ ಶ್ರೀಗುರುಗಳು [illegible] ಎರಡು ತಾಸುಗಳ ವರೆಗೆ ಹೇಳಿದರಂತೆ! ಏನು ಇಂದು ದೇಹಬಿಡುವರೋ, ನಾಳೆ ದೇಹಬಿಡುವರೋ ಎಂದು [illegible], ಶ್ರೀ ಗುರುಗಳು, ಮುಂದೆ ಮೂರು ತಿಂಗಳವರೆಗೆ ಬಾಳಿದರು! ಪ್ರಮಾದಿಕರೇ, [illegible] ಯಾಗಿ ಹತ್ತುಬೇಕು! ಹೀಗೆ ನಾರಾಯಣಾಚಾರ್ಯರನ್ನು ತಮ್ಮ ಸ್ಥಾನದಲ್ಲಿ ನಿಯಮಿಸಿದ ಶ್ರೀಗುರುಗಳೇ, ಮುಂದೆ [illegible] ಸುಮಾರು [illegible] ಉತ್ತ[illegible]ವೂ ಜೆ[illegible] ಮಾಡಿಬಿಟ್ಟರು! ಶ್ರೀ ಗುರುಗಳ ದೇಹ ಮನೆಯಿಂದ [illegible] ಯಾ[illegible] ಇದ್ದಿಲ್ಲ. ಒಂದು ದಿನ ಶಿಷ್ಯೋತ್ತಮರಾದ [illegible] ಶ್ರೀಗುರುಗಳು ಹೇಳಿದ ನಿರ್ಯಾಣಕಾಲವು ತಪ್ಪಿ[illegible] ಶ್ರೀಗುರುಗಳನ್ನು ಕರೆದು—ಮುಂದೆ ಯಾವಾಗ [illegible] ಅಪ್ಪಣೆಯಾಗುವದು, ಎಂದು ಕೇಳಲು, ಅದಕ್ಕೆ ಶ್ರೀ ಗುರುಗಳು—ಮಹಾರಾಜರಾ ಇವೇನು ದೇವಾಂಶನೇ! ನಮ್ಮ ಹಾಗೆಯೇ ಮನುಷ್ಯನು, ಹೀಗೆಯೇ ಆಗುವದೆಂದು ಹ್ಯಾಗೆ ಹೇಳುವನು! ಸತ್ಯಸಂಕಲ್ಪವಿದ್ದಂತೆ ಆಗುವದು, ಎಂದು ಹೇಳಿದರು. ಇಂಥ ಕಪಟಕಂಟಕದ, ಹಾಗೂ ಜನರನ್ನು ವಿಕಲ್ಪಕ್ಕೆ ಈಡುಮಾಡುವ ಪ್ರಸಂಗಗಳು ಹಲವು ಒದಗಿರುವವು. ಅವರು ಒಮ್ಮೊಮ್ಮೆ—ಮಹಾರಾಜಾ, ಕಲಿಯುಗವು; ಬೈಲಾಡಂಬರ ಹೂಡಿದರೆ, ಜನರು ಈ ದೇಹವನ್ನು ಹರಕೊಂಡು ತಿಂದಾರು, ಎಂದು ಅನ್ನುತ್ತಿದ್ದರು. ಯಾರನ್ನು ಉದ್ದೇಶಿಸಿಯೂ ಗುರುಗಳು ತಮ್ಮ ನಿರ್ಯಾಣಕಾಲವನ್ನು ಒಡನುಡಿಯಲಿಲ್ಲ. ನುಡಿದದ್ದೆಲ್ಲ ಟೊಪ್ಪಿಗೆಯೇ ಆಯಿತು; ಇದರ ಹಿಂದಿನ ಪ್ರಕರಣದಲ್ಲಿ ಹೇಳಿದಂತೆ, ಭಾದ್ರಪದ ಶುದ್ಧ ೫ ಸೋಮವಾರ ಮಧ್ಯರಾತ್ರಿಯಲ್ಲಿ ತಮ್ಮೊಳಗೆ ತಾವೇ ಶ್ರೀಚ

ದಂಬರೇಶ್ವರನನ್ನು ಕುರಿತು ಕೇಳಿಕೊಂಡಂತೆ, ಇನ್ನು ನಿರ್ಯಾಣಕ್ಕೆ ಮೂರುದಿ
ನದ ಅವಕಾಶವಿರುವದೆಂದು ಸೂಚಿಸಿದರು!

ಶ್ರೀ ಗುರುಗಳ ವ್ಯಾಧಿಯಲ್ಲಿ ಆನಂದವನಕ್ಕೆ ಬಂದುಹೋಗುವ ಜನರ ಸಂಖ್ಯೆಯು
ಹೆಚ್ಚಿತು. ಬೇನೆಯ ನೆವದಿಂದ ಅನಾಯಾಸವಾಗಿ ಅತಿಥಿಸೇವೆಯು ಘಟಿಸುವ
ದೆಂದು, ಶ್ರೀಗುರುಗಳು ಅನ್ನುತ್ತಿದ್ದರು. ಹೀಗೆ ಬೇನೆಯನ್ನು ಅನುಭವಿಸುತ್ತ
ಸಾಧುಗಳು ಎಷ್ಟು ದಿನ ಇರುವರೋ, ಏನೋ, ಎಂದು ಜನರು ಶಂಕಿಸುತ್ತಲಿದ್ದರು
ಕೆಲವರು ಹ್ಯಾಗಾದರೂ ಮಾಡಿ ನವರಾತ್ರಿ ಮಾಡುವರೆಂದು ಅನ್ನುತ್ತಿದ್ದರು;
ಕೆಲವರು ದಕ್ಷಿಣಾಯನವನ್ನು ಕಳೆಯುವರೆಂದು ಅನ್ನುತ್ತಿದ್ದರು; ಕೆಲವರು ಮುಂದಿನ
ಜಯಂತಿಯನ್ನು ಮಾಡುವರೆಂದು ಅನ್ನುತ್ತಿದ್ದರು! ದೇಹಸ್ಥಿತಿಯನ್ನು ನೋಡಿನೋಡಿ
ಶಿಷ್ಯರು ಸಂಚಾರಬಿಟ್ಟು ಕುಳಿತದ್ದರಿಂದ ತಾವೇ ಉತ್ತರಕ್ರಿಯಾವ್ಯವಸ್ಥೆ ಮಾಡುವದ
ನ್ನು ತಿಳಿದೂ ತಿಳಿದು, ಶ್ರೀ ಗುರುವಿನ ಬರಿಯ ಲೌಕಿಕ ಮಾತಿಗೆ ಮಹತ್ವ ಕೊಟ್ಟ ಜನರು
ಹೀಗೆ ತರ್ಕಿಸುತ್ತಿರುವದನ್ನು ನೋಡಿದರೆ, ಮಾಯೆಯು ದಾಟಲಶಕ್ಯವಾದದ್ದೆಂದು
ಅನ್ನಬೇಕಾಗುತ್ತದೆ! ಹೀಗೆ ಮೋಸದಲ್ಲಿ ಕಾಲಕ್ರಮಣವಾಗಲು, ಐದುಗೋದಾನಗ
ಳಲ್ಲಿ ಒಂದು ಗೋದಾನವನ್ನು ಶ್ರೀ ಸ್ವಾಮಿಯ ಸಮಕ್ಷ ಕೊಡಬೇಕೆಂದು ಗಳಗ
ನಾಥ ಇವರು ಕೇಳಿಕೊಂಡರು. ಅದಕ್ಕೆ ಶ್ರೀ ಗುರುಗಳು ಒಪ್ಪಿಕೊಳ್ಳಲು, ಶ್ರಾವಣ
ಶುದ್ಧ ೮ ಬುಧವಾರದ ದಿವಸ ಗಳಗನಾಥ ಇವರು ಶ್ರೀ ಗುರುವಿನ ಸಮಕ್ಷ ಕುಟುಂ
ಬಸಹಿತ ಗೋಪೂಜೆಯನ್ನು ಮಾಡಿ, ಶ್ರೀ ಗುರುಗಳ ಕುಲಪುರೋಹಿತರಿಗೆ ವಿಧ್ಯುಕ್ತ
ವಾಗಿ ಗೋದಾನವನ್ನು ಕೊಟ್ಟರು. ಆ ದಿನ ಶ್ರೀ ಗುರುಗಳು ಅಂಬಡ ೧|| ತಾಸು
ನಿರೋಗಿಗಳಂತೆ ಕುಳಿತು ಜನರನ್ನು ಬೋಧಿಸುತ್ತಿದ್ದರು. ಅಂದಿನ ಶೋಭೆಯು
ವಿಲಕ್ಷಣವಾದದ್ದೂ, ಅಪೂರ್ವವಾದದ್ದೂ ಇತ್ತು! ಸ್ವಾಮಿಯ ಎಡ-ಬಲದಲ್ಲಿ
ಶಾಲಾಧ್ಯಾಪಕರೂ, ಬೇರೆ ಪ್ರತಿಷ್ಠಿತಗೃಹಸ್ಥರೂ ಕುಳಿತಿದ್ದರು. ಅವರ ಮುಂ-
ಭಾಗದಲ್ಲಿ ಅತ್ಯಂತ ಸಭ್ಯವಾದ ಸವತ್ಸಗೋವು ಕಂಬಕ್ಕೆ ಕಟ್ಟಲ್ಪಟ್ಟಿತ್ತು. ಚತು
ಶ್ಶಾಖೆಯ ೩೦-೩೫ ಜನವಿದ್ಯಾರ್ಥಿಗಳು ವೇದಘೋಷಮಾಡಲುಸಿದ್ಧರಾಗಿ, ಆಕಳ
ಸುತ್ತುಮುತ್ತಲೆ ಕುಳಿತಿದ್ದರು. ಅವರಆಚೆಯಲ್ಲಿ ಸುಮಂಗಲೆಯರೂ, ಬೇರೆಹೆಣ್ಣು
ಮಕ್ಕಳೂ, ಹುಡುಗರೂ ಆನಂದಪರವಶರಾಗಿ ಸಂದಣಿಗೊಂಡು ನಿಂತು ನೋಡುತ್ತ
ಲಿದ್ದರು. ಗೋದಾನದ ಶಾಸ್ತ್ರೋಕ್ತವಿಧಾನವು ಮುಗಿಯಿತು. ಚತುಶ್ಶಾಖೆಯ
ವರ ವೇದೋಕ್ತಾಶೀರ್ವಾದಗಳಾದವು. ಮರುದಿನ ವೇ. ಶಾ. ಸ. ಹಾನಗಲ್
ಮಹಾದೇವಶಾಸ್ತ್ರಿಗಳು ಅಧ್ಯಾಪಕರಾಗಿ ಪಾಠಶಾಲೆಗೆ ಬರಲು, ಶ್ರೀ ಗುರುಗಳು,

ಅಂದು ಅಖಂಡ ತಾಸಿನ ಮೇಲೆ ಕುಳಿತು, ಶಾಸ್ತ್ರಗಳಿಂದ ಗಣಪತಿಪೂಜೆಮಾಡಿಸಿ, ಒಂದು ವರ್ಗಕ್ಕೆ ತಮ್ಮ ಸಮಕ್ಷಮ ಅವರಿಂದ ಕಾವ್ಯಪಾಠವನ್ನು ಹೇಳಿಸಿದರು! ಪ್ರಿಯ ವಾಚಕರೇ, ಇನ್ನು ಮೇಲೆ ಆನಂದವನದಲ್ಲಿ ಪಾಠಶಾಲಾಸಂಬಂಧದ ಅಂಥ ದಿವ್ಯವಾದ ನೋಟವು ಕಣ್ಣಿಗೆ ಬೀಳಬಹುದೇನು! ಯಾಕೆ ಬೀಳಲಿಕ್ಕಿಲ್ಲ? ಶ್ರೀ ಸದ್ಗುರುವಿನ ಕೃಪಾದೃಷ್ಟಿಯೂ, ನಮ್ಮೆಲ್ಲರ ಪುಣ್ಯವೂ ಬಲವತ್ತರವಿರುವಾಗ, ಆನಂದವನಸ್ಥರು ಅದರ ವಿಷಯವಾಗಿ ಅವಿಶ್ವಾಸಪಡುವುದೇಕೆ?

ಹೀಗೆ ಶ್ರೀಗುರುವು ತನ್ನ ನೆಲೆಯನ್ನು ಯಾರಿಗೂ ಹತ್ತಗೊಡದೆ ವ್ಯಾಧಿಯನ್ನು ಅನುಭವಿಸುತ್ತ, ಅನ್ನೋದಕರಹಿತನಾಗಿ ಕೇವಲ ತನ್ನ ಸತ್ವದಿಂದ ಜೀವಿಸಿರಲು, ಅಗಡಿಯ ಸುತ್ತುಮುತ್ತು ಪ್ಲೇಗು ಹಬ್ಬಿ, ಅಗಡಿಯಲ್ಲಿ ಇಲಿಗಳು ಬಿದ್ದದ್ದಲ್ಲದೆ, ಹೊರಗಿನಿಂದ ಬಂದ ಒಂದೆರಡು ಪ್ಲೇಗಿಕೇಸುಗಳೂ ಅಗಡಿಯಲ್ಲಿ ಆದವು. ಆನಂದವನದಲ್ಲಿಯೂ ಇಲಿಗಳು ಬೀಳುವ ಲಕ್ಷಣಗಳು ತೋರಹತ್ತಿದವು. ಶ್ರೀಗುರುವಿನ ವ್ಯಾಧಿಯ ಮೂಲಕ ಮೊದಲೇ ಸತ್ವಹೀನವಾಗಿದ್ದ ಶಿಷ್ಯರು, ಮನಸ್ಸಿನಲ್ಲಿ ಬೆದರಿ, ಶ್ರೀಗುರುಗಳ ಮುಂದೆ—ಇಂದು ಇಲಿ ಬಿದ್ದವು, ಇಂದು ಕೇಸುಗಳಾದವು, ಇಂತು ಹೆಗ್ಗಣಸತ್ತಿತು, ಎಂದು ಹೇಳಹತ್ತಿದರು. ಶಿಷ್ಯರ ಈ ಕ್ಷುದ್ರಹೃದಯವನ್ನು ತಿಳಿದೂ, ಏನೋ, ಶ್ರೀಗುರುವು ತಾನು ಪರೋಪಕಾರಸಿಂಧುವಾದ್ದರಿಂದ—"ಮಹಾರಾಜರಾ, ಕಠಿಣಕಾಲ ಬಂದಿತು, ದೂರಗುಡಿಸಲು ಹಾಕಿರಿ. ಅಲ್ಲಿ ಮಂದಿಯಾರೂ ಬಂದರ ಬಾರದು. ಈ ದೇಹವನ್ನು ಗುಡಿಸಲಿಗೆ ಕರಕೊಂಡು ಹೋಗಿಬಿಡಿರಿ, ಈದೇಹಕ್ಕೆ ಧೈರ್ಯವದೆ," ಎಂದು ಕೊಡಲು, ಗುರ್ವಾಜ್ಞಾಪಾಲನಧುರಂಧರಶಿಷ್ಯರು ತಮಗೆ ಬೇಕಾದ ಮಾತಾದ್ದರಿಂದ, ಹಿಂದುಮುಂದಿನ ವಿಚಾರಮಾಡದೆ, ಗುಡಿಸಲು ಹಾಕಲಿಕ್ಕೆ ಕೊಣೆಯ ಹತ್ತಿದರು. ಸ್ಥಳನೋಡುವಂದರು ಸ್ಥಾನದ ಎಡಕ್ಕೆ ಬೇಡರಿ, ಬಲಕ್ಕೆ ಗುಡಿಸಲು ಹಾಕಿರಿ, ಎಂದು ಶ್ರೀಗುರುಗಳು ಹೇಳಿದ್ದರಂತೆ. ಅದರಂತೆ ಸ್ಥಾನದಿಂದ ಬಲಕ್ಕೆ ಆನಂದವನದಿಂದ ಸರಾಸರಿ ಒಂದು ಮೈಲಿನ ಮೇಲೆ ಗುಡಿಸಲು ಹಾಕತೊಡಗಲು, ಅಲ್ಲಿಂದ ಕಂಬಗಳನ್ನು ಕಿತ್ತುಕೊಂಡು ಹೊರಹೊರಡುವ ಪ್ರಸಂಗಬಂದಿತು. ಆ ಮೇಲೆ ಗುಡಿಸಲಿನ ಅಭಿಮಾನಿಗಳಾದ ಶಿಷ್ಯರು, ಪರಮಸಾಹಸಪಟ್ಟು ಶ್ರೀಗುರ್ವಾಜ್ಞೆಗೆ ವಿರುದ್ಧವಾಗಿ ಸ್ಥಾನದ ಎಡಕ್ಕೇ ನೈರ್ಋತ್ಯಪ್ರದೇಶದಲ್ಲಿ ಸರಾಸರಿ ಆನಂದವನದಿಂದ ೧೦ ಫರ್ಲಾಂಗಿನ ಮೇಲೆ ಗುಡಿಸಲು ಹಾಕಿಸಿದರು. ಶರೀರಕ್ಕೆ ಬಹಳ ಅಸಮಾಧಾನವಾಗುವದು; ಶ್ರೀಗುರುವಿನ ವ್ಯಾಧಿಯ ಮೂಲಕ ಮೊದಲೇ ಸತ್ವಹೀನವಾಗಿದ್ದ ಇಂದ್ರಿಯಸಮೂಹರೂಪಶಿಷ್ಯವರ್ಗವು, ಪ್ಲೇಗಿನಭಯದ ಮೂಲಕ ಮತ್ತಿಷ್ಟು ಸತ್ವಹೀನವಾಗಿ, ಪರಸ್ಥಳ

ದ ದೂರದೂರದ ಸಣ್ಣ ಸಣ್ಣ ಹುಡುಗರನ್ನು (ವಿದ್ಯಾರ್ಥಿಗಳನ್ನು) ಇಟ್ಟುಕೊಳ್ಳಲಿಕ್ಕೆ ಹಿದರೆ, ಶ್ರೀ ಗುರುವು—"ಧೈರ್ಯವಿದ್ದ ಹುಡುಗರು ಇರಲಿ, ಉಳಿದವರು ಹೋಗಲಿ" ಎಂದು ಹೇಳಿದ್ದನ್ನು ಲಕ್ಷಕ್ಕೆ ತಾರದೆ, ಶ್ರೀಗುರುವು ಇಷ್ಟು ಆಸ್ಥೆಯಿಂದ ಉತ್ತರಕ್ರಿಯೆಯು ಸಿದ್ಧತೆ ಮಾಡಿರಲು, ಔರ್ಧ್ವದೇಹಿಕಕರ್ಮವಾಗುವತನಕ ಯಾವ ಬಾಧೆಯೂ ತಟ್ಟಲಿಕ್ಕಿಲ್ಲೆಂದು ಮನಸ್ಸಿನಲ್ಲಿ ಎಣಿಸದೆ, ಶಾಲಾಭಿಮಾನಿಗಳೆಂದು ದುರಭಿಮಾನಪಡುವ ಗಳಗನಾಥ ಇವರು ಬಹು ದುಃಖದಿಂದ ಶ್ರಾವಣ ಶುದ್ಧ ೯ ಗುರುವಾರದ ದಿವಸ ಪಾಠಶಾಲೆಯನ್ನು ಬಂದುಮಾಡಿದರು! ಮರುದಿವಸ ಶುಕ್ರವಾರ ವಿದ್ಯಾರ್ಥಿಗಳಿಗೆ ಪಾಯಸದ ಸಮೃದ್ಧ ಊಟಮಾಡಿಸಿ, ಮುಂಗತ್ತ ಅವರನ್ನು ಅವರವರ ಊರಿಗೆ ಆ ದಿನವೇ ಬಹುತರ ಎಲ್ಲರನ್ನು ಗಾಡಿಯ ಖರ್ಚುಕೊಟ್ಟು ಕಳಿಸಿದರು. ವಿದ್ಯಾರ್ಥಿಗಳೂ-ಅಧ್ಯಾಪಕರೂ ಊಟಕ್ಕೆ ಕುಳಿತಾಗ ಮಾಡಿದ ಚತುರ್ವೇದಗಳ ಘೋಷದಿಂದ ಆನಂದವನಸ್ಥರಿಗೆ ದುಃಖವಿಶ್ರಾಂತವಾದದ್ದೇನೂ ಆಶ್ಚರ್ಯವಲ್ಲ. ಹುಡುಗರು ಹೇದವನ್ನುತ್ತಿರಲು, ಗಳಗನಾಥ ಇವರು ಶ್ರೀ ನಾರಾಯಣಭಗವಾನರನ್ನು ಕೇಳಿದರು—ಶ್ರೀಸ್ವಾಮಿ ಸುಪುಣ್ಯವೃದ್ಧಿಯೇ ಈ ಗಂಭೀರವಾದ ನೋಟವು ತಿರುಗಿ ಆನಂದವನದಲ್ಲಿ ಕಣ್ಣಿಗೆ ಬೀಳುವದು; ಸ್ವಂತ ಈಗೇ ಕಣ್ಣುತುಂಬ ನೋಡಿ, ಕಿವಿತುಂಬ ವೇದಘೋಷವನ್ನು ತುಂಬಿಕೊಳ್ಳಬೇಕೆಂದು ಹೇಳಿದರು. ಶ್ರೀ ಗುರುವಿನ ನಿರ್ಯಾಣಕಾಲಕ್ಕೆ ಇರುಕ್ಕದಿಂದ ವಿದ್ಯಾರ್ಥಿಗಳನ್ನು, ಅಧ್ಯಾಪಕರನ್ನೂ ಇಟ್ಟುಕೊಳ್ಳುವ ಧೈರ್ಯವು ಗಳಗನಾಥ ಇವರಿಗೆ ಆಗಲಿಲ್ಲ; ಅಂಥದೇನು ಬಂದದೆ! ಹುಡುಗರನ್ನು ಇಟ್ಟುಕೊಳ್ಳಿರೆಂದು ಹೇಳುವ ಧೈರ್ಯವು ನಾರಾಯಣಭಗವಾನರಿಗೂ ಆಗಲಿಲ್ಲ. ಸತ್ವಹೀನರಾದ ಇಬ್ಬರೂ, ಹುಡುಗರು ಹೋದರೆ ಸಾಕೆಂದು ಭಾವಿಸಿ, ಆನಂದವನದ ಸಂಸ್ಥಾಪಕ ಪುರುಷನ ಪಂಚಪ್ರಾಣಗಳನ್ನು ಕಳಿಸುವಂತೆ, ಹುಡುಗರನ್ನು ಕಳಿಸಿಬಿಟ್ಟು, ಸಂಸ್ಥೆಯನ್ನು ಶೋಭಾಹೀನವಾಗಿ ಮಾಡಿದರು! ಮುಂದೆ ಶ್ರೀಸದ್ಗುರುರೂಪ ಆತ್ಮನೊಬ್ಬನೇ ಪರೋಪಕಾರಸಂಸ್ಥೆಯು ದೇಹರೂಪವಾದ ಆನಂದವನದಲ್ಲಿ ಉಳಿದನು!! ಇದು ಸದ್ಗುರುವಿನ ವ್ಯಾಧಿಕಾಲದಲ್ಲಾದ ಆನಂದವನಸ್ವರ ಸತ್ವದ ತನುಸಾರೆಯ ಹ್ರಾಸವೆಂದು ಹೇಳಬಹುದು.

ಶ್ರೀ ಗುರುಗಳನ್ನು ಗುಡಿಸಲಿಗೆ ಕರೆಕೊಂಡು ಹೋಗುವ ಸಂಬಂಧದಿಂದ ಆನಂದವನದಲ್ಲಿ ಎರಡು ಪಂಗಡಗಳಾದವು —"ಗುರ್ವಾಜ್ಞೆಯಾಗಿದೆ, ಆದದ್ದಾಗಲಿ, ಗುಡಿಸಲಿಗೆ ಹೋಗಲೇಬೇಕೆ"ಂದು ಒಂದು ಪಂಗಡದವರು ಅಂದರು. "ಗುರ್ವಾಜ್ಞೆಯಾದರೂ ವಿಚಾರಮಾಡಬೇಕು, ನಾವು ಗುರುಗಳ ಎಲ್ಲ ಅಪ್ಪಣೆ

ಗಳನು ಪಾಲಿಸುತ್ತೇವಂತಲ್ಲ ನಮ್ಮ ಭಾಗ್ಯಕ್ಕಾಗಿ ಗುರುಗಳು ಇಂದಿರಬಹುದು. ಷ್ಟೇನಿಂದ ಇನ್ನು ಗುರುಗಳಿಗೇನು ಬೇಕಾಗಿದೆ? ಧೈರ್ಯವಿದ್ದವರು ಸೇವೆಮಾಡಿ ಕೊಂಡ ಆನಂದವನದಲ್ಲಿರಲಿ, ಧೈರ್ಯವಿಲ್ಲದವರು ಗುಡಿಸಿಲಿಗೆ ಹೋಗಲಿ ಬೈಲ ಹಸೆ, ಮೇಲೆ ಮಳೆಗಾಲ ಶ್ರೀ ಗುರುಗಳಿಗೆ ಅಸ್ವಸ್ಥ ಪ್ರಾಪ್ತವಾಗಿದೆ, ಬಾವಿ, ನೀರಿಲ್ಲ; ಗುಡಿಸಿಲಿಗೆ ಕರಕೊಂಡು ಹೋಗುವುದು ನೆಟ್ಟಗಲ್ಲ" ಇತ್ಯಾದಿ ರಗಳೆಗಳನ್ನು ಇನ್ನೊಂದು ಪಂಗಡದವರು ಊದಿದರು. ಕಡೆಗೆ ಶ್ರೀಗುರುಗಳು ಯಾವ ಕಾರಣದಿಂದಲೋ ಏನೋ, ನಾನು ಗುಡಿಸಿಲಿಗೆ ಹೋಗುವೆನು. ನನ್ನನ್ನು ಕರಕೊಂಡು ಹೋಗಿರೆಂದು ಆಗ್ರಹದಿಂದ ಹೇಳಿದರು! ಆಗ್ಗೆ ಕರಕೊಂಡು ಹೋಗಬೇಕೆಂಬ ಬಗ್ಗೆ ಭವತಿನಭವತಿಗಳು ಆಗಿ ಕಡೆಗೆ ಶ್ರಾವಣ ಶುದ್ಧ ೧೧ ರವಿವಾರ ದಿವಸ ಬೆಳಗಿನ ೫ ಗಂಟೆಯ ಸುಮಾರಕ್ಕೆ ಪಲ್ಲಕ್ಕಿಯಲ್ಲಿ ಶ್ರೀ ಗುರುಗಳನ್ನು ಮಲಗಿಸಿಕೊಂಡು ಗುಡಿಸಿಲಿಗೆ ನಡೆದರು! ಆಗ ಒಂದನೆಯ ಪಂಗಡದವರಿಗೆ ಬಹಳ ಸಮಾಧಾನವಾಯಿತು! ಎರಡನೆಯ ಪಂಗಡದವರಿಗೆ ಅಸಮಾಧಾನವಾಯಿತು! ಪ್ರಿಯವಾಚಕರೇ, ಏನೇ ಇರಲಿ ಶ್ರೀಗುರುಗಳಿಗೆ ಗುಡಿಸಿಲಿನಲ್ಲಿ ಸುಖವಾಗಲಿಲ್ಲ ಬೇನೆ ಹೆಚ್ಚುತ್ತಲೇ ನಡೆಯಿತು. ಅಗ್ರಹಾರಬಿಟ್ಟು ಗುಡಿಸಿಲಿಗೆ ಕರೆತಂದುದ್ದು ನೆಟ್ಟಗಾಗಲಿಲ್ಲೆಂದು ಬಹುಜನರಿಗೆ ಪಶ್ಚಾತ್ತಾಪವಾಯಿತು. ಗುರುಗಳಾ ಆನಂದವನವನ್ನು ನೆನೆಯಹತ್ತಿದರು. ಗುಡಿಸಿಲಿಗೆ ಹೋದ ೫ನೆಯ ದಿವಸ, ಅಂದರೆ ಶ್ರಾವಣ ಅಮಾವಾಸ್ಯಾ ಗುರುವಾರದ ದಿವಸ, ಶ್ರೀ ಗುರುಗಳಿಗೆ ಮಲ-ಮೂತ್ರ ಕಟ್ಟಿತು. ಆಗ ಗಣಗನಾಥ ಇವರೂ, ಎಲ್ಲೋ ಗುಡ್ಡೇ ಮೇಲ ಕೇರಿ ಮನೆಯಾ ರೂಪನ ಬೆಳಗುಮುಂಜಾನೆ ಶ್ರೀ ಗುರುಗಳನ್ನು ಆನಂದವನಕ್ಕೆ ಕರೆತರಬೇಕೆಂಬ ನಿಶ್ಚಯದಿಂದ, ಅಂದು ೫ ತಾಸು ರಾತ್ರಿಯ ಸುಮಾರಕ್ಕೆ ಆನಂದವನದಿಂದ ಗುಡಿಸಿಲಿಗೆ ಹೊರಟರು. ಅವರು ಗುಡಿಸಿಲಿಗೆ ಹೋದಾಗ, ಶಂಕರಭಗವಾನರ ಹೊರತು ಉಳಿದವರೆಲ್ಲರು ನಿದ್ದೆಹತ್ತಿ ಮಲಗಿದ್ದರು. ಶಂಕರಭಗವಾನರೊಬ್ಬರು ಶ್ರೀ ಗುರುಗಳ ಬಳಿಯಲ್ಲಿ ಕುಳಿತುಕೊಂಡಿದ್ದರು. ಶ್ರೀ ಗುರುಗಳು ಸುಮ್ಮನೆ ಮಲಗಿಕೊಂಡಿದ್ದರು. ಕರೆಯ ಹೋದವರು ಬರ್ರ್ಯ ಸದ್ಗುರುವಿಗೆ ತ್ರಾಸವಾದೀತೆಂದು ತಿಳಿದು, ಗದ್ದಲಮಾಡದೆ ಸುಮ್ಮನೆ ಸ್ಥಳ ಸಿಕ್ಕಲ್ಲಿ ಕುಳಿತುಕೊಂಡರು. ಮುಂದೆ ತಾಸೆರಡುತಾಸು ಹೋಗಿರಬಹುದು; ಏಳ-ಎಂಟು ತಾಸು ರಾತ್ರಿಯ ಸುಮಾರಕ್ಕೆ ಶ್ರೀ ಗುರುಗಳು ಶಂಕರಭಗವಾನರನ್ನು ಕುರಿತು (ಅಥವಾ ತಮ್ಮೊಳಗೇ ಅಂದರೂ ಅನ್ನಬಹುದು.)—ವೆಂಕಣ್ಣಮಾಸ್ತರರು ಸ್ವಾಮಿಯನ್ನು ಯಾಕೆ ಇಷ್ಟು ಉದಾಸೀನ ಮಾಡಿದರು! ಎಂದು ಕೇಳಲು, ಶಂಕರಭಗ

ಮಾನರು—ವೆಂಕಣ್ಣಮಾಸ್ತರರೂ, ಎಲ್ಲಪ್ಪನವರೂ ಇಲ್ಲಿಯೇ ಇದ್ದಾರೆ ಎಂದು ಹೇಳಿದರು. ಆಗ ಶ್ರೀ ಗುರುಗಳು ಅಂತಃಕರಣಪೂರ್ವಕವಾಗಿ—ಹೀಗೆ ಬರಿ, ಮಹಾರಾಜಾ, ಎಂದು ಕರೆಯಲು, ಗಳಗನಾಥ ಇವರು ಶ್ರೀ ಸದ್ಗುರುವಿನ ಅಂತಜ್ಞಾನಕ್ಕಾಗಿ ಮನಸ್ಸಿನಲ್ಲಿ ಆಶ್ಚರ್ಯಪಡುತ್ತ, ಶ್ರೀ ಗುರುಗಳ ಹತ್ತರಹೋಗಿ ಕುಳಿತುಕೊಂಡರು. ಆಗಿನಿಂದ ಶ್ರೀ ಗುರುಗಳು ೫ ಗಂಟೆಯವರೆಗೆ ಮಾತಾಡಿದರು. ಆ ಮಾತುಗಳನೆಲ್ಲ ಬರೆಯಲಿಕ್ಕೆ ಇಲ್ಲಿ ಸ್ಥಳವಿಲ್ಲ. ಮಲ-ಮೂತ್ರ ಕಟ್ಟಿದ್ದರಿಂದ, ಶ್ರೀ ಗುರುಗಳಿಗೆ ವ್ಯಥೆಯಾಗುತ್ತಿರುವಂತೆ ತೋರಿತು. ಅವರ ಮಾತಿನ ಮುಖ್ಯ ಆಶಯವು—"ಮಹಾರಾಜಾ, ಮುಂದೆ ಸೇವಾಧರ್ಮವು ಹ್ಯಾಗೆ ನಡೆಯಬೇಕು? ಎಲ್ಲರೂ ಕೂಡಿ ಆಲೋಚನೆಮಾಡಿ ಈ ದೇಹಕ್ಕೆ ಹೇಳಿರಿ. ಸ್ಮೃತಿಯಿಲ್ಲದೆ ಮಾತಾಡುತ್ತಾನೆಂದು ತಿಳಿಯಬೇಡಿರಿ. ಸ್ವಾಮಿಯು ನಿಮಗೇನು ಕೊಡತಕ್ಕದ್ದದೆ ಹೇಳಿರಿ? ಈಗ ಬೇಡ, ನಾಳಿಗೆ ಹೇಳಿರಿ? ಬೇಕಾದರೆ ಅಗ್ರಹಾರಕ್ಕೆ ಹೋಗಿ ಆಲೋಚನೆಮಾಡಿ ಹೇಳಿರಿ. ನಡೆಯಿರಿ, ಮಹಾಸ್ವಾಮಿಯ (ಚಿದಂಬರೇಶ್ವರನ) ದರ್ಶನಕ್ಕಾಗಿ ಅಗ್ರಹಾರಕ್ಕೆ ಹೋಗೋಣ" ಎಂಬದಾಗಿತ್ತು. ಕರಕೊಂಡು ಹೋಗಬಂದ ಶಮಗ, ಕೇಳಗಿ ಅಗ್ರಹಾರಕ್ಕೆ ಬರಲಿಕ್ಕೆ ಶ್ರೀ ಗುರುಗಳ ಸಮ್ಮತಿದೊರೆತಕ್ಕಾಗಿ, ಗಳಗನಾಥ ಇವರಿಗೂ ಎಲ್ಲಪ್ಪನವರಿಗೂ ಆನಂದವಾದದ್ದಕ್ಕಿಂತ, ಶ್ರೀ ಗುರುವಿನ ಮಹಿಮೆಗಾಗಿ ಅವರಿಗೆ ಆಶ್ಚರ್ಯವು ವಿಶೇಷವಾಗಿ ಆಯಿತು. ಭಾದ್ರಪದ ಶುದ್ಧ ೧ ಶುಕ್ರವಾರದಿವಸ ೫ ಗಂಟೆಗೆ ಪಲ್ಲಕ್ಕಿಯಲ್ಲಿ ಮಲಗಿ ಶ್ರೀ ಗುರುಗಳು ಪುನಃ ಆನಂದವನಕ್ಕೆ ಬಂದರು! ಶವಸದೃಶವಾಗಿದ್ದ ಆನಂದವನಕ್ಕೆ ಪುನಃ ಜೀವಕಳೆ ಬಂದಂತಾಯಿತು. ಶ್ರೀ ಗುರುವಿನ ಪಲ್ಲಕ್ಕಿಯು ಮಹಾದ್ವಾರವನ್ನು ಪ್ರವೇಶಿಸುವಾಗ ಕೆಲವರ ಕಣ್ಣಲ್ಲಿ ನೀರುಬಂದವು! ಶ್ರೀ ಗುರುಗಳು ತಾವು ಮೊದಲು ಮಲಗಿದ್ದ ಸ್ಥಾನದಲ್ಲಿ ಮಲಗಿದ ಬಳಿಕ, ಜನರನ್ನು ಕರೆದು—ಮಹಾರಾಜಾ, ನಿಮಗೆ ಬಹಳ ತ್ರಾಸವಾಯಿತು. ದಣದಿರಿ ದೇವರು ನಿಮ್ಮೆಲ್ಲರಿಗೆ ಕಲ್ಯಾಣಮಾಡಲಿ. ಈ ದೇಹವೇ ಬೇನೆಯಿಂದ ಇಷ್ಟು ವ್ಯಥೆಪಡುತ್ತಿರಲು, ಪಾಮರರು ಎಷ್ಟು ವ್ಯಥೆಪಡುತ್ತಿರಬಹುದು ಮಹಾರಾಜಾ!" ಎಂದು ನುಡಿಯುವಾಗ ಬಹು ಜನರ ಕಣ್ಣಲ್ಲಿ ನೀರುಗಳು ಬಂದವು! ಆನಂದದ ಭರದಲ್ಲಿ ಅಲ್ಲಿ ಇದ್ದವರಿಗೆಲ್ಲ ಪ್ರೇಸಿನವರು ಖೊಬ್ಬರಿ-ಸಕ್ಕರೆ ಕೊಟ್ಟದ್ದಕ್ಕಾಗಿ, ಶ್ರೀ ಗುರುಗಳು ಸಂತೋಷಪಡುತ್ತಿರಲು, ಸಾಂಗಲಿಯ ಭಿಷಗ್ವರ್ಯರಾದ ವೇ. ರಾ ರಾ. ರಾಮಭಾವು ಸಾಂಬಾರೇ ಇವರು ಟಾಂಗೆಯನ್ನು ಇಳಿದು ಆನಂದವನದೊಳಗೆ ಬಂದರು. ಆಗಿನ ಆನಂದವನ್ನು ವರ್ಣಿಸುವದು ಅಸಾಧ್ಯವೇ ಸರಿ.

ಸಾಂಬಾರೆ ವೈದ್ಯರು ಶ್ರೀಗುರುಗಳ ಪ್ರಕೃತಿಯನ್ನು ನೋಡಿ ವ್ಯಸನಪಟ್ಟು—"ಇಷ್ಟುದಿನ ಚಲೋ ವೈದ್ಯರನ್ನು ಕರೆಸಿ ತೋರಿಸದೆ ಇದ್ದದ್ದು ಬಹಳ ತಪ್ಪಾಯಿತು. ದೇಹವು ಪಕ್ವವಾಗಿ ಉದುರುವಹವಣಿಕೆಯಲ್ಲಿದೆ. ಔಷಧದ ಪ್ರಬಂತೆಯನ್ನು ದೇಹವು ತಡೆಯುವ ಹಾಗಿಲ್ಲ. ಮೇಲೆ, ಹೊಟ್ಟೆಯಲ್ಲಿ ತಿಂಗಳಿನಿಂದ ಅನ್ನವಿಲ್ಲ; ಆದರೂ ಉಪಾಯಮಾಡಿ ನೋಡುವೆನು" ಎಂದು ಹೇಳಿ, ಪರೀಕ್ಷಾರ್ಥವಾಗಿ ಎರಡು ಔಷಧಗಳನ್ನು ಕೊಟ್ಟರು. ಅವುಗಳಲ್ಲಿ ಒಂದು ಲಾಗೂ ಆಗಿ ಪುನಃ ಮಲಮೂತ್ರಗಳಾಗಹತ್ತಿದವು; ಇನ್ನೊಂದು ಔಷಧ ಲಾಗೂ ಆಗಲಿಲ್ಲ. ನಮ್ಮ ಶ್ರೀಗುರುಗಳ ನಾಡಿಯಲ್ಲಿ ಅಂತರವಾದದ್ದನ್ನು ಯಾವವೈದ್ಯರೂ ಹೇಳಲಿಲ್ಲ. ಅದರಂತೆ, ಸಾಂಬಾರೆವೈದ್ಯರಾದರೂ ನಾಡಿಗಳು ಬಹಳ ಚನ್ನಾಗಿಅವೆ, ಎಂದು ಹೇಳಿದರು. ದನಿ, ತೇಜಸ್ಸು, ನಾಡಿ ಇವು ಮೂರೂ ನಿರ್ಯಾಣವಾಗುವವರೆಗೂ ಒಂದೇಸವನಾಗಿದ್ದವೆಂದು ಹೇಳಬಹುದು. ಕಟ್ಟಕಡೆಗೆ ನಾಡಿಗಳು ಮೂತ್ರಭರದಿಂದ ಮಂದವಾಗಹತ್ತಿದವು; ಆದರೂ ವಾಣಿಯೂ, ತೇಜಸ್ಸೂ ಯಥಾಪ್ರಕಾರವಾಗಿದ್ದವು. ಇರಲಿ, ಮುಂದೆ ನಾಲ್ಕು ದಿನ ಶ್ರೀಗುರುಗಳಿಗೆ ಔಷಧೋಪಚಾರಗಳು ನಡೆದು ಮಂಗಳವಾರರಾತ್ರಿ ಪುನಃ ಶೌಚ ಮೂತ್ರಗಳು ಬಂದಾದವು. ಸೋಮವಾರ ವೈದ್ಯರು ಊರಿಗೆ ಹೋಗುತ್ತೇವೆನ್ನಹತ್ತಿದ್ದರು; ಆದರೆ ಅವರನ್ನು ಬಿಡಲಿಲ್ಲ. ಅವರು ಶ್ರೀಗುರುಗಳ ಅಂತವು ಬೇಗನೆ ಆಗುವದೆಂದು ಕೆಲವರ ಮುಂದೆ ಹೇಳಿದರು. ಸೋಮವಾರರಾತ್ರಿ ಶ್ರೀಗುರುಗಳಿಗೆ ಸಂಕಟಹುಟ್ಟಿ ಬಹಳ ತ್ರಾಸಪಟ್ಟರು. ಶಿಷ್ಯಚತುಷ್ಟಯರಿಗೂ, ತಮ್ಮ ಸೊಸೆಗೂ ಹಿಂದೆಹೇಳಿದಂತೆ ಶ್ರೀಗುರುಗಳು ಚರಣತೀರ್ಥ ಕೊಟ್ಟದ್ದು ಅದೇದಿನ ರಾತ್ರಿ. ತಮ್ಮ ನಿರ್ಯಾಣದ ನಿಶ್ಚಯಕಾಲವನ್ನಾದರೂ ಹೇಳಿದ್ದು ಅದೇದಿವಸವೇ! ಸೋಮವಾರವು ಹೋಯಿತು. ಮಂಗಳವಾರ ಅಶಕ್ತತೆಯು ಹೆಚ್ಚಿತು; ಗ್ಲಾನಿಯು ಮಿತಿಮೀರಿತು; ಆದರೂ ಗುರುಗಳು ನಡನಡುವೆ ಎದ್ದು ಕುಳಿತುಕೊಳ್ಳುತ್ತ ಮಾತಾಡುತ್ತಲಿದ್ದರು; ಆದರೆ ದಿನಕ್ಕಿಂತ ಕಡಿಮೆ. ಆ ದಿನರಾತ್ರಿ ಯಾವ ಬಗೆಯಿಂದಲೂ ಶ್ರೀ ಗುರುಗಳು ಜನರಿಗೆ ತ್ರಾಸಕೊಡಲಿಲ್ಲ; ಸುಮ್ಮನೆ ಮಲಗಿದ್ದರು. ಗಳಗನಾಥ ಇವರು ೩||-ಳ ಗಂಟೆಯ ಸುಮಾರಕ್ಕೆ ಶ್ರೀ ಗುರುಗಳ ಬಳಿಗೆ ಬಂದಾಗ, ಅವರು ಎದ್ದು ಕುಳಿತಿದ್ದರು. ಅವರಿಗೆ ಊರ್ಧ್ವಶ್ವಾಸವಿಟ್ಟಂತೆ ಗಳಗನಾಥ ಇವರಿಗೆ ತೋರಿತು. ಅವರು ಕೂಡಲೆ ರಾಮಭಾವುವೈದ್ಯರನ್ನು ಕರತಂದು ತೋರಿಸಲು, ಅವರು ನಾಡಿಯನ್ನು ಹಿಡಿದು ನೋಡಿ, ಗಳಗನಾಥ ಇವರನ್ನು ಕೈಹಿಡಿದು ಕರಕೊಂಡು ಹೋಗಿ—ಲಕ್ಷಣವು ನೆಟ್ಟಗಿಲ್ಲ. ಗುರುಗಳನ್ನು ಏನಾದರೂ ಕೇಳುವದಿದ್ದರೆ ಬೇಗನೆ

ಕೇಳಿಬಿಡಿರಿ, ಎಂದು ಹೇಳಲು, ಗಳಗನಾಥ ಇವರು ಅಸಮಾಧಾನಪಟ್ಟು, ನೆಟ್ಟಗೆ ಸ್ನಾನಕ್ಕೆ ಹೋಗಿ ಸ್ನಾನಮಾಡಿ, ತಮ್ಮ ಕುಟುಂಬಕ್ಕೆ—"ಸ್ವಾಮಿಗೆ ಬಹಳ ಹೆಚ್ಚು ಕಡಿಮೆಯಾಗಿದೆ, ಬೇಗನೆ ಮೈತೊಳಕೊಂಡು ಬಾ, ಎಂದು ಹೇಳಿ ತಾವು ಗುರುಗಳ ಬಳಿಗೆ ಹೋದರು. ಆಗ ಶ್ರೀಗುರುಗಳು ಮಲಗಿದ್ದರು. ಮುಂದೆ ಸ್ವಲ್ಪ ಹೊತ್ತಿನಲ್ಲಿಯೇ ಅಂದರೆ, ೫-೫॥ ಗಂಟೆಯ ಸುಮಾರಕ್ಕೆ ಗುರುಗಳು ಎಬ್ಬಿಸಿಕೂಡ್ರಿಸ ಹೇಳಿ ಅಂಗಿಯನ್ನು ತೆಗಿಸಿಕೊಂಡು ಪರದೆಯನ್ನು ಬಿಚ್ಚ ಹೇಳಿದರು. ಗುರುಗಳು ಸ್ಪಷ್ಟವಾಗಿ ಕುಳಿತು ಮಾತಾಡುವದನ್ನು ನೋಡಿ ಯಾರಿಗೂ ಕೆಟ್ಟ ಕಲ್ಪನೆ ಬರಲಿಲ್ಲ. ಯಾರಿಗೂ ಪರದೆಯನ್ನು ಉಚ್ಚುವ ಧೈರ್ಯವಾಗಲಿಲ್ಲ. ಶ್ರೀಗುರುಗಳು ಮಲಗಿಕೊಳ್ಳಲು, ಗಳಗನಾಥ ಇವರು ಶ್ರೀ ನಾರಾಯಣಭಗವಾನರನ್ನು ಕುರಿತು—ದಿನದಂತೆ ನಿಮ್ಮ ಆರತಿಯಾಗಲಿ, ಅನ್ನಲು, ಶ್ರೀ ನಾರಾಯಣಭಗವಾನರು—ನೀವೇ ನೆನಪು ಮಾಡಿ ಕೊಟ್ಟ ಹಾಗಾಯಿತು; ನಿನ್ನೆ ಆರತಿಯನ್ನು ಬಿಟ್ಟಿದ್ದೆವು, ಅಂದರು. ಬಳಿಕ ಶ್ರೀಗುರುಗಳ ಸೊಸೆಯಂದಿರೂ, ಶ್ರೀನಾರಾಯಣಭಗವಾನರ ಕುಟುಂಬವಾದ ತೀ. ಕು. ಸೌ. ಮಾತೃಶ್ರೀ ಗಂಗಾಬಾಯಿಯವರೂ ಆರತಿಯನ್ನು ಹಚ್ಚಿಕೊಂಡು ಬಂದರು. ಆಗಿನ ದಿವ್ಯ ಪ್ರಸಂಗವನ್ನು ವರ್ಣಿಸುವವರಾರು? ಎಲ್ಲರೂ ಉಚ್ಚಸ್ವರದಿಂದ ಆರತಿಪದವನ್ನು ಅನ್ನುವಾಗ, ಸುಮಂಗಲೆಯರು ಎತ್ತಿದ ಆರತಿಯ ದಿವ್ಯ ಜ್ಯೋತಿಯಲ್ಲಿ ಶ್ರೀ ಸದ್ಗುರುಮೂರ್ತಿಯ ಪ್ರಸನ್ನಮುಖವು ಆನಂದಕರವಾಗಿ ತೋರಿತು! ಇದನ್ನು ನೋಡಿ ಲೇಖಕನ ಕಂಠವು ಸದ್ಗದಿತವಾಗಿ ಅಶ್ರುಗಳು ದುರಿದವು. ಆರತಿಯ ಅನಂತರ ನಿತ್ಯಕ್ರಮದಂತೆ ಪಂಚಾಂಗಶ್ರವಣವಾಯಿತು. ಗು. ಭ. ಶ್ರೀನಿವಾಸಶಾಸ್ತ್ರಿಗಳು ದಿನಾಲು ಹೇಳುವಂತೆ—ಇಂದು ಸಪ್ತಮಿ, ಬುಧವಾರ, ಅನುರಾಧಾನಕ್ಷತ್ರವದೆ, ಅಮೃತಸಿದ್ಧಿಯೋಗವಿರುವದು, ಅನ್ನಲು, "ವಾಹವ್ವಾಽಪ್ಪಾ" ಎಂದು ಶ್ರೀ ಗುರುಗಳು ಸಂತೋಷಪಟ್ಟರು! ಆರತಿಯಾದ ಬಳಿಕ ಮುತ್ತೈದೆಯರು ಕಂಕುಮ ಹಚ್ಚಿಕೊಂಡರು. ಆಗ ಗಳಗನಾಥ ಇವರ ಕುಟುಂಬವು ಬಾರದೆಯಿದ್ದದ್ದರಿಂದ, ಗಳಗನಾಥ ಇವರಿಗೆ ಬಹಳ ಅಸಮಾಧಾನವಾಯಿತು. ಅವರು ಅಸಮಾಧಾನದಿಂದ ಕುಟುಂಬದ ಬಳಿಗೆ ಹೋಗಿ ಸಿಟ್ಟು ಮಾಡಲು, "ಸ್ವಾಮಿಗೆ ಒಮ್ಮೆಲೆ ಹೆಚ್ಚುಕಡಿಮೆಯಾದೀತೆಂದು ನನಗೆ ತೋರಲಿಲ್ಲ. ನಾನು ಮಜ್ಜಿಗೆ ಮಾಡುತ್ತಿದ್ದೆನು, ಇದಿಷ್ಟು ಮಜ್ಜಿಗೆ ಮಾಡಿ ಬರುತ್ತಿದ್ದೆನು, ಅನ್ನಲು, ಗಳಗನಾಥ ಇವರು—ಆಗಲಿ, ಅದೂ ಸ್ವಾಮಿಯ ಸೇವೆಯೇ. ಈಗ ಹುಡುಗರನ್ನು ಕರಕೊಂಡು ಬೇಗನಡೆ, ಅನ್ನಲು, ಆವರ ಕುಟುಂಬವು ಗಡಿಬಿಡಿಯಿಂದ ಗಳಗನಾಥ

ರನ್ನು ಹಿಂಬಾಲಿಸಿ ಮಕ್ಕಳೊಡನೆ ಸ್ವಾಮಿಯ ಬಳಿಗೆ ಬಂದರು ಆಗ ಶ್ರೀಗುರುಗಳವರು—“ಇವರಿದ್ದಾರೆಯೋ, ಅವರಿದ್ದಾರೆಯೋ” ಎಂದು ವಿಚಾರಿಸುತ್ತಿದ್ದರು. ತಮ್ಮ ಕುಟುಂಬವು ಶ್ರೀಸ್ವಾಮಿಯ ಆರತಿಯ ಕಾಲಕ್ಕೆ ಬಂದು ಕುಂಕುಮಹಚ್ಚಿಕೊಳ್ಳಲಿಲ್ಲವೆಂದು ಗಳಗನಾಥ ಇವರು ಮೂಢಭಾವನೆಯಿಂದ ಅಸಮಾಧಾನಪಡುತ್ತಿರಲು, ಶ್ರೀಗುರು ಮುಖದಿಂದ—“ಮುತ್ತೈದೆಯರಿಗೆ ಕುಂಕುಮಹಚ್ಚಿಕೊಳ್ಳ ಹೇಳಿರಿ,” ಎಂಬ ವಚನವು ಬಂದಕೂಡಲೆ ನಾರಾಯಣಭಗವಾನರ ಕುಟುಂಬವಾದ ತೀ. ಕು. ಸೌ. ಮಾತೃಶ್ರೀ ಗಂಗಾಬಾಯಿಯವರು ಎಲ್ಲರಗೂಡ ಗಳಗನಾಥ ಇವರ ಕುಟುಂಬಕ್ಕೂ, ಅವರಮಕ್ಕಳಿಗೂ ಕುಂಕುಮಹಚ್ಚಿದರು. ಆಗ ಗಳಗನಾಥ ಇವರು ಕೃತಜ್ಞತೆಯಿಂದ ಮೈಮರೆದರು. ಅವರ ಕಂಠವು ಮತ್ತೆ ಬಿಗಿಯಿತು!

ಅಷ್ಟರಲ್ಲಿ ಗಳಗನಾಥ ಇವರ ಹೇಳಿಕೆಯಂತೆ ಕೆಲವರು ಪ್ರೇಮಿಗಳು, ಗುಡಿಸಿಲಿಗೆ ಹೋಗುವಾಗ ಒಟ್ಟಿದ್ದ ಚಿಲ-ಚಪ್ಪಡಿಗಳನ್ನು ತೆಗೆಯ ಹತ್ತಿದರು; ಕೆಲವರು ಶ್ರೀ ಗುರುವು ಮಲಗಿದ್ದ ಭೋಜನಶಾಲೆಯ ಕಸತೆಗೆಯಹತ್ತಿದರು; ಕೆಲವರು ಒಂದು ಅಂಕಣವನ್ನು ಸಾರಿಸಹತ್ತಿದರು; ಗಳಗನಾಥ ಇವರು ಪರದೆಯನ್ನು ಉಚ್ಚಹತ್ತಿದರು; ಆದರೂ ಕೆಲವು ಶಿಷ್ಯರಿಗೆ ಶ್ರೀ ಗುರುವು ಇಷ್ಟುಬೇಗ ದೇಹವಿಡುವಂತೆ ತೋರಲಿಲ್ಲ; “ವೆಂಕಣ್ಣಮಾಸ್ತರರು ಪರದೆ ಉಚ್ಚಲಿಕ್ಕೆ ಇಷ್ಟೇಕೆ ಅವಸರ ಮಾಡುತ್ತಾರೆ” ನ್ನುವಹಾಗೆ ಕೆಲವರಿಗೆ ಮನಸ್ಸಿನಲ್ಲಿ ಆಯಿತು. ಈ ಅವಸರದಲ್ಲಿ ಗಳಗನಾಥ ಇವರ ಕುಟುಂಬಕ್ಕೆ, ಶ್ರೀಗುರುವಿನ ಪೂಜೆಮಾಡುವ ಪ್ರೇರಣೆಯಾಗಿ, ಅವರು ಒಂದು ತುಪ್ಪದದೀಪಹಾಕಿಕೊಂಡು, ಹಿಂದಕ್ಕೆ ಶ್ರಾವಣಸೋಮವಾರದ ದಿವಸ ಶ್ರೀವೇಂಕಟಪತಿಯ ಗುಡಿಯಿಂದ ತಂದಿದ್ದ ಸಿಪ್ಪಿತೆಂಗಿನ ಕಾಯಿಯನ್ನೂ, ೫ ರೂಪಾಯಿಗಳನ್ನೂ ತಕ್ಕೊಂಡು ಗುರುಗಳ ಬಳಿಗೆ ಬಂದರು. ಆಗಗುರುಗಳು—ಯಾಕೆ ಬಂದಿರುವರು, ಎಂದು ಕೇಳಲು, ಶ್ರೀ ನಾರಾಯಣಭಗವಾನರು, ಸ್ವಾಮಿಯಪೂಜೆ ಮಾಡುವರೆಂದು ಹೇಳಿದರು. ಗಳಗನಾಥ ಇವರ ಕುಟುಂಬವು ಶ್ರೀ ಗುರುವಿಗೆ ಕುಂಕುಮಹಚ್ಚಿ ಉಚ್ಚಸ್ವರದಿಂದ—ಈ ೫ ರೂಪಾಯಿ ಸೇವೆತಕ್ಕೊಳ್ಳಬೇಕೆಂದು ನುಡಿಯಲು, ಶ್ರೀಗುರುಗಳು ಇಸುಕೊಂಡು ಕೈಯಲ್ಲಿ ಹಿಡಕೊಂಡು ಭಗವಾನರ ಕೈಯಲ್ಲಿ ಕೊಟ್ಟರು! ಶ್ರೀಗುರುದತ್ತ ಫಲವನ್ನು ಸ್ವೀಕರಿಸಿ ಗಳಗನಾಥ ಇವರ ಕುಟುಂಬವು ಇತ್ತಬರಲು, ಪರಸ್ಥಳದ ಮುತ್ತೈದೆ ಪುಣ್ಯವಂತ ಹೆಣ್ಣುಮಗಳು ಸ್ವಾಮಿಯನ್ನು ಪೂಜಿಸಿ ೨ರೂಪಾಯಿಕೊಟ್ಟಳು. ಪ್ರಿಯವಾಚಕರೇ, ಅವಸಾನಕಾಲದಲ್ಲಿಯಾದರೂ ಶ್ರೀಸ್ವಾಮಿಯ ಆದರದ ವಾತ್ಸಲ್ಯವು ಪ್ರಕಟವಾದದ್ದನ್ನು ನೀವು ವಿಚಾರಿಸ

ದೆಇರಬಾರದು. ಲೌಕಿಕರನಿರ್ಯಾಣಕಾಲದಲ್ಲಿ ಈ ಮಹಿಮೆಯು ತೋರಬಹುದೆ! ಇರಲಿ, ಆ ಮೇಲೆ ಮುಂದೆ ೧೫ ನಿಮಿಷಗಳಲ್ಲಿ, ಆಗುವಹಾಗೆ ಎಲ್ಲಕೆಲಸಗಳು ಸ್ಪಷ್ಟವಾಗಿ ಆದವು. ಈ ಪ್ರಸಂಗದಲ್ಲಿ ವೈದ್ಯಶ್ರೇಷ್ಠ ರಾಮಭಾವು ಸಾಂಬಾರೆ ಯವರಿಂದ ಗಳಗನಾಥ ಇವರಿಗೆ ಬಹಳ ಸಹಾಯವಾಯಿತು. ಗಳಗನಾಥ ಇವರು ಶ್ರೀ ಗುರುಗಳ ಚಿರಂಜೀವರಾದ ಶ್ರೀ ಚಿದಂಬರಮೂರ್ತಿಗಳನ್ನು ಸ್ನಾನಕ್ಕೆ ಎಬ್ಬಿಸಿ ಸ್ನಾನಮಾಡಿಸಿ ಕರಕೊಂಡು ಬಂದರು. ಮೂರ್ತಿಗಳವರು ಶ್ರೀ ಗುರುಗಳ ತಲೆಗಿಂಬಿಗೆ ಕುಳಿತರು. ಆಗ ಗುರುಗಳು ತಮ್ಮ ಕುಲಪುರೋಹಿತರಾದ ವೇ. ರಾ. ರಾ. ಸೋಮಭಟ್ಟರನ್ನು ಕರೆದು, ಚರಣಕೊಡಿರೆಂದು ಕೇಳಿದರು. ಆ ಮೇಲೆ ಗಳಗನಾಥ ಇವರನ್ನು ಕರೆದು, ಎಂದೂ ಅವರಿಗೆ ಏನೂ ಹೇಳದ ಶ್ರೀ ಗುರುಗಳು—"ನಿಮ್ಮ ಅಂತಃಕರಣಕ್ಕೆ ಬಂದ ಹಾಗೆ ಮಾಡಿರಿ ಮಹಾರಾಜಾ" ಎಂದು ಹೇಳಿದರು. ಆ ಮೇಲೆ ಗಂಭೀರಸ್ವರದಿಂದ "ದತ್ತ ದತ್ತ" "ಚಿದಂಬರ ಚಿದಂಬರ" ಎಂದು ನುಡಿದು "ರಾಮ ರಾಮ ರಾಮ" ಎಂದು ಮೂರು ಸಾರೆ ಒಳ್ಳೆಯ ಆಘಾತದಿಂದ ನುಡಿದರು! ಆ ಮೇಲೆ ಕ್ರಮವಿಡಿದು,—ಇವರು ಇದ್ದಾರೆಯೋ, ಅವರು ಇದ್ದಾರೆಯೋ, ಎಂದು, ಸಾಕ್ಷಾತ್ ಶ್ರೀ ಕೃಷ್ಣಪರಮಾತ್ಮನು ಪರಂಧಾಮಕ್ಕೆ ತೆರಳುವಾಗ ಉದ್ಧವನನ್ನು ನೆನಿಸುವಂತೆ, ಬಹುತರ ಎಲ್ಲರನ್ನು ನೆನಿಸಿ ಕೇಳಿದರು! ಆ ಮೇಲೆ ಕೂಡಿದವರಲ್ಲಿ ಯಾರೋ, ಭಾಗೀರಥಿಯನ್ನು ತೆಗೆದುಕೊಂಡು ಬರ್ರಿ ಅನ್ನುತ್ತಿರಲು, ಶ್ರೀ ಗುರುಗಳು—"ಪಂಪಾವಿರೂಪಾಕ್ಷ, ಕಾಶೀವಿಶ್ವನಾಥ" ಎಂದು ಉಚ್ಚರಿಸಿದರು. ಕೂಡಲೆ ಹಿಂದಿನಪ್ರಕರಣದಲ್ಲಿ ವರ್ಣಿಸಿರುವಂತೆ ಕಾಶಿಯಿಂದ ಇಬ್ಬರು ಭಾಗೀರಥಿಯನ್ನು ತಕ್ಕೊಂಡು ಬಂದರು. ಅದೇ ಭಾಗೀರಥಿಯನ್ನು ಶ್ರೀಚಿದಂಬರ ಮೂರ್ತಿಗಳು ಶ್ರೀ ಗುರುಮುಖದಲ್ಲಿ ಹಾಕಿದರು! ಆದರಂತೆ ಕೆಲವ [illegible]ರಥಿಯನ್ನು ಹಾಕಲು, ಶ್ರೀಗುರುಗಳು ಸ್ವೀಕರಿಸಿದರು. ಆಗ ವೈದ್ಯರು ನಾಡಿಯು ನೋಡಿದರು. ಇವರ ಮೊದಲೆ ೧೫ ಮಿನಿಟುಗಳ ಹಿಂದೆ ಅವರು ಒಂದು ಔಷಧವನ್ನು ಕಫೋಪಶಮನಕ್ಕಾಗಿ ಕೊಟ್ಟಿದ್ದರು. ಶ್ರೀಗುರುಗಳಿಗೆ ಮರಣಕಾಲದಲ್ಲಿ ಯಾತರತ್ರಾಸವೂ ಆದಂತೆ ಯಾರಕಣ್ಣಿಗೂ ಬೀಳಲಿಲ್ಲ. ಸ್ತಬ್ಧತೆಯು ಇತ್ತು. ಭಾಗೀರಥಿಯನ್ನು ಹಾಕಿದ ಬಳಿಕ ಶ್ರೀಗುರುಗಳು ಸುಮ್ಮನಾದರು. ಮನಸ್ಸಿನಲ್ಲಿ ಅವರ ನಾಮಸಂಕೀರ್ತನ ನಡೆದಂತೆ ತೋರಿತು. ಅವರು ತಮ್ಮ ನಾಮಸಂಕೀರ್ತನ ಮಾಡುವಾಗಿನ ಸಾಂಪ್ರದಾಯದಂತೆ ಒಂದೆರಡು ಸಾರೆ ಚುಟಕೆ ಬಾರಿಸಿದಹಾಗೆ ತೋರಿತಂತೆ! ಗಳಗನಾಥ ಇವರು ಶ್ವಾಸವನ್ನು ಪರೀಕ್ಷಿಸುತ್ತಿರು

ವಂತೆ ಶ್ರೀ ನಾರಾಯಣಭಗವಾನರಿಗೆ ಸೂಚಿಸಿದರು. ಭಗವಾನರ ಲಕ್ಷವು ಅತ್ತಕ ಡೆಗೇ ಇತ್ತು. ಭಗವಾನರು ಎಲ್ಲಪ್ಪನವರಿಗೆ ರಾಮದಾಸರ "ಮನಾಚೆಶ್ಲೋಕ"ಗಳನ್ನು ಅನ್ನಹೇಳಿದರು. ಕೆಲವರು ಗೀತೆಯ ಪಾರಾಯಣ ಮಾಡುವಂತೆ ತೋರಿತು. ಕೆಲ ವರು ಗುರ್ವಷ್ಟಕವನ್ನು ಅನ್ನಹತ್ತಿದರು. ಬಹುಜನರು ಉಚ್ಚಸ್ವರದಿಂದ ಭಜನ ಮಾಡಹತ್ತಿದರು. ಆಗ ಯಾರಮೈ ಮೇಲೆಯೂ ಸ್ಮೃತಿಯಿದ್ದಂತೆತೋರಲಿಲ್ಲ. ಎಲ್ಲ ರೂ ಆನಂದ ಪರವಶವಾಗಿರುವಾಗ, ದುಃಖದ ನೆನಪು ಯಾರಿಗೆ ಆಗಬೇಕು! ವೈದ್ಯ ರಾಮಭಾವು ಇವರು ನಾಡಿಯನ್ನು ನೋಡಿ ಸಂಜ್ಞೆಮಾಡಲು, ಗಳಗನಾಥ ಇವರ ಸೂ ಚನೆಯಂತೆ ದರ್ಭಾಸನವು ಸಿದ್ಧವಾಗಿ, ಶ್ರೀಗುರುಗಳ ದೇಹವು ಎತ್ತಿ ಆ ಆಸನದಮೇ ಲೆಮಲಗಿಸಲ್ಪಟ್ಟಿತು. ಶ್ರೀಚಿದಂಬರ ಮೂರ್ತಿಗಳು ತೊಡೆಕೊಟ್ಟುಗುರುಗಳನ್ನು ಮಲಗಿಸಿಕೊಂಡು ಭಾಗೀರಥಿಯನ್ನು ಹಾಕಲು, ಗುರುಗಳು ಸ್ವೀಕರಿಸಿದರು. ಅಷ್ಟ ರಲ್ಲಿ ಊರೊಳಗಿಂದ ಶ್ರೀ ಪರಮೇಶ್ವರದೀಕ್ಷಿತರವರೂ, ಶ್ರೀಮಂತ ಅಪ್ಪಾಸಾಹೇಬ ದೇಸಾಯಿಯವರೂ ಶ್ರೀಗುರುಗಳ ಮುಖದಲ್ಲಿ ಭಾಗೀರಥಿಯ ಅಂಶವನ್ನು ಹಾಕಿ ದರು. ಅದನ್ನು ಶ್ರೀಗುರುಗಳುನಾಲಿಗೆಯಿಂದ ಗ್ರಹಿಸಿದರು. ಅಷ್ಟರಲ್ಲಿ ವೈದ್ಯ ರು ಮತ್ತೆನಾಡಿಯನ್ನು ನೋಡಿ ನಾಮಘೋಷಮಾಡಲಿಕ್ಕೆ ಸೂಚಿಸಲು, ಎಲ್ಲರೂ ಉಚ್ಚಸ್ವರದಿಂದ ನಾಮಘೋಷಮಾಡಿದರು. ಆಗ ಸದ್ಗುರುವು ವಿದೇಹ ಸ್ಥಿತಿ ಯನ್ನು ಹೊಂದಲು, ಜಡದೇಹವು ಸ್ವಾಭಾವಿಕಶಾಂತಮುದ್ರೆಯಿಂದ ತುಂಬಿತುಳುಕು ತ್ತಿದ್ದ ಮುಖದಿಂದಬಪ್ಪುತ್ತಿಸ್ತಬ್ಧವಾಗಿ ಶಯನಮಾಡಿ, ದೀರ್ಘನಿದ್ರಾವಶವಾಯಿತು!! ಆಗ ೬-೩ ಗಳಿಗೆ, ಅಂದರೆ ಸುಮಾರು ಬೆಳಗಿನ ೮|| ಗಂಟೆಯಾಗಿರಬಹುದು. ಶ್ರೀ ಗುರುವಿನ ಈ ನಿರ್ಯಾಣ ಕಾಲದಲ್ಲಿ ವೇ. ರಾ. ರಾ. ಭಿಷಗ್ವರ್ಯ ರಾಮಭಾವು ಸಾಂಬಾರೆಯವರಿಂದಲೂ, ವೇ. ರಾ. ರಾ. ಗು. ಭ. ಕೋಚರಿ ನಾಗೇಶಒಡೆಯ ರಿಂದಲೂ ಆದ ಸಹಾಯವನ್ನು ಲೇಖಕನೊಬ್ಬನೇಯಾಕೆ, ಇಡಿಯ ಅಗ್ರಹಾರ ದವರೂ, ಸಾಕ್ಷಾತ್ ಶ್ರೀ ಸದ್ಗುರೂತ್ತಮನೂ ಮರೆಯುವಹಾಗಿಲ್ಲ!

## ೯ನೆಯ ಪ್ರಕರಣ.

### ಶ್ರೀ ಗುರುವಿನ ಔರ್ಧ್ವದೇಹಿಕಕರ್ಮಗಳು.

ಶ್ರೀ ಗುರುವಿನ ಔರ್ಧ್ವದೇಹಿಕಕರ್ಮಗಳನ್ನು ವರ್ಣಿಸುವಮೊದಲು, ಒಬ್ಬ ಶಿಷ್ಯೋತ್ತಮಳ ಕರ್ತವ್ಯನಿಷ್ಠೆಯನ್ನು ಕುರಿತು ನಾಲ್ಕುಮಾತುಗಳನ್ನು ಬರೆಯುವದು ಚಂದ್ರಿಕೆಯ ಕರ್ತವ್ಯವಾಗಿದೆ; ಯಾಕಂದರೆ, ನಿಜವಾದ ಕರ್ತವ್ಯನಿಷ್ಠರು ಆನಂದವನದಲ್ಲಿ ದುರ್ಲಭ! ಈ ಪುಣ್ಯವಂತಳ ಹೆಸರು "ಹುಚ್ಚಮ್ಮ." ಶ್ರೀ. ಗ. ಭಾ. ಹುಚ್ಚಮ್ಮನು ಶ್ರೀ ಗುರುವಿನ ೭ ತಿಂಗಳ ಬೇನೆಯಲ್ಲಿ ತನ್ನ ಅಡಿಗೆ, ದನದ ವ್ಯವಸ್ಥೆ ಮೊದಲಾದ ಕರ್ತವ್ಯಗಳಲ್ಲಿ ತತ್ಪರಳಾಗಿದ್ದಳಲ್ಲದೆ, ಒಂದುದಿನವಾದರೂ ಕೆಲಸಬಿಟ್ಟು ಶ್ರೀ ಗುರುವಿನ ಬಳಿಯಲ್ಲಿ ಕುಳಿತುಕೊಂಡದ್ದನ್ನು ಲೇಖಕನು ನೋಡಿರುವದಿಲ್ಲ! ಬೇನೆಯ ಕಾಲದಲ್ಲಿ ಹೋಗಲಿ, ಶ್ರೀ ಗುರುವನ್ನು ದರ್ಭಾಸನದಲ್ಲಿ ಮಲಗಿಸಿದ ಬಳಿಕ ಜನರು ಒಂದೇಸವನೆ ಶ್ರೀ ಗುರುಗಳನ್ನು ಮುತ್ತಲು, ಕೈಜೋಡಿಸಿಕೊಂಡು ನಿಂತಿದ್ದ ನಮ್ಮ ಕಾರ್ಯನಿಷ್ಠ ಹುಚ್ಚಮ್ಮನಿಗೆ ಮುಂದಕ್ಕೆ ಬರಲಿಕ್ಕೆ ಸ್ಥಳದೊರೆಯದ್ದರಿಂದ, ದೂರದಲ್ಲಿಯೇ ಕೈಜೋಡಿಸಿ ನಿಂತುಕೊಂಡುಬಿಟ್ಟಳು! ಪ್ರಿಯವಾಚಕರೇ, ಆಗಿನ ಹುಚ್ಚಮ್ಮನ ಉದಾರವೃತ್ತಿಯನ್ನು ನೋಡಿ, ಇಂಥ ಕಾರ್ಯನಿಷ್ಠರನ್ನು ಕಂಡರೆ ಪಂಚಪ್ರಾಣಮಾಡುವ ಗಳಗನಾಥ ಇವರ ಕಂಠಬಿಗಿದು ಕಣ್ಣಲ್ಲಿ ನೀರು ಬಂದದ್ದೇನು ಆಶ್ಚರ್ಯವಲ್ಲ, ಈಗ ಸಹ ನಮ್ಮ ಹುಚ್ಚಮ್ಮನ ದೊಡ್ಡಗುಣವನ್ನು ವರ್ಣಿಸುವಾಗ ಗಳಗನಾಥ ಇವರ ಕುತ್ತಿಗೆಶಿರಬಿಗಿದವೆ! ಗಳಗನಾಥ ಇವರು ಹುಚ್ಚಮ್ಮನನ್ನು ಆದರದಿಂದ ಕರೆದು, ತಾವು ನಿಂತಸ್ಥಳಕೊಟ್ಟು ಹಿಂದಕ್ಕೆ ಸರಿಯಲು, ಹುಚ್ಚಮ್ಮನು, ತನ್ನ ಸ್ವಾಭಾವಿಕವಾದ ನಗೆಮೋರೆಯಿಂದ ಶ್ರೀ ಗುರುವನ್ನು ಕಣ್ಣುತುಂಬನೋಡಿದಳು. ಅದನ್ನು ನೋಡಿ ಗಳಗನಾಥ ಇವರು ಪರಮಾನಂದಪಟ್ಟರು! ಇಂಥ ಪ್ರಸಂಗಗಳಲ್ಲಿಯೇ ಮನುಷ್ಯರ ಪರೀಕ್ಷೆಯಾಗುವದು. ಕಾರ್ಯನಿಷ್ಠಳಾದ, ಹಾಗು ಡಾಂಭಿಕಳಲ್ಲದ ಭಕ್ತಶ್ರೇಷ್ಠ ಹುಚ್ಚಮ್ಮನು ಹೀಗೆ ನೋಡುತ್ತಿರುವಾಗ ಗಳಗನಾಥ, ಹಾಗು ಎಲ್ಲಪ್ಪನವರು ಪ್ರಸ್ಸಿನ ಜನರಾದ ವಿ. ಕಾಳೆ, ಕರ್ಪೂರ, ಜೋಗಳೇಕರ, ಶಿವರಾಮಪಂತ, ಚಿಕ್ಕಪ್ಪ,

ಕಮಲಪ್ಪ, ಗುಡ್ಡಪ್ಪ, ಪಂಚಪ್ಪ, ಮಹಾರುದ್ರಪ್ಪ ಮೊದಲಾದವರನ್ನು ಕರಕೊಂಡು ಮುಂದಿನ ಕಾರ್ಯಗಳಲ್ಲಿ ತೊಡಗಿದರು. ಶ್ರೀ ಸದ್ಗುರುಗಳು ಭಾದ್ರಪದಶುದ್ಧ ೩ ಬುಧವಾರ ಅನುರಾಧಾನಕ್ಷತ್ರದಲ್ಲಿ ಸರಾಸರಿ ೮॥ಗಂಟೆಗೆ ದೇಹಬಿಟ್ಟದ್ದರಿಂದ, ಸಕಾಲವಿರಲು, ಯಾರನ್ನೂ ಅವಸಾನಕಾಲಕ್ಕೆ ಕರೆಸುವಕಾರಣಬೀಳಲಿಲ್ಲ! ಶ್ರೀ ಗುರುವು ನಮಗೆ ಹೇಳದೆ ಕೇಳದೆ ದೇಹಬಿಟ್ಟನೆಂದು ಆತನಿಗೆ ಅಪಕೀರ್ತಿಕೊಡುವ ಕಾರಣವೂ ಉಳಿಯಲಿಲ್ಲ! ಯೋಗವಿದ್ದವರಿಗೆಲ್ಲ ಶ್ರೀ ಗುರುವಿನ ಅಲಭ್ಯನಿರ್ಯಾಣ ಮಹೋತ್ಸವದ ದರ್ಶನಾನಂದವು ಲಭಿಸಿತು! ಇರಲಿ.

ಪೂರ್ವದಲ್ಲಿ ಶ್ರೀಗುರುವಿನ ದೇಹಸಂಸ್ಕಾರದ ಸ್ಥಾನದಬಗ್ಗೆ ಯಾರೂ ಎಂದೂ ಮಾತಾಡದಿದ್ದರೂ, ಏಕಸಮಯಾವಚ್ಛೇದದಿಂದ ಎಲ್ಲರಮನಸ್ಸಿನಲ್ಲಿ ಶ್ರೀ ಗುರುವಿನ ದೇಹದ ಸಂಸ್ಕಾರವನ್ನು ಆನಂದವನದ ಬ್ರಹ್ಮಭೋಜನಸ್ಥಾನವಾದ ದೊಡ್ಡ ಆವಾರದ ಮಧ್ಯದಲ್ಲಿಯೇ ಮಾಡಬೇಕೆಂದು ಬಂದಿತು. ಅದಕ್ಕೆ ಶ್ರೀಮಂತ ರಾಮಚಂದ್ರ ಗೌಡ ಬಹದ್ದೂರದೇಸಾಯಿಯವರೂ ಒಪ್ಪಿದ್ದರಂತೆ! ಶ್ರೀಮಂತ ಅಪ್ಪಾಸಾಹೇಬರು ಪ್ರತ್ಯಕ್ಷ ಬಂದಿದ್ದು, ಅಲ್ಲಿ ಸಂಸ್ಕಾರ ಮಾಡುವದಕ್ಕೆ ಸಂಪೂರ್ಣ ಒಪ್ಪಿಗೆಯನ್ನಿತ್ತರು. ಶ್ರೀಗುರುಗಳಂತು ಇಂಥ ಮಾತು ಹೇಳತಕ್ಕವರೇ ಅಲ್ಲ. ಬಳಿಕ ಶ್ರೀ ನಾರಾಯಣಭಗವಾನರನ್ನು ಕೇಳಿ ಗಳಗನಾಥಮಾಸ್ತರರೂ, ಕರ್ಪೂರಮಾಸ್ತರರೂ, ಎಲ್ಲಪ್ಪನವರೂ, ಬೇರೆ ಕೆಲವರೂ, ಆವಾರದ ಮಧ್ಯಸ್ಥಾನವನ್ನು ಗೊತ್ತುಮಾಡಿ ಹುಲ್ಲು ತೆಗೆದು ಸ್ವಚ್ಛಮಾಡಿಸಾರಿಸಿದರು. ಪ್ರೆಸ್ಸಿನಜನರು ಕಟ್ಟಿಗೆಗಳನ್ನು ಒಟ್ಟಿದರು. ಮ. ರಾ ರಾ ರಂಗನಗೌಡರು ಊರೊಳಗೆ ಹೋಗಿ ಸರಾಸರಿ ಅರ್ಧಛಕ್ಕಡಿ ಗಂಧದ ಕಟ್ಟಿಗೆಗಳನ್ನು ಯಜಮಾನರಮನೆಯಿಂದ ತಂದರು. ಕ್ಷಣಮಾತ್ರದಲ್ಲಿ ಅಗಡಿಯೊಳಗೆಲ್ಲ ಸುದ್ದಿಹಬ್ಬಿ, ಹಲವರು ಕಪ್ಪುರ-ಗುಗ್ಗುಳ-ಲೋಭಾನಗಳನ್ನು ತಕ್ಕೊಂಡು ಬಂದರು. ಜನರಿಂದ ಆನಂದವನದ ಪ್ರಶಸ್ತವಾದ ಆವಾರವು ಅಲಂಕೃತವಾಯಿತು. ಊರಲ್ಲಿ ಕಪ್ಪುರ-ಲೋಭಾನಗಳು ಸಿಗದಂತಾದವು! ಸರಾಸರಿ ೧೧ ಗಂಟೆಯಾಗಲು, ಶ್ರೀ ಚಿದಂಬರಮೂರ್ತಿಗಳ ಕ್ಷೌರವಾಗಿ ಮಂತ್ರಾಗ್ನಿಯ ಕರ್ಮಕ್ಕೆ ಆರಂಭವಾಯಿತು. ಸರಾಸರಿ ೧೨ ಗಂಟೆಗೆ ಯಥಾಸಾಂಗಕರ್ಮವಾಗಿ ಸಮಂತ್ರಕವಾಗಿ ಶ್ರೀಗುರುಗಳ ದೇಹಕ್ಕೆ ಅಗ್ನಿಸಂಸ್ಕಾರವಾಯಿತು! ಗುಗ್ಗುಳ, ಲೋಭಾನ, ಕಪ್ಪುರಗಳಿಂದ ಅಗ್ನಿಯು ಪ್ರದೀಪ್ತವಾಯಿತು. ಭಜನೆಯು ನಡೆದಿತ್ತು. ಎಷ್ಟೋ ಜನರು ಚಿತೆಗೆ ಕಾಯಿಒಡೆದರು. ಕೆಲವರು ಚಿತೆಯನ್ನು ಪೂಜಿಸಿದರು. ಒಬ್ಬರ ಕಣ್ಣಲ್ಲಿ ತಟ್ಟಂದು ನೀರು ಉದುರಲಿಲ್ಲ. ಅಗ್ನಿಯು ಪ್ರದೀಪ್ತವಾಗಿ

ದೇಹವು ದಹಿಸುತ್ತಿರುವಾಗ ಊರೊಳಗಿನ ನೇಕಾರರಭಜನದ ಮೇಳದವರು ತಾಳ-ವಾದ್ಯಗಳೊಡನೆ ಸುಸ್ವರವಾಗಿ ಭಜನಮಾಡುತ್ತ ಚಿತೆಯನ್ನು ಸುತ್ತುವರಿಯುಹತ್ತಿದರು. ಆಗಿನ ವಿಲಕ್ಷಣ ಪ್ರಸಂಗದಿಂದ ಜನರ ಮನಸ್ಸಿನಲ್ಲಿ ಭಕ್ತಿಯುಕ್ತ ಔದಾಸೀನ್ಯವು ಉತ್ಪನ್ನವಾದಂತೆ ತೋರಿತು. ಪ್ರಿಯವಾಚಕರೇ, ಹುಟ್ಟಿದಪ್ರಾಣಿಗಳಿಗೆ, ಅವರು ಸತ್ಪುರುಷರಿರಲಿ-ಅಸತ್ಪುರುಷರಿರಲಿ, ಅವತಾರಿಕರಿರಲಿ-ಪಾಮರರಿರಲಿ ಎಂದಾದರೊಂದು ದಿನ ಮರಣವು ತಪ್ಪಿದ್ದಲ್ಲೆಂಬದು ಆಗ ಸ್ಪಷ್ಟವಾಗಿ ಮನಸ್ಸಿಗೆ ತೋರಿ, ಸ್ವಾಭಾವಿಕವಾದ ಸ್ಮಶಾನವೈರಾಗ್ಯವು ಎಲ್ಲರಲ್ಲಿಯೂ ಉತ್ಪನ್ನವಾಯಿತು. ಕಾರ್ಯಾವೇಶದಲ್ಲಿದ್ದ ಲೇಖಕನ ಮನಸ್ಸಿಗೆ ಈಗ ಶ್ರೀಗುರುವಿನ ಒಂದೊಂದೇ ಮಹಿಮೆಗಳೂ, ಸದ್ಗುಣಗಳೂ ತೋಚಿ, ಆ ಮನಸ್ಸಿಗೆ ವ್ಯಥೆಯಾಗಹತ್ತಿತು! ಅಷ್ಟರಲ್ಲಿ ಒಂದು ಹೃದಯದ್ರಾವಕನೋಟವು ಕಣ್ಣಿಗೆ ಬಿದ್ದಿತು. ಬಹುಜನವೈದ್ಯರು ಶ್ರೀಗುರುಗಳ ಹೊಟ್ಟೆಯಲ್ಲಿ, ಒಂದು ದೊಡ್ಡ ಕೊಡನೀರು ಇರುತ್ತದೆಂದು ಹೇಳಿದ್ದರು. ಕೆಲವರು ಶ್ರೀಗುರುಗಳ ಮೈಯೊಳಗಿನ ರಕ್ತವೆಲ್ಲ ಕಫವಾಯಿತೆಂದು ಹೇಳಿದರು; ಆದರೆ ಶ್ರೀಗುರುವು ಈ ಹೊಟ್ಟೆಯಲ್ಲಿ ನೀರಿರದೆ ಲೋಕದ ಪಾಪದಿಂದ ದೂಷಿತವಾದ ರಕ್ತವಿರುತ್ತದೆಂದು ತೋರಿಸುವನೋ, ಅನ್ನುವಂತೆ, ಒಂದು ಕೊಡ ರಕ್ತವು ಚಿತೆಯ ಬುಡದಲ್ಲಿ ನಿಂತು ಹೊರಗೆ ಹರಿದು ಬಂದಿತು! ಅದನ್ನು ನೋಡಿ ಎಲ್ಲರ ಮೈಕೂದಲುಗಳು ಜುಮ್ಮೆಂದವು. ಶುಷ್ಕದೇಹದಿಂದ ಇಷ್ಟುರಕ್ತಹರಿದದ್ದನ್ನು ನಾವು ನೋಡಲಿಲ್ಲೆಂದು ಬಹು ಜನರದೇಹಸಂಸ್ಕಾರಮಾಡಿ ಅನುಭವಪಟ್ಟ ಕೊಟ್ಟೂರದ ರಾ. ರಾ. ಪಂಪಣ್ಣನವರೂ ಬೇರೆ ಕೆಲವರೂ ಹೇಳಿದರು! ಶ್ರೀ ಅಗ್ನಿನಾರಾಯಣನು ಲೋಕದ ಪಾಪಮಿಶ್ರಿತ ಈ ರಕ್ತವನ್ನು ಸುಡುವ ನೆವದಿಂದ ಶ್ರೀಗುರುವಿನ ದೇಹವನ್ನು ವೇಗದಿಂದ ಸುಡಹತ್ತಿದನು! ಮಧ್ಯಾಹ್ನದ ೩ ಗಂಟೆಯಾಗಲು, ದೇಹವು ಭಸ್ಮವಾಯಿತು. ಆಗ ಭಜನೆಯವರಿಗೂ, ಬಂದ ಯಾವತ್ತು ಬ್ರಾಹ್ಮಣೇತರ ಜನರಿಗೂ, ಹಿಡಿಹಿಡಿ ಸಕ್ಕರಿ, ಒಂದೊಂದು ಆಣೆ ದಕ್ಷಿಣೆಯನ್ನು ಕೊಟ್ಟರು. ನಿತ್ಯಕರ್ಮ ಹಿಡಿದದ್ದರಿಂದ ಅಂದಿನ ಕರ್ಮವು ಸಾಂಗವಾಗಲು, ಹೊತ್ತುಮುಣುಗಿ ಊಟವಾಯಿತು. ಆನಂದವನಸ್ಥರ ಔದಾಸೀನ್ಯವು ಹೆಚ್ಚಿ, ಅದಕ್ಕೆ ಮೆಲ್ಲಮೆಲ್ಲನೆ ದುಃಖದ ಸ್ವರೂಪವು ಬರತೊಡಗಿತು; ಆದರೆ ಗುರ್ವಾಜ್ಞೆಯನ್ನು ಮೀರಿ ಯಾರೂ ಕಣ್ಣೀರು ಹಾಕಿದಂತೆ ತೋರಲಿಲ್ಲ!

ಶ್ರೀ ಚಿದಂಬರ ಮೂರ್ತಿಗಳೊಡನೆ ನಾಲ್ವರು ಶಿಷ್ಯರು, ಅಂದರೆ ಗು. ಭ. ನಾರಾಯಣ ಭಗವಾನರು, ಶಂಕರಭಗವಾನರು, ಗಣಪಯ್ಯನವರು, ಶ್ರೀನಿವಾಸ

ಶಾಸ್ತ್ರಿಗಳು ವಪನ ಮಾಡಿಸಿಕೊಂಡು, ಗುರುಪುತ್ರ ಧರ್ಮವೆಂದು ಶ್ರೀ ಚಿದಂಬರ ಮೂರ್ತಿಗಳೊಡನೆ ಶ್ರೀ ಗುರುವಿನ ಉತ್ತರ ಕ್ರಿಯೆಗಳನ್ನು ಮಾಡಹತ್ತಿದರು. ಎರಡು ದಿನದ ಕ್ರಿಯೆಗಳಾದವು; ಮೂರನೆಯದಿನ ಅಸ್ಥಿ ಸಂಚಯನವಾಯಿತು; ಶ್ರೀ ಗುರುಗಳ ಮುಖದಲ್ಲಿಟ್ಟಿದ್ದ ಅವರ ಪವಿತ್ರದ ಉಂಗುರವು ಕರಗದೆ, ಇದ್ದಕ್ಕಿದ್ದ ಹಾಗೆಯೇ ಇತ್ತು. ಅದರಂತೆ ರುದ್ರಾಕ್ಷಮಾಲೆಯೊಳಗಿನ ತಾಂಬ್ರದತಂತಿಯ ಚೂರುಗಳು ಕರಗದೆ ಹಾಗೇ ಇದ್ದವು. ಶಿಷ್ಯರು ಅಸ್ಥಿಸಂಚಯನವನ್ನು ಬಹುಜಾಗ್ರತೆಯಾಗಿ ಮಾಡುವದನ್ನು ನೋಡಿ, ಲೇಖಕನು ಶಿಷ್ಯಮಂಡಲಿಯನ್ನು ಕುರಿತು— "ಪವಿತ್ರ ಭಸ್ಮದಲ್ಲಿ ಶ್ರೀಗುರುವಿನ ಅಮೌಲ್ಯಗುಣಗಳೇನಾದರೂ ಸಿಗುತ್ತವೆಯೋ ಹ್ಯಾಗೆ ನೋಡಿ ಸಂಗ್ರಹಿಸಿರಿ" ಎಂದು ಸೂಚಿಸಿದನು! ಅಸ್ಥಿ ಸಂಚಯವಾಗಿ ಭಸ್ಮವನ್ನು ತುಂಗಭದ್ರೆಗೆ ಕಳಿಸಿದರು. ಅಸ್ಥಿಗಳನ್ನು ಕೃಷ್ಣಾಬಾಯಿಯಲ್ಲಿ ಹಾಕಬೇಕೆಂದು ಕಾಡಿಟ್ಟಿರುವರು. ಕಾಲಚಕ್ರದ ಗತಿಗನುಸರಿಸಿ ಮೂರನೇ ದಿವಸವಾಯಿತು, ನಾಲ್ಕನೇದಿವಸವಾಯಿತು. ಹೀಗೆ ಒಂದೊಂದೇದಿವಸಗಳು ಕ್ರಮಿಸುತ್ತ, ಆಯಾದಿನದ ಕರ್ಮಗಳು ಯಥಾಸಾಂಗವಾಗಿ ಸಾಗುತ್ತ, ೧೦ನೆಯ ದಿವಸವು ಪ್ರಾಪ್ತವಾಯಿತು. ಎರಡನೆಯ ದಿವಸದಿಂದ ವೇ. ಶಾ. ಸ. ರಾ. ರಾ. ಶ್ರೀಕಂಠ ಶಾಸ್ತ್ರಿಗಳು ಸಂಜೆಯಮುಂದೆ ಸುಶ್ರಾವ್ಯವಾಗಿ ಗರುಡಪುರಾಣವನ್ನು ಹೇಳುತ್ತಿದ್ದರು. ಹತ್ತನೆಯ ದಿವಸ ದಶಗಾತ್ರವಿಧಿಯಿಂದ ಶ್ರೀ ಗುರುವಿಗೆ ಸೂಕ್ಷ್ಮದೇಹ ಪ್ರಾಪ್ತಿಯಾಯಿತು. ಆಗ ವಾಸನಾ ಪರೀಕ್ಷೆಗಾಗಿ ಮಾಡಬೇಕಾಗುವ ಕಾಕಪಿಂಡವು ಮಹತ್ವದ ವಿಷಯವಲ್ಲವೇ? ಕಾಕಪಿಂಡವು ಹ್ಯಾಗಾಗುತ್ತದೆ ನೋಡಬೇಕೆಂದು ಎಲ್ಲರು ಉತ್ಸುಕರಾಗಿದ್ದರು. ಅಪ್ಪನವರು ದೇಹವಿಟ್ಟಾಗ ಅವರ ಆಶೋತ್ತರಸ್ವಭಾವಕ್ಕಾಗಿ ಅವರ ಕಾಕಪಿಂಡವು ಆಗುವದಿಲ್ಲೆಂದು ಎಲ್ಲರು ತಿಳಕೊಂಡಿದ್ದರಂತೆ; ಆದರೆ ಮೂರ್ತಿಗಳ ಕೈಯಲ್ಲಿಯ ಪಿಂಡವನ್ನು ಕೆಳಗಿಡುವದರೊಳಗೇ ಕಾಕಸ್ಪರ್ಶವಾಯಿತಂತೆ! ಅಪ್ಪನವರ ಯೋಗ್ಯತೆಯೇ ಅಂಥ ನಿಸ್ಪೃಹವಾದದ್ದು! ಅವರು ಪತಿಯಲ್ಲಿ ಐಕ್ಯರಾದದ್ದರಿಂದ ವಾಸನಾರಹಿತರಾದದ್ದು ಆಶ್ಚರ್ಯವಲ್ಲ! ಈಗ ಶ್ರೀ ಗುರುಗಳ ಪರೀಕ್ಷೆಯ ಕಾಲವು ಒದಗಿತು. ಅವರಿಗೆ ಧರ್ಮೋದಕವನ್ನು ಏನಿಲ್ಲೆಂದರೂ ನೂರಾರುಜನರು ಬಿಟ್ಟಿರಬಹುದು. ಔರ್ಧ್ವದೇಹಿಕಕರ್ಮಗಳನ್ನು ಅಗಡಿಯ ವೇ. ರಾ. ರಾ. ಸುಬ್ಬಾಭಟ್ಟ ರಾಜಪುರೋಹಿತ, ಹಾಗು ವೇ. ರಾ. ರಾ. ಲಕ್ಷ್ಮಣಭಟ್ಟ ತಾಳಿಕೋಟಿಯವರಿಬ್ಬರು ಯಥಾರ್ಥವಾಗಿ ಮಾಡಿಸಿದರು. ಶ್ರೀಚಿದಂಬರ ಮೂರ್ತಿಗಳು ಕಾಕಪಿಂಡವನ್ನು ತಕ್ಕೊಂಡು ಸ್ವಲ್ಪದೂರಒಯ್ದಿಟ್ಟರು.

ಹತ್ತಿಪ್ಪತ್ತು ಕಾಗೆಗಳೂ ಮುತ್ತಿದವು; ಆದರೆ ಕಾಗೆಗಳು ಪಿಂಡವನ್ನು ಮುಟ್ಟಲೊಲ್ಲವು! ಕಾಲುತಾಸಾಯಿತು, ಅರ್ಧತಾಸಾಯಿತು. ವಾಸನಾರಹಿತರಾದ ಶ್ರೀಗುರುಗಳಿಗೆ ಯಾವವಾಸನೆಯಿರಬಹುದೆಂಬಬಗ್ಗೆ ತರ್ಕಗಳು ನಡೆದವು. ಗಂಡಸರು, ಹೆಣ್ಣುಮಕ್ಕಳು, ಹುಡುಗರು ನೆರೆದಿದ್ದರು. ಶ್ರೀಗುರುವಿಗೆ, ಮುಂದೆ ಸೇವೆಯು ಹ್ಯಾಗೆ ನಡೆಯುವದೋ ಎಂಬದೊಂದು ಶಂಕೆಯಿದ್ದದ್ದು ಎಲ್ಲರಿಗೆ ಗೊತ್ತಿತ್ತು. ಯಾರೂ ಉದ್ಧಾರವಾಗಲಿಲ್ಲೆಂಬದೊಂದು ಅಸಮಾಧಾನವು ಗುರುಗಳಿಗಿತ್ತು. ಅತಿಥಿಸೇವೆಯ ಸಂಸ್ಥೆಯೂ, ಪಾಠಶಾಲೆಯ ಸಂಸ್ಥೆಯೂ ಈಗ ಕೆಲವಂಶದಿಂದ ಬಂದಾಗಿದ್ದರೂ, ಸರ್ವಾಂಶದಿಂದ ಬಂದು ಆಗಬೇಕೆಂಬಯಿಚ್ಛೆ ಇತ್ತು. "ಎಲ್ಲರೂ ಕೂಡಿ ಆನಂದದಿಂದ ಸೇವೆಮಾಡುವದನ್ನು ನೋಡಿ ಸ್ವಾಮಿಯು ದೇಹ ಬಿಡುವನೆ"ಂದು ಶ್ರೀಗುರುಗಳು ಬಾಯಿಬಿಟ್ಟು ದೇಹಬಿಡುವಮೊದಲು, ೪।೫ ತಿಂಗಳಹಿಂದೆ ಒಮ್ಮೆ ಆಡಿದ್ದರು; ಆದರೆ ಅವರ ಇಚ್ಛೆಯನ್ನು ಶಿಷ್ಯಮಂಡಲಿಯು ಪೂರ್ಣಮಾಡಲಿಲ್ಲೆಂದು ಹೇಳಬಹುದು! ಯಾವ ಕಾರಣದಿಂದಲೇ ಆಗಲಿ, ಶ್ರೀಗುರುಗಳು ವಾಸನೆಯಿಟ್ಟು ವಿದೇಹಸ್ಥಿತಿಯಲ್ಲಿ ಅಗ್ರಹಾರದಲ್ಲಿಯೇ ಇರುವರೆಂದು ಅಗ್ರಹಾರದ ರೆಲ್ಲರು ಭಾವಿಸಹತ್ತಿದರು. ಶ್ರೀ ಗುರುವು ಇದ್ದ ಬಳಿಕ ಮುಂದಿನ ಕಾರ್ಯವನ್ನು ಪ್ರೇರಕನಾಗಿ ಆತನೇ ನಡಿಸುವನೆಂದು ಕೆಲವರು ಭಾವಿಸಹತ್ತಿದರು. ಶ್ರೀ ನಾರಾಯಣಭಗವಾನರು:—"ಯಾರಾದರೂ ಯಜಮಾನರಾದರೆ ಅವರು ಹೇಳಿದಹಾಗೆ ಕೇಳುವೆನೆಂ"ದು ಹೇಳಿ ಉದಕಬಿಟ್ಟರು. ಶ್ರೀ ಚಿದಂಬರ ಮೂರ್ತಿಗಳು—"ಸ್ವಾಮಿಯ ಆಜ್ಞೆಯಂತೆ ದಾಸಧರ್ಮದಿಂದ ನಡೆಯುವೆನೆಂತಲೂ, ಎಲ್ಲರನ್ನು ಸ್ವಾಮಿಯಂತೆ ನಡಿಸಿಕೊಂಡು ಹೋಗುವೆನೆ"ಂತಲೂ ಉದಕಬಿಟ್ಟರು. ಗಳಗನಾಥ ಇವರು—"ಸ್ಥಾನ ಬಿಟ್ಟು ಹೋಗುವದಿಲ್ಲೆ"ಂದು ಉದಕಬಿಟ್ಟರು. ಕೆಲವರು ಮನಸ್ಸಿನಲ್ಲಿ ಸಂಕಲ್ಪಮಾಡಿ ಉದಕಬಿಟ್ಟರು. ಯಾರು ಉದಕಬಿಟ್ಟರೂ ಕಾಕಪಿಂಡವಾಗಲಿಲ್ಲ; ಒಂದುತಾಸಿನಮೇಲೆಯಾದರೂ ಕಾಗೆಗಳು ಪಿಂಡವನ್ನು ಮುಟ್ಟದ್ದರಿಂದ, ಜಲಪಿಂಡ ಮಾಡಿ ಕರ್ಮವನ್ನು ಮುಗಿಸಿಕೊಂಡು ಎಲ್ಲರೂ ಆನಂದವನವನ್ನು ಸೇರಿದರು.

ಪ್ರಿಯವಾಚಕರೇ, ಶ್ರೀಗುರುಗಳು ಎಷ್ಟೋಸಾರೆ—ಮಹಾರಾಜಾ, ಅಗ್ರಹಾರದಲ್ಲಿಯೇ ಮುಂದೆ ಸೇವೆ ನಡೆಯಬೇಕೆಂದು ಈ ದೇಹದವಾಸನೆಯಿಲ್ಲ. ಮುಂದೆ ಯೋಗವಿದ್ದಲ್ಲಿ ಸೇವೆ ನಡೆದೀತು. ದೊಡ್ಡವರು ಸ್ವತಂತ್ರರು, ಅವರು ಭಕ್ತರಹೊರತು ಯಾರಕೈಯಲ್ಲಿಯೂ ಸಿಗತಕ್ಕವರಲ್ಲ, ಎಂದು ಹಾರಿಸಿ ಮಾತಾಡುತ್ತಿದ್ದರು. ಅಂಥವರು ಯಾವಕಾರಣದಿಂದಲೇ ಆಗಲಿ, ವಿದೇಹಸ್ಥಿತಿಯಲ್ಲಿ ಆನಂದವನದಲ್ಲಿ

ಸಿಕ್ಕುಬಿದ್ದದ್ದು ಲಾಭವಲ್ಲವೇ? ಲೇಖಕನಂತು ಇದೊಂದು ಸುಯೋಗನೆಂದು ತಿಳಿದಿರುವನು. ಶ್ರೀಗುರುವು ವಿದೇಹಸ್ಥಿತಿಯುಲ್ಲಾದರೂ ಇರಲಿ, ತಾನು ಹೇಳಿದಂತೆ ಹುಟ್ಟಿಯಾದರೂ ಬರಲಿ, ಹ್ಯಾಗಿದ್ದರೂ ಲೋಕಕ್ಕೆ ಲಾಭವೇ ಆಗುವದು! ಲೇಖಕನು ಶ್ರೀಗುರುಗಳ ಕಾಕಪಿಂಡವಾಗದ ನಿಜವಾದ ಕಾರಣವನ್ನು ಹೀಗೆ ಹೇಳುವನು;— ಶ್ರೀಗುರುಗಳ ಚಿರಂಜೀವರಾದ ಶ್ರೀ ಚಿದಂಬರಮೂರ್ತಿಗಳು ಈಗ ಮೂವತ್ತು ವರ್ಷಗಳಿಂದ ತಂದೆಯನ್ನು ಅನುಕರಿಸಿ ಗುಪ್ತಸಾಧನ ಮಾಡಿ ನಿರಭಿಮಾನಿಗಳೂ, ವಾಸನಾರಹಿತರೂ, ಶಾಂತಮೂರ್ತಿಗಳೂ ಆದದ್ದರಿಂದ, ಉದ್ಧವನು ತನ್ನ ದಾತೃವಾದ ಶ್ರೀ ಕೃಷ್ಣಪರಮಾತ್ಮನ ದ್ವೈವೀಭಾವವನ್ನು ಅಭುಕ್ತಭುಂಜಿಸಿದಂತೆ, ತಮ್ಮ ತಂದೆಯ ಸಾಧುವೃತ್ತಿಯನ್ನು, ಅಂದರೆ ತಂದೆಯನ್ನು ಅಭುಕ್ತಭೋಜನಮಾಡಿ "आत्मा वै पुत्रनामासि" ಎಂಬಶ್ರುತಿವಾಕ್ಯವನ್ನು ಸತ್ಯವಾಗಮಾಡಿದರು! ಅಂದಬಳಿಕ ಶ್ರೀ ಚಿದಂಬರಮೂರ್ತಿಗಳೇ ಶ್ರೀ ಗುರುವಾಗಿರಲು, ಪುತ್ರರೂಪದಿಂದ ರೂಪಾಂತರಹೊಂದಿದ ನಮ್ಮ ಶ್ರೀಶೇಷಾಚಲಸದ್ಗುರುವು, ಲೋಕಕಲ್ಯಾಣಮಾಡಬೇಕೆಂಬ ವಾಸನೆಯುಳ್ಳವನಾಗಿರಲು, ಕಾಕಪಿಂಡವು ಹ್ಯಾಗಾಗುವದು?

ಹತ್ತನೆಯ ದಿವಸ ಬ್ರಾಹ್ಮಣರಿಗೆ ಅನ್ನ ಕೊಡಬಾರದೆಂದು ಶ್ರೀಗುರುಗಳ ಕಟ್ಟಪ್ಪಣೆಯಿದ್ದದ್ದರಿಂದ, ಪ್ರತ್ಯಕ್ಷಮನೆಯಜನರ ಹೊರತು ಉಳಿದವರಾರೂ ಅಗ್ರಹಾರದಲ್ಲಿ ಊಟಮಾಡಲಿಲ್ಲ. ಮರುದಿನ ೧೧ ನೆಯ ದಿವಸ ವೃಷೋತ್ಸರ್ಗ-ವೈತರಣೀಗೋದಾನ ಮೊದಲಾದ ಕರ್ಮಗಳಾದವು. ಬ್ರಾಹ್ಮಣರಿಗೆ ಭೂರಿದಕ್ಷಿಣೆಕೊಟ್ಟರು. ಅಂದು ನಾನೂರರಮೇಲೆ ಬ್ರಾಹ್ಮಣರು ಕೂಡಿದ್ದರು. ಬೇಸನಿನ ಪ್ರಸ್ತವಾಯಿತು. ಸುತ್ತಲಾಪ್ಲೇಗಿನ ಅವಾಂತರವಿದ್ದದ್ದರಿಂದ ಕೂಡತಕ್ಕಷ್ಟು ಜನರು ಕೂಡಲಿಲ್ಲ. ೧೨ ನೆಯದಿವಸಸಪಿಂಡಿಯಾಯಿತು. ಬ್ರಾಹ್ಮಣರಿಗೆಭೂರಿದಕ್ಷಿಣೆಕೊಟ್ಟರು. ಅಂದು ಸಂತರ್ಪಣೆಗೆ ಬುಂದಿಯನ್ನು ಮಾಡಿದ್ದರು. ಅಂದುಸರಾಸರಿ ೬೦೦ ಜನಬ್ರಾಹ್ಮಣರ ಭೋಜನವಾಗಿರಬಹುದು. ಆನಂದವನದಪಟಾಂಗಣದಲ್ಲಿ ಆನಂದವನದ ಮುಂದೆಹಂದರಹಾಕಿ ನೆರಳು ಮಾಡಿದ್ದರು. ಶ್ರೀ ಗುರುವಿನ ಸಂಸ್ಕಾರಸ್ಥಾನದ ಸುತ್ತುಮುತ್ತುತಗಡುಗಳನ್ನು ನಿಲ್ಲಿಸಿ, ಅನ್ಯರು ಸಾನವನ್ನು ಸ್ಪರ್ಶಮಾಡದಂತೆ ಮಾಡಿದ್ದರು. ಶ್ರೀಗುರುವಿನ ಔರ್ಧ್ವದೇಹಿಕಕರ್ಮ ನಡೆದಾಗ ಲಗ್ನದಮನೆಯಂತೆ ನೋಡಿದತ್ತೆಲ್ಲ ಆನಂದವು ತೋರುತ್ತಿತ್ತು. ಶ್ರೀ ಗುರುವು ಆನಂದವದದಲ್ಲಿ ಎಲ್ಲಿಯೋ ಇರುವನೆಂಬ ಭಾವನೆಯು ಎಲ್ಲರಲ್ಲಿ ಉಂಟಾಗಿತ್ತು. ೧೩ ನೆಯ ದಿವಸ ಮಾಸಿಕವಾಯಿತು. ಚತುಶ್ಶಾಖೆಯ ಹದಿನೆಂಟು ಮಂದಿ ಬ್ರಾಹ್ಮಣರನ್ನು ಕೂಡ್ರಿಸಬೇಕೆಂದು ಶ್ರೀಗುರುಗಳು

ಮೊದಲೇ ಆಜ್ಞಾಪಿಸಿದ್ದಂತೆ, ಶುಕ್ಲ ಯಜುಶ್ಶಾಖೆ, ಕೃಷ್ಣ ಯಜುಶ್ಶಾಖೆ, ಋಕ್ ಶಾಖೆಯ ಆರಾರು ಜನ ಬ್ರಾಹ್ಮಣರನ್ನು ಕೂಡ್ರಿಸಬೇಕೆಂದು ಶ್ರೀಚಿದಂಬರ ಮೂರ್ತಿಗಳು ಮಾಡಿದ್ದರು; ಆದರೆ ಈ ಸಮಸಂಖ್ಯೆಯನ್ನು ಕಾಯ್ದುಕೊಳ್ಳಲಿಕ್ಕೆ ಆಯಾಶಾಖೆಯ ಯೋಗ್ಯ ಬ್ರಾಹ್ಮಣರು ಸಿಗಲಿಲ್ಲ; ಆದ್ದರಿಂದ ನಾಲ್ವರು ಋಗ್ವೇದಿಗಳು, ಇಬ್ಬರು ಆಪಸ್ತಂಭರು, ಉಳಿದ ೧೨ ಜನರು ಶುಕ್ಲಯಜುರ್ವೇದೀಯ ಕಣ್ವಶಾಖೆಯವರು; ಹೀಗೆ ೧೮ ಜನ ಬ್ರಾಹ್ಮಣರು ಶ್ರಾದ್ಧಕರ್ಮೋಸ್ಕರ ನಿಮಂತ್ರಿತರಾದರು. ಇವರಲ್ಲಿ ಇಬ್ಬರು ವಿಶ್ವೇದೇವಸ್ಥಾನಕ್ಕೂ, ಒಬ್ಬರು ಮಹಾವಿಷ್ಣುಸ್ಥಾನಕ್ಕೂ, ಉಳಿದ ೧೫ ಜನರು ಪಿತೃಸ್ಥಾನಕ್ಕೂ ಯೋಜಿಸಲ್ಪಟ್ಟಿದ್ದರು. ಪ್ರತಿಯೊಬ್ಬ ಬ್ರಾಹ್ಮಣರಿಗೆ ಚೊಕ್ಕ ಚಿನ್ನದ ಅರ್ಧ ತೊಲೆಯ ಒಂದು ಪವಿತ್ರದ ಉಂಗುರ, ಧೋತರ ಜೋಡು, ದೊಡ್ಡ ತಂಬಿಗೆ-ಥಾಲಿ, ದೊಡ್ಡ ನೀರಾಜನ ಒಂದು, ಪಿಂಡದ ಮುಂದೆ ಬೆಳ್ಳಿಯ ತಂಬಿಗೆ, ಥಾಲಿ, ಸೌಟು, ನೀರಾಜನ, ಪ್ರತಿಒಬ್ಬ ಬ್ರಾಹ್ಮಣರಿಗೆ ೫ ರೂಪಾಯಿ ದಕ್ಷಿಣೆ ಹೀಗೆ ಉಪಚಾರದ್ರವ್ಯಗಳು ಯೋಜಿಸಲ್ಪಟ್ಟಿದ್ದವು. ೧೨ ಗಂಟೆಯ ಸುಮಾರಕ್ಕೆ ಶ್ರಾದ್ಧಕರ್ಮಕ್ಕೆ ಆರಂಭವಾಯಿತು. ವಿಶಾಲವಾದ ೧೮ ಅಂಕಣದ ಭೋಜನಶಾಲೆಯಲ್ಲಿ ಶಾಸ್ತ್ರೋಕ್ತವಾಗಿ ಮೂವರು ಬ್ರಾಹ್ಮಣರು ಪೂರ್ವಾಭಿಮುಖವಾಗಿಯೂ, ೧೫ ಜನರು ಉತ್ತರಾಭಿಮುಖವಾಗಿಯೂ ಕುಳಿತಿದ್ದರು. ಉಪಚಾರದ್ರವ್ಯಗಳನ್ನೆಲ್ಲ ಒತ್ತಟ್ಟಿಗೆ ಸಾಲಾಗಿ ಇಟ್ಟಿದ್ದರು. ಪ್ರಯೋಗ ಮಾಡಿಸುವ ಬ್ರಾಹ್ಮಣರ ಆಜ್ಞಾಧಾರಕವಾಗಿ ಶ್ರೀ ಚಿದಂಬರಮೂರ್ತಿಗಳೂ, ಶಿಷ್ಯಚತುಷ್ಟಯರೂ ಕರ್ಮೋದ್ಯುಕ್ತರಾಗಿ ಕುಳಿತಿದ್ದರು. ಕಲಿಯುಗದಲ್ಲಿ ದುರ್ಲಭವಾಗಿರುವ ಈ ಯಥಾಶಾಸ್ತ್ರಕರ್ಮವಿಧಾನವನ್ನು ನೋಡುವದಕ್ಕಾಗಿ ಹೆಂಗಸರು, ಗಂಡಸರು, ಹುಡುಗರು ನೆರೆದಿದ್ದರು. ದಟ್ಟಣೆಯಾಗಿ ಬ್ರಾಹ್ಮಣರನ್ನು ಮುಟ್ಟಿಯಾರೆಂದು ತಿಳಿದು, ಒಬ್ಬಿಬ್ಬರು ಬಾಗಿಲು ಕಾಯುತ್ತಿದ್ದರು. ಜನರ ಗದ್ದಲವು ಹೆಚ್ಚಾದದ್ದನ್ನು ನೋಡಿ ನಾರಾಯಣಭಗವಾನರೂ ಎಲ್ಲಪ್ಪನವರೂ, "ಎಲ್ಲರನ್ನು ಹೊರಗೆ ಹಾಕಿರೆ"ಂದು ಗದ್ದರಿಸಿದರು. ಇದನ್ನು ಕೇಳಿ ಗಳಗನಾಥ ಇವರಿಗೆ ಬಹಳ ವಿಷಾದವಾಯಿತು! ಪ್ರಿಯವಾಚಕರೇ, ಹೀಗೆ ಹೊರಗೆ ಹೋಗಿರೆಂದು ಯಾರಾದರೂ ಭಗವಾನರನ್ನೂ, ಎಲ್ಲಪ್ಪನವರನ್ನೂ ಗದ್ದರಿಸಿದ್ದರೆ, ಅವರ ಮನಸ್ಸಿಗೆ ಹ್ಯಾಗಾಗುತ್ತಿತ್ತು ? ಪ್ರಸಂಗದಲ್ಲಿ ಹೀಗೆ ಪ್ರಮಾದಗಳು ಘಟಿಸುತ್ತವೆ. ಆಗ ಗಳಗನಾಥ ಇವರು ಎಲ್ಲಪ್ಪನವರಿಗೆ "ಹೀಗೆ ಬೆದರಿಸುವದು ಧರ್ಮವಲ್ಲ"ಂದು ಹೇಳಿ, ತಾವೇ ಬಾಗಿಲಿಗೆ ನಿಂತು ಜನರನ್ನು ವ್ಯವಸ್ಥೆಯಿಂದ ಒಳಗೆ ಬಿಡಹತ್ತಿದರು. ಆಗ ಜನರಿಗೆ ಪರಮಾನಂದವಾಯಿತು. ಕಲಿಯುಗದ ಈಗಿನ ಕರ್ಮ

ಭೃಷ್ಟತೆಯು ಕಾಲದಲ್ಲಿ ಶ್ರೀ ಸದ್ಗುರುವಿನಂಥ ಮಹಾತ್ಮನ ಯಥಾಸಾಂಗ ಶ್ರಾದ್ಧಕರ್ಮವನ್ನಲ್ಲದೆ ಬೇರೆಯಾರಶ್ರಾದ್ಧಕರ್ಮವನ್ನು ನೋಡಿ ಜನರಹೃದಯಗಳು ಸತ್ಕರ್ಮಶ್ರದ್ಧಾಪೂರಿತವಾದಾವು? ಎಲ್ಲಬಗೆಯಿಂದ ಲೋಕಶಿಕ್ಷಣಕೊಡುವದಕ್ಕಾಗಿಯೇ ಶ್ರೀ ಗುರುವಿನ ಅವತಾರವಲ್ಲವೇ? ಶ್ರೀ ಗುರುವಿನ ಈ ಮಾಸಿಕಶ್ರಾದ್ಧವನ್ನು ಕಣ್ಣಮುಟ್ಟನೋಡಿದವರು ನಿಜವಾಗಿ ಧನ್ಯರೇಸರಿ! ಶ್ರಾದ್ಧಕರ್ಮಕ್ಕೆ ಆರಂಭವಾಗುವ ಪೂರ್ವದಲ್ಲಿ ಪ್ರತಿಯೊಬ್ಬ ಬ್ರಾಹ್ಮಣರ ಬಲಗಡೆಗೆ ಅವರವರ ನೀರಾಂಜನಗಳಲ್ಲಿ ದೀಪಗಳನ್ನು ಸ್ಥಾಪಿಸಲು, ಶೋಭೆಯು ಹೆಚ್ಚಾಯಿತು. ದೀಪಗಳಿಗೆ ತುಪ್ಪಹಾಕುವ ಕೆಲಸವನ್ನು ಅತ್ಯಂತ ಭಾವಿಕರಾದ ಮಿ. ವಿಷ್ಣು ರಾಮಚಂದ್ರ ಕೋಹಳ್ಳಿ ಇವರು ಬಹುಭಕ್ತಿಯಿಂದ ಮಾಡಹತ್ತಿದರು. ಶ್ರಾದ್ಧಪ್ರಯೋಗವನ್ನು ನಮ್ಮ ಪಾಠಶಾಲೆಯಅಧ್ಯಾಪಕರಾದ ವೇ. ರಾ. ರಾ. ಎಸ್. ನಾರಾಯಣಶಾಸ್ತ್ರಿಗಳವರು ಪರಮೋತ್ಸಾಹದಿಂದ ಅಸ್ಖಲಿತವಾಗಿ ದಿಟ್ಟತನದಿಂದ ಯಥಾಸ್ಥಿತವಮಾಡಿಸುವದನ್ನು ನೋಡಿ, ಗಳಗನಾಥ ಇವರಿಗೆ ಆನಂದಜನಿತಅಭಿಮಾನವು ಉತ್ಪನ್ನವಾಯಿತು! ಬ್ರಾಹ್ಮಣರ ಭೋಜನ ಸಮಯವು ಒದಗಲು, ಗಳಗನಾಥ ಇವರ ಸೂಚನೆಯಂತೆ ಗಳಗನಾಥರೇ ಮೊದಲಾದ ಯಾವತ್ತು ಜನರು ಒಂದು ಹುಳವುಳಿಯದಂತೆ ಹೊರಗೆ ಹೊರಟು ಹೋಗಿ ಬಿಟ್ಟರು. ಕರ್ಮವು ನಡೆದಾಗ ಪ್ರತಿಯೊಬ್ಬರಮುಖದಲ್ಲಿ ಆನಂದಪರವಶತೆಯ ಲಕ್ಷಣಗಳು ತೋರುತ್ತಿದ್ದವು.

ಭೋಜನಾನಂತರ ಬ್ರಾಹ್ಮಣರು ಹಸ್ತ-ಮುಖಪ್ರಕ್ಷಾಲನ, ಪಾದಪ್ರಕ್ಷಾಲನ ಮಾಡಿಕೊಂಡು, ಆಚಮನಮಾಡಿ ತಮ್ಮ ತಮ್ಮ ಎಲೆಯಮೇಲೆ ಮೊದಲಿನಂತೆ ಬಂದು ಕುಳಿತುಕೊಳ್ಳಲು, ಪುನಃ ಶ್ರೋತೃಸಮೂಹವು ಮೊದಲಿಗಿಂತ ಹೆಚ್ಚಾಗಿ ಕೂಡಿತು! ಆಗ ಭೋಜನಾದಿಸತ್ಕಾರಗಳಿಂದ ತೃಪ್ತವಾದ ಬ್ರಹ್ಮವೃಂದವು, ಗಂಧಾನುಲೇಪನ, ಸುವಾಸಿಕಮೂಲಾಗ್ರಹಣಾದಿಗಳಿಂದ ಬ್ರಹ್ಮತೇಜಸ್ಸಿನಿಂದ ಉಕ್ಕುತ್ತ "वाशिष्ठसदृशाविप्राः सूर्यपर्वसमातिथिः" ಎಂಬ ಉಕ್ತಿಯು ಸತ್ಯತೆಯನ್ನು ಪ್ರಕಟಿಸುತ್ತಲಿತ್ತು. ಬ್ರಾಹ್ಮಣರ ವಿಶಾಲಪಾತ್ರೋಚ್ಚಿಷ್ಟಾಘ್ರಾಣದಿಂದ ಶ್ರೋತೃಸಮೂಹಕ್ಕೆ ಒಂದು ಬಗೆಯ ತೃಪ್ತಿಯುಂಟಾಯಿತು. ಅಷ್ಟರಲ್ಲಿ ಪಿಂಡಪ್ರದಾನಕರ್ಮಕ್ಕೆ ಆರಂಭವಾಯಿತು. ಚುಟಕೆಯಿಂದ ಬೆದರಿಸಿ ಶ್ರಾದ್ಧವನ್ನು ತೀರಿಸುವ ಈಗಿನ ಕಲಿಕಾಲದಲ್ಲಿ, ಪ್ರತ್ಯಕ್ಷ ಸಾಧುವಾದ ಶ್ರೀ ಚಿದಂಬರಮೂರ್ತಿಗಳು, ಭಕ್ತಿಯುತರಾಗಿ ಶಿಷ್ಯದತ್ತಪಿಂಡವನ್ನು ಪ್ರತಿ ಪಿತೃಬ್ರಾಹ್ಮಣರನ್ನುದ್ದೇಶಿಸಿ ಸಮರ್ಪಿಸುವಾಗ, ಕರ್ಮವೈಭವದ ಅನುಭವವು ಪ್ರತಿಬಬ್ಬರ ಹೃದಯಕ್ಕೆ ಆಗಿ, ಶ್ರದ್ಧೆ

ಯಿದ್ದರೇ ಶ್ರಾದ್ಧಕರ್ಮವೆಂಬ ಬೋಧವು ಪ್ರತಿಒಬ್ಬರ ಮನಸ್ಸಿನ ಮೇಲೆ, ಅವರಿಗೆ ತಿಳಿಯದಂತೆ ಆಯಿತು! ಆಗ ಗಳಗನಾಥ ಇವರು ಮನಸ್ಸಿನಲ್ಲಿ—ಮಹಾತ್ಮನಾದ ಸದ್ಗುರುವೇ, ನಿನ್ನ ಸಂಬಂಧದ ಕರ್ಮವು ಕೂಡ ಇಷ್ಟು ಪರಿಣಾಮಕಾರಕವಾದ ಬಳಿಕ, ನಿನ್ನ ಧನ್ಯತೆಯನ್ನು ಪಾಮರನಾದ ನಾನು ಏನು ವರ್ಣಿಸಲಿ, ಎಂದು ಸದ್ಗದಿತಕಂಠರಾದರು! ಪಿಂಡಪ್ರದಾನವು ಮುಗಿಯಿತು. ಪಿಂಡಪೂಜೆಯಾಯಿತು. ಎಲ್ಲರೂ ಪಿಂಡಗಳಿಗೆ ನಮಸ್ಕರಿಸುವಾಗ ಭಾವಿಕರ ಹೃದಯಗಳು ಉಕ್ಕಿ ಬಂದವು! ಅಷ್ಟರಲ್ಲಿ ನಾಲ್ಕು ಗಂಟೆಯಾಗಲು, ಆನಂದವನದ ಪಟಾಂಗಣದಲ್ಲಿ ಕೂಡಿರುವ ಬ್ರಹ್ಮವೃಂದಕ್ಕೆ ಎಲೆಹಾಕಿ ಬಡಿಸಹತ್ತಿದರು. ದಳೆಯಪ್ರಸ್ತದಿಂದ ಬ್ರಹ್ಮವೃಂದವು ಸಂತುಷ್ಟವಾಯಿತು. ಅಂದಿನ ದಿವಸ ಸರಾಸರಿ ೭೦೦ ಜನ ಬ್ರಾಹ್ಮಣರ ಭೋಜನವಾಗಿರಬಹುದು. ಕಡೆಯ ಪಙ್ಕ್ತಿಯು ತಾಸುರಾತ್ರಿಗೆ ಆಯಿತು! ಪೂರ್ವಭುಕ್ತದ ಪ್ರತಿಒಬ್ಬ ಬ್ರಾಹ್ಮಣರಿಗೆ ೨೫ ರೂ. ದೊರೆತಂತಾದವು. ಪುರೋಹಿತರಿಗೆ ೬೦ ರೂಪಾಯಿ ದೊರೆತವು.

ಹದಿನಾಲ್ಕನೆಯ ದಿವಸ ಬೆಳಗಾಗಲು, ಮಹಾದಾನದ ಸಮಾರಂಭವು ನಡೆಯಿತು. ದಾನದ ವಸ್ತುಗಳನ್ನು ಚಂದ್ರಶಾಲೆಯಲ್ಲಿ ಸಾಲಾಗಿ ವ್ಯವಸ್ಥೆಯಿಂದ ಇಟ್ಟಿದ್ದರು. ಪ್ರಾಣಿಗಳನ್ನು ಶ್ರೀ ಗುರುಗಳ ಸಂಸ್ಕಾರಸ್ಥಾನಕ್ಕೂ, ಚಂದ್ರಶಾಲೆಗೂ ನಡುವೆ ಕಟ್ಟಿದ್ದರು. ಸರಾಸರಿ ೯೦ ಜನರಿಗೆ ದಾನಗಳು ಮುಟ್ಟಿದವು. ಕೊಟ್ಟ ದಾನಗಳ ವಿವರವು—ಗೋ (೫), ಭೂ (೧), ತಿಲ, ಹಿರಣ್ಯ (೧ ತೊಲಿ), ರೌಪ್ಯ, ಘೃತ, ತೈಲ, ಪದ್ಧಾನ, ಮೇಷ, ಕಾರ್ಪಾಸ, ಲವಣ, ಸಪ್ತಧಾನ್ಯ, ಗೃಹ, ಪಾದರಕ್ಷಾ (೧೧ ಜೋಡು), ಕಡಾವಿಗೆ (೫ ಜೋಡು), ಪುಸ್ತಕ, ಛತ್ರ [೫], ಯಾನ (ಛಕಡಿ ಎತ್ತು ಸಹಿತ), ಅಶ್ವ, ಮಹಿಷೀ, ಆಮ್ರವೃಕ್ಷ, ಶಯ್ಯಾ, ದಂಡ(೫), ದೀಪ, ವಸ್ತ್ರ, ಉದಕಕುಂಭ(೧ ಎರಡು ಪಡಿತಪ್ಪೇಲಿ, ೧ ದೊಡ್ಡ ಹಂಡೆ, ೧ ಕೊಡ), ಊರ್ಣವಸ್ತ್ರ, ಶಾಲು, ಲೋಹದಂಡ, ಮಾಲ್ಯ, ಅನುಲೇಪನ, ತಾಂಬೂಲ, ನಸ್ಯ (ಬೆಳ್ಳಿಡಬ್ಬಿ) ಗಂಜೀಫ, ಫಲ, ದಧಿ, ಕ್ಷೀರ, ಯಜ್ಞೋಪವೀತ, ಮೌಕ್ತಿಕ (೪೦ರೂ. ಬೆಲೆ), ಚಂದನ, ಗಂಧ, ಗುಡ, ಶರ್ಕರಾ ಇತ್ಯಾದಿ. ದಾನಗಳ ಯೋಗ್ಯತೆಯ ಮಾನದಿಂದ ದಕ್ಷಿಣೆಯನ್ನು ೨, ೪, ೬, ೧೦, ೧೫ ರೂ ಗಳವರೆಗೆ ಕೊಡಲಾಯಿತು. ಏನಾದರೂ ಶ್ರೀ ಗುರುವು ಲೋಕದಾಸನು, ಭಿಕ್ಷುಕನು; ಆತನ ವೈಭವವೇನಿರಬೇಕು? ದೊಡ್ಡ ಶ್ರೀಮಂತರು ಸಹ ಇವಕ್ಕೂ ಹೆಚ್ಚು ದಾನಗಳನ್ನು ಕೊಡಬಹುದು; ಆದರೆ ಶ್ರೀ ಗುರುವಿನ ದಾನಸಮಾರಂಭದಲ್ಲಿಯ ಆನಂದದ ಪರಿ

ಮಿತಿಯು ಮೂಕ್ತ ಅಗಣ್ಯವೆಂತಲೇ ಹೇಳಬೇಕಾಗುವದು. ಈ ಸಮಾರಂಭವನ್ನು ವರ್ಣಿಸುವ ಯೋಗ್ಯತೆಯು ಲೇಖಕನಲ್ಲಿ ನಿಶ್ಚಯವಾಗಿ ಇಲ್ಲ. ಆ ಕಾಲದಲ್ಲಿ ದಾನಕೊಡುವವರ, ಹಾಗು ತಕ್ಕೊಳ್ಳುವದರ ಆಸಕ್ತಿಯನ್ನೂ, ಹೆಸರುಗೊಂಡು ಕರೆದಂತೆ ಒಬ್ಬೊಬ್ಬರೇ ದಾನವನ್ನು ಸ್ವೀಕರಿಸಿ ಸಂತೋಷಪಟ್ಟು ಹೋಗುವದನ್ನೂ, ನನಗೆ ಆ ದಾನವು ಸಿಗಲಿಲ್ಲವಲ್ಲ, ಎಂದು ಬ್ರಾಹ್ಮಣರು ಪಡುವ ಅಸಮಾಧಾನವನ್ನೂ, ಈ ದಾನವನ್ನು ತಕ್ಕೊಳ್ಳಲೋ ಬೇಡವೋ ಎಂದು ಆಲೋಚಿಸಿ, ಹೆಚ್ಚು ಲಾಭವಾಗುವದನ್ನು ಕಂಡು ದುರ್ದಾನಗಳನ್ನಾದರೂ ಅಂದೇಶಪಡುತ್ತ ಸ್ವೀಕರಿಸುವದನ್ನೂ, ನನಗೆ ಇಂಥ ದಾನವನ್ನು ಕೊಡಿಸಿರೆಂದು ತಮ್ಮ ತಮ್ಮ ಗುರುತಿನವರಿಗೆ ಹೇಳುವದನ್ನೂ, ನಮಗೆ ಸಿಕ್ಕದ್ದೇ ಶ್ರೀ ಗುರುವಿನ ಪ್ರಸಾದವು, ಎಂದು ಸಮಾಧಾನಪಡುವದನ್ನೂ, ತಾವು ನೆನಿಸಿದ್ದಕ್ಕಿಂತ ಹೆಚ್ಚು ಸಿಕ್ಕದ್ದರಿಂದ ಸಂತೋಷಪಡುವದನ್ನೂ, ಇನ್ನೂ ಎಷ್ಟೋ ಆನಂದದ ಸಂಗತಿಗಳನ್ನೂ ವಾಚಕರೇ ತರ್ಕಿಸತಕ್ಕದ್ದು. ಬೆಳಗಿನ ೮ ಗಂಟೆಯಿಂದ ಹನ್ನೆರಡು-ಹನ್ನೆರಡುವರೆ ಗಂಟೆಯವರೆಗೆ ಬ್ರಾಹ್ಮಣರ ಕೋಲಾಹಲದಿಂದ ಆನಂದವನವು ಪ್ರತಿಧ್ವನಿತವಾಯಿತು.] ೧ ಗಂಟೆಯ ಸುಮಾರಕ್ಕೆ ದಾನದ ಸಮಾರಂಭವು ಮುಗಿಯಲು, ಬ್ರಾಹ್ಮಣರು ಸ್ನಾನಕ್ಕೆ ಹೋದರು. ಮೂರು ಗಂಟೆಯ ಸುಮಾರಕ್ಕೆ ಬ್ರಾಹ್ಮಣಸಂತರ್ಪಣವಾಯಿತು. ಅಂದು ಕೇಶರಿಭಾತ, ಬಟಾಟಿಭಾತ, ಜಿಲೇಬಿಗಳನ್ನು ಮಾಡಿದ್ದರು. ಈವೊತ್ತಿನದಿವಸವೂ ಸರಾಸರಿ ೭೦೦ಜನರು ಆಗಿರಬಹುದು. ಅಂದಿನರಾತ್ರಿ ಯಾವತ್ತು ಬ್ರಾಹ್ಮಣರಿಗೆ ಸಂಭಾವನೆಕೊಡುವ ಸಮಾರಂಭವು ಶ್ರೀಮಂತ ರಾಮಚಂದ್ರಗೌಡ ಬಹಾದ್ದೂರ ದೇಸಾಯಿಯವರ ಅಧ್ಯಕ್ಷತೆಯ ಕೆಳಗೆ ಜರಗಿತು. ಸಂಭಾವನೆಯ ರಕಮು ತೀರ ಕನಿಷ್ಠವೆಂದರೆ, ೧ ರೂಪಾಯಿ ೨ ರೂಪಾಯಿಯಿಂದ ಸಂಭಾವನೆ ಕೊಟ್ಟದ್ದೇ ಬಹಳ. ಸಂಭಾವನೆಯ ಕಡೆಯ ರಕಮು ೧೦ ರೂಪಾಯಿದ್ದು. ಅವರವರ ಯೋಗ್ಯತೆ ನೋಡಿ ಶ್ರೀಮಂತರು ಶಿಷ್ಯವರ್ಗದೊಡನೆ ಆಲೋಚಿಸಿ, ಮೊದಲೇ ಸಂಭಾವನೆಯ ರಕಮಿನ ಯಾದಿಮಾಡಿದ್ದರು. ಬ್ರಾಹ್ಮಣರು ಈಗ ನಾಲ್ಕುದಿನದಿಂದ ಬಂದಬಂದಂತೆ ಅವರ ಲಿಷ್ಟನ್ನು, ಅವರವರು ಮಾಡಿದ ಅಧ್ಯಯನವನ್ನು ಕಾಣಿಸಿ, ಮಿ. ರಾಮಚಂದ್ರ ತ್ರ್ಯಂಬಕ ಕರ್ಪೂರ ಇವರು ಮಾಡಿದ್ದರಿಂದ, ಸಂಭಾವನೆಯ ಯಾದಿಮಾಡಲಿಕ್ಕೆ ಬಹಳ ಅನುಕೂಲವಾಯಿತು. ಅಂದಿನ ಸಂಭಾವನೆಯ ಒಟ್ಟು ರಕಮ ೨೫೦೦ ರೂಪಾಯಿಯಾಯಿತು. ಇದಲ್ಲದೆ ಬೇರೆ ಬೇರೆ ಕಡೆಯ ಅತಿಪರಿಚಯದ ವಿದ್ವಾಂಸರಿಗೂ, ಬೇರೆ ಬೇರೆ

ಮಠಗಳಿಗೂ ಕಳಿಸಲಿಕ್ಕೆ ೫೦೦ ರೂಪಾಯಿಗಳು ವೆಚ್ಚವಾದವಂತೆ. ಆನಂದವನದ ಪಾಠಶಾಲೆಗೆ ೫೦೦ ರೂಪಾಯಿ ಸಂಭಾವನೆಕೊಟ್ಟರು. ಹೀಗೆ ಶ್ರೀ ಗುರುವು ಕೂಡಿಸಿಟ್ಟದ್ದ ೧೫೦೦ ರೂಪಾಯಿಗಳು ವೆಚ್ಚವಾದವು.

ಮರುದಿನ ಅಗಡಿಯ ಸಂತೆಯಿದ್ದದ್ದರಿಂದ, ಬಹು ಜನರು ಕೂಡುವರೆಂದು ತಿಳಿದು, ಬ್ರಾಹ್ಮಣೇತರ ಜನರಿಗೆ ಮುಕ್ತದ್ವಾರ ಅನ್ನಸಂತರ್ಪಣವಾಯಿತು. ಅಂದು ಊಟಮಾಡಿದ ಜನರ ಸಂಖ್ಯೆಯು ಎರಡುಸಾವಿರವಾಗಬಹುದು . ಅಂದು ರಾತ್ರಿಯು ಬಹಳವಾದದ್ದರಿಂದ ಬ್ರಾಹ್ಮಣೇತರರಿಗೆ ದಕ್ಷಿಣೆಯನ್ನು ಕೊಡುವ ಸಮಾರಂಭವನ್ನು ಮರುದಿವಸಮಾಡಿದರು ಈ ಕಾರ್ಯವನ್ನು ಶ್ರೀಮಂತ ರಾಮಚಂದ್ರಗೌಡ ಬಹದ್ದೂರ ದೇಸಾಯಿ ಇವರೂ, ಮ. ರಾ. ರಾ. ರಂಗನಗೌಡರೂ ಕೂಡಿ ವ್ಯವಸ್ಥೆಯಿಂದ ಮಾಡಿಸಿದರು. ಸಣ್ಣ ಹುಡುಗರಿಗೆ ಒಂದು ಆಣೆಯಂತೆ, ದೊಡ್ಡವರಿಗೆ ೨ ಆಣೆಯಂತೆ ಬಂದವರಿಗೆ ದಕ್ಷಿಣೆಕೊಟ್ಟರು. ಊಟಮಾಡುವಾಗೂ, ದಕ್ಷಿಣೆತಕ್ಕೊಳ್ಳುವಾಗೂ ಈ ಜನರು ಪಟ್ಟ ಆನಂದವನ್ನು ನೋಡಿದರೆ, ಅವರ ಅಲ್ಪಸಂತುಷ್ಟತೆಯು, ಹಾಗು ಅವರ ಕೃತಜ್ಞತೆಯು ಬಗ್ಗೆ ಬಹಳ ಸಂತೋಷವಾಗುವದು. ಈ ದಕ್ಷಿಣೆಯ ಕೆಲಸವು ಹದಿನಯ್ದನೆಯದಿವಸ ಅಂದರೆ ಭಾದ್ರಪದವದ್ಯಷಷ್ಠಿಯದಿವಸ ಸರಾಸರಿ ಸಂಜೆಯವರೆಗೆ ನಡೆಯಿತೆಂದು ಹೇಳಬಹುದು . ಬಂದವರಿಗೆ ಇಲ್ಲವೆನ್ನಲಿಲ್ಲ. ದಕ್ಷಿಣೆಯ ರಕಮು ೪೦೦ ರೂಪಾಯಿ ಆಗಿರಬಹುದು . ಹೀಗೆ ಮನುಷ್ಯಮಾತ್ರರನ್ನು ಸಂತೋಷಪಡಿಸಲಿಕ್ಕೆ ಹೇಳಿದ್ದ ಶ್ರೀ ಗುರುವಿನ ಆಜ್ಞೆಯಂತೆ, ಶ್ರೀ ನಾರಾಯಣಭಗವಾನರೇ ಮೊದಲಾದ ಶಿಷ್ಯವರ್ಗವು ಔರ್ಧ್ವದೇಹಿಕಕಾರ್ಯಗಳನ್ನು ಬಹು ಚೆನ್ನಾಗಿ ಮಾಡಿತೆಂದು ಎಲ್ಲರೂ ಅಂದರು !

ಒಟ್ಟಿಗೆ ಲೆಖ್ಖ ಹಾಕಿದರೆ, ಶ್ರೀ ಸದ್ಗುರುವಿನ ಔರ್ಧ್ವದೇಹಿಕಕರ್ಮನಿಮಿತ್ತವಾಗಿ ಸರಾಸರಿ ಎರಡೂವರೆಸಾವಿರ ಬ್ರಾಹ್ಮಣಭೋಜನವೂ, ಎರಡುಸಾವಿರ ಬ್ರಾಹ್ಮಣೇತರಜನರ ಭೋಜನವೂ ಆಯಿತು . ಸಂಸ್ಕೃತಪಾಠಶಾಲೆಗೆ ಮೇಲೆ ಹೇಳಿದಂತೆ ಕೊಟ್ಟ ೫೦೦ ರೂಪಾಯಿ, ಪ್ರೇಸಿನವರೆಲ್ಲರೂ ಕೂಡಿಕೊಟ್ಟ ೫೦೦ ರೂಪಾಯಿ ಹೀಗೆ ಒಟ್ಟು ೧೦೦೦ ರೂಪಾಯಿ ಸಂಭಾವನೆ ದೊರೆಯಿತು . ಈರಕಮಿನಿಂದ ಪಾಠಶಾಲೆಗೆ ೧ ಜಮೀನು ತಕ್ಕೊಳ್ಳುವದು ಗೊತ್ತಾಗಿದೆ ! ಬ್ರಾಹ್ಮಣರ ಸಂಭಾವನಾ ದಕ್ಷಿಣೆ ೫೦೦ ರೂಪಾಯಿ, ಮಹಾದಾನಗಳದಕ್ಷಿಣೆ ೩೫೦ ರೂಪಾಯಿ, ೫ ಸಾಲಂಕೃತಗೋದಾನಗಳ ಒಟ್ಟದಕ್ಷಿಣೆಸಹಿತ ಸರಾಸರಿ(ಆಕಳಬೆಲೆಬಿಟ್ಟು) ೨೪೦ರೂಪಾಯಿ. ಭೋಜನದಕ್ಷಿಣೆ ಭೂರಿದಕ್ಷಿಣೆ ಕೂಡಿಸರಾಸರಿ ೧೫೦ರೂಪಾಯಿ. ಬ್ರಾಹ್ಮಣೇ

ತರರದಕ್ಷಿಣೆ ೪೦೦ ರೂಪಾಯಿ. ಪೂರ್ವಭಕ್ತ ಬ್ರಾಹ್ಮಣರ ಪೂಜಾಸತ್ಕಾರಕ್ಕಾಗಿ ೫೦೦ ರೂಪಾಯಿ. ಭೋಜನ ಖರ್ಚು ಸರಾಸರಿ ೮೦೦ ರೂಪಾಯಿ. ಹೀಗೆ ಒಟ್ಟಿಗೆ ಸರಾಸರಿ ೪,೦೦೦ ರೂಪಾಯಿಗಳು ಔರ್ಧ್ವದೇಹಿಕ ಕರ್ಮಕ್ಕಾಗಿ ವೆಚ್ಚವಾದವು. ಇಂಥ ಸಮಾರಂಭವನ್ನು ಹುಟ್ಟಿದಂದಿನಿಂದ ನೋಡದೆಯಿದ್ದ ಜನರೇ ಎಲ್ಲರೂ ಇದ್ದರೆಂದು ಹೇಳಬಹುದು! ಆದರೂ ಶ್ರೀಗುರುವಿನ ವೆಚ್ಚವು ಅದ್ಭುತವೆಂದು ಚಂದ್ರಿಕೆಯು ಹೇಳುವದಿಲ್ಲ. ಇದಕ್ಕೂ ಎಷ್ಟೋಪಾಲು ಹೆಚ್ಚು ವೆಚ್ಚಮಾಡಿದ ಪ್ರಸಂಗಗಳು ಕೇಳಿಕೆಯಲ್ಲುಂಟು! ಆದರೆ, ಶ್ರೀ ಶೇಷಾಚಲಸದ್ಗುರುವು ಒಡವೈದಿಕಬ್ರಾಹ್ಮಣನು, ಲೋಕದಾಸನು, ಮೇಲಾಗಿ ಅಯಾಚಿತ ಭಿಕ್ಷಕನು, ಬಡವರಲ್ಲಿಯೇ ಆತನ ಭಿಕ್ಷೆಯು. ಅಂದಬಳಿಕ ಆಡಂಬರಕ್ಕೆ ಎಂದೂ ಸೇರದ ಆತನಿಗೆ, ಇದೇ ಹೆಚ್ಚಿನದು! ಶ್ರೀಸದ್ಗುರುವಿನ ಅಲ್ಪಸಂತುಷ್ಟತೆಯನ್ನು ಈ ಅಲ್ಪವೆಚ್ಚದಿಂದಲೂ ವಾಚಕರು ತಿಳಕೊಳ್ಳಬಹುದಾಗಿದೆ!!

## ೧೦ನೆಯ ಪ್ರಕರಣ.

# ಪುನರ್ಘಟನೆಯು.

### ೧ನೆಯ ವಿಚಾರ—ಅಗ್ರಹಾರಕ್ಕೆ ಮುಂದೆ ಯಾರು?

**धैर्यं यस्य पिता क्षमा च जननी शांतिश्चिरंगेहिनी ।**
**सत्यं सूनुरयं दया च भगिनी भ्राता मनस्संयमः ॥**
**शय्या भूमितलं दिशोपि वसनं ज्ञानामृतं भोजनं ।**
**एते यस्य कुटुंबिनो वद सखे कस्माद्भयं योगिनः ॥१॥**

ಆನಂದವನದ ಪರೋಪಕಾರ-ಸಂಸ್ಥಾರೂಪ-ಪುರುಷನ ಆತ್ಮನಾದ ಶ್ರೀ ಶೇಷಾಚಲಸದ್ಗುರೂತ್ತಮನು ಬ್ರಹ್ಮತ್ವವನ್ನು ಹೊಂದಿದ್ದರಿಂದ, "ಆನಂದವನಕ್ಕೆ ಮುಂದೆ ಯಾರು?" ಎಂಬ ಪ್ರಶ್ನವು ಸಹಜವಾಗಿ ಹುಟ್ಟತೊಡಲು ಉತ್ಪನ್ನವಾಗುತ್ತದೆ. ಈ ಪ್ರಶ್ನಕ್ಕೆ ಉತ್ತರವಾಗಿ ಆನಂದವನಕ್ಕೆ ಇಂಥವರೇ ಆಗುವರೆಂದು ಹೇಳಲಿಕ್ಕೆ ಲೋಕವು ಸಂಶಯಗ್ರಸ್ತವಾಗಿ ಸಂಕೋಚಪಡುತ್ತಿದ್ದರೂ, ಶ್ರೀಗುರು

ಗಳ ತರುವಾಯ "आत्मा वै पुत्रनामासीत्" ಎಂಬ ಶ್ರುತಿವಾಕ್ಯವನ್ನು ಸಾರ್ಥಕಮಾಡಿ ತೋರಿಸುವ ಆಯು ಚಿರಂಜೀವಿಗಳಾದ ಶ್ರೀ ಚಿದಂಬರಮೂರ್ತಿಗಳೇ ಆನಂದವನದ ಪರೋಪಕಾರಸಂಸ್ಥೆಯ ಚಾಲಕರೂ, ಮೂಲಕರೂ ಆಗಿ, ಸಂಸ್ಥೆಯ ಆತ್ಮವಾಗಿ ಇರುವರೆಂದು ಚಂದ್ರಿಕೆಯು ಸ್ಪಷ್ಟವಾಗಿ ಪರಮಾನಂದದಿಂದ ಹೇಳುವಳು. ಈ ಮಾತನ್ನು ಚಂದ್ರಿಕೆಯು ಪಕ್ಷಪಾತದಿಂದಾಗಲಿ, ಮಾತ್ಸರ್ಯದಿಂದಾಗಲಿ ಹೇಳುತ್ತಾಳೆಂದು ವಾಚಕರು ತಿಳಿದುಕೊಳ್ಳಬಾರದು; ಶ್ರೀಗುರುಸ್ಥಾನದಲ್ಲಿ ಹುಟ್ಟಿ, ಶ್ರೀ ಗುರುಸ್ಥಾನದಲ್ಲಿ ಬೆಳೆಯುತ್ತ, ದಿನದಿನಕ್ಕೆ ನಿಸ್ಪೃಹಳೂ, ಸ್ಪಷ್ಟವಾದಿಯೂ ಆಗುತ್ತ ನಡೆದಿರುವ ಚಂದ್ರಿಕೆಯು, ಹಾಗೆ ಹೇಳುವಳೆಂಬ ವಿಚಾರವನ್ನು ವಾಚಕರು ಒಮ್ಮೆಲೆ ಮನಸ್ಸಿನಲ್ಲಿ ತಂದುಕೊಳ್ಳಬಾರದು. ಆಕೆಯು ಹಾಗೆ ಹೇಳಿ ಕಟ್ಟಿಕೊಳ್ಳತಕ್ಕದ್ದಾದರೂ ಏನು? ಚಂದ್ರಿಕೆಯ ಉಕ್ತಿಯು ಸ್ವಕಪೋಲಕಲ್ಪಿತವಲ್ಲ. ಈ ಸಂಬಂಧದಿಂದ ಶ್ರೀ ಗುರುವು—"ಮಹಾರಾಜಾ, ಅಗ್ರಹಾರದ ಗುರುತ್ವಕ್ಕೆ ಪಾತ್ರವಾದ ವಸ್ತುವು, ಅಂಶವಾದರೂ ಇರಬೇಕು, ಅನುಗ್ರಹಕ್ಕೆ ಪಾತ್ರವಾದದ್ದಾದರೂ ಇರಬೇಕು" ಎಂದು ಸೂತ್ರರೂಪವಾಗಿ ನುಡಿದದ್ದು ಎಲ್ಲರಿಗೂ ಗೊತ್ತಿರುವದು. ಅಂಶವು ರಕ್ತಾಂಶವೆಂತಲೂ, ವೃತ್ತ್ಯಂಶವೆಂತಲೂ ಎರಡು ವಿಧವಾಗಿರುವದು. ಇವುಗಳಲ್ಲಿ ಮೊದಲನೆಯದಕ್ಕಿಂತ ಎರಡನೆಯ ಅಂಶವೇ ಪುತ್ರಸಂಜ್ಞೆಯನ್ನು ಪಡೆಯಲಿಕ್ಕೆ ಅವಶ್ಯವಾಗಿರುತ್ತದೆಂದು ತಿಳಿಯಬೇಕು; ಆದರೆ ಶ್ರೀ ಚಿದಂಬರಮೂರ್ತಿಗಳು ಶ್ರೀ ಶೇಷಾಚಲಸದ್ಗುರೂತ್ತಮರ ಈ ಎರಡೂ ಬಗೆಯ ಅಂಶವಾಗಿ ಆನಂದವನಕ್ಕೆ ದೊರೆತದ್ದು, ಲೋಕದ ಪರಮಭಾಗ್ಯವೆಂದು ತಿಳಿಯತಕ್ಕದ್ದು. ಯಾಕೆಂದರೆ, ಶ್ರೀ ಚಿದಂಬರಮೂರ್ತಿಗಳು ಶ್ರೀ ಶೇಷಾಚಲಸದ್ಗುರೂತ್ತಮರ ಹೊಟ್ಟೆಯಲ್ಲಿ ಹುಟ್ಟಿದ್ದಲ್ಲದೆ, ಸದ್ಗುರುಗಳಂತೆ ಕೇವಲ ಸಾಧುವೃತ್ತಿಯವರೂ ಆಗಿರುವರು! ತಂದೆ-ಮಕ್ಕಳ ಈ ಅಂಶಅಂಶೀಭಾವದ ಸಂಬಂಧದಿಂದ ಒಂದು ಲೌಕಿಕಉದಾಹರಣವನ್ನು ತಕ್ಕೊಳ್ಳೋಣ. ಕೇವಲ ಹೊಟ್ಟೆಯಲ್ಲಿ ಮಾತ್ರ ಹುಟ್ಟಿ, ತಂದೆಯ ಮನಸ್ಸಿಗೆ ಬರುವಂತೆ ನಡೆಯದೆ, ಸ್ವಚ್ಛಂದದಿಂದ ನಡೆಯುವ ಮಗನನ್ನು ಕುರಿತು ತಂದೆಯು—"ನೀನು ನನ್ನ ಮಗನಲ್ಲ, ವೈರಿಯು. ನನ್ನ ಹೊಟ್ಟೆಯಲ್ಲಿ ಹುಟ್ಟತಕ್ಕದ್ದಿದ್ದಿಲ್ಲ. ನೀನೆಲ್ಲಿಯಮಗನು?" ಎಂದು ನಿರಾಕರಿಸುವದು ಲೋಕರೀತಿಯಾಗಿರುವದು; ಆದರೆ ಶ್ರೀ ಶೇಷಾಚಲಸದ್ಗುರೂತ್ತಮರು ಹೀಗೆ ಮಗನನ್ನು ನಿರಾಕರಿಸಿದ್ದನ್ನಂತು ಲೇಖಕನು ಕೇಳಿರುವದಿಲ್ಲ. ಗುರುಗಳನಿರಾಕರಣಕ್ಕೆ ಗುರಿಯಾಗದವರು ಯಾರಾದರೂ ಆನಂದವನದಲ್ಲಿ ಇದ್ದರೆ, ಅವರು ಚಿದಂಬರ

ಮೂರ್ತಿಗಳೊಬ್ಬರೇ ಎಂದು ಹೇಳಬಹುದು. ಮಾರುತಿಯು ಶ್ರೀ ರಾಮಚಂದ್ರನ ರಕ್ತಾಂಶವಾಗದಿದ್ದರೂ, ಭೃತ್ಯಾಂಶವಾದದ್ದರಿಂದ, ಆತನಿಗೆ ಗುರುಪುತ್ರಸಂಜ್ಞೆಯು ದೊರೆಯಿತು; ಪ್ರತ್ಯಕ್ಷ ಸೀತಾಮಾತೆಗೂ ಲಭಿಸದೆಯಿದ್ದ ಶ್ರೀ ರಾಮಚಂದ್ರನ ಏಕಪಾತ್ರ-ಭೋಜನದ ಮಾನವು ಆತನಿಗೆ ದೊರೆತದ್ದಲ್ಲದೆ, ಸ್ಥಿರಜೀವಿತ್ವವೂ, ಬ್ರಹ್ಮಪದವಿಯೂ ಲಭಿಸಿದವು. ಉಳಿದ ಕಪಿಗಳು ಬೇಕಾದಷ್ಟು ಅಟ್ಟಕ್ಕೆ ಹಾರಿ ಬೆಟ್ಟಕ್ಕೆ ಬಿದ್ದರೂ, ಅವಕ್ಕೆ ಗುರುಪುತ್ರಸಂಜ್ಞೆಯು ಪ್ರಾಪ್ತವಾಗಲಿಲ್ಲ. ಇದೇ ಮಾತು ಶ್ರೀಶೇಷಾಚಲಸದ್ಗುರೂತ್ತಮರ ಶಿಷ್ಯರೆನಿಸುವವರುಗೂ ಹತ್ತುತ್ತದೆ. ನಾವು ಬೇಕಾದಷ್ಟು ನೆಗೆನೆಗೆದು ಆನಂದವನದಲ್ಲಿ ಹಿಂದಕ್ಕೆ ದುಡಿದಿರಲಿ, ಈಗ ದುಡಿಯುತ್ತಿರಲಿ, ಮುಂದೆ ದುಡಿಯಲಿ, ಶ್ರೀ ಗುರುವಿನ ವೃತ್ತಿಯು ನಮ್ಮಲ್ಲಿ ಬಾರದ್ದರಿಂದ, ಅಂದರೆ, ನಾವು ಶ್ರೀ ಗುರುವಿನ ಭೃತ್ಯಾಂಶರಾಗದ್ದರಿಂದ, ನಮಗೆ ಗುರುಪುತ್ರಸಂಜ್ಞೆಯು ಬರಲಾರದು. ನಮ್ಮ ದುಡಿತಕ್ಕೆ ಬರುವ ಫಲವೆಂದರೆ, ಲೌಕಿಕ ಪ್ರತಿಷ್ಠೆಯು! ಅಥವಾ ನಾವು ಶ್ರೇಷ್ಠತ್ವಪಡೆದೆವೆಂಬ ಸಮಾಧಾನವು!

ಶ್ರೀ ಗುರುಗಳು ಯಾವಾಗಲೂ ಶಿಷ್ಯರನ್ನು ಕುರಿತು--"ಏನು ಆಗುವದು ತಾನೇ ಆಗಬೇಕು" ಎಂಬ ಸೂತ್ರವಚನದಿಂದ ಬೋಧಿಸುತ್ತಿದ್ದರು ಅಲೌಕಿಕಜ್ಞಾನವು, ಮಹಾತಪಸ್ವಿಯಾದ ಶ್ರೀ ಬುದ್ಧದೇವನಿಗೆ ಬೋಧಿವೃಕ್ಷದ ಬುಡದಲ್ಲಿ ಕುಳಿತಾಗ ಅಕಸ್ಮಾತ್ ತಾನಾಗಿ ಆದಂತೆ, ಅಥವಾ ಏಕನಾಥರ ಬಾಯಲ್ಲಿ ಪರಮಗುರುಗಳಾದ ದತ್ತಾತ್ರೇಯರು ಉಗುಳಿ ಅನುಗ್ರಹಿಸಿದಂತೆ, ಅಥವಾ ಬೇರೊಂದು ಬಗೆಯ ಗುರ್ವನುಗ್ರಹದಿಂದ ಶಿಷ್ಯನಿಗೆ ಅಲೌಕಿಕಜ್ಞಾನವು ಪ್ರಾಪ್ತವಾದಂತೆ, ಮನುಷ್ಯನಿಗೆ ಅನುಗ್ರಹವು ಹೊರಗಿನಿಂದ ಪ್ರಾಪ್ತವಾಗಬೇಕಾಗುವದು. ತಾನು ಮಾಡಿದರೆ ವೇಷವಾದೀತಲ್ಲದೆ, ಸತ್ಯವಸ್ತುವಾಗಲಾರದೆಂಬದು ಗುರುಗಳ ಮೇಲಿನ ಸೂತ್ರರೂಪಬೋಧದ ಆಶಯವಾಗಿರುವದು. ನಮಗಿಂತ, ನಾವು ಮಾಡುವ ಕರ್ಮಗಳು ಕ್ಷುದ್ರವಾಗಿರಲು, ಆ ಕ್ಷುದ್ರಕರ್ಮಗಳ ಕ್ಷುದ್ರಫಲಗಳಿಂದ ನಮ್ಮ ಸಮಾಧಾನವು ಹ್ಯಾಗಾದೀತು? ನಮ್ಮ ಸದ್ಗುರುಗಳ ಈ ಸೂತ್ರವು—"कर्मण्ये वाधिकारस्ते मा फलेषु कदाच न" ಅಂದರೆ, "ಫಲಪ್ರಾಪ್ತಿಗೆ ಅನುಕೂಲವಾದ ಕರ್ಮಮಾಡುವಲ್ಲಿ ನಿನಗೆ ಅಧಿಕಾರವಿರುತ್ತದಲ್ಲದೆ, ಫಲಪ್ರಾಪ್ತಿಯ ವಿಷಯದಲ್ಲಿ ನಿನಗೆ ಅಧಿಕಾರವಿಲ್ಲ" ಎಂಬ ಗೀತಾವಚನದ ಒಂದು ಬಗೆಯ ಸಂಕ್ಷಿಪ್ತ ರೂಪಾಂತರವಾಗಿರುವದೆಂದು ಚಂದ್ರಿಕೆಗೆ ತೋರುತ್ತದೆ. ಗುರುಗಳ ಈ ಸೂತ್ರವಚನದಂತೆ ನೋಡಿದರೆ, ಶ್ರೀ ಚಿದಂಬರಮೂರ್ತಿಗಳ ಸತ್ವವು ಶ್ರೀ ಶೇಷಾಚಲಸದ್ಗುರೂತ್ತಮರ ಸತ್ವಕ್ಕಿಂತಲೂ ಅಧಿಕವಾಗಿ

ರುತ್ತದೆಂದು ಚಂದ್ರಿಕೆಯು ತಿಳಿಯುವಳು. ಅದಕ್ಕಾಗಿ ಆಕೆಯು ಒಂದು ಉದಾಹರಣವನ್ನು ಕೊಡುತ್ತಾಳೆ, ಲಕ್ಷವಿರಲಿ;—ಶ್ರೀ ರಾಮಚಂದ್ರನು ತಾಟಕಿಯನ್ನು ಕೊಲ್ಲಲು, ಆತನ ಅಪ್ಪಟ ಕ್ಷಾತ್ರಧರ್ಮಕ್ಕೆ ಮೆಚ್ಚಿ, ವಿಶ್ವಾಮಿತ್ರಋಷಿಗಳು ಆತನಿಗೆ ಜೃಂಭಕಾಸ್ತ್ರಗಳನ್ನು ಕೊಟ್ಟಿದ್ದರು; ಆದರೆ ಶ್ರೀರಾಮಚಂದ್ರನು ತನ್ನ ಮಕ್ಕಳಾದ ಲವಕುಶರಲ್ಲಿ ತನಗಿಂತಲೂ ಅಧಿಕಸತ್ವವನ್ನು ಇಟ್ಟಿದ್ದರಿಂದ, ಅವೇಅಸ್ತ್ರಗಳು ಲವಕುಶರು ಹುಟ್ಟುತ್ತಲೆ ಅವರಬಳಿಗೆ ಬಂದು, ಕೈಜೋಡಿಸಿ ಪ್ರಾರ್ಥಿಸಿ ತಾವಾಗಿ ಆ ವೀರಾಗ್ರಣಿಶಿಶುಗಳನ್ನು ಸೇರಿಕೊಂಡವು! ಅದರಂತೆ, ಶ್ರೀ ಶೇಷಾಚಲಸದ್ಗುರೂತ್ತಮರು ಘೋರತಪಶ್ಚರ್ಯದಿಂದ ಸಂಪಾದಿಸಿದ್ದ ಸಾಧುವೃತ್ತಿಯು, ಶ್ರೀ ಗುರುಗಳು ಮೂರ್ತಿಗಳಲ್ಲಿ ಜನ್ಮತಃ ಇಟ್ಟಿದ್ದ ಅಧಿಕಸತ್ವದ ಯೋಗದಿಂದ, ಆ ಸಾಧುವೃತ್ತಿಯು ಸ್ವಾಭಾವಿಕವಾಗಿಯೇ ಮೂರ್ತಿಗಳನ್ನು ಜನ್ಮತಃ ಆಶ್ರಯಿಸಿತು!! ಪ್ರಿಯವಾಚಕರೇ, ಹೀಗೆ ಬರೆಯುವಾಗ ಲೇಖಕನ ಕುತ್ತಿಗೆಯ ಶಿರಗಳು ಬಿಗಿದುಕಂಠವು ಸದ್ಗದಿತವಾಗುತ್ತದೆ. ಈ ಮರ್ಮವನ್ನು ತಿಳಿಸುವದಕ್ಕಾಗಿಯೇ ಶ್ರೀಗುರುವು ಮೂರ್ತಿಗಳನ್ನು ಕುರಿತು (ಹಿಂದಕ್ಕೆ ನಾವು ಒಮ್ಮೆ ಹೇಳಿದಂತೆ)—"ಮೂರ್ತಿಯು ಯಾವಪಾಪವನ್ನೂ (ಮಾಯಾವ್ಯವಹಾರವನ್ನೂ) ಅರಿಯದವನು; ಆದ್ದರಿಂದ ಆತನು ಅಗ್ರಹಾರಕ್ಕೆ ಮುಖ್ಯನಾಗಲಾರನು; ಲೋಕಸೇವಕನಾಗಿ ನಡೆಯತಕ್ಕವನು" ಎಂದು ನಮ್ಮೆಲ್ಲರಿಗೆ ಸೂಚಿಸಿದನು! ಇದರಿಂದಮೂರ್ತಿಯನ್ನೇ ನಾನೆಂದು ತಿಳಿಯಿರೆಂದು ಶ್ರೀಗುರುವು ಹೇಳಿದ ಹಾಗಾಯಿತು! ಅದರಂತೆ ತಾನು ಮೂರ್ತಿಯಲ್ಲಿ ಇಟ್ಟಿದ್ದ ಅಧಿಕಸತ್ವದಕ್ಕುರುಹು ತೋರುವದಕ್ಕಾಗಿಯೇ ಶ್ರೀ ಗುರುವು—"ಅಗ್ರಹಾರದಲ್ಲಿ ಇದಕ್ಕೂ ಹತ್ತುಪಟ್ಟುಹೆಚ್ಚು ಉಜ್ವಲವಾಗಿ ಸೇವಾಧರ್ಮಗಳು (ಪರೋಪಕಾರದಕಾರ್ಯಗಳು)ನಡೆಯುವವು; ಆದರೆ ನೀವು ಧರ್ಮವನ್ನು ಮಾತ್ರ ಕಾಯ್ದುಕೊಳ್ಳಿರಿ," ಎಂದು ಮೂರ್ತಿಗಳನ್ನಲ್ಲ, ಶಿಷ್ಯರೆನಿಸಿಕೊಳ್ಳುವ ನಮ್ಮನ್ನು ಕುರಿತು ಬೋಧಿಸಿದನು. ತಾನೇ ಮೂರ್ತಿಗಳ ಹೃದಯಸ್ಥನಾದ್ದರಿಂದ ಮೂರ್ತಿಗಳನ್ನು ಬೋಧಿಸಲವಶ್ಯವಿಲ್ಲ. ಹೀಗೆ ಮಗನ ಹೃದಯದಲ್ಲಿದ್ದು ಲೋಕೋಪಕಾರಮಾಡುವ ಕಾಂಕ್ಷೆಯನ್ನು ತಾಳಿದ್ದರಿಂದಲೇ, ಹತ್ತನೆಯ ದಿವಸದ ಔರ್ಧ್ವದೇಹಿಕಕರ್ಮಗಳು ಮುಗಿದ ಬಳಿಕ, ಕರ್ಮಕ್ಕೆ ಮಾನಕೊಡುವದಕ್ಕಾಗಿ ಲಿಂಗದೇಹಧಾರಣಮಾಡಿದ ಶ್ರೀ ಗುರುವು, ಸ್ವರ್ಗಕ್ಕೆ ಹೋಗದೆ, ಮಗನಹೃದಯವನ್ನು ಪ್ರವೇಶಿಸಿದನೆಂದು ಚಂದ್ರಿಕೆಯು ಭಾವಿಸಿರುವಳು; ಮತ್ತು ಕಾಕಪಿಂಡವಾಗದೆಯಿದ್ದದ್ದಕ್ಕೆ, ಇದೇಕಾರಣವನ್ನು ಆಕೆಯು ಪ್ರಾಮುಖ್ಯವಾಗಿ ಮುಂದೆಮಾಡಿ ಸಂತೋಷಪಡುವಳು.

ಇಂಥ ಘನವಾದ ಯೋಗ್ಯತೆಯು ಸತ್ವಸ್ಥರಾದ ಶ್ರೀ ಚಿದಂಬರಮೂರ್ತಿಗಳ ಯೋಗ್ಯತೆಯನ್ನು ಅಗ್ರಹಾರದ ಹೊರಗಿನವರಂತು ಇರಲಿ, ಅಗ್ರಹಾರದೊಳಗಿನವರಾದರೂ ತಿಳಿದುಕೊಂಡಿರುತ್ತೀರೇನೆಂದು ವಾಚಕರು ಕೇಳಬಹುದು ; ಆದರೆ ಲೌಕಿಕಾಡಂಬರಾಸಕ್ತರಾದ ಆನಂದವನಸ್ಥರು ನಾವು, ಲೋಕಪ್ರಸಿದ್ಧರಾಗಿದ್ದ ಶ್ರೀ ಗುರುಗಳ ನಿಜವಾದ ಯೋಗ್ಯತೆಯನ್ನು ತಿಳಕೊಂಡಿದ್ದರಷ್ಟೇ ಮೂಲೆಯೊಳಗಿನ ಶ್ರೀ ಚಿದಂಬರಮೂರ್ತಿಗಳ ಯೋಗ್ಯತೆಯನ್ನು ತಿಳಿದುಕೊಳ್ಳುವದು! ನಮಗೆ ಬೇಕು ಲೋಕರಂಜನ-ಲೋಕಪ್ರತಿಷ್ಠೆ-ಇಲ್ಲದ ಹಿರಿಯತನ-ಎಂಥೂ ದಕ್ಕಲಾರದ ಆನಂದವನದ ಜಾಣಮೂನ್ಯ-ಅತ್ಯುಚ್ಚ ಸಾಧುಪದವಿ! ಇಂಥ ವಾಸನಾಪರರು, ವಾಸನಾರಹಿತರಾದ ಶ್ರೀ ಚಿದಂಬರಮೂರ್ತಿಗಳ ಯೋಗ್ಯತೆಯನ್ನು ಅರಿಯುವೆವೇ? ಲೇಖಕನು ಆನಂದವನಕ್ಕೆ ಬಂದು ಎಂಟು ವರ್ಷಗಳಾದರೂ ತನ್ನ ಕಾರ್ಯಾಡಂಬರದಲ್ಲಿ ಮಗ್ನನಾಗಿದ್ದನಲ್ಲದೆ, ಶ್ರೀ ಚಿದಂಬರಮೂರ್ತಿಗಳ ಯೋಗ್ಯತೆಯನ್ನು ಕಣ್ದೆರೆದು ನೋಡಲಿಲ್ಲ. ಅಹಂಭಾವದ ಜನರ ಸಂಗಡ ನಿರರ್ಥಕ ಜಗಳಾಡುವದರಲ್ಲಿ ಆವನಿಗೆ ಕೂಡಿದರಷ್ಟೇ ಶ್ರೀ ಚಿದಂಬರಮೂರ್ತಿಗಳನ್ನು ನೋಡುವದು! ಮುಚ್ಚುವದೇಕೆ? ಮೂರ್ತಿಗಳನ್ನು ನೋಡುವ ಕಣ್ಣುಗಳೇ ಲೇಖಕನಲ್ಲಿ ಇಲ್ಲವೆಂದು ನಿರ್ಭಿಡೆಯಿಂದ ಚಂದ್ರಿಕೆಯು ಬರೆಯುವಳು. ಚಂದ್ರಿಕೆಯಲ್ಲಿ ಲೇಖ ಬರೆಯುವ ಪ್ರಸಂಗಬಂದದ್ದರಿಂದ, ಚಂದ್ರಿಕೆಯ ಪ್ರಸಾದದಿಂದ ಆತನಿಗೆ ಅಷ್ಟರಮಟ್ಟಿಗೆ ಆ ಕಣ್ಣುಗಳು ಬಂದಿರಲು, ಆ ಕಣ್ಣುಗಳನ್ನು ಮುಚ್ಚದೆ ಮೂರ್ತಿಗಳ ವೃತ್ತಿಯನ್ನು ಲೇಖಕನು ಅವಲೋಕಿಸುತ್ತ, ಅದರಂತೆ ತನ್ನ ವೃತ್ತಿಯನ್ನು ಸುಧಾರಿಸಿಕೊಳ್ಳುತ್ತ ಹೋದರೆ, ಆತನು ಆನಂದವನಕ್ಕೆ ಬಂದದ್ದರ ಸಾರ್ಥಕನಾಗಬಹುದು. ಲೇಖಕನದೃಷ್ಟಿಗಳು ಮೂರ್ತಿಗಳ ಕಡೆಗೆ ತಿರುಗಿದ ಪ್ರಸಂಗವನ್ನು ಲೇಖಕನು ಮರೆಯದೆ ಇಲ್ಲಿ ಹೇಳುವನು—ಈಗ ಸರಾ ೨೦ ವರ್ಷದ ಹಿಂದೆ ಕಾರ್ಯಾರ್ಥಿಯಾದ ಲೇಖಕನು, ಪಾಠಶಾಲೆಯಲ್ಲಿ ಅಧ್ಯಾಪನಕಾರ್ಯ ಮಾಡ್ಯಾರೆಂಬ ಆಶೆಯಿಂದಲೂ ಚಂದ್ರಿಕೆಯಲ್ಲಿ ಲೇಖ ಬರೆದಾರೆಂಬ ಆತ್ಯಾಶೆಯಿಂದಲೂ, ಭಾಗವತಾದಿ ಸಂಸ್ಕೃತಪುರಾಣಗ್ರಂಥಗಳ ಭಾಷಾಂತರ ಮಾಡ್ಯಾರೆಂಬ ದುರಾಶೆಯಿಂದಲೂ, ವೇ. ಶಾ. ರಾ. ರಾ. ಶ್ರೀಕಂಠ ಶಾಸ್ತ್ರಿಗಳ ಪ್ರಸನ್ನತೆಗಾಗಿ ಅವರನ್ನು ತಾನಿದ್ದಲ್ಲಿಗೆ ಕರೆತಂದು, ಕುಡಿಯಲಿಕ್ಕೆ ಅವರಿಗೆ ಹಾಲು ಕೊಡುತ್ತಿದ್ದನು. ಅವರನ್ನು ಕರೆಯಲಿಕ್ಕೆ ಹೋದಾಗ ಶ್ರೀ ಚಿದಂಬರಮೂರ್ತಿಗಳು ಆಗಾಗ್ಗೆ ಆತನ ಕಣ್ಣಿಗೆ ಬೀಳುತ್ತಿದ್ದರು. ಹೀಗೆ ಕೆಲವು ದಿನಗಳಾದ ಬಳಿಕ ಶ್ರೀ ಮೂರ್ತಿಗಳಿಗೂ ಹಾಲು ಕೊಡಬೇಕೆಂಬ ಮನಸ್ಸು ಆಗಲು, ಲೇಖಕನು ಅವರಿದ್ದಲ್ಲಿಗೆ

ಹೋಗಿ ಶಾಸ್ತ್ರಿಗಳೊಡನೆ ಮೂರ್ತಿಗಳಿಗೂ ಹಾಲುಕೊಡಹತ್ತಿದನು; ಮುಂದೆ ಬರಬರುತ್ತ ಮೂರ್ತಿಗಳು ಲೇಖಕನ ಮನೆಗೇ ಬರಹತ್ತಿದರು! ಆದರೆ ಶ್ರೀ ಗುರುಗಳ ಮಕ್ಕಳೆಂದು ಅವರನ್ನು ಲೇಖಕನು ಅಲ್ಪಸ್ವಲ್ಪ ಮನ್ನಿಸುತ್ತಿದ್ದನಲ್ಲದೆ, ಮೂರ್ತಿಗಳ ವಿಷಯದ ನಿಜವಾದ ಶ್ರದ್ಧೆಯು ಆತನಲ್ಲಿ ಅಂಕುರಿಸಿದ್ದಿಲ್ಲ. ಈಗಾದರೂ ಆಶ್ರದ್ಧೆಯು ಅಂಕುರಿಸಿರುವದೆಂದು ಲೇಖಕನು ತಿಳಿದಿರುವದಿಲ್ಲ; ಆದರೆ ಸಜ್ಜನರಾದಮೂರ್ತಿಗಳ ಸಂಬಂಧವೂ, ಸಹವಾಸವೂ ಹಾಲುಕೊಡುವ ನೆವದಿಂದ ಸ್ವಲ್ಪಸ್ವಲ್ಪ ಆತನಿಗೆ ಆಗಹತ್ತಲು, ಕೆಲ ದಿನಗಳ ಮೇಲೆ ಲೇಖಕನ ದೃಷ್ಟಿಯು ಮೂರ್ತಿಗಳ ನಿರಭಿಮಾನ ಸ್ವಭಾವ, ಶಾಂತಗುಣ, ಮೃದುಭಾಷಣ, ನಿರಿಚ್ಛೆ, ಲೋಕಾನುವರ್ತನ ಮೊದಲಾದವುಗಳ ಕಡೆಗೆ ತಿರುಗಿತು. "मनएव मनुष्याणां कारणं बंधमोक्षयोः" ಎಂಬಂತೆ, ಲೇಖಕನ ಮನಸ್ಸು ಶ್ರೀ ಚಿದಂಬರಮೂರ್ತಿಗಳ ಈ ಅಲಭ್ಯಗುಣಗಳಲ್ಲಿ ಆಸಕ್ತವಾಗಲು, ಅವನ ವಿಚಾರಕ್ರಾಂತಿಯಾಗಿ, ಆತನು ಶ್ರೀ ಮೂರ್ತಿಗಳ ಒರೆಗೆತನ್ನನ್ನೂ, ಅಗ್ರಹಾರದ ಎಲ್ಲ ಜನರನ್ನೂ ಹಚ್ಚಿನೋಡಹತ್ತಿದನು! ಇದರಿಂದ ಲೇಖಕನಿಗೆ ತನ್ನ ಕ್ಷುದ್ರವೃತ್ತಿಯು ಪರಿಚಯವಾದದ್ದಲ್ಲದೆ, ಪೂರ್ಣತಾರುಣ್ಯದಲ್ಲಿರುವ ಮೂರ್ತಿಗಳ ಯೋಗ್ಯತೆಯು ಘನತೆಯು ಆತನ ಲಕ್ಷಕ್ಕೆ ಬರಹತ್ತಿತು. ಪ್ರಿಯವಾಚಕರೇ, ಶ್ರೀ ಚಿದಂಬರಮೂರ್ತಿಗಳನ್ನು ಇಷ್ಟು ಹೊಗಳುವದರಲ್ಲಿ ಲೇಖಕನ ಉದ್ದೇಶವೇನಿರಬಹುದೆಂದು ನೀವು ಶಂಕಿಸುತ್ತಿರಬಹುದು; ಆದರೆ ಆ ಶಂಕೆಗಾಗಿ ನಿಮ್ಮನ್ನು ಯಾಕೆ ಈಡು ಮಾಡಬೇಕು? ಶ್ರೀ ಶೇಷಾಚಲಸದ್ಗುರೂತ್ತಮನು ಏನೇನೋ ಮೋಸಮಾಡಿದ ಹಾಗೆ ಮಾಡಿ, ಲೇಖಕನ ನೌಕರಿಯನ್ನು ಬಿಡಿಸಿ ಅವನ ಸಂಸಾರವಾಸನೆಯನ್ನು ಅಲ್ಪ ಸ್ವಲ್ಪ ಶಿಥಿಲವಾಗ ಮಾಡಿದ ಹಾಗೆ ಮಾಡಿದನು; ಆದರೆ ಆತನ ಪುತ್ರನೆನಿಸುವ ಶ್ರೀ ಚಿದಂಬರಮೂರ್ತಿಯು, ತನ್ನ ಮನಸ್ಸಿಗೆ ಬಂದರೆ ಲೇಖಕನ ಸಂಸಾರವಾಸನೆಯು ನಿಃಪಾತಮಾಡಿ, ಆತನ ದೇಹಾಭಿಮಾನವನ್ನು ಕಳಚಿಚಲ್ಲಿ, ಆತನ ಮನಸ್ಸನ್ನು ತನ್ನ ಕಡೆಗೆ ಎಳಕೊಳ್ಳಲೆಂದರಾಯಿತು.

ಶ್ರೀ ಚಿದಂಬರಮೂರ್ತಿಗಳ ವಿಷಯವಾಗಿ ಬರಿಯ ಕ್ಷುದ್ರಲೇಖಕನ ಮತದಿಂದ ವಿಶೇಷಪ್ರಯೋಜನವಾಗದೆಂದು ತಿಳಿದು, ಗುರುಪುತ್ರಿಯಾದ ಚಂದ್ರಿಕೆಯು ತನ್ನ ಜ್ಯೇಷ್ಠಬಂಧುವಿನ ಇಂದಿನವರೆಗಿನ ನಡತೆಯ ಸಾಮಾನ್ಯಸ್ವರೂಪವನ್ನು ಕುರಿತು ಸ್ವಲ್ಪ ಬರೆಯುವಳು, ವಾಚಕರ ಲಕ್ಷವಿರಬೇಕು. ದೊಡ್ಡವರ ಮನೆಯ ನಾಯಿ ಸಹ ಉಳಿದ ನಾಯಿಗಳಿಗಿಂತ ಎಷ್ಟೊಂದು ಅಭಿಮಾನಪಟ್ಟು ಉಚ್ಛಾಸನ

ದಲ್ಲಿ ಕುಳಿತು, ತನ್ನ ಗುರುರಾಯರವಸಾನ ವ್ಯಾಪಾರವನ್ನು ಬಹು ಗಾಂಭೀರ್ಯದಿಂದ ಮಾಡಿ ಎತ್ತಿಎತ್ತಿ ಸೆಳೆಯುತ್ತಿರುತ್ತದೆ! ಇದರ ಅನುಕರಣವನ್ನು ಶಿಷ್ಯರಾದ ನಾವೂ, ನಮ್ಮ ಪರಿವಾರವೂ ಮಾಡುತ್ತಿರುವೆವು; ಆದರೆ ಜಗತ್ಪ್ರಸಿದ್ಧನೂ, ಕರ್ತುಮಕರ್ತುಮನ್ಯಥಾಕರ್ತುಂ ಸಮರ್ಥನೂ ಆದ ಶ್ರೀ ಶೇಷಾಚಲ ಸದ್ಗುರೂತ್ತಮನ ಮಕ್ಕಳಾದ ಶ್ರೀ ಚಿದಂಬರಮೂರ್ತಿಗಳೂ, ಅವರ ಹೆಂಡಿರು ಮಕ್ಕಳೂ ತೀರ ಸಾಮಾನ್ಯಜನರಂತೆ, ಹತ್ತುಮಂದಿಯೊಳಗೆ ತಾವೊಬ್ಬರು ಹನ್ನೊಂದನೆಯವರಾಗಿ ಶಿಷ್ಯಮಂಡಲಿಯ ಮೋರೆನೋಡುತ್ತ ಕಾಲಕಳೆಯುತ್ತ ಬಂದಿರುವರು. ಶ್ರೀಗುರುಗಳು ಸಾಧುಗಳು, ಅವರು ಕೇಳುವಹಾಗಿಲ್ಲ; ಶ್ರೀಗುರುಪುತ್ರರಾದ ಮೂರ್ತಿಗಳು ತಂದೆಯ ಹೆಜ್ಜೆಯಲ್ಲಿ ಹೆಜ್ಜೆ ಇಡುವವರು; ಅವರೂ ಕೇಳುಹಾಗಿಲ್ಲ. ಅಂದಬಳಿಕ ಶ್ರೀ ಗುರುಗಳ ಕುಟುಂಬದವರಿಗೆ ಅಭಿಮಾನವು ಎಲ್ಲಿಂದ ಬರಬೇಕು? ನಮ್ಮ ಪೂಜ್ಯ ಗುರುಪುತ್ರ ಶ್ರೀ ಚಿದಂಬರಮೂರ್ತಿಗಳೂ, ಅವರ ಸಚ್ಛೀಲ ಕುಟುಂಬದವರೂ ಪ್ರತಿಷ್ಠೆಯನ್ನು ಸೇರದವರು; ಆದ್ದರಿಂದ ಜನರಿಗೆ ಇವರು ಸಾಧುಗಳ ಮಕ್ಕಳು, ಇವರು ಸೊಸೆಯು, ಎಂಬದು ಗೊತ್ತಾಗುವದು ಬಹಳ ಕಷ್ಟ. ಆನಂದವನಕ್ಕೆ ಬಂದವರು ಮುಂದಿನದನ್ನು ಕೇಳಿ ತಿಳಕೊಳ್ಳಬೇಕಾಗುವದು. ಮೂರ್ತಿಗಳ ಕುಟುಂಬದವರಿಗೆ ಎಷ್ಟೋದಿವಸ ಮಲಗಲಿಕ್ಕೆ ಸ್ವತಂತ್ರಸ್ಥಳವಿದ್ದಿಲ್ಲ! ಈಗ ೨-೩ ವರ್ಷಗಳ ಹಿಂದೆ ಶಿಷ್ಯರೆನಿಸುವ ನಾವು ನಾಚಿ ಮೂರ್ತಿಗಳಿಗಾಗಿ ಹೊರಗೆಎಲ್ಲಿಯೋ ಒತ್ತಟ್ಟಿಗೊಂದು ಕೋಣೆಯನ್ನು ಮಾಡಿ ಕೊಟ್ಟಿರುವೆವು! ಶಿಷ್ಯರು ಕೊಟ್ಟ ದೋತರಗಳನ್ನು ಮೂರ್ತಿಗಳು ಉಡುವರು-ಹೊರುವರು, ಕೊಟ್ಟ ಅಂಗಿಟೊಪ್ಪಿಗೆಗಳನ್ನು ತೊಡುವರು-ಹಾಕುವರು. ಮೂರ್ತಿಗಳಿಗೆ ಹತ್ತುಮಂದಿಯೊಳಗೆ ೨ನೆಯ ಪಙ್ಕ್ತಿಯಲ್ಲಿ ಎರಡು ಹೊತ್ತು ಉಂಡ ಊಟ, ಕುಡಿದ ನೀರು. ಯಾರಾದರೂ ತಿಳಿದು ಏನಾದರೂ ಕೊಟ್ಟರೆ ಕೊಡಬೇಕು. ಮೂರ್ತಿಗಳಿಗೆ ಒಬ್ಬರನ್ನು ಕೇಳಿ ಗೊತ್ತಿಲ್ಲ. ಹತ್ತರ ಒಂದು ಪೈ ಇಟ್ಟು ಗೊತ್ತಿಲ್ಲ. ಹೆಂಡತಿಯೊಡನೆ ಮಂದಿಯ ಮುಂದೆ ಮಾತಾಡಿ ಗೊತ್ತಿಲ್ಲ. ಒಂದೊಂದು ದಿನ ಚೀಲ-ಚಪ್ಪಡಿಯ ಮೇಲೆ ಮಲಗಿದ್ದರೆ ಅಲ್ಲಿಯೇ ಬೆಳಗಾದರೂ ಆಗುವದು. “ಲೋಕದೊಳಗವರವರ ತೆರದಿ ನಡೆವನು ಜಾಣ” ಎಂಬಂತೆ, ಯಾರು ಹ್ಯಾಗೆ ಮಾತಾಡುವರೋ ಹಾಗೆ ಅವರೊಡನೆ ಮಾತಾಡಿ ಒಪ್ಪಿಬಿಡುವದೇ ಮೂರ್ತಿಗಳ ಬೋಧವು. ಅಗ್ರಹಾರದೊಳಗಿನ ದುರಭಿಮಾನದ ಶಿಷ್ಯರು ಒಬ್ಬರಿಗೊಬ್ಬರು ಬಡಿದಾಡುತ್ತಿರಲು, ಯಾರಿಗೆ ಏನೂ ಹೇಳದೆ, ಯಾರ ಸ್ತುತಿ-ನಿಂದೆಗಳನ್ನೂ ಮಾಡದೆ, ಗಾಂಭೀರ್ಯದಿಂದ ನೋ

ಡುತ್ತ ಸುಮ್ಮನಿರುವದೇ ಮೂರ್ತಿಗಳ ಸ್ವಭಾವವು. ಮೃದುನುಡಿಗಳನ್ನು ಬತ್ತಿ ಉಚ್ಚರಿಸುವದೇ ಮೂರ್ತಿಗಳ ಬಿರುನುಡಿಯ ಲಕ್ಷಣವು ಅಭದ್ರಮಾತುಗಳನ್ನಾಡದಿರುವದೇ ಮೂರ್ತಿಗಳ ಶೀಲವು. ಹಾಳು ಉಸಾಬರಿಗೆ ಜನರು ತಮ್ಮಕಡೆಗೆ ಬಾರದಂತೆ ಜನರಲ್ಲಿ ತಮ್ಮವಿಷಯವಾಗಿ ಉದಾಸೀನಭಾವವನ್ನುಂಟುಮಾಡುವದೇ ಮೂರ್ತಿಗಳ ಪ್ರಖರವಾದ ಸಾತ್ವಿಕತೇಜಸ್ಸಿನ ಸಾಕ್ಷಿಯು! ಮೂರ್ತಿಗಳಿಗೆ, ಮೇಲೆಂಬ ಅಭಿಮಾನವಿಲ್ಲ, ಕೆಳಗೆಂಬ ಅಭಿಮಾನವಿಲ್ಲ; ಮುಂದಿ ಮೇಲೆಕೂಡ್ರಿಸಿದರೆ ಬೇಸರವಿಲ್ಲ, ಕೆಳಗೆ ಕೂಡ್ರಿಸಿದರೆ ಚಿಂತೆಯಿಲ್ಲ. "ನೀನು ಅಯೋಗ್ಯನು, ಸ್ವಾಮಿಯ ಹೊಟ್ಟೆಯಲ್ಲಿ ಹುಟ್ಟತಕ್ಕದ್ದಿದ್ದಿಲ್ಲ" ಎಂದು ಲತ್ತಶಿಷ್ಯರು ನುಡಿದರೆ ಸಹ ಸುಮ್ಮನಿದ್ದುಬಿಡುವದು ಮೂರ್ತಿಗಳದೊಡ್ಡಸ್ತನವು! ಏರಿಕೆಯ ರಕ್ತದ ತರುಣ ಮೂರ್ತಿಗಳು, ಈ ವೊತ್ತಿನವರೆಗೆ ಒಬ್ಬರಸಂಗಡ ಜಗಳಾಡಲಿಲ್ಲ, ಒಬ್ಬರ ಮನಸ್ಸಿಗೆ ಹತ್ತುವ ಮಾತುಗಳನ್ನಾಡಲಿಲ್ಲ! "ಸ್ವಾಮಿಯ ಮಾತು ಮೀರಲಾಗದು. ಸ್ವಾಮಿ ಸಂತೋಷಪಡುವ ಕೆಲಸಮಾಡಬೇಕು" ಎಂದು ನುಡಿಯುತ್ತ, ಕಣ್ಣಿದ್ದವರಿಗೆ ಪ್ರತಿಸಾಧುವಾಗಿ ತೋರುವದು ಶ್ರೀ ಚಿದಂಬರಮೂರ್ತಿಗಳ ಮಹಾಮಹಿಮೆಯು! ಪ್ರಿಯವಾಚಕರೇ, 'ಕತ್ತೆಗೇಕೆ ಹತ್ತಿಯುಕಾಳು ಮುಸುರೆ" ಎನ್ನುವಂತೆ, ಶ್ರೀಚಿದಂಬರ ಮೂರ್ತಿಗಳ ಸದ್ವೃತ್ತಿಯ ಗೊಡವೆಯು ನಮಗೇಕೆ? ಬಹಳವಾದರೆ ಶ್ರೀ ಗುರುಸ್ಥಾನದಲ್ಲಿ ಕತ್ತೆದುಡಿದ ಹಾಗೆ ದುಡಿಯುವದೊಂದೇ ನಮ್ಮ ಕೆಲಸವು. ಇದರಿಂದ ಲೇಖಕನು ದುಡಿಯುವವರನ್ನು ನಿರಾಕರಿಸುತ್ತಾನೆಂದು ತಿಳಿಯಬೇಡಿರಿ. ದುಡಿಯುವವರನ್ನು ಕಂಡರೆ ಆತನಿಗೆ ಪಂಚಪ್ರಾಣವು. ವಿವೇಕಿಯಾಗಿ ಮನುಷ್ಯನು ಯಾವಾಗಲೂ ದುಡಿಯಬೇಕೆಂದು ಬೋಧಿಸುವದಕ್ಕಾಗಿಯೇ ಭಗವಂತನಿಂದ ಗೀತಾಶಾಸ್ತ್ರವು ಪ್ರಕಟವಾಗಿರುವದೆಂದು ಲೇಖಕನಿಗೆ ಕೇಳಿಯಾದರೂ ಗೊತ್ತುಂಟು; ಆದರೆ ದುರಭಿಮಾನಿಗಳ ನಮ್ಮ ದುಡತವು ದುಡತವಲ್ಲ, ನಮ್ಮ ಅಹಂಕಾರಕ್ಕಾಗಿ ಆದ ಸಖ್ತುಮಜೂರಿಯ ಕೈದು, ಎಂದು ತಿಳಿಯಬೇಕು. ಇಂಥ ಬದಮಾಷಜನರು ನಾವು, ಮೂರ್ತಿಗಳ ಸಾತ್ವಿಕಗುಣವನ್ನು ಹ್ಯಾಗೆ ತಿಳಿಯುವೆವು?

"ನಾರಾಯಣಭಗವಾನರನ್ನು ನನ್ನ ಸ್ಥಳದಲ್ಲಿ ತಿಳಿಯಿರಿ" ಎಂದು ಶ್ರೀಗುರುಗಳು ಹೇಳಿರುವರೆಂದು ನೀವೇ ಬರೆದಿದ್ದು, ಶ್ರೀ ಗುರುವಾಕ್ಯಕ್ಕೆ ವಿರುದ್ಧವಾಗಿ ಶ್ರೀ ಮೂರ್ತಿಗಳು ಹ್ಯಾಗೆ ಶ್ರೀ ಗುರುಸ್ಥಾನದಲ್ಲಿ ಆಗುವರೆಂದು ವಾಚಕರು ಲೇಖಕನನ್ನು ಕುರಿತು ಪ್ರಶ್ನೆಮಾಡಬಹುದು. ಈ ಪ್ರಶ್ನಕ್ಕೆ ಲೇಖಕನು ಸಮಾಧಾನ ಹೇಳುವನು. ಚೊಕ್ಕಚಿನ್ನಕ್ಕೆ ಇದು ಚಿನ್ನವಿರುತ್ತದೆಂದು ಎರಡನೆಯವನು ಹೇಳಲವಶ್ಯವಿಲ್ಲ.

ಅದರಂತೆ ಶ್ರೀನಾರಾಯಣಭಗವಾನರಿಗೆ ಶ್ರೀಗುರುಗಳ ಸ್ಥಾನವು ಸ್ವಯಂಸಿದ್ಧವಾಗಿಯೇ ಪ್ರಾಪ್ತವಾಗತಕ್ಕದ್ದಾಗಿದ್ದರೆ, ಹಾಗೆ ಗುರುಗಳು ಬಾಯಿಬಿಟ್ಟು ಹೇಳಲವಶ್ಯವಿದ್ದಿಲ್ಲ. ಶ್ರೀಮೂರ್ತಿಗಳಲ್ಲಿ ಸ್ವಯಂಸಿದ್ಧ ಸಾಧುವೃತ್ತಿಯಿರುವದರಿಂದ, ಅದನ್ನು ಒಡನುಡಿಯುವ ಅವಶ್ಯವು ಶ್ರೀ ಗುರುಗಳಿಗೆ ತೋರಲಿಲ್ಲ. ಕಸ್ತೂರಿಯ ವಾಸನೆಯು ಎಂದಾದರೂ ಹಬ್ಬತಕ್ಕದ್ದೇ. ಇನ್ನು ನಾರಾಯಣಭಗವಾನರನ್ನು ಕುರಿತು ಶ್ರೀಗುರುಗಳು ಹೇಳಿದ್ದರಲ್ಲಿ ಅರ್ಥವಿರುವದು. "ಚಂದ್ರಿಕೆಯಲ್ಲಿಯ ಲೇಖಗಳು ನೆಟ್ಟಗಿರುತ್ತವೆ" ಎಂದ ಮಾತ್ರದಿಂದ, ಚಂದ್ರಿಕೆಯು ಉಬ್ಬತಕ್ಕದ್ದಲ್ಲ! ಆಕೆಯ ಜನ್ಮವಿರುವತನಕ ಈ ನುಡಿಯು ಸತ್ಯವಾಗುವದಕ್ಕಾಗಿ ಆಕೆಯು ಹಗಲಿರುಳು ತಪಶ್ಚರ್ಯ ಮಾಡಬೇಕಾಗುವದು! ಅದರಂತೆ "ನಾರಾಯಣಭಗವಾನರನ್ನು ನನ್ನ ಸ್ಥಳದಲ್ಲಿ ತಿಳಿಯಿರಿ" ಎಂದು ಶ್ರೀಗುರುಗಳು ಹೇಳಿದ್ದರಿಂದ, ನಾರಾಯಣಭಗವಾನರಮೇಲೆ ಎಷ್ಟು ಭಾರಬಿತ್ತೆಂಬದನ್ನು ಅವರಾದರೂ ತಿಳಿಯಬಹುದು. ಶ್ರೀ ಗುರುಗಳನ್ನು ನೋಡಿದವರು ಬಹುಜನರು ಇರುವರು ಅವರ ಸ್ಥಳಕ್ಕೆ ಒಪ್ಪುವಂತೆ ಶ್ರೀನಾರಾಯಣಭಗವಾನರಿದ್ದರೆ, ಶ್ರೀ ಗುರುವಿಗೆ ದೊರೆತಮಾನವೂ, ಕೀರ್ತಿಯೂ ಅವರಿಗೂ ದೊರೆಯುವವು. ಶ್ರೀಗುರುಗಳು ಯಾವಕಾರ್ಯದಲ್ಲಿಯೂ ಸೇರದೆ ತಟಸ್ಥವೃತ್ತಿಯಿಂದ ಎಲ್ಲವನ್ನು ನೋಡುತ್ತ, ಬಹಳವಾದರೆ ಅವರವರ ತಪ್ಪುಗಳನ್ನು ಅವರವರ ಮನಸ್ಸಿಗೆ ಹತ್ತದಹಾಗೆ ಹೇಳುತ್ತಿದ್ದರು. ದುಡ್ಡನ್ನು ಕೈಯಿಂದ ಮುಟ್ಟುತ್ತಿದ್ದಿಲ್ಲ, ಯಾವಹಿರಿಯತನಕ್ಕೂ ಹೋಗುತ್ತಿದ್ದಿಲ್ಲ. ಬಾಯಿಂದ ಕೆಟ್ಟಮಾತನ್ನು ಆಡುತ್ತಿದ್ದಿಲ್ಲ, ಜಗತ್ತನ್ನು ಈಶ್ವರಸ್ವರೂಪವಾಗಿ ನೋಡುತ್ತಿದ್ದರು. ಅವಿನಯವನ್ನು ತೋರಿಸುತ್ತಿದ್ದಿಲ್ಲ. ನುಡಿದಂತೆ ನಡೆಯುತ್ತಿದ್ದರು. ಹೀಗೆ ಶ್ರೀ ನಾರಾಯಣಭಗವಾನರು ನಡೆದು, ಬೇರೆ ಬೇರೆ ಜನರ ಕಡೆಯಿಂದ ಕೆಲಸಮಾಡಿಸಿಕೊಂಡು, ತಾವು ಸ್ಥಾನಹಿಡಿದು ಕುಳಿತುಕೊಂಡರೆ, ಅವರನ್ನೂ ಶ್ರೀ ಸ್ವಾಮಿಯಂತೆಯೇ ಎಲ್ಲರೂ ನೋಡುವರು! ಅವರು, ಶ್ರೀ ಸ್ವಾಮಿಯ ಸ್ಥಳದಲ್ಲಿ ಇರಬೇಕು; ಶ್ರೀ ಚಿದಂಬರ ಮೂರ್ತಿಗಳು, ಶ್ರೀ ಚಿದಂಬರ ಮೂರ್ತಿಗಳ ಸ್ಥಳದಲ್ಲಿ ಇರುವರು. ಶ್ರೀಸ್ವಾಮಿಯು ತನ್ನ ಹಾಗೆ ಆಗಬೇಕೆಂದು ಇರುವತನಕ ಬಹಳ ಪ್ರಯತ್ನಮಾಡಿದನು; ಆದರೆ ಅಂಥ ಸುಯೋಗವು ಒಬ್ಬರಿಗೂ ಒದಗಲಿಲ್ಲ. ಈಗಾದರೂ ಅಂಥ ಯೋಗವು ಒದಗಿದರೆ, ಬಹಳ ಹಿತವಾಗುವದು.

ಆನಂದವನದ ಯಾಜಮಾನ್ಯವೆಂದರೆ, ದೊಡ್ಡ ಉತ್ಪನ್ನವುಳ್ಳದ್ದೊಂದು ಸಂಸ್ಥಾನದ ಪಟ್ಟವಲ್ಲ. ಈ ಮಾತಿನ ನಿಜತ್ವಕ್ಕಾಗಿ ಆನಂದವನದ ಆಸ್ತಿಯನ್ನು ಸ್ವಲ್ಪ

ದಲ್ಲಿ ವಿವರಿಸುವೆವು. ಶ್ರೀ ಗುರುವು ಲೋಕೋಪಕಾರಕ್ಕಾಗಿ ಗಳಿಸಿದ್ದೆಂದರೆ, ಧರ್ಮವು! ಉಳಿದ ಲೌಕಿಕಸಂಪತ್ತನ್ನು ಸಂಚಾರದಿಂದ ವಿಶೇಷವಾಗಿ ಸಂಪಾದಿಸಿದಂತೆ ತೋರಿದರೂ, ಅದನ್ನು ಸಮೂಹದವರೂ, ಶಿಷ್ಯರೂ ಹ್ಯಾಗಾದರೂ ಉಪಯೋಗಿಸಿಕೊಂಡು ಬಿಟ್ಟರು. ಈಗ ಉಳಿದಿರುವ ರೋಖಹಣವೆಂದರೆ, ಸಾವಿರಾರು ರೂಪಾಯಿಗಳ ಸಾಲವು! ಜಮೀನುಗಳನ್ನಂತು ಶ್ರೀ ಗುರುಗಳು ಮೂಲತಃ ಸಂಪಾದಿಸಿರುವದೇ ಇಲ್ಲ. ಮನೆಯೆಂದರೆ, ತಮ್ಮ ಪಾಲಕಿಯಿಲ್ಲದ ಎರಡನೆಯವರ ಹೊಲದಲ್ಲಿ ಕುಟುಂಬದವರು ಇರಲಿಕ್ಕೆ ಬಾರದಂಥ, ಮಠವನ್ನು ಹೋಲುವಂಥ, ಅವಾಥಸ್ವಮನೆಯು! ವಸ್ತ್ರ-ಒಡವೆಗಳೆಂದರೆ, ಶ್ರೀ ಗುರುವಿನ ಅಲಂಕಾರರೂಪದಿಂದಿರುವ ಸೇರು-ಮೂರುಪಾವು ಭಂಗಾರ, ಏಳೆಂಟುಸೇರು ಬೆಳ್ಳಿ, ಸಾವಿರಾರು ಜನರ ಸಂತರ್ಪಣೆಗೆ ಸಾಲುವಷ್ಟು ಭಾಂಡೆಗಳೊಂದು ಇರುವವು. ಇದಲ್ಲದೆ, ಛಾಪಖಾನೆಯೊಂದು ಶ್ರೀ ಗುರುವು ಮಾಡಿಸಿದ ಸೊತ್ತಾಗಿದೆ. ಅದರಲ್ಲಿ ಪುಸ್ತಕ-ಕಾಗದ-ಯಂತ್ರ ಮುಂತಾದವು ಕೂಡಿ ಸರಾಸರಿ ೧೦।೧೨ ಸಾವಿರರೂಪಾಯಿಗಳ ಇಸ್ಟೇಟು ಇರುವದು. ಅದಕ್ಕೆ ಸದ್ಯಕ್ಕೆ ಎರಡು-ಎರಡೂವರೆ ಸಾವಿರರೂಪಾಯಿ ಸಾಲವಿರುವದು. ಚಂದ್ರಿಕೆಗೆ ಇಂದಿಗೆ ಸರಾಸರಿ ೭,೦೦೦ ಜನ ಚಂದಾದಾರರು ಇರುತ್ತಾರೆ. ವರ್ಷದ ಕೊನೆಗೆ, ೭,೦೦೦ ಕ್ಕೆ ಏರಬಹುದು. ಈ ಸಂಸ್ಥೆಯು ಸರಾಸರಿ ೭೫ ಜನ ವಿದ್ಯಾರ್ಥಿಗಳು ೮ ಜನ ಅಧ್ಯಾಪಕರು, ಐದಾರು ಜನ ಅವರ ವ್ಯವಸ್ಥಾಪಕರು, ಹೀಗೆ ಸರಾಸರಿ ೯೦ ಜನರ ಒಪ್ಪತ್ತಿನ ಊಟದ ಖರ್ಚನ್ನೋಡಿಕೊಂಡು, ಅಧ್ಯಾಪಕರ ಸಂಬಳವನ್ನು, ಸರಾಸರಿ ತಿಂಗಳಿಗೆ ನೂರಾಹತ್ತು ರೂಪಾಯಿಯಂತೆ ಕೊಟ್ಟು, ಪಾಠಶಾಲೆಯನ್ನು ನಡಿಸಿಕೊಂಡಿತ್ತು! ಚತುಶ್ಶಾಖೆಯವರ ವ್ಯಾಸಂಗಕ್ಕಾ ಆಸ್ಪದವಿರುವ ಈ ಪಾಠಶಾಲೆಯು, ಈಗ ೮ ವರ್ಷಗಳಿಂದ ನಡೆದದೆ! ಅತಿಥಿಸೇವಾ ಹಾಗು ಪಾಠಶಾಲಾ ಎಂಬ ಎರಡು ಸಂಸ್ಥೆಗಳನ್ನು ನಡಿಸಲಿಕ್ಕೆ ಸದ್ಯಕ್ಕೆ ಭಿಕ್ಷೆ, ಭಾಷಾಸೇವಾರೂಪವಾದ ಉದ್ಯೋಗ ಇವೆರಡೇ ಸಾಧನಗಳಾಗಿರುವವು. ಈ ಪರಿಯ ತೊಡಕಿನ, ಹಾಗು ಮಗ್ಗಲುಮುರಿಯುವಂತೆ ದುಡಿದರೂ ತೀರದ ಸ್ಥಾನದಲ್ಲಿ, ಜಗತ್ತಿಗೆ ತಲೆಬಾಗಿ ನಡೆಯುತ್ತ, ವ್ರತಸ್ಥರಂತೆ ಕಾಲಹರಣಮಾಡುವಾಗ, ಸಂಸಾರಸುಖವನ್ನು ಯಾರು ಸೂರೆಗೊಂಡಾರು? ನಾವು ಯಜಮಾನರೆಂದು ತಿಳಿಯದೆ, ಶ್ರೀಸದ್ಗುರುವಿನಂತೆ ದಾಸಭಾವದಿಂದ ಇರುವವರಿಗೆ ಮಾತ್ರ ಅಗ್ರಹಾರದ ಯಾಜಮಾನ್ಯವು ದಕ್ಕುತ್ತದೆ; ಆದ್ದರಿಂದಲೇ ಶ್ರೀ ಗುರುವು ಮೂರ್ತಿಗಳನ್ನು ಕುರಿತು—"ಈತನು ದಾಸಧರ್ಮದಿಂದಿರುವವನು; ಅಂದರೆ,

ಆನಂದವನದ ವಿಷಯದ ಅಭಿಮಾನವನ್ನು ಬಿಟ್ಟಿಯಾದವನು” ಎಂದು ಹೇಳಿರುವನು. ಒಂದುದಿನ ಅಗಡಿಯ ವಿಧವೆಯಾದ ಒಬ್ಬ ಹೆಣ್ಣುಮಗಳು ತನ್ನ ಸಂತತಿಯು ನಷ್ಟವಾದದ್ದರಿಂದ ತನ್ನ ಹೊಲ-ಮನೆ ಮೊದಲಾದ ಯಾವತ್ತು ಆಸ್ತಿಯನ್ನು ಶ್ರೀಗುರುಗಳ ಸಂಸ್ಕಾರವಾದ ಸ್ಥಳದಲ್ಲಿ ಕಟ್ಟಬೇಕಾಗಿರುವ ದೇವಸ್ಥಾನದ ವಿನಿಯೋಗಕ್ಕೆ ಕೊಡಬೇಕೆಂದು, ಶ್ರೀ ಚಿದಂಬರಮೂರ್ತಿಗಳ ಮುಂದೆ ಮಾತು ತೆಗೆಯಲು, ಅಪಾಪಭೀರುಗಳು—ಛೀ! ಛೀ! ಬೇಡವ್ವಾ; ಇದು ಸ್ವಾಮಿಯ ಮನಸ್ಸಿಗೆ ಬರಲಿಕ್ಕಿಲ್ಲ. ಮತ್ತೆ ಯಾರಿಗಾದರೂ ಬಡವರಿಗೆ ಕೊಡು, ಇಲ್ಲವೆ ದತ್ತಕ ಮಾಡಿಕೋ, ಎಂದು ಹೇಳಿದರಂತೆ! ಆದ್ದರಿಂದಲೇ ಭಿನ್ನ ಪ್ರಕೃತಿಯವರಸ್ತಾದರೂ ಬಹುಜನರನ್ನು ಕೂಡಿಕೊಂಡು, ಅವರೆಲ್ಲರನ್ನು ಶ್ರೀಸದ್ಗುರುವಿನಂತೆ ತಮ್ಮ ಶಾಂತವೃತ್ತಿಯಿಂದ ಹಣ್ಣುಮಾಡುತ್ತ, ಬೆವರಿನ ಹನಿಗಳು ಮುಮಂತೆ ಅವರಿಂದ ಪರೋಪಕಾರಕ್ಕಾಗಿ ದುಡಿಸಿ, ಅವರವರ ಪುಣ್ಯವನ್ನು ಅವರವರ ಪದರಿಗೆ ಕಟ್ಟಿ, ತಾವು ಒರಿಸ್ಥಿಯಿಂದ ಕೂಡುವ ಪುಣ್ಯಾತ್ಮರೂ-ಉದಾರರೂ-ನಿಸ್ಪೃಹಿಗಳೂ ಆದವರು ಸದ್ಯಕ್ಕೆ ಆನಂದವನದಲ್ಲಿ ಇದ್ದವರೆಂದರೆ, ಶ್ರೀ ಗುರುಗಳ ರಕ್ತಸಂಬಂಧಿಕರೂ, ವೃತ್ತಿಸಂಬಂಧಿಕರೂ ಆದ ಶ್ರೀ ಚಿದಂಬರ ಮೂರ್ತಿಗಳೊಬ್ಬರೇ ಎಂದು ಹೇಳಬೇಕಾಗುವದು. ಆಂದಬಳಿಕ ಅವರನ್ನೇ ಅಗ್ರಹಾರದ ಗುರುಗಳು, ಅಥವಾ ಯಜಮಾನರು, ಅಥವಾ ಮಾಲಕರು, ಅಥವಾ ಚಾಲಕರು, ಇನ್ನೂ ಸ್ಪಷ್ಟವಾಗಿ ಹೇಳುವದೆಂದರೆ, ಶ್ರೀಗುರುವು ಹೇಳಿದಂತೆ ಲೋಕಸೇವಕರು, ಎಂದು ಕರೆಯಬೇಕಾಗುವದು!

## ೧೧ನೆಯ ಪ್ರಕರಣ.

### ೨ನೆಯ ವಿಚಾರ—ಅಗ್ರಹಾರವು ಮುಂದೆ ಹ್ಯಾಗೆ ನಡೆಯುವದು ?

**भवितव्यं भवत्येव नारिकेलफलाम्बुवत्॥**

ಅಗ್ರಹಾರದ ಗುರುಗಳು ಯಾರೆಂಬುವರ ನಿರ್ಣಯವಾದನಂತರ, “ಅಗ್ರಹಾರವು ಮುಂದೆ ಹ್ಯಾಗೆ ನಡೆಯುವದು”ಎಂಬ ಪ್ರಶ್ನವು ಉತ್ಪನ್ನವಾಗುವದು; ಆದರೆ ಈ ಪ್ರಶ್ನೆಗೆ ಉತ್ತರಕೊಡುವದು ಬಿಗಿಯಲ್ಲ. ಶ್ರೀ ಶೇಷಾಚಲಸದ್ಗುರೂತ್ತಮರ ವಚನವನ್ನು ನಂಬಿ, ಅಗ್ರಹಾರವು ಈಗಿನ ಹತ್ತುಪಟ್ಟು ಉಜ್ವಲವಾಗಿ ಪರೋಪಕಾರದ ಕೃತ್ಯಗಳನ್ನು ಮಾಡುತ್ತ, ನಡೆಯುವದೆಂದು ಚೆಂದ್ರಿಕೆಯು ಶಂಕವಿಲ್ಲದೆ

ಹೇಳುವಳು. ಹೀಗೆ ನಡೆಯಬೇಕಾದರೆ, ಆನಂದವನದಲ್ಲಿ ಕಾಲಮಹಿಮೆಯಿಂದ ಸ್ವಾಭಾವಿಕವಾಗಿ ಸೇರಿಕೊಂಡಿದ್ದ ದೋಷಗಳು ತೊಳೆದು ಹೋಗಬೇಕೆಂತಲೂ, ಆಕೆಯು ಸ್ಪಷ್ಟವಾಗಿ ಪ್ರತಿಪಾದಿಸುವಳು! ಸದ್ಯಕ್ಕೆ ಅದೂರದೃಷ್ಟಿಯುಳ್ಳವರ ಮತದಂತೆ ಆನಂದವನದ ಸ್ಥಿತಿಯು—"अबलायत्रप्रबला बालोराजा निरक्षरो मंत्री" ಎಂಬ ಉಕ್ತಿಯನ್ನು ಹೋಲುತ್ತಿದ್ದರೂ, ಶ್ರೀ ಸದ್ಗುರುವಿನ ಕೃಪೆಯಿಂದ ಅಲ್ಪಾವಕಾಶದಲ್ಲಿ ಅಬಲೆಯರ ಸ್ಥಳವನ್ನು ಸಬಲರೂ, ಬಾಲರಾಜನ ಸ್ಥಳವನ್ನು ಪ್ರಜಾಹಿತದಕ್ಷನಿಸ್ಪೃಹರಾಜನೂ, ನಿರಕ್ಷರಮಂತ್ರಿಗಳ ಸ್ಥಳವನ್ನು ಸಾಕ್ಷರಮಂತ್ರಿಗಳೂ ವ್ಯಾಪಿಸಿದ್ದು ಲೋಕದ ಅನುಭವಕ್ಕೆ ಬರಬಹುದು. ಇಷ್ಟೇ ಅಲ್ಲ, ಅತ್ಯಂತ ನಿಸ್ಪೃಹತೆಯಿಂದಲೂ, ನೈಷ್ಠುರ್ಯದಿಂದಲೂ ಕೊಡತಿಯ ಪೆಟ್ಟನ್ನು ಹಾಕಿ, ಎಲ್ಲರನ್ನೂ ಪರೀಕ್ಷಿಸಲಿಕ್ಕೆ ಚಂದ್ರಿಕೆಯ ರೂಪದಿಂದ ಅವ್ವನವರು ಅವತರಿಸಿರುವರೆಂದು ಇನ್ನಾದರೂ ಲೋಕವು ಮನಗಾಣಬಹುದು! ಗುರುಪುತ್ರಿಯಾದ ಚಂದ್ರಿಕೆಯು ಸತ್ವವನ್ನು ಪರೀಕ್ಷಿಸುವಾಗ, ಕ್ರಮಕ್ರಮವಾಗಿ ಇಡಿಯ ಆನಂದವನವೇ ಹತವೀರ್ಯವಾದಂತೆ ಆಗಲು, ಕಡೆಗೆ ಶ್ರೀಗುರುವೇ ಚಂದ್ರಿಕೆಗೆ ತನ್ನ ಉಗ್ರಸ್ವರೂಪವನ್ನು ಐದುಸಾರೆ ತೋರಿಸಿ, ಬೆದರಿಸಿ ಸತ್ವವನ್ನು ಪರೀಕ್ಷಿಸಿನೋಡಿದನು; ಆದರೆ ಗುರುಸತ್ವದಿಂದ ಸ್ಥಿರಳಾಗಿದ್ದ ಚಂದ್ರಿಕೆಯು, ಸತ್ಯಕ್ಕೆ ಸಾವಿಲ್ಲೆಂದು ನಂಬಿ, ಶ್ರೀಗುರುವಿನ ಬೆದರಿಕೆಗೆ ಬೆದರದೆಯಿರಲು, ಕಡೆಯುಸಾರೆ ಶ್ರೀಗುರುವು ನೆರೆದ ಜನರಮುಂದೆ ಆಕೆಯ ತೇಜಸ್ಸನ್ನು ಪ್ರಕಟಿಸಿ, "ಚಂದ್ರಿಕೆಯು ಯೋಗ್ಯವಾದದ್ದನ್ನು ಪ್ರತಿಪಾದಿಸಲಿಕ್ಕೆ ತನ್ನ ಮುಂದೆಯೂ ಹೆದರುವದಿಲ್ಲ"ಎಂಬದರ ಅನುಭವವನ್ನು ಆನಂದವನಸ್ಥರಿಗೆ ಮಾಡಿಕೊಟ್ಟು, ಕಟ್ಟಕಡೆಗೆ ಚಂದ್ರಿಕೆಯನ್ನು ಕುರಿತು ವಾತ್ಸಲ್ಯದಿಂದ—ಅವ್ವಾ, ಬೆದರಿದೆಯೇನು? ಬೆದರಬೇಡ, ಬೆದರಬೇಡ. ಸ್ವಾಮಿಯು ನಿನ್ನನ್ನು ಮೂರ್ತಿಯಾಗಮಾಡಬೇಕೆಂದು ಮಾಡಿರುವನು. ಆತನು ತಾಯಿಯು, ನಿನ್ನನ್ನು ನೋಡುವನು; ನೀನು ಮಾತ್ರ ಆತನನ್ನು ನೋಡಲೊಲ್ಲೆ! ಆತನು ನಿನ್ನ ಹೃದಯಸ್ಥನಾದಾನು, ನಿನಗೆ ಅನುಗ್ರಹಮಾಡ್ಯಾನು! ಯಾಕೆ, ಸಂತೋಷವಷ್ಟೆ? ಎಂದು ಕಂಪಿತಸ್ವರದಿಂದ ಕೇಳಲು, ಚಂದ್ರಿಕೆಯು—ಸಂತೋಷವು. ಚಂದ್ರಿಕೆಯು ಸ್ವಾಮಿಯ ಒಳಿಯಲ್ಲಿ ಬಂದು ಅಸಂತುಷ್ಟಳಾಗಿ ಎಂದೂ ಹೋಗಿರುವದಿಲ್ಲ, ಎಂದು ಹೇಳಿದಳು! ಪ್ರಿಯವಾಚಕರೇ, ಹೇಳತಕ್ಕ ತಾತ್ಪರ್ಯವಿಷ್ಟೇ, ಹಿಂದಕ್ಕೆ ಅವ್ವನವರು ಶ್ರೇಯಸ್ಕರವಾಗಿ ನಡಕೊಂಡು, ಶ್ರೀ ಸದ್ಗುರುವಿನ ಲೋಕಕಲ್ಯಾಣದಕಾರ್ಯಕ್ಕೆ ಸಹಾಯಮಾಡಿದಂತೆ, ಈಗ ಚಂದ್ರಿಕೆಯು ಶ್ರೇಯಸ್ಕರವಾಗಿ ನಡ

ಕೊಂಡು, ಶ್ರೀ ಚಿದಂಬರಮೂರ್ತಿಗಳವರ ಲೋಕಕಲ್ಯಾಣದ ಕಾರ್ಯಕ್ಕೆ ಸಹಾಯಮಾಡುವಳು. ಈ ಗುರುಪುತ್ರ-ಪುತ್ರಿಯರ ಕಾಲದಲ್ಲಿ ಆನಂದವನದ ಸಂಸ್ಥೆಗಳು ಭರದಿಂದ ನಡೆಯುವದನು ನೋಡಿ ಆನಂದಪಡಲಿಕ್ಕೆ, ನಿಮ್ಮೆಲ್ಲರಿಗೆ ಶ್ರೀ ಸದ್ಗುರುವು ದೀರ್ಘಾಯುಷ್ಯವನ್ನು ಕೊಡಲಿ!

ಶ್ರೀ ಗುರುಪ್ರೇರಣೆಯಿಂದ ಆನಂದವನದಲ್ಲಿ ಅತಿಥಿಸೇವೆ, ವೈದಿಕವಿದ್ಯಾದಾನ ಎಂಬ ಎರಡು ಸತ್ಕಾರ್ಯಗಳು ನಡೆದಿರುವವೆಂಬದನ್ನು ವಾಚಕರಿಗೆ ಬರೆದು ತಿಳಿಸಲವಶ್ಯವಿಲ್ಲ. ಆ ಎರಡು ಸತ್ಕಾರ್ಯಗಳು ಈವೊತ್ತಿನವರೆಗೆ ಕೆಲವಂಶದಿಂದ ಬೇರೆ ಬೇರೆಯಾಗಿ ನಡೆಯುತ್ತ ಬಂದಿರುವದರಿಂದ, ಅವನ್ನು ಕುರಿತು ಆನಂದವನದ ಸಂಸ್ಥೆಗಳು ಎಂದು ಬಹುವಚನವನ್ನು ಪ್ರಯೋಗಿಸಬೇಕಾಯಿತು. ಇವೆರಡು ಸಂಸ್ಥೆಗಳು ಸರ್ವಾಂಶದಿಂದ, ಒಂದಾಗಿ, ಅಂದರೆ ಪರಸ್ಪರ ಸಾಯುಜ್ಯತೆಯನ್ನು ಹೊಂದಿ, ಶ್ರೀ ಶೇಷಾಚಲಸದ್ಗುರುವಿನ ಮನೋದಯವು ಪೂರ್ಣವಾದ ದಿನವೇ ಸುದಿನವೆಂದು ತಿಳಿಯತಕ್ಕದ್ದು. ಇನ್ನು ಮುಂದೆ ಆನಂದವನಸ್ಥರೂ, ಚಂದ್ರಿಕೆಯೂ ಕೂಡಿ ಶ್ರೀ ಚಿದಂಬರಮೂರ್ತಿಗಳ ಕೃಪಾಛತ್ರದ ಆಶ್ರಯದಿಂದ ಮಾಡತಕ್ಕ ಮಹತ್ವದ ಕೆಲಸವೆಂದರೆ, ಈ ಉಭಯ ಸಂಸ್ಥೆಗಳ ಏಕೀಕರಣವೇ ಆಗಿರುವದು. ಇಬ್ಬರ ಹೃದಯಗಳ ಐಕ್ಯವಾಗುವಾಗ ಅವರ ಹೃದಯಗಳೊಳಗಿನ ದೋಷಗಳನ್ನು ತೆಗೆದುಹಾಕಿ, ಆ ಹೃದಯಗಳನ್ನು ಪರಿಶುದ್ಧಧರ್ಮಪೂರ್ಣವಾಗಿ ಮಾಡುವದು ಅವಶ್ಯವಾಗಿರುವಂತೆ, ಆನಂದವನದ ಎರಡೂ ಸಂಸ್ಥೆಗಳ ಏಕೀಕರಣ ಮಾಡುವಾಗ, ಅವುಗಳಲ್ಲಿಯ ದೋಷಗಳನ್ನು ತೆಗೆದು, ಅವೆರಡರಲ್ಲಿಯೂ ಪವಿತ್ರಧರ್ಮದ ಪ್ರಸಾರವಾಗುವಂತೆ ಮಾಡುವದು ಅವಶ್ಯವಾಗಿರುತ್ತದೆ. ಹೀಗೆ ಮಾಡುವಾಗ ಚಂದ್ರಿಕೆಯು ಮೂರುಮಾತುಗಳ ವಿಚಾರವನ್ನು ಮಾಡಬೇಕಾಗುವದು. ಆ ಮಾತುಗಳು ಯಾವವೆಂದರೆ—೧ ಎರಡೂ ಸಂಸ್ಥೆಗಳೊಳಗಿನ ಜನರ ವಿಚಾರಗಳ ಪಡಿಕಟ್ಟು, ೨ ಆ ಸಂಸ್ಥೆಗಳ ಜನರ ಆಚರಣೆಯಲ್ಲಿ ತೋರುವ ವಿಷಮತೆ, ೩ ಅವೆರಡೂ ಸಂಸ್ಥೆಗಳು ಒಂದಾಗುವ ಉಪಾಯ. ಈ ವರೆಗೆ ಈ ಮೂರು ಮಾತುಗಳ ವಿಚಾರವನ್ನು ಮಾಡದೆ, ಹುಂಬತನದದಿಂದ ಈ ಎರಡೂ ಸಂಸ್ಥೆಗಳನು ಒಂದು ಮಾಡಬೇಕೆಂಬ ಹಂಬಲಕ್ಕೆ ಬಿದ್ದು, ಈ ಎರಡೂ ಸಂಸ್ಥೆಗಳೊಳಗಿನ ಜನರು ಮುಂದಿಗೆ ಜಗಳಾಡುವಹಾಗೆ ತೋರಿದರು! ಇನ್ನು ಮೇಲೆ ಆನಂದವನದ ಎರಡೂ ಸಂಸ್ಥೆಯವರು "बालादपि सुभाषितं" ಎಂಬ ಹಿತವಚನದಂತೆ, ಎಂಟು ವರ್ಷದ ಹುಡುಗೆಯಾದ ಗುರುಪುತ್ರಿಯೆನಿಸುವ ಚಂದ್ರಿಕೆಯ ಕೈಯಿಂದ ಕಿವಿಹಿಂಡಿಸಿ

ಕೊಂಡು, ಶ್ರೀ ಚಿದಂಬರಮೂರ್ತಿಗಳ ಸದ್ವೃತ್ತಿಯ ನೆರಳಲ್ಲಿ ಸಮಾಧಾನದಿಂದ ಸಂಸ್ಥೆಗಳ ಏಕೀಕರಣದ ಕಾರ್ಯವನ್ನು ಮಾಡಿ ಬುದ್ಧಿಗಲಿಯಬೇಕಾಗಿರುವದು.

"ಗಳಗನಾಥಮಾಸ್ತರರಿಂದಾದ ಈ ಪಾಠಶಾಲೆಯೂ, ಚಂದ್ರಿಕೆಯೂ ಮೂರು ದಿನದವು. ನಾವು ಆರಂಭದಿಂದ ಶ್ರೀಗುರುಸನ್ನಿಧಿಯಲ್ಲಿ ಅತಿಥಿಸೇವಾಧರ್ಮವನ್ನು ಕಾಯುತ್ತ ಬಂದಿದ್ದೇವೆ. ಮಾಸ್ತರನು ಲೌಕಿಕನು, ಪಾರಮಾರ್ಥಿಕವಿಚಾರವೂ, ಗುರುಬೋಧರಹಸ್ಯವೂ ಆತನಿಗೇನು ತಿಳಿಯುತ್ತವೆ? ಆತನ ಸಂಸ್ಥೆಯು ಲೌಕಿಕವು ಅದರಲ್ಲಿ ವ್ಯವಹರಿಸುವವರು ಲೌಕಿಕಪ್ರತಿಷ್ಠೆಯನ್ನು ಪಡೆಯಬಹುದಲ್ಲದೆ, ಗುರ್ವನುಗ್ರಹಕ್ಕೆ ಪಾತ್ರರಾಗಲಾರರು. ಮೊದಲು ಹುಟ್ಟಿದ ಕಿವಿಗಿಂತ ಹಿಂದುಗಡೆ ಹುಟ್ಟಿದ ಕೋಡುಗಳು ಆಯುವೆನ್ನುವಂತೆ, ಮಾಸ್ತರನ ಇರಕಕ್ಕೆ ಮಹತ್ವ ಕೊಡಬೇಡಿರಿ. ಶ್ವಾನ ಬೊಗಳುತ್ತದೆ, ಆನೆ ಹೋಗುತ್ತದೆ. ಅಕ್ಕಿಯ ಅನ್ನ ಬೇಕಾದವರು ಅತ್ತ ಹೋಗಿರಿ, ಗುರುಪಾದ ಬೇಕಾದವರು, ಜೋಳದ ನುಚ್ಚು ಉಣ್ಣಲಿಕ್ಕೆ ಇತ್ತ ಬರ್ರಿ," ಇತ್ಯಾದಿ ಹುರುಳಿಲ್ಲದ ವಚನಗಳಿಂದ, ಈಗ ಐದಾರು ವರ್ಷಗಳಿಂದ ಅಬಲೆಯರ ಗುಂಪನ್ನೂ, ಮುಗ್ಧಶಿಷ್ಯರನ್ನೂ ಬೋಧಿಸಿ, ಶ್ರೀಗುರುಸ್ಥಾನದಲ್ಲಿ ಅಧರ್ಮ ಪ್ರಚಾರ ಮಾಡುತ್ತ ಬಂದ ಕೆಟ್ಟ ಚಾಳಿಯನ್ನು ಆನಂದವನದವರು ಇನ್ನು ಪೂರಾ ಬಿಟ್ಟು ಬಿಡಬೇಕು. ಅದರಂತೆ, ವಿದ್ಯಾದಾನದ ಸಂಸ್ಥೆಯು ಎಷ್ಟು ಮಹತ್ವದ್ದಾದರೂ, ಅದರ ಉಗಮವು ಅತಿಥಿಸತ್ಕಾರದಂಥ ಪವಿತ್ರಕಾರ್ಯದ ಸಂಸ್ಥೆಯಿಂದ ಆಗಿರುವದೆಂಬದನ್ನು ಮರೆತು, ಆ ವಿದ್ಯಾದಾನದ ಸಂಸ್ಥೆಯವರು ಕೃತಘ್ನರಾಗಬಾರದು. ಮಾವಿನಗಿಡವನ್ನು ಹಚ್ಚಿ ಇಪ್ಪತ್ತು ವರ್ಷ ಕಷ್ಟಪಟ್ಟು ಆ ಗಿಡದ ಸಂಗೋಪನ ಮಾಡುವದು ಹಣ್ಣಿನ ಸಲುವಾಗಿಯೇ ಇರುವಂತೆ, ಶ್ರೀಗುರುವು ಮೂವತ್ತು-ಮೂವತ್ತೈದು ವರ್ಷ ಅತಿಥಿಸೇವಾರೂಪವೃಕ್ಷವನ್ನು ರಕ್ಷಿಸಿದ್ದು, ಆ ವೃಕ್ಷಕ್ಕೆ ವೈದಿಕವಿದ್ಯಾದಾನದಂಥ ಅತ್ಯುತ್ಕೃಷ್ಟಫಲವು ಸಮಾಜಕ್ಕೆ ಪ್ರಾಪ್ತವಾಗುವದಕ್ಕಾಗಿಯೇ ಎಂಬದನ್ನು ಆನಂದವನದ ಎರಡೂ ಸಂಸ್ಥೆಯವರು ತಿಳಿದು, ವಿವೇಕಿಗಳಾಗಿ, ಆ ಎರಡೂ ಸಂಸ್ಥೆಗಳನ್ನು ನಿರಾಕರಿಸದೆ ಇರಬೇಕು. ಮೊದಲು ಹುಟ್ಟಿದ ಕಿವಿಗಳು ನಿರುಪದ್ರವಿಗಳಾದರೂ, ಆ ಕಿವಿಗಳ ದ್ವಾರದಿಂದ ಪ್ರಾಣಸಂಕಟ ಒದಗಿದ್ದು ತಿಳಿಯಲು, ಆ ಸಂಕಟದ ನಿವಾರಣ ಮಾಡಲಿಕ್ಕೆ, ತೀಕ್ಷ್ಣ ಕೋಡುಗಳಿಲ್ಲದಿದ್ದರೆ ಪಶುವಿನ ಪ್ರಾಣಹಾನಿಯಾಗುವದೆಂಬದನ್ನು ಮೊದಲನೆಯ ಸಂಸ್ಥೆಯವರು ತಿಳಿದು, ಕಿವಿ-ಕೋಡುಗಳೆರಡನ್ನೂ ನಿರಾಕರಿಸದೆಯಿರಬೇಕು. ನಮಗೆ ಬೇಕಾದದ್ದರಿಂದ ಮೊದಲನೆಯ ಸಂಸ್ಥೆಯು ಪಾರಮಾರ್ಥಿಕವು, ನಮಗೆ ಬೇಡಾದದ್ದರಿಂದ ಎರಡ

ನೆಯ ಸಂಸ್ಥೆಯು ಲೌಕಿಕವು, ಎಂದು ಮೂಢ ಜನರನ್ನು ಮಬ್ಬಿಗೆ ಹಾಕುವದಕ್ಕಿಂತ, "ನಿಜವಾದ ಲೌಕಿಕಕ್ಕೂ, ನಿಜವಾದ ಪಾರಮಾರ್ಥಿಕಕ್ಕೂ ಭೇದವಿಲ್ಲ"ಂದು ಶ್ರೀ ಗುರುವು ಯಾವಾಗಲೂ ಬೋಧಿಸುತ್ತಿದ್ದದ್ದನ್ನು ಮರೆಯದೆ ಇರಬೇಕು. ಅದರಂತೆ ಅಕ್ಕಿಯ ಅನ್ನವು ಬಂಧನಕ್ಕೂ, ಗುರುಪಾದವನ್ನು ಮರೆವೂದಲಿಕ್ಕೂ ಕಾರಣವಾಗಿದ್ದರೆ, ಅದು ಹವಿಸ್ಸಾನ್ನವೆನಿಸಿ, ದೇವತೆಗಳ ಹಾಗು ಋಷಿಗಳ ಆಹಾರವಾಗುತ್ತಿದ್ದಿಲ್ಲೆಂಬುದನ್ನೂ, ಸುಚ್ಛು ಉಂಡವರೇ ಶ್ರೀ ಗುರುಪಾದವನ್ನು ಕಾಣುತ್ತಿದ್ದರೆ, ಬರಿಯ ಸುಚ್ಛನ್ನೇ ತಿನ್ನುತ್ತಿದ್ದ ಅಗ್ರಹಾರದ ನಾಯಿಗಳು ಎಲ್ಲರಿಗಿಂತ ಮೊದಲು ಗುರುಪಾದವನ್ನು ಕಾಣಬೇಕಾಗಿತ್ತೆಂಬುದನ್ನೂ ಮೊದಲನೆಯ ಸಂಸ್ಥೆಯವರು ವಿಚಾರಿಸದೆಯಿರಬಾರದು ಅದರಂತೆ ಮೋಕ್ಷದ ಪಂಚೌಷಧಿಯೆನಿಸುವ ಮಹಾಪ್ರಸಾದರೂಪವಾದ ಎಂಜಲಗಳುಚ್ಛನ್ನು ಬಿಟ್ಟು, ಕೆಲವರು ಶಿಷ್ಯರು ಉಪಾಹಾರಗ್ರಹಣವನ್ನು ಯಾಕೆ ಮಾಡಿದ್ದಾರೆಂಬುದರ ಉತ್ತರವನ್ನು ಹೇಳಲಿಕ್ಕೆ ಸಿದ್ಧರಾಗಿರಬೇಕು. ತಾತ್ಪರ್ಯವಿಷ್ಟೇ, ಕಲಿಯುಗಾಂತದಲ್ಲಿ ಮಹಾಪ್ರಳಯವಾಗಿ ಪುನಃ ಕೃತಯುಗವಾಗುವಂತೆ, ಆನಂದವನದ ಎರಡೂ ಸಂಸ್ಥೆಗಳೊಳಗಿನ ದೋಷಗಳು ತೊಳೆದು ಹೋಗಿ, ಅದರ ಪುನರ್ಘಟನೆಯಾಗಬೇಕಾಗಿದೆಯೆಂಬುದನ್ನು ಚೆನ್ನಾಗಿ ನೆನಪಿನಲ್ಲಿಟ್ಟು, ಮನಸೋಕ್ತ ಬೋಧಗಳನ್ನು ಒತ್ತಟ್ಟಿಗೆ ಗಂಟು ಕಟ್ಟಿ ಗೂಟಕ್ಕೆ ಹಾಕಬೇಕು।

ಭಕ್ತಶ್ರೇಷ್ಠರ "सर्वं विष्णुमयं जगत्" ಎಂಬ, ಅನುಭವದ ಮಾತನ್ನು ಕೇಳಿಕೊಂಡು, ಅನುಭವದ ಗಂಧವಿಲ್ಲದವರು ಕೂಡ, "ಜಗತ್ತು ದೇವಮಯ"ವೆನ್ನುವಂತೆ, ಅತಿಥಿಸತ್ಕಾರಸಂಸ್ಥೆಯೊಳಗಿನ ಜನರು ಶ್ರೀ ಗುರುವಿನ ಅನುಭವದ ಬೋಧಗಳನ್ನು ಕೇಳಿ, ಅದರಂತೆ ತಾವು ನಡೆಯದೆ, ಮಂದಿಗೆ ಮೂಕ ಹಾಗೆ ನಡೆಯಿರೆಂದು ಜನರ ಅಧಿಕಾರಗಳ ತಾರತಮ್ಯವನ್ನರಿಯದೆ ಬೋಧಿಸುವದು ಆಶ್ಚರ್ಯದ ಸಂಗತಿಯಾಗಿರುವದು. ಜನರನ್ನು ಬೋಧಿಸಿದಂತೆ, ನೀವು ಯಾಕೆ ನಡೆಯುವದಿಲ್ಲೆಂದು ಚಂದ್ರಿಕೆಯಂಥ ಯಾರಾದರೂ ಗಟ್ಟಿಗರು ಕೇಳಿದರೆ— ನಮ್ಮ ಹೃದಯವನ್ನು ನೀವೇನು ಬಲ್ಲಿರಿ? ಹೊರಗೆ ನಡೆಯುವದು ಬರಿಯ ತೋರಿಕೆಗೆ. ಹೊರಗೆ ಹಾಗೆ ನಡೆಯದಿದ್ದರೆ, ಸೇವಾಕಾರ್ಯವು ನಡೆಯಲಿಕ್ಕಿಲ್ಲ. ದೊಡ್ಡವರ ಅಂತರಂಗವನ್ನು ತಿಳಿಯುವದು ಪರಮ ಕಷ್ಟವಾದ್ದರಿಂದ, ನಮ್ಮ ಆಚರಣೆಯ ಗೊಡವೆಗೆ ಹೋಗಬೇಡಿರಿ. ಕೃಷ್ಣನು ಹದಿನಾರು ಸಾವಿರ ಗೋಪಿಕಾಸ್ತ್ರೀಯರನ್ನು ಆಳಿ, ಅಂತರಂಗದಿಂದ ಬ್ರಹ್ಮಚಾರಿಯಾಗಿದ್ದನು. ದೂರ್ವಾಸರು ಖಂಡ

ಗಗಟ್ಟಲೆ ಅನ್ನವನ್ನು ಉಂಡು ನಿತ್ಯೋಪವಾಸಿಗಳಾಗಿದ್ದರು, ಎಂದು ಬಾಯಿಕಟ್ಟಿ ಹೋಗುವರು; ಆದರೆ ಶ್ರೀ ಕೃಷ್ಣನು ಅವತಾರಿಕನಾದರೂ ಈವೊತ್ತಿಗೆ "ಗೋಪಿಕಾಜಾರ", "ನವನೀತಚೋರ" ಇತ್ಯಾದಿ ಕಲಂಕಿತನಾಮಗಳಿಂದ ಕರೆಯಲ್ಪಡಬೇಕಾಗಿದೆಯೆಂಬದನ್ನು ಮರೆಯತಕ್ಕದ್ದಲ್ಲ. ಅದರಂತೆ ಗೋವರ್ಧನೋದ್ಧಾರಣ, ಕಾಲಿಯಾಮರ್ದನ, ಕೌರವಾದಿದುಷ್ಟಶಾಸನ, ಶ್ರೀ ಭಗವದ್ಗೀತಾಪ್ರಕಟೀಕರಣ ಮೊದಲಾದ ದೈವಿಕಕಾರ್ಯಗಳಿಂದಲೂ, ದೇಶಕಾಲಪರಿಸ್ಥಿತ್ಯನುರೂಪವಾಗಿ ಲೋಕೋದ್ಧಾರಕ್ಕಾಗಿಯೇ ಈಶ್ವರಾವತಾರಗಳಿರುವವೆಂಬ ಕಾರಣದಿಂದಲೂ, ಭಗವಂತನು ತನ್ನ ದುರ್ವ್ಯಾಪಾರಗಳ ಕಸುವನ್ನು ಕಡಿಮೆಮಾಡಿಕೊಳ್ಳದಿದ್ದರೆ, ಆತನ ಪರಿಗಣನೆಯು ರಾಜಕ್ಷಟಂಗರಲ್ಲಿಯೂ, ಲಫಂಗರಲ್ಲಿಯೂ ಆಗುತ್ತಿತ್ತೆಂಬದನ್ನೂ ಚೆನ್ನಾಗಿ ಲಕ್ಷದಲ್ಲಿಡತಕ್ಕದ್ದು. ಶ್ರೀ ಕೃಷ್ಣನಹಾಗೆ ದೈವಿಕಸಾಮರ್ಥ್ಯವನ್ನೇನೂ ತೋರಿಸದೆ, ಅಲ್ಲದ ಕೆಲಸಗಳನ್ನು ಮಾತ್ರ ಮಾಡಿ, ಒಳಗಿನ ಗುಟ್ಟು ನಿಮಗೇನು ಗೊತ್ತು? ಎಂದು ಮಂದಿಯನ್ನು ಬೆದರಿಸುವದೂ, ಮಂದಿ ಇದ್ದದ್ದನ್ನು ಇದ್ದಹಾಗೆ ಅನ್ನಲು, ಶ್ರೀ ಕೃಷ್ಣನ ಹಾಗೆ ಕೇಳಿ ಸಂತುಷ್ಟರಾಗದೆ, ಸಂತಾಪಗೊಳ್ಳುವದೂ ಶಿಷ್ಯಮಂಡಲಿಗೆ ಯೋಗ್ಯವಲ್ಲ ಈ ರೀತಿಯು ವಿದ್ಯಾರ್ಥಿಗಳ ಸಂಸ್ಥೆಯವರಿಗೆ ಸೇರುವದಿಲ್ಲ. ಅವರು—ಶ್ರೀ ಶೇಷಾಚಲಸದ್ಗುರೂತ್ತಮನ ಶ್ರುತಿವಾಕ್ಯಸಮಾನವಾದ ಬೋಧವಚನಗಳು ಈಗಿನ ಕಾಲಮಹಿಮೆಯಂತೆ ಎಲ್ಲರ ಕಿವಿಗೂ ಬೀಳುತ್ತಿದ್ದರೂ, ಅವುಗಳಂತೆ ನಡೆಯುವದು ಎಲ್ಲರಿಗೂ ಶಕ್ಯವಲ್ಲ. ಶಕ್ಯವಿದ್ದರೆ, ಈ ವರೆಗೆ ಗುರುವಚನವನ್ನು ಕೇಳಿದ ನಾವು, ಅದರಂತೆ ನಡೆದು ಇಷ್ಟು ಹೊತ್ತಿಗೆ ಗುರುಗಳೇ ಆಗಿ ಹೋಗುತ್ತಿದ್ದೆವು. ಹಾಗೆ ಈಗ ಇದ್ದವರಲ್ಲಿ ಯಾರೂ ಆಗಲಿಲ್ಲೆಂಬದು ಶ್ರೀ ಗುರುವಚನದಿಂದಲೇ ಸಿದ್ಧವಾಗಿದೆ; ಆದ್ದರಿಂದ ಎಲ್ಲರೂ ಶ್ರೀ ಗುರುಬೋಧದಂತೆ ನಡೆಯಿರೆಂದು ಅವರವರ ಅಧಿಕಾರ ನೋಡದೆ ಮಂದಿಗೆ ಹೇಳುವದೂ, ಹಾಗೆ ನಡೆಯದಿದ್ದವರನ್ನು ಮನಸೋಕ್ತ ದೂಷಿಸುವದೂ, ಈ ಎರಡನೆಯು ಸಂಸ್ಥೆಯವರ ಮನಸ್ಸಿಗೆ ಬರುವದಿಲ್ಲ. ಅಶಕ್ತರು ಹೆಚ್ಚು ಉಂಡರೆ ಅಜೀರ್ಣಬಾಧೆಯಾಗುವಂತೆ, ಅನಧಿಕಾರಿಗಳು ಶ್ರೀ ಗುರುಬೋಧವನ್ನು ಸಿಕ್ಕಹಾಗೆ ಕೇಳಿದರೆ, ಅವರಿಗೆ ಬೋಧದ ರಹಸ್ಯವು ತಿಳಿಯದೆ ಹೋಗಿ, ಅವರು ವಿವೇಕಭ್ರಷ್ಟರಾಗುವ ಸಂಭವವು ವಿಶೇಷವಿರುವದರಿಂದ, ಈ ಸಂಸ್ಥೆಯವರು ತಮ್ಮಲ್ಲಿಯ ಜನರನ್ನು ವ್ಯಮುರಿಯು ದುಡಿಸುವರಲ್ಲದೆ, ಉದ್ಯೋಗಗೇಡಿಗಳಾಗಿ ಕವಲೆತ್ತಿನಂತೆ ತಲೆಹಾಕುತ್ತ ಶ್ರೀ ಗುರುಗಳ ಮುಂದೆ ಕೂಡ್ರಲಿಕ್ಕೆ ಅವರಿಗೆ ಎಷ್ಟು ಮಾತ್ರವೂ

ಆಸ್ಪದಕೊಡುವದಿಲ್ಲ. ಮೊದಲನೆಯ ಸಂಸ್ಥೆಯವರು ಪ್ರವಚನಕ್ಕೆ ಮಹತ್ವಕೊಡುವರು; ಎರಡನೆಯ ಸಂಸ್ಥೆಯವರು ಸಮಯಾನುವರ್ತನದ ಅವಿಚ್ಛಿನ್ನವಾದ ದುಡಿತಕ್ಕೆ ಮಹತ್ವಕೊಡುವರು. ಅದರಂತೆ ಎರಡನೆಯ ಸಂಸ್ಥೆಯವರು, ಬಹಿರಂಗವು ಅಂತರಂಗದ ಸ್ವರೂಪದರ್ಶಕವಾದ್ದರಿಂದ, ಬಹಿರಂಗದಲ್ಲಿ ಸನ್ಮಾರ್ಗದಿಂದಲೇ ನಡೆಯಬೇಕೆಂದು ನಿರ್ಬಂಧಪಡಿಸುವರು. ಇವೆರಡು ಬಗೆಯ ತಿಳುವಳಿಕೆಗಳ ಯೋಗದಿಂದ ಆಯಾ ಸಂಸ್ಥೆಗಳ ಜನರ ಆಚರಣೆಗಳು, ಶ್ರೇಯಸ್ಸು, ಕಾರ್ಯಕ್ಷಮತೆಯೂ ಹ್ಯಾಗೆ ಭಿನ್ನವಾಗಿರುವವೆಂಬದನ್ನು ಸ್ವಲ್ಪದರಲ್ಲಿ ತೋರಿಸುವದು ಅವಶ್ಯವಾಗಿರುವದು; ಆದರೆ ಅದಕ್ಕೂ ಮೊದಲು ಮುಖ್ಯ ಬೋಧವಚನಗಳು ಯಾವವೆಂಬದನ್ನೂ, ಆ ಬೋಧವಚನಗಳ ರಹಸ್ಯವನ್ನರಿಯುವದು ಎಷ್ಟು ಕಠಿಣವಾದದ್ದೆಂಬದನ್ನೂ ಕುರಿತು ಮೊದಲು ಆಲೋಚಿಸುವೆವು.

ಆನಂದವನವನ್ನು ಪ್ರವೇಶಿಸಿ ಅತಿಥಿಸತ್ಕಾರದ ಸಂಸ್ಥೆಯ ಬಾಗಿಲೊಳಗೆ ಕಾಲಿಟ್ಟಕೂಡಲೆ—"ಅಭಿಮಾನಬಿಡಬೇಕು, ಸಿಟ್ಟುಬಿಡಬೇಕು, ಶ್ರೇಷ್ಠತ್ವಬಿಡಬೇಕು, ಲೋಕಸಿಂದೆಯನ್ನು ಬಿಡಬೇಕು, ಶಾಂತಿಗುಣವಿರಬೇಕು, ಭೂತದಯವಿರಬೇಕು, ಸರ್ವತ್ರಸಮಭಾವವಿರಬೇಕು, ಜಗತ್ತು ಈಶ್ವರಸ್ವರೂಪವಿರುತ್ತದೆ, ಸಂಸಾರವು ಮಿಥ್ಯಾ, ಮೋಹವ ತ್ಯಜಿಸತಕ್ಕದ್ದು, ಧರ್ಮತರು ಗತಿಗಾಣರು." ಇತ್ಯಾದಿ ಬೋಧವಚನಗಳಲ್ಲಿ ಪ್ರಸಂಗಕ್ಕನುಸರಿಸಿದವುಗಳ ಸುರಿದಾಟವು ಕಿವಿಯಲ್ಲಾಗಹತ್ತುತ್ತದೆ. ಈ ಸಿದ್ಧಾಂತವಚನಗಳನ್ನು ಬಾಯಿಂದ ಅನ್ನಲಿಕ್ಕೆ ಕಲಿತಬೇಕಾದವರು ಅನ್ಯರನ್ನು ಬೋಧಿಸಬಹುದು! "ಅಗ್ರಹಾರದಲ್ಲಿದ್ದು, ಇವರಿಗೆಷ್ಟು ಅಭಿಮಾನ, ಎಷ್ಟು ಸಿಟ್ಟು, ಎಷ್ಟು ಮೋಹ" ಇತ್ಯಾದಿಶಬ್ದಗಳನ್ನುಚ್ಚರಿಸಿ ಬೇಕಾದವರಿಗೆ ಹೆಸರಿಡಲಿಕ್ಕೆ ಮೊದಲನೆಯ ಸಂಸ್ಥೆಯೊಳಗಿನ ಕೈಲಾಗದ ಹುಡುಗರು-ಹೆಂಗಸರು ಸಹ ಹಿಂದು ಮುಂದು ನೋಡುವದಿಲ್ಲ. ತಾವು ಸಂಧ್ಯಾವಂದನೆ ಮಾಡದ್ದರಿಂದ ಸಂಧ್ಯಾವಂದನ ಮಾಡುವವರನ್ನು ಕರ್ಮಠರೆಂತಲೂ, ತಾವು ನಿರುದ್ಯೋಗಿಗಳಾದ್ದರಿಂದ ಕಾರ್ಯಾಸಕ್ತರನ್ನು ಅಭಿಮಾನಿಗಳೆಂತಲೂ, ತಾವು ಅವ್ಯವಸ್ಥಿತರಾಗಿರಲು ಅಯೋಗ್ಯಸಂಗತಿಗಳ ತಿರಸ್ಕಾರಮಾಡುವವರನ್ನು ಲೋಕನಿಂದಕರೆಂತಲೂ, ತಾವು ಎಗ್ಗಿಲ್ಲದರಾಗಿರಲು ಅಪಮಾನಸಹಿಸದವರನ್ನು ಸಿಟ್ಟಿನವರೆಂತಲೂ, ತಾವು ಊಟಕ್ಕೆ ಜೋತು ಕುಳಿತಿರಲು, ಸದುದ್ದೇಶದಿಂದ ಅಯೋಗ್ಯರಿಗೆ ಸಹಾಯಮಾಡದವರನ್ನು ದಯಾಶೂನ್ಯರೆಂತಲೂ, ತಾವು ವಿಷಯಲಂಪಟರಾಗಿರಲು, ಶರೀರಸಂಬಂಧಿಕರೊಡನೆ ಪ್ರೇಮದಿಂದ ನಡೆಯುವವರನ್ನು ಮೋಹಿಕ

ರೆಂತಲೂ, ತಾವು ಸ್ವಕೈಲಾಗದವರಾಗಿರಲು, ಕರ್ತೃತ್ವಶಕ್ತಿಯಿಂದ ಮುಂದಕ್ಕೆ ಬಂದವರನ್ನು ಶ್ರೇಷ್ಠತ್ವಾಕಾಂಕ್ಷಿಗಳೆಂತಲಾದರೂ ಕರಕೊಂಡು, ಯೋಗ್ಯ ಜನರ ಯೋಗ್ಯತೆಯನ್ನು ಕಡಿಮೆಮಾಡಿ, ಅವರು ಲೋಕತಿರಸ್ಕೃತರಾಗುವಂತೆ ಯತ್ನಿಸುವರು. ಇವರ ಪಾಲಿಗೆ ಆನಂದವನವೇ ಲೋಕವಾಗಿರುವದು. ಮುಖ್ಯವಾಗಿ, ಈ ಸಂಸ್ಥೆಯೊಳಗಿನವರಲ್ಲಿ ಅಯೋಗ್ಯರಾದವರ ಆಲಸ್ಯ, ನಿರುದ್ಯೋಗ, ಅಯೋಗ್ಯನಡತೆ, ಸ್ವಚ್ಛಂದವೃತ್ತಿ, ಪರಪೀಡೆ ಮೊದಲಾದವುಗಳನ್ನು ಯಾರಾದರೂ ಬೈಲಿಗೆ ಹಾಕಿದರೆ, ಅವರಮೇಲೆ ಈ ಜನರ ಬಂದಿಲ್ಲೊಂದು ಬೋಧವಚನಗಳ ಅಸ್ತ್ರಪ್ರಯೋಗವು ಆಯಿತೆಂದು ತಿಳಿಯಬೇಕು. ಈ ಮೂರ್ಧರಿಗೆ, ನಾವು ಪಗಾರತಕ್ಕೊಳ್ಳದೆ ಗುರುಸೇವೆಮಾಡುವ ನಿಸ್ಪೃಹಿಗಳೆಂಬ ಹೆಮ್ಮೆಯು ಬಹಳ. ಇವರಲ್ಲಿ ಬಹು ಜನರಿಗೆ ಪ್ರಾಮಾಣಿಕತನದ, ಹಾಗು ಸತತೋದ್ಯೋಗದ ಮಹತ್ವವು ಗೊತ್ತಿಲ್ಲ, ಕೆಲವರಿಗೆ ಬರಬರುತ್ತ ಗೊತ್ತಾಗದಹಾಗಾಗಿದೆ. ಕೆಲಸಮಾಡಲಿ-ಬಿಡಲಿ, ಅಂಡದ್ದು ಅನಿಸಿಕೊಂಡು, ಹಾಕಿದ್ದು ತಿಂದುಕೊಂಡು, ಎಗ್ಗಿಲ್ಲದೆ ಇರುವವರನ್ನು ಇವರು ಶಾಂತಗುಣದವರೆಂದು ಶ್ಲಾಘಿಸುವರು; ತನ್ನ ಯೋಗ್ಯತೆಯೇ ತನಗೆ ಗೊತ್ತಿಲ್ಲದ ಹೇಡಿ ಮನುಷ್ಯನು, ಕಡಿದಷ್ಟು ತುರಿಸಿಕೊಳ್ಳುವಾಗ, ಅವನಿಗೆ ಸಿಟ್ಟಿಗೇಳುವ ಪ್ರಸಂಗಗಳೇ ಬಾರದಿರಲು, ಆ ಸುಮ್ಮನಿರುವವನನ್ನು ಇವರು ಅಕ್ರೋಧನೆಂದು ಹೊಗಳುವರು; ಅಗ್ರಹಾರದ ಊಟದ ಗಂಟೆಯಾದ ಕೂಡಲೆ, ಎಲೆಯ ಮೇಲೆ ಕುಳಿತವರಿಗೆ, ಅವರು ಅತಿಥಿಗಳಿರಲಿ-ಅಶನಾರ್ಥಿಗಳಿರಲಿ, ಭಕ್ತಿಯಿಂದ, ಅಥವಾ ಭ್ರಾಂತಿಯಿಂದ, ಅಥವಾ ಡಾಂಭಿಕತನದಿಂದ ಕೈಮುಗಿದು ಊಟಕ್ಕೆ ಹಾಕಿದರೆ, ಅವನು ಭೂತದಯೆಯುಳ್ಳವನಾದನು! ಇಂಥ ವಿಲಕ್ಷಣ ಸಂಗತಿಗಳು ಬಹಳ ಇರುವವು. ಆದರೆ ಈ ಸಂಸ್ಥೆಯಲ್ಲಿ ಯೋಗ್ಯ ಜನರಿಲ್ಲೆಂದು ಮಾತ್ರ ವಾಚಕರು ತಿಳಿಯಬಾರದು. ಹಾಗಾಗಿದ್ದರೆ ಸಂಸ್ಥೆಯು ಇಷ್ಟು ಊರ್ಜಿತಸ್ಥಿತಿಗೆ ಬರದೆ ನಾಮಶೇಷವಾಗುತ್ತಿತ್ತು. ಸದ್ಯಕ್ಕೆ ಕಾಲಮಹಿಮೆಯಿಂದ ಸಂಸ್ಥೆಯ ಸಾಮಾನ್ಯಸ್ವರೂಪವು ಹೀಗಾಗುತ್ತ ನಡೆದಿರುತ್ತದೆಂದು ಚಂದ್ರಿಕೆಯು ಹೇಳುವಳೆಂದು ವಾಚಕರು ತಿಳಿಯತಕ್ಕದ್ದು.

ಈ ಬೋಧವಚನಗಳ ಸಂಬಂಧದಿಂದ ಎರಡನೆಯ ಸಂಸ್ಥೆಯವರ ಬಣತಿಯೇ ಬೇರೆಯಾಗಿರುವದು. ಅವರು ತಮ್ಮ ಜನರನ್ನು ಕೆಲಸಬಿಡಿಸಿ ಬೋಧಿಸದೆ, ಅವರ ಕೆಲಸದಲ್ಲಾದ ತಪ್ಪುಗಳನ್ನು ತಿದ್ದುವದಕ್ಕಾಗಿ ಅವರಿಗೆ ತಕ್ಕ ಬೋಧಮಾಡುವರು. ಶಾಂತನಾಗು, ಅಕ್ರೋಧನಾಗು, ಭೂತದಯೆಯುಳ್ಳವನಾಗು, ಮೋಹವನ್ನು

ಬಿಡು, ಅಭಿಮಾನವನ್ನು ಬಿಡು, ಸಂಸಾರ ಮಿಥ್ಯಾ, ಜಗತ್ತು ಈಶ್ವರಸ್ವರೂಪ, ಕರ್ಮಠರು ಗತಿಗಾಣರು, ಇತ್ಯಾದಿ ಬೋಧಗಳಿಗೆ ಇವರು ಮಹತ್ವಕೊಡದೆ, ನೀನು ಹ್ಯಾಗೇ ಇರು, ನಿನ್ನ ಕೆಲಸವನ್ನು ಆಸಕ್ತಿಯಿಂದಲೂ, ನಿಷ್ಠೆಯಿಂದಲೂ, ಪ್ರಾಮಾಣಿಕತನದಿಂದಲೂ ಮಾಡು, ಎಂದು ತಮ್ಮ ಜನರನ್ನು ಬೋಧಿಸುವರು. ಸದಭಿಮಾನವೂ, ಅಪಮಾನವನ್ನು ಸಹಿಸದಿರುವಗುಣವೂ, ಯೋಗ್ಯಸಿಟ್ಟೂ, ಅಯೋಗ್ಯ ಸಂಗತಿಗಳ ತಿರಸ್ಕಾರವೂ, ಸಂಬಂಧಿಕರಲ್ಲಿ ಅವರವರ ಪರಿಯಿಂದ ಯೋಗ್ಯಮೋಹವೂ ನಿಮ್ಮಲ್ಲಿ ಇರಲೆಂದು ತಮ್ಮ ಜನರಿಗೆ ಹೇಳುವರು. ಶಾಂತಗುಣ-ಭೂತದಯು-ಸರ್ವತ್ರ ಈಶ್ವರಭಾವ-ಸಮತಾ ಮುಂತಾದವು ಜ್ಞಾನಿಗಳಿಗೆ ಸಂಬಂಧಪಟ್ಟ ಗುಣಗಳಾದದ್ದರಿಂದ, ಅಜ್ಞಾನಿಗಳು ವಿವೇಕಶೂನ್ಯರಾಗಿ ಅವುಗಳ ಭರಿಗೆ ಬಿದ್ದು, ಘಾತಕಸ್ವಭಾವದ ವೇಷಧಾರಿಗಳಾಗುವ ಗೊಡವಿಗೆ ಹೋಗಬಾರದೆಂದು ಇವರು ನಿರ್ಧಾರದಿಂದ ಪ್ರತಿಪಾದಿಸುವರು. ಸ್ವನಿಷ್ಠೆಯಿಂದ ಸ್ವಕರ್ತವ್ಯನಿಷ್ಠೆಯೂ, ಸ್ವಕರ್ತವ್ಯನಿಷ್ಠೆಯಿಂದ ಸನ್ನಿಷ್ಠೆಯೂ, ಸನ್ನಿಷ್ಠೆಯಿಂದ ಬ್ರಹ್ಮನಿಷ್ಠೆಯೂ ಉಂಟಾಗತಕ್ಕವಾದ್ದರಿಂದ, ನಿಮ್ಮಲ್ಲಿ ಮೊದಲು ಸ್ವಾಭಿಮಾನ-ಸ್ವಕರ್ತವ್ಯಾಭಿಮಾನಗಳು ಉಂಟಾಗುವದು ಅವಶ್ಯವೆಂದು ತಮ್ಮ ಜನರಿಗೆ ತಿಳಿಸಿ ಹೇಳುವರು. ಈ ಸಂಬಂಧದಿಂದ ಇವರ ಬೋಧದ ವಿವರಣೆ ಹ್ಯಾಗೆಂದರೆ—"ನಾನು ಕೆಲಸಕ್ಕೆ ಬಾರದವನು, ನನ್ನಿಂದೇನಾಗುತ್ತದೆ," ಎಂದು ತನ್ನನ್ನು ಹಳಿದುಕೊಳ್ಳುವವನು ಮನುಷ್ಯನೇ ಅಲ್ಲ ಅಂಥವರನ್ನು ಸಂಪೂರ್ಣವಾಗಿ ತಿರಸ್ಕರಿಸತಕ್ಕದ್ದು. ನಾನೊಬ್ಬ ಮನುಷ್ಯನಿದ್ದೇನೆ, ನಾನು ಏನಾದರೂ ಕೆಲಸಮಾಡೇನು, ನಾನು ಕೈಲಾಗದವನಲ್ಲ, ಎಂಬ ಅಭಿಮಾನವು, ಅಥವಾ ಯೋಗ್ಯಅಹಂಕಾರವು ಪ್ರತಿಒಬ್ಬನಲ್ಲಿ ಇರಬೇಕು. ಇಂಥ ಸ್ವಾಭಿಮಾನಿಯು ಅಥವಾ ಸ್ವನಿಷ್ಠನು ತನ್ನ ಗೌರವವನ್ನು ಕಾಯ್ದುಕೊಳ್ಳುವದಕ್ಕಾಗಿ ಯಾವದೊಂದು ಕಾರ್ಯಕ್ಕೆ ಕೈಹಾಕಿ ತನ್ನ ಹೆಸರಿಗೆ ಕುಂದುಬಾರದಂತೆ ತನ್ನನ್ನು ಕೂಡ ಮರೆತು, ಕಾರ್ಯಾಸಕ್ತನಾಗತಕ್ಕದ್ದು. ಇದಕ್ಕೆ ಸ್ವಕರ್ತವ್ಯನಿಷ್ಠೆಯೆನ್ನಬೇಕು. ಹೀಗೆ ಯಾವದೊಂದು ಕೆಲಸದಲ್ಲಿ ಒಬ್ಬನ ಮನಸ್ಸು ತೊಡಗಿ, ಅದು ಅಂತರ್ಬಾಹ್ಯ ಏಕಕ್ರಿಯಾತ್ಮಕವಾಯಿತೆಂದರೆ, ಅಂಥವನು ಕ್ರಿಯಾವಂತನಾಗುವನು. ಕ್ರಿಯಾವಂತನಿಗೇ ಸತ್ಪುರುಷರ ದರ್ಶನವಾಗಿ, ಅವನ ಕ್ರಿಯಾನಿಷ್ಠೆಯು, ಅಥವಾ ಕರ್ತವ್ಯನಿಷ್ಠೆಯು ಸ್ಥಾನದಲ್ಲಿ ಸನ್ನಿಷ್ಠೆಯು ಉತ್ಪನ್ನವಾಗಲು, ಆಗ ಗುರ್ವಾಜ್ಞಾಪಾಲನವು ಅವನ ಕರ್ತವ್ಯವಾಗುವದು. ಸ್ವನಿಷ್ಠೆಯು ಸ್ವಕರ್ತವ್ಯನಿಷ್ಠೆಯಲ್ಲಿ ಲೀನವಾ

ದಂತೆ, ಸ್ವನಿಷ್ಠೆ-ಸ್ವಕರ್ತವ್ಯನಿಷ್ಠೆಗಳೆರಡೂ ಸನ್ನಿಷ್ಠೆಯಲ್ಲಿ ಲೀನವಾದಾಗ, ಗುರ್ವನುಗ್ರಹವಾದರೆ, ಸರ್ವತ್ರಬ್ರಹ್ಮಭಾವವು [ಈಶ್ವರಭಾವವು] ಉತ್ಪನ್ನವಾಗುವದು. ಆ ವೇಳೆ ಬ್ರಹ್ಮನಿಷ್ಠೆಯು! ಇಂಥ ಬ್ರಹ್ಮನಿಷ್ಠನಿಗೆ ಸ್ವಪರಭೇದವು ತೋರದೆ ಹೋಗಿ, ಜಗತ್ತಿನಲ್ಲಿ ತಾನೇ ತಾನಾಗಿರಲು, ಕ್ಷೋಭ, ಮಾತ್ಸರ್ಯ, ನಿರ್ದಯ, ಅಹಂಕಾರ ಮೊದಲಾದವುಗಳಿಗೆ ಆಸ್ಪದವು ದೊರೆಯದಂತಾಗಿ, ಅಂಥ ಮಹಾತ್ಮನಲ್ಲಿ ಸರ್ವತ್ರ ಶಾಂತಿ, ನಿರಭಿಮಾನ, ನಿರ್ವೇಷ, ಸರ್ವತ್ರ ಸಮಭಾವ, ಸರ್ವತ್ರ ಈಶ್ವರಭಾವ ಇವು ಉತ್ಪನ್ನವಾಗುವವು. ಇವು ಜ್ಞಾನಿಗಳಲ್ಲಿರತಕ್ಕ ಗುಣಗಳು; ಅಥವಾ ಇವು ಜ್ಞಾನಿಗಳ ವ್ಯವಹಾರದ ಲಕ್ಷಣಗಳು. ಇದಕ್ಕೆ ಬದಲಾಗಿ ನಮ್ಮಂಥ ಅಜ್ಞಾನಿಗಳಲ್ಲಿ, ಒಮ್ಮೆ ಸಮಭಾವ-ಒಮ್ಮೆ ವಿಷಮಭಾವ, ಒಮ್ಮೆ ದಯೆ-ಒಮ್ಮೆ ನಿರ್ದಯ, ಒಮ್ಮೆ ಶಾಂತಿ-ಒಮ್ಮೆ ಕ್ಷೋಭ ಒಮ್ಮೆ ಸ್ನೇಹ-ಒಮ್ಮೆ ದ್ವೇಷ, ಒಮ್ಮೆ ಅಹಂಕಾರ-ಒಮ್ಮೆ ನಿರಹಂಕಾರ, ಒಮ್ಮೆ ಸಹಾನುಭೂತಿ-ಒಮ್ಮೆ ಅಸೂಯೆ ಇವು ಉತ್ಪನ್ನವಾಗಿಯೇ ತೀರುವವು. ಗ್ರಂಥಪಠನದಿಂದ ಜ್ಞಾನವಾಗುವದಿಲ್ಲ. ಗುರ್ವನುಗ್ರಹದಿಂದ ಜ್ಞಾನಪ್ರಾಪ್ತಿಯಾಗಲು, ಜ್ಞಾನದ ಕುರುಹಾದ ಸದ್ಗುಣಗಳು ತಾನೇ ನಮ್ಮಲ್ಲಿ ಬರುವವು. ಇದನ್ನರಿಯದೆ, ಸ್ವಾನುಭವದ ಗಂಧ ಕೂಡ ಇಲ್ಲದ ಹೇಡಿಜನರನ್ನು-ಶಾಂತರಾಗಿರಿ, ಭೂತದಯೆಯುಳ್ಳವರಾಗಿರಿ, ನಿರಭಿಮಾನಿಗಳಾಗಿರಿ, ಮೋಹರಹಿತರಾಗಿರಿ ಎಂದು ಬೋಧಿಸುವದು, ಬೋಧಿಸುವವರ ಅಜ್ಞಾನವನ್ನು ತೋರಿಸುತ್ತಿರುವದು; ಆದ್ದರಿಂದ ವಿದ್ಯಾದಾನದ ಸಂಸ್ಥೆಯವರು ತಮ್ಮ ಜನರೊಳಗಿನ ಕ್ರೋಧಾದಿ ದುರ್ಗುಣಗಳನ್ನು ಕಡಿಮೆಮಾಡುವ ಭರಿಗೆ ಹೋಗದೆ, ಹಾಗು ಅವನ್ನು ಕಡಿಮೆಮಾಡಿಕೊಳ್ಳಿರೆಂದು ಬೋಧಿಸುವ ಗೊಂದಲಕ್ಕೆ ಬೀಳದೆ, ತಮ್ಮ ಜನರು ಸ್ವನಿಷ್ಠರೂ, ಸ್ವಕರ್ತವ್ಯನಿಷ್ಠರೂ ಆಗುವಂತೆ ಸತತವಾಗಿ ಯತ್ನಿಸುವರು.

ತನ್ನನ್ನು ತಾನು ಪ್ರೀತಿಸುವದು, ಹಾಗು ತನ್ನವರನ್ನು ತಾನು ಪ್ರೀತಿಸುವದರ ಅದರಂತೆ ತನ್ನವರಲ್ಲದವರನ್ನು ತಾನು ಪ್ರೀತಿಸುವದು ಇವುಗಳಲ್ಲಿ ಬಹಳ ಅಂತರವಿರುತ್ತದೆ; ಯಾಕೆಂದರೆ, ತನಗೆ ತಾನು ಅತ್ಯಂತ ಪ್ರೀತ್ಯಾಸ್ಪದನು, ಅದಕ್ಕಿಂತ ತನ್ನವರು ಕಡಿಮೆ ಪ್ರೀತ್ಯಾಸ್ಪದರು, ಅದಕ್ಕೂ ಕಡಿಮೆ ಪ್ರೀತ್ಯಾಸ್ಪದರು ತನ್ನವರಲ್ಲದವರು. ಹೀಗೆ ಸಂಬಂಧವು ಕಡಿಮೆ ಕಡಿಮೆಯಾದಂತೆ ಪ್ರೇಮವು ಕಡಿಮೆ ಕಡಿಮೆಯಾಗುತ್ತ ಹೋಗುವದು. ಜಗತ್ತು ತಾನೇ ಎಂದು ತಿಳಿಯುವದಕ್ಕೆ, ಅಥವಾ ಜಗತ್ತಿನ, ಹಾಗು ತನ್ನ ನಿಜವಾದ ಸ್ವರೂಪಜ್ಞಾನವಾಗಲಿಕ್ಕೆ ಗುರುಕೃಪೆಯು

ಬೇಕಾದದ್ದರಿಂದ, ಹಾಗೆ ತಿಳಿಯುವದು ಎಲ್ಲರಿಗೂ ಶಕ್ಯವಲ್ಲ. ಅದರಿಂದ ಮನುಷ್ಯನು ಮೊದಲು ಜಗತ್ತಿನ ಜನರನ್ನು ತನ್ನವರೆಂದು ತಿಳಿಕೊಳ್ಳಲಿಕ್ಕೆ ಯತ್ನಮಾಡಬೇಕು. ಇದಕ್ಕೆ, ನೀತಿ-ಅನೀತಿಗಳನ್ನು ತಿಳಿದು, ನೀತಿಯಿಂದ ನಡೆಯುವದೇ ಮೇಲಾದ ಉಪಾಯವು. ಮನುಷ್ಯನು ತಾನು ನೀತಿವಂತನಾದರೆ, ನೀತಿವಂತರನ್ನು ತನ್ನವರೆಂದು ತಿಳಿಯುವನು. ಇವರು ಮಕ್ಕಳು, ಇವರು ಹೆಂಡಿರು, ಇವರು ಸ್ನೇಹಿತರು, ಇವರು ನಮ್ಮ ಊರವರು, ಇವರು ನಮ್ಮ ದೇಶದವರು ಎಂದು ಪ್ರೇಮಮಾಡುವದಕ್ಕಿಂತ, ಇವರು ನೀತಿವಂತರೆಂದು ಪ್ರೇಮಮಾಡುವದು ಹೆಚ್ಚು ವ್ಯಾಪಕವೂ-ಶಾಶ್ವತವೂ ಆಗಿರುತ್ತದೆ. ಅದ್ದರಿಂದಲೇ ಮನುಷ್ಯನು ತಾನು ನೀತಿಯಿಂದ ನಡೆಯತೊಡಗಿ, ಜನರನ್ನು ನೀತಿಯಿಂದ ನಡೆಯಹಚ್ಚಬೇಕು. ಅನೀತಿಯಿಂದ ನಡೆಯುವವರನ್ನು ಉಪಾಯದಿಂದ ಹಾದಿಗೆ ತರಬೇಕು. 'ಜಾತಿಗೆ ಭೇದವಾದರೂ ನೀತಿಗೆ ಭೇದವಿಲ್ಲವೆ"ನ್ನುವಂತೆ, ನೀತಿವಂತರು ಯಾವ ಜಾತಿಯವರಿರಲಿ, ಯಾವ ಕುಲದವರಿರಲಿ, ಯಾವ ಧರ್ಮದವರಿರಲಿ, ಅವರನ್ನು ನೋಡಿ ನೀತಿವಂತರಲ್ಲಿ ಪ್ರೇಮಭಾವವು ಉತ್ಪನ್ನವಾಗುತ್ತದೆ. ಈಶ್ವರೀಭಾವದ ಕೆಳಗಿನ ಮೆಟ್ಟಿಲೇ ಈ ನೀತಿಭಾವವಾಗಿರುವದು; ಯಾಕಂದರೆ, ಈಶ್ವರೀಭಾವದಲ್ಲಿ ನೀತಿ-ಅನೀತಿಗಳ ದೃಷ್ಟಿಯೇ ಇರುವದಿಲ್ಲ. ನೀತಿಭಾವವನ್ನು ನಿರ್ಧಾರದ ಪ್ರತ್ಯಕ್ಷಗಿಂತಲೂ, ನವಜು-ಅರಸು-ಧರ್ಮ ಮೊದಲಾದವುಗಳ ಭಯದಿಂದಲೂ ಸಂಪಾದಿಸಲು ಶಕ್ಯವಾದದ್ದರಿಂದ, ಆನಂದವನದ ಎರಡನೆಯ ಸಂಸ್ಥೆಯವರು, ತಾವು ನೀತಿಯಿಂದ ನಡೆಯಲು ಹೆಣಗುವದಲ್ಲದೆ ತಮ್ಮವರನ್ನು ನೀತಿವಂತರಾಗಿ ಮಾಡಲು ಯತ್ನಿಸುವರು. ಮನುಷ್ಯರ ಮನೋಭೂಮಿಯಲ್ಲಿ ನೀತಿಯ ಮೊಳಕೆಯು ನೆಲೆಯೂರಲಿಕ್ಕೆ ಉದ್ಯೋಗತತ್ಪರತೆಂಬ ಗೊಬ್ಬರದಿಂದ ಆ ಭೂಮಿಯ ಕಸುವು ಹೆಚ್ಚಿಸಿ, ಅದಕ್ಕೆ ಅಭಿನಂದನರೂಪವಾದ ನೀರುಣಿಸಿ, ತಿರಸ್ಕಾರರೂಪ ಕುರ್ಚಿಗೆಯಿಂದ ಆ ಭೂಮಿಯೊಳಗಿನ ಅನೀತ್ಯಾಚರಣೆಯೆಂಬ ಕಳೆಯನ್ನು ಆಗಾಗ್ಗೆ ತೆಗೆದು ಚೆಲ್ಲಬೇಕು; ಅಂದರೆ ಭೂಮಿಯ ಕಸುವು ಕಡಿಮೆಯಾಗದೆ, ಹಸಿಯು ಆರದೆ, ಕಸದಿಂದ ಬಾಧೆಯು ತಟ್ಟದೆ, ನೀತಿಯ ಬೆಳೆಯು ಚೆನ್ನಾಗಿ ಬರುವದು. ಈ ನೀತಿಯ ಬೆಳೆ ತಕ್ಕೊಳ್ಳುವಾಗ, ಗೆಯ್ಯುವವರಿಗೂ, ಭೂಮಿಗೂ ಆಗುವ ತ್ರಾಸವನ್ನು ಸಹಿಸುವದೇ ತಪಶ್ಚರ್ಯವೆಂದು ತಿಳಿದು, ಈಗ ವಿದ್ಯಾದಾನದ ಸಂಸ್ಥೆಯವರು ತಮ್ಮವರನ್ನು ಮೈಮುರಿದು ದುಡಿಸಲಿಕ್ಕೂ, ನ್ಯಾಯತತ್ಪರತೆಗಾಗಿ ಅವರನ್ನು ಅಭಿನಂದಿಸಲಿಕ್ಕೂ, ಅನ್ಯಾಯಾವಲಂಬನಕ್ಕಾಗಿ ಅವರನ್ನು ತಿರಸ್ಕರಿಸಲಿಕ್ಕೂ ಎಂದಿಗೂ ಹಿಂಮುಂದು

ನೋಡುವದಿಲ್ಲ! ಇವರ ಮತದಿಂದ ಯೋಗ್ಯ ಸಿಟ್ಟು, ಯೋಗ್ಯ ಅಭಿಮಾನವೂ, ಯೋಗ್ಯ ಭೇದಭಾವವೂ ಬೇಕಾಗಿರುವವು. ಇನ್ನು ಇವರ ಮತಕ್ಕೆ ಪುಷ್ಟಿಕಾರಕವಾದ ಕೆಲವು ಮಹಾತ್ಮರ ಉಕ್ತಿಗಳನ್ನು ಇದರಡಿಯಲ್ಲಿ ಕೊಡುವೆವು.

ಭಗವದ್ಗೀತೆಯಲ್ಲಿ ಕಾಮ-ಕ್ರೋಧಾದಿಗಳ ಸಂಬಂಧದಿಂದ—

**त्रिविधं नरकस्येदं द्वारं नाशनमात्मनः।**

**कामक्रोधस्तथा लोभस्तस्मादेतत् स्वयंत्यजेत् ॥**

ಅಂದರೆ, ಕಾಮ-ಕ್ರೋಧ-ಲೋಭ ಇವು ಮೂರು ನರಕದ್ವಾರಗಳಿದ್ದು, ತನ್ನ ನಾಶಮಾಡತಕ್ಕವಾದ್ದರಿಂದ, ಅವುಗಳನ್ನು ತ್ಯಜಿಸಬೇಕೆಂದು ಭಗವಂತನು ಹೇಳಿರುತ್ತಾನೆ; ಆದರೆ ಅದೇ ಗೀತೆಯಲ್ಲಿ ಭಗವಂತನು—"**धर्माविरुद्धोभूतेषु कामोस्मि भरतर्षभ**" ಅಂದರೆ, "ಅರ್ಜುನಾ! ಪ್ರಾಣಿಗಳಲ್ಲಿರುವ ಧರ್ಮಕ್ಕೆ ವಿರುದ್ಧವಲ್ಲದ ಕಾಮವೇ ನಾನು" ಎಂದು ತನ್ನ ಸ್ವರೂಪವನ್ನು ವರ್ಣಿಸಿರುತ್ತಾನೆ. ಅಂದಬಳಿಕ ಧರ್ಮವಿರುದ್ಧವಾದ ಕಾಮವು ಮಾತ್ರ ನರಕದ್ವಾರವಾಗಿದ್ದು, ತದಿತರಕಾಮವು ಭಗವಂತನಿಗೆ ಮಾನ್ಯವಾಗಿರುತ್ತದೆಂದ ಹಾಗಾಯಿತು. ಮನುವಾದರೂ ತನ್ನ ಸ್ಮೃತಿಯಲ್ಲಿ—"**परित्यजेदर्थ कामौ यौ स्या तां धर्मवर्जितौ**" ಅಂದರೆ, ಧರ್ಮವಿರುದ್ಧವಾದ ಅರ್ಥಕಾಮಗಳನ್ನಷ್ಟೇ ಬಿಡಬೇಕೆಂದು ಹೇಳಿರುತ್ತಾನೆ. ಎಲ್ಲ ಪ್ರಾಣಿಗಳು ಕಾಮಪರಿತ್ಯಾಗಮಾಡಿ, ಆಜನ್ಮ ಬ್ರಹ್ಮಚರ್ಯದಿಂದಿರಬೇಕೆಂದು ನಿಶ್ಚಯಮಾಡಿದರೆ, ಎಲ್ಲ ಸಜೀವಸೃಷ್ಟಿಯು ನೂರಾರು ವರ್ಷಗಳಲ್ಲಿ ಲಯವಾಗಿಹೋದೀತು. ಯಾವ ಸೃಷ್ಟಿಯು ನಾಶವಾಗಬಾರದೆಂದು ಭಗವಂತನು ವೇಳೆವೇಳೆ ಅವತಾರತಾಳುವನೋ, ಅದೇ ಸೃಷ್ಟಿಯು ನಿಷ್ಕಾಮವೃತ್ತಿಯಿಂದ ನಾಶವಾಗಿ ಹೋದಂತಾಗುವದು! ಕಾಮ-ಕ್ರೋಧಗಳು ಶತ್ರುಗಳೆಂಬದೇನೋ ನಿಜ; ಆದರೆ ಯಾವಾಗ? ನಮ್ಮ ಕೈಮೀರಿ ಅವು ಅಧಿಕಾರ ನಡಿಸಿದಾಗ. ಸೃಷ್ಟಿಕ್ರಮವು ನಡೆಯುವದಕ್ಕಾಗಿ ಮರ್ಯಾದಿತ ಕಾಮ-ಕ್ರೋಧಗಳು ಅವಶ್ಯವಾಗಿ ಬೇಕೇಬೇಕು, ಎಂಬದು ಮನ್ವಾದಿಶಾಸ್ತ್ರಕಾರರಿಗೂ ಮಾನ್ಯವಾಗಿರುವದು. ಮನುಷ್ಯನು ನೀತಿಸಂಪನ್ನನಾಗುವದೆಂದರೆ, ಕಾಮಕ್ರೋಧ ಲೋಭಗಳೆಂಬ ಪ್ರಬಲಮನೋವೃತ್ತಿಗಳಿಗೆ ಯೋಗ್ಯಪ್ರತಿಬಂಧಮಾಡುವದೆಂದು ತಿಳಿಯಬೇಕಲ್ಲದೆ, ಇವುಗಳನ್ನು ಸಮೂಲನಾಶಮಾಡುವದೆಂದು ತಿಳಿಯಬಾರದು. ಈ ಸಂಬಂಧದಿಂದ ಭಾಗವತದಲ್ಲಿ—

**लोकेव्यवायामिषमद्यसेवानित्यास्तिजन्तोर्नहितत्रचोदना।**
**व्यवस्थितिस्तेषु विवाहयज्ञसुराग्रहैरासु निवृत्तिरिष्टा ॥**

ಅಂದರೆ, “ಈ ಜಗತ್ತಿನಲ್ಲಿ ಪ್ರಾಣಿಗಳಿಗೆ ಮೈಥುನ, ಮಾಂಸ, ಮದ್ಯ ಇವುಗಳನ್ನು ಸೇವಿಸಿರೆಂದು ಯಾರೂ ಹೇಳಬೇಕಾಗುವದಿಲ್ಲ; ಅವು ಮನುಷ್ಯನಿಗೆ ಸ್ವಾಭಾವಿಕವಾಗಿಯೇ ಬೇಕಾಗುತ್ತವೆ. ಈ ಮೂರರ ಇಚ್ಛೆಯನ್ನು ವ್ಯವಸ್ಥೆಗೊಳಿಸುವದಕ್ಕಾಗಿ, ಅಂದರೆ ಅವುಗಳ ಇಚ್ಛೆಯನ್ನು ಮರ್ಯಾದಿತಮಾಡಿ ಅವಕ್ಕೆ ವ್ಯವಸ್ಥಿತಸ್ವರೂಪವನ್ನು ಕೊಡುವದಕ್ಕಾಗಿ, ವಿವಾಹ, ಸೋಮಯಾಗ, ಸೌತ್ರಾಮಣೀಯಜ್ಞ ಇವುಗಳ ಯೋಜನೆಯು (ಶಾಸ್ತ್ರಕಾರರಿಂದ) ಆಗಿರುತ್ತದೆ. ಆದರೆ ಅದರಲ್ಲಿಯೂ ನಿವೃತ್ತಿ, ಅಂದರೆ, ನಿಷ್ಕಾಮಾಚರಣವು ಇಷ್ಟವಾದದ್ದು” ಎಂದು ಹೇಳಿರುತ್ತದೆ. ಸಿಟ್ಟಿನ ಸಂಬಂಧದಿಂದ ಹೇಳುವಾಗ ಕಿರಾತಕಾವ್ಯದಲ್ಲಿ—

**अमर्षशून्येन जनस्यजंतुना नजातहार्देन नविद्विषादरः ॥**

ಅಂದರೆ, ತನ್ನ ಅಪಮಾನವಾದದಕ್ಕಾಗಿಯೂ ಯಾವ ಪುರುಷನಿಗೆ ಸಿಟ್ಟು ಬರುವದಿಲ್ಲವೋ, ಆ ಪುರುಷನ ಸ್ನೇಹವಿದ್ದರೂ ಅಷ್ಟೇ, ದ್ವೇಷವಿದ್ದರೂ ಅಷ್ಟೇ! ಎಂದು ಭಾರವಿಕವಿಯು ಹೇಳಿರುತ್ತಾನೆ. ಅದರಂತೆ ಮಹಾಭಾರತದ ಉದ್ಯೋಗಪರ್ವದಲ್ಲಿ ಕ್ಷಾತ್ರಧರ್ಮದಂತೆ ನೋಡಿದರೆ—

**एतावानेव पुरुषो यद्मर्षी यद्क्षमी ।**
**क्षमावान्निरमर्षश्च नैव स्त्री न पुनः पुमान् ॥**

ಅಂದರೆ, ಯಾವ ಪುರುಷನಿಗೆ (ಅನ್ಯಾಯಕ್ಕಾಗಿ) ಸಿಟ್ಟು ಬರುವದೋ, ಯಾವನು (ಅಪಮಾನವನ್ನು) ಸಹಿಸುವದಿಲ್ಲವೋ, ಅವನನ್ನೇ ಪುರುಷನೆಂದು ಕರೆಯಬೇಕು. ಯಾವ ಪುರುಷನಿಗೆ ಸಿಟ್ಟೂ, ತ್ವೇಷವೂ ಬರುವದಿಲ್ಲವೋ, ಅವನು ಹೆಣ್ಣೂ ಅಲ್ಲ ಗಂಡೂ ಅಲ್ಲ; ಷಂಢನೆಂದು ತಿಳಿಯಬೇಕು, ಎಂದು ವಿದುಲೆಯು ವರ್ಣಿಸಿರುತ್ತಾಳೆ. ಜಗತ್ತಿನ ವ್ಯವಹಾರವು ನಡೆಯಲಿಕ್ಕೆ ಯಾವಾಗಲೂ ಸಿಟ್ಟು ಅಥವಾ ತೇಜಸ್ಸು ತಕ್ಕದ್ದಲ್ಲವೆನ್ನುವಂತೆ, ಯಾವಾಗಲೂ ಕ್ಷಮೆಯೂ ಕೆಲಸದ್ದಲ್ಲವೆಂದು ತಿಳಿಯಬೇಕು. ಲೋಭಕ್ಕಾದರೂ ಇದೇಮಾತು ಸಂಬಂಧಿಸಿರುತ್ತದೆ; ಯಾಕಂದರೆ ಸನ್ಯಾಸಿಗಾದರೂ ಮೋಕ್ಷವು ಬೇಕಾಗಿರುತ್ತದೆ. ಅದೊಂದು ಬಗೆಯ ಲೋಭವೇ ಆಗಿರುವದು!

ಇನ್ನು ಶೌರ್ಯ, ಧೈರ್ಯ, ದಯಾ, ಶೀಲ, ಮೈತ್ರಿ, ಸಮತಾ ಮೊದಲಾದ ಯಾವತ್ತು ಸದ್ಗುಣಗಳಿಗೆ, ಅವುಗಳ ಪರಸ್ಪರ ವಿರೋಧಪ್ರಸಂಗವಲ್ಲದೆ, ದೇಶ

ಕಾಲಾದಿಗಳ ಮರ್ಯಾದೆಯು ಸಂಬಂಧಿಸುತ್ತದೆಂದು ವ್ಯಾಸರು ಮಹಾಭಾರತದಲ್ಲಿ ಹಲವು ಕಡೆಗೆ ಬೇರೆಬೇರೆ ಕಥೆಗಳಿಂದ ಪ್ರತಿಪಾದಿಸಿರುತ್ತಾರೆ. ಯಾವದೊಂದು ಸದ್ಗುಣವೇ ಆಗಲಿ, ಅದು ಯಾವಾಗಲೂ ಒಪ್ಪತಕ್ಕದೆನ್ನುವಹಾಗಿಲ್ಲ. ಈ ಸಂಬಂಧದಿಂದ ಭರ್ತೃಹರಿಯು —

**विपदिधैर्यमथाभ्युदयेक्षमा सदसि वाक्पटुतायुधिविक्रमः**

ಅಂದರೆ, ಸಂಕಟಕಾಲದಲ್ಲಿ ಧೈರ್ಯ, ಉತ್ಕರ್ಷಕಾಲದಲ್ಲಿ, ಅಂದರೆ ಶಾಸನ ಮಾಡುವ ಸಾಮರ್ಥ್ಯವಿದ್ದಾಗ ಕ್ಷಮೆಯು, ಸಭೆಯಲ್ಲಿ ವಕ್ತೃತ್ವವು, ಯುದ್ಧದಲ್ಲಿ ಧೈರ್ಯವು ಇರಬೇಕೆಂದು ಹೇಳಿರುತ್ತಾನೆ. ಪ್ರಸಂಗಬಿದ್ದಲ್ಲಿ, ದೇಶಕಾಲಾದಿಗಳ ಹೊರತು ಪಾತ್ರಾಪಾತ್ರಗಳ ಸಮಾವೇಶವಾದರೂ ಆಗುತ್ತದೆ. ಸಮತೆಗಿಂತಲೂ ಎರಡನೆಯ ಯಾವಗುಣವೂ ಶ್ರೇಷ್ಠವಾದದ್ದಲ್ಲ. "**समःसर्वेषु भूतेषु**" ಎಂಬದು ಸಿದ್ಧಪುರುಷರ ಲಕ್ಷಣವಾಗಿರುತ್ತದೆಂದು ಭಗವದ್ಗೀತೆಯಲ್ಲಿಯೇ ಹೇಳಿರುತ್ತದೆ; ಆದರೆ ಸಮತೆಯೆಂದರೇನು? ಒಬ್ಬಾನೊಬ್ಬನು ಪಾತ್ರಾಪಾತ್ರಗಳ ವಿಚಾರವಿಲ್ಲದೆ ಎಲ್ಲರಿಗೂ ಸರಿಯಾಗಿ ದಾನಮಾಡಿದರೆ, ಅವನನ್ನು ನಾವು ಜಾಣನೆಂದು ಕರೆಯಬೇಕೋ? ಹುಚ್ಚನೆಂದು ಕರೆಯಬೇಕೋ? ಅದೇ ಭಗವದ್ಗೀತೆಯಲ್ಲಿ "**देशेकाले च पात्रे च तद्दानं सात्विकं विदुः**" ಅಂದರೆ ದೇಶಕಾಲ ಪಾತ್ರತೆಯನ್ನು ನೋಡಿ ಕೊಟ್ಟ ದಾನವು ಸಾತ್ವಿಕವೆನಿಸುವದು, ಎಂದು ಭಗವಂತನು ಈ ಪ್ರಶ್ನೆಕ್ಕೆ ಉತ್ತರವನ್ನು ಕೊಟ್ಟಿರುತ್ತಾನೆ. ಸರ್ವರಿಗೂ ಸರ್ವದಾ ಹಿತಕಾರಕವಾದ ಆಚಾರವು ದೊರೆಯಲಾರದು, ಈ ಸಂಬಂಧದಿಂದ ಭೀಷ್ಮಾಚಾರ್ಯರು—

**न हि सर्वहितः कश्चिदाचारःसप्रवर्तते ।**
**तेनैवान्यः प्रभवति सोऽपरं बाधते पुनः ॥**

ಅಂದರೆ, ಸರ್ವರಿಗೂ ಸರ್ವದಾ ಹಿತಕಾರಕವಾದ ಆಚಾರವು ದೊರೆಯಲಾರದು. ಒಂದು ಆಚಾರಕ್ಕಿಂತ ಮತ್ತೊಂದು ಹೆಚ್ಚಿನದಾಗುವದು, ಈ ಎರಡನೆಯ ಆಚಾರವನ್ನು ಗ್ರಹಿಸಬೇಕೆಂದರೆ, ಅದು ಮೂರನೆಯದಕ್ಕೆ ವಿರೋಧವಾಗುವದು. ಎಂದು ಆಚಾರ ಭೇದಗಳನ್ನು ವರ್ಣಿಸಿ, ಆಚಾರ-ಆಚಾರಗಳಲ್ಲಿ ಯಾದರೂ ತಾರತಮ್ಯನೋಡಬೇಕಾಗುತ್ತದೆಂದು ಹೇಳಿರುತ್ತಾರೆ. ಇದಕ್ಕಾಗಿ ಆನಂದವನದೊಳಗಿನ ಅನ್ನದಾನದ ಉದಾಹರಣವನ್ನು ತಕ್ಕೊಳ್ಳುವಾ. ಅನ್ನದಾನ ಮಾಡುವದು ಸತ್ಕರ್ಮವಾಗಿರುವದು. ಆದಕ್ಕಿಂತಲೂ ಕುಟುಂಬ ಪೋಷಣವು ಶ್ರೇಷ್ಠ ಆಚಾರವಾಗುವದು. ಈ ಶ್ರೇಷ್ಠ ಆಚಾರವನ್ನು ಕೈಕೊಂಡು ವಿಧಿನಿಷೇಧವಿಲ್ಲದೆ ಕುಟುಂಬಗಳ

ಪೋಷಣಮಾಡಹತ್ತಿದ್ದರಿಂದ, ಕುಟುಂಬದ ಜನರ ಸತ್ವಭಂಗವಾಗಿ ಅವರ ಅಧಃಪತನವಾಗಲು, ಆ ಕುಟುಂಬದ ನೀತಿನಡಾವಳಿಗಳನ್ನು ಕೆಡಿಸಿದ ದೋಷವು ಬಂದು, "ಆತ್ಮೋನ್ನತಿಯನ್ನುಂಟುಮಾಡಬೇಕೆ"ಂಬ ಶ್ರೇಷ್ಠ ಆಚಾರಕ್ಕೆ ಬಾಧೆಬರುವದು!

ಒಟ್ಟಿಗೆಹೇಳತಕ್ಕ ತಾತ್ಪರ್ಯವಿಷ್ಟೇ, ಕರ್ಮಾಕರ್ಮದ, ಧರ್ಮಾಧರ್ಮದ ಸಂಶಯಗಳ ಗೂಢವು ಈ ಬಗೆಯದಿರುವದರಿಂದ "**सूक्ष्मा गतिर्हि धर्मस्य**" ಅಂದರೆ ವ್ಯಾವಹಾರಿಕನೀತಿಧರ್ಮದಗತಿಯು ಬಹು ಸೂಕ್ಷ್ಮವಾಗಿರುತ್ತದೆ, ಎಂದು ಮಹಾಭಾರತದಲ್ಲಿ ಹೇಳಿರುತ್ತದೆಂಬದನ್ನು ನೆನಪಿನಲ್ಲಿಟ್ಟು, ಸುಮ್ಮನೆ ವಿವೇಕವಿಲ್ಲದೆ ಸಿಕ್ಕಸಿಕ್ಕ ಜನರನ್ನು ಕುರಿತು, ಸಿಕ್ಕ ಸಿಕ್ಕವರು—ಶಾಂತರಾಗಿರಿ, ಅಕ್ರೋಧರಾಗಿರಿ, ಮೋಹರಹಿತರಾಗಿರಿ, ಸಮಭಾವತಾಳಿರಿ ಇತ್ಯಾದಿ ಬೋಧವಚನಗಳನ್ನು ಬೋಧಿಸುತ್ತ, ತದ್ವಿರುದ್ಧ ನಡೆಯುವವರ ಉದ್ದೇಶವರಿಯದೆ, ಮಾತ್ಸರ್ಯದಿಂದ ಅವರನ್ನು ನಿಂದಿಸುತ್ತ ಹೋಗುವದು, ವಿಚಾರವಂತರ ಧರ್ಮವಲ್ಲ. ಇದರಿಂದ ಎಂದಿಗೂ ಹಿತವಾಗಲಿಕ್ಕಿಲ್ಲ. "ಸತ್ಯವನ್ನು ನುಡಿಯಬೇಕು; ತನ್ನ ಭಾರಮಂದಿಯಮೇಲೆ ಹಾಕಬಾರದು; ಕೈಲಾದರೆ ಪರೋಪಕಾರಮಾಡಬೇಕು; ಪರರ ಸೊತ್ತನ್ನು ಅಪಹರಿಸುವದು ಪಾಪವು; ತನ್ನ ಕೆಲಸ ತಾನೇ ಮಾಡಬೇಕು; ಆಲಸ್ಯವು ಕೆಲಸದ್ದಲ್ಲ; ಸದಾ ಉದ್ಯೋಗಿಯಾಗಿರಬೇಕು; ವರ್ಣಾಶ್ರಮೋಚಿತಕರ್ಮಗಳನ್ನು ಯಥಾಶಕ್ತಿಯಾಗಿಯಾದರೂ ಮಾಡಬೇಕು; ಸಜ್ಜನರ ಸಹವಾಸ ಮಾಡಬೇಕು; ದುಷ್ಟರನೆರಳಿಗೆ ಹೋಗಬಾರದು; ಆಯಾ ಕೆಲಸಗಳನ್ನು ಆಯಾ ಕಾಲಕ್ಕೆ ತಪ್ಪದೆಮಾಡಬೇಕು; ಒಳ್ಳೆಯದಕ್ಕೆ ಒಳ್ಳೆಯದೆನ್ನಬೇಕು; ಕೆಟ್ಟದಕ್ಕೆ ಕೆಟ್ಟದೆನ್ನಬೇಕು; ಒಳ್ಳೆಯ ಜನರನ್ನು ಆದರಿಸಬೇಕು; ದುಷ್ಟರನ್ನು ನಿರಾಕರಿಸದಿದ್ದರೂ, ಉದಾಸೀನಮಾಡಬೇಕು; ಆಹಾರ-ವಿಹಾರ-ವ್ಯಯಗಳಲ್ಲಿ ಮಿತಿಯಿರಬೇಕು; ಸುಮ್ಮನಿರುವ ಪ್ರಸಂಗದಲ್ಲಿ ಸುಮ್ಮನಿರಬೇಕು; ಮಾತಾಡುವಪ್ರಸಂಗದಲ್ಲಿ ಮಾತಾಡಬೇಕು; ಸಿಟ್ಟಿಗೇಳುವ ಪ್ರಸಂಗದಲ್ಲಿ ಸಿಟ್ಟಿಗೇಳಬೇಕು; ಸಮಾಧಾನ ತಾಳುವಪ್ರಸಂಗದಲ್ಲಿ ಸಮಾಧಾನ ತಾಳಬೇಕು; ಯೋಗ್ಯರನ್ನು ಶ್ಲಾಘಿಸಬೇಕು; ಅಯೋಗ್ಯರನ್ನು ನಿರಾಕರಿಸಬೇಕು, ಇತ್ಯಾದಿ ಎಲ್ಲರಿಗೂ ಗೊತ್ತಿರುವ ನೀತಿಯ ವಚನಗಳಂತೆ ನಡೆಯುತ್ತ ಹೋದರೆ, ನಮ್ಮಂಥವರ ಕೆಲಸವಾಗುವದೆಂದು ಎರಡನೆಯ ಸಂಸ್ಥೆಯವರು ತಿಳಿಯುವರು.

ಈ ಮೇರೆಗೆ ಆನಂದವನದ ಎರಡೂ ಸಂಸ್ಥೆಗಳ ವಿಚಾರಗಳು ಭಿನ್ನವಾಗಿರುವಂತೆ, ಅವುಗಳ ಆಚಾರಗಳೂ ಭಿನ್ನವಾಗಿರುವವೆಂದು ಬರೆಯಲವಶ್ಯವಿಲ್ಲ. ಈ ಆಚಾರಭಿನ್ನತ್ವವನ್ನು ಕುರಿತು ಮೂರು ಸಂಗತಿಗಳು ಅವಲೋಕಿಸತಕ್ಕವಾಗಿವೆ.

ಅವುಗಳಲ್ಲಿ ಮೊದಲನೆಯದು ಸಂಸ್ಥೆಯವರ ಲೋಕಸಂಗ್ರಹಕ್ರಮ, ಎರಡನೆಯದು ಸಂಸ್ಥೆಯವರ ದಿನಚರ್ಯೆ, ಮೂರನೆಯದು ಸಂಸ್ಥೆಗಳ ಯೋಗಕ್ಷೇಮಗಳ ಸಾಧನ. ಇವುಗಳಲ್ಲಿ ಮೊದಲನೆಯ ಸಂಗತಿಯಾದ ಲೋಕಸಂಗ್ರಹವನ್ನು ನಿರೀಕ್ಷಿಸುವಾ. ಮೊದಲನೆಯ ಅತಿಥಿಸತ್ಕಾರದ ಸಂಸ್ಥೆಯಲ್ಲಿ ಸಂಗ್ರಹವಾಗುವವರಲ್ಲಿ ಅತಿಥಿಗಳು, ಸೇವಕರು ಎಂಬ ಎರಡು ವರ್ಗಗಳಿರುವವು. ಅತಿಥಿಗಳು ತಕ್ಕಷ್ಟಕ್ಕಿಂತ ಹೆಚ್ಚು ದಿನ ಇದ್ದರೆಂದರೆ, ಅವರು ಸೇವಕರಾಗುವರು; ಈ ಸೇವಕರಲ್ಲಿ ಬಹುಜನರು ಬೇಗನೆ ಅಶನಾರ್ಥಿವರ್ಗಕ್ಕೆ ಸೇರುವದರಿಂದ ಈ ಸಂಸ್ಥೆಯಲ್ಲಿ ಅಶನಾರ್ಥಿವರ್ಗವು ದಿನದಿನಕ್ಕೆ ಹೆಚ್ಚುತ್ತ ನಡೆದಿರುವದು. ಈ ಹಿಂಡಿನಲ್ಲಿ ಅತಿಥಿಗಳು ಅಡಗಿದರು, ವಿದ್ಯಾರ್ಥಿಗಳು ಆನಂದವನಕ್ಕೆ ಭಾರವಾಗಹತ್ತಿದರು. ವಿದ್ಯಾರ್ಥಿಗಳಿಗೆ ಇರಲಿಕ್ಕೆ ಸ್ಥಳ ಸಹಸಿಗದೆ ಹೋಯಿತು! ಅತಿಥಿಸೇವೆಯ ಸಮೀಚೀನತೆಗೂ, ವಿದ್ಯಾರ್ಥಿಗಳ ಯೋಗಕ್ಷೇಮಕ್ಕೂ ಬಾಧೆ ಬರಹತ್ತಿತು. ಆನಂದವನಕ್ಕೆ ಜೋಳದ ಮುಚ್ಚು ಈಡಾಗದ ಹಾಗಾಯಿತು! ಇದನ್ನು ನೋಡಿ ಶ್ರೀ ಗುರುಗಳು— "ಮಹಾರಾಜಾ, ದೇಹವು ಮೂರುಮೊಳವಾದರೆ, ಸೇವೆಯು ಆರುಮೊಳವಾಯಿತು," ಎಂದು ಸೌಮ್ಯನುಡಿಯಿಂದ ತಿರಸ್ಕರಿಸುತ್ತಿದ್ದರು; ಆದರೆ ನಮಗೆ ಇ-ದೊಂದು ಕೌತುಕದಮಾತಾಗಿ ಪರಿಣಮಿಸಿತು! "ಸ್ವಾಮಿಯ ಪುಣ್ಯ ನಡೆಯುತ್ತದೆ. ಮಹಾರಾಯನು. ಯಾರು ಬೇಡವೆನ್ನಲಿಕ್ಕೇನು? ಯಾರೇನು ತಮ್ಮ ಮನೆಯಿಂದ ಹಾಕುತ್ತಾರೋ? ಸ್ವಾಮಿ ನಡಿಸುತ್ತಾನೆ" ಎಂಬ ಮಾತುಗಳೇ ಅಗ್ರಹಾರದಲ್ಲಿ ಇರಲಿಕ್ಕೆ ಸಾಕಷ್ಟು ಆಧಾರಗಳು. ಈ ಸಂಸ್ಥೆಯಲ್ಲಿ ಕೌಟುಂಬಿಕರವಿಷಯವಾಗಿ ಉದಾಸೀನಭಾವವಿರುವದರಿಂದ, ಈ ಸಂಸ್ಥೆಯೊಳಗಿನ ಕುಟುಂಬದ ಜನರೂ ಉದಾಸೀನರಾಗಿರುವರು. ಮುಖ್ಯಮಾತು, ಈ ಸಂಸ್ಥೆಯೊಳಗಿನ ಕುಟುಂಬದವರು, ಹೊರಗೆ ಮೋಹ ತೋರಿಸದಿರಬೇಕೆಂದು ಎಚ್ಚರಪಡುವದು ವಿಶೇಷವಾಗಿರುತ್ತದೆ! ಯಾಕಂದರೆ, ಇವರು ತಮ್ಮ ಮಕ್ಕಳುಮರಿಗಳನ್ನು ಎತ್ತಿಕೊಳ್ಳಲಿಕ್ಕೆ ಕೂಡ ಅಂಜುವರು. ಇಂಥ ಅಂಜುಬುರುಕರು, ಅಥವಾ ಹೊಟ್ಟೆಯ ಮಕ್ಕಳನ್ನೇ ಪ್ರೀತಿಸಲಾರದವರು ಜಗತ್ತನು ಹ್ಯಾಗೆ ಪ್ರೀತಿಸುತ್ತಾರೋ ತಿಳಿಯದು!

ಇದಕ್ಕೆ ವಿರುದ್ಧವಾಗಿ ೨ ನೆಯ ಸಂಸ್ಥೆಯಲ್ಲಿ ಲೋಕಸಂಗ್ರಹದ ಕ್ರಮವು ಸಾಗುವದು. ಅತಿಥಿಗಳಿಗೆ ಈ ಸಂಸ್ಥೆಯಲ್ಲಿಯೂ ಪ್ರತಿಬಂಧವಿಲ್ಲ; ಆದರೂ ಅತಿಥಿಗಳು ಹೋಗಿ ಸೇವಕರೂ, ಸೇವಕರು ಹೋಗಿ ಅಶನಾರ್ಥಿಗಳೂ ಈ ಸಂಸ್ಥೆಯಲ್ಲಿ ಆಗಲಾರರು. ವಿದ್ಯಾರ್ಥಿಗಳ ವಿದ್ಯಾವ್ಯಾಸಂಗಕ್ಕೆ ಎಲ್ಲ ಬಗೆಯಿಂದ

ಅನುಕೂಲಮಾಡಿಕೊಡುವದು ಈ ಸಂಸ್ಥೆಯ ಮುಖ್ಯೋದ್ದೇಶವಾಗಿರುವದು. ಈ ಸಂಸ್ಥೆಯಲ್ಲಿಯೂ ಮೊದಮೊದಲಿಗೆ ಹೆಣ್ಣುಮಕ್ಕಳಿಗೆ ಅಲ್ಪ ಸ್ವಲ್ಪ ಆಶ್ರಯದೊರೆಯಿತು; ಆದರೆ ಅದರ ಘಾತಕತನವು ಬೇಗನೆ ಅನುಭವಕ್ಕೆ ಬಂದದ್ದರಿಂದ, ಹೆಣ್ಣುಮಕ್ಕಳ, ವಿಶೇಷವಾಗಿ ವಿಧವಾಸ್ತ್ರೀಯರ, ಸಂಪರ್ಕವು ಸಂಸ್ಥೆಗೆ ಆಗದಂತೆ ಅದರ ಚಾಲಕರು ಎಚ್ಚತ್ತು ನಿಶ್ಚಯಿಸಿರುವರು! ಯೋಗ್ಯ ವಿದ್ಯಾರ್ಥಿಗಳೂ, ಯೋಗ್ಯ ಅಧ್ಯಾಪಕರೂ, ಯೋಗ್ಯ ನೌಕರರೂ ಸಂಗ್ರಹಿಸಲ್ಪಡಲಿಕ್ಕೆ ಈ ವರೆಗೆ ಸಾಕಷ್ಟು ಅನುಕೂಲತೆಯು ದೊರೆಯದಿದ್ದರೂ, ಅದರ ಕಡೆಗೆ ಈ ಸಂಸ್ಥೆಯವರ ಸಂಪೂರ್ಣ ಲಕ್ಷವಿರುವದು. ಈ ಸಂಸ್ಥೆಯಲ್ಲಿರತಕ್ಕ ಕೌಟುಂಬಿಕರು, ತಮ್ಮ ತಮ್ಮ ಕು-ಟುಂಬಗಳನ್ನು ಬೇರೆ ಬೇರೆ ಮಾಡಿಕೊಂಡು, ಯೋಗ್ಯ ಗೃಹಸ್ಥಾಶ್ರಮಿಗಳಾಗಲಿಕ್ಕೆ ಯತ್ನಿಸಬೇಕೆಂದು ಚಾಲಕರು ಇಚ್ಛಿಸುವರು. ಈ ಸಂಸ್ಥೆಯು ನಿಯಮಬದ್ಧವಾಗಿರುವದರಿಂದ, ಇದರಲ್ಲಿ ಅಯೋಗ್ಯ ಜನರು ಪೂರಯಿಸುವದಿಲ್ಲ. ಇಂದು ಹಳಬನು ಹೋದನು, ನಾಳೆ ಹೊಸಬನು ಬಂದನು, ಎಂದು ಅನ್ನುತ್ತ ಈಗೀಗ ಸ್ವಲ್ಪ ಸ್ವಲ್ಪ ತಿಳುವಳಿಕೆಯು ಹುಟ್ಟುತ್ತ, ಜನರು ಕಾಲು ಊರಿನಿಲ್ಲಹತ್ತಿರುವರು. ದಿನದಿನಕ್ಕೆ ತಮ್ಮ ನಡತೆಯನ್ನೂ, ಶೀಲವನ್ನೂ ಸುಧಾರಿಸಿಕೊಳ್ಳದವರನ್ನು ಈ ಸಂಸ್ಥೆಯಲ್ಲಿ ಇಟ್ಟುಕೊಳ್ಳಲಾಗುವದಿಲ್ಲ ಈ ಸಂಸ್ಥೆಯವರಿಗೆ ಅವರವರ ಯೋಗ್ಯತೆಯಂತೆ ತಲಬು ದೊರೆಯುವದರಿಂದ, ಯೋಗ್ಯತಾತಿಕ್ರಮಣಕ್ಕೆ ಇವರಿಗೆ ಆಸ್ಪದವಿರುವದಿಲ್ಲ. ಈ ಸಂಸ್ಥೆಯೊಳಗಿನ ಕುಟುಂಬದವರು ಪಾರಮಾರ್ಥಿಕ ಸೋಗು ಹಾಕಿದರೆ, ಅಥವಾ ವೇದಾಂತದ ಮಾತಾಡಿದರೆ ನಡೆಯುವ ಹಾಗಿಲ್ಲ. ಅವರು ಹೆಂಡಿರು-ಮಕ್ಕಳನ್ನು ಪ್ರೀತಿಯಿಂದ ನಡಿಸಿಕೊಳ್ಳಬೇಕೆಂತಲೂ, ಹೆಂಡಿರು-ಮಕ್ಕಳನ್ನು ಉದ್ಯೋಗಿಗಳನ್ನಾಗಿಯೂ-ವ್ಯವಸ್ಥಿತರನ್ನಾಗಿಯೂ ಮಾಡಬೇಕೆಂತಲೂ, ತಮ್ಮಿಂದ, ಹಾಗು ತಮ್ಮ ಹೆಂಡಿರು-ಮಕ್ಕಳಿಂದ ಪರೋಪಕಾರವಾಗದಿದ್ದರೂ, ಅವರಿಂದ ಪರರಿಗೆ ತ್ರಾಸವಾಗದಂತೆ ನಡಕೊಳ್ಳಬೇಕೆಂತಲೂ ಸಾಧಿಸಿದ ಮಟ್ಟಿಗೆ ಪರೋಪಕಾರ ಮಾಡಬೇಕೆಂತಲೂ, ಡಾಂಭಿಕತನಕ್ಕೆ ಹೋಗಬಾರದೆಂತಲೂ, ಈ ಸಂಸ್ಥೆಯೊಳಗಿನ ಜನರು ಆಸ್ಥೆಯಿಂದ ಎದುರುನೋಡುವರು. ಇದಕ್ಕೆ ತೀರ ವಿರುದ್ಧವಾಗಿ ನಡೆಯುವ ಕೌಟುಂಬಿಕರ ಸಂಗ್ರಹಕ್ಕೆ ಈ ಸಂಸ್ಥೆಯಲ್ಲಿ ಆಸ್ಪದದೊರೆಯಲಿಕ್ಕಿಲ್ಲ. ಹೆಂಡಿರು-ಮಕ್ಕಳನ್ನು ನಿಷ್ಕಾರಣ ಬೇರೆಕಡೆಗೆ ಇಟ್ಟು, ತಾವೊಬ್ಬರೇ ಇರುವವರಿಗೆ ಈ ಸಂಸ್ಥೆಯಲ್ಲಿ ಆಶ್ರಯವು ದೊರೆಯಲಾರದು. ಬಾಲಬ್ರಹ್ಮಚಾರಿಗಳಿಗೆ, ಅಥವಾ

ವಿಧುರರಿಗೆ ನಿಯಮಬದ್ಧರಾಗಿ ನಡೆದರೆ ಮಾತ್ರ ಈ ಸಂಸ್ಥೆಯಲ್ಲಿ ಆಶ್ರಯವು ದೊರೆಯುವದು.

ಇನ್ನು ಎರಡೂ ಸಂಸ್ಥೆಗಳೊಳಗಿನ ಜನರ ಆಚರಣೆಯ ನಿತ್ಯಕ್ರಮವನ್ನು ಕುರಿತು ಆಲೋಚಿಸುವಾ. ಮೊದಲನೆಯ ಸಂಸ್ಥೆಯವರು ತಮ್ಮ ಶಿಥಿಲವಿಚಾರಗಳಿಗನುಸರಿಸಿ ಶಿಥಿಲನಿತ್ಯಕ್ರಮವನ್ನಿಟ್ಟುಕೊಂಡಿರುವರು. ಇವರಲ್ಲಿ ನಿಯಮಗಳಿಗನುಸರಿಸಿ ಹೊತ್ತಿಗೆ ಸರಿಯಾಗಿ ಕೆಲಸಮಾಡುವರು ಕಡಿಮೆ. ಮಧ್ಯಾಹ್ನದ ಊಟವಾದ ಕೂಡಲೆ ತಂಪಿನ ಸ್ಥಳನೋಡಿ ಬಹುತರ ಮಲಗುವರು. ಸಂಜೆಯ ಊಟವಾದ ಕೂಡಲೆ ಮನಸ್ಸೋಕ್ತ ಹರಟೆಕೊಚ್ಚಿ, ನಿದ್ರೆ ಬಂದಮೇಲೆ, ಉದ್ದಕ್ಕೆ ಹಾಸಿದ್ದ ಗಡಾರದ ಮೇಲೆ, ಅಥವಾ ಕಟ್ಟೆನ ಮೇಲೆ ಸಮವುನೋಡಿ ಮಲಗಿಕೊಳ್ಳುವರು. ಮನಸ್ಸಿಗೆ ಬಂದಾಗ ನಾಲ್ಕು ಎಲೆಹಚ್ಚಿದರೆ, ಪಡಿ-ಪಾವು ಜೋಳಬೀಸಿದರೆ, ನಾಲ್ಕು ಕೊಡ ನೀರು ಸೇದಿದರೆ, ಎರಡು ಮುಸುರೆ ತಿಕ್ಕಿದರೆ, ಅಡಿಗೆಯಲ್ಲಿ ಹೋಗಿ ಮನಸ್ಸಿಗೆ ಬಂದಷ್ಟು ಕೆಲಸ ಮಾಡಿದರೆ ಸೇವೆಮಾಡಿದಹಾಗಾಯಿತು; ಅವರಿಗೆ ಎರಡುಹೊತ್ತಿನ ಊಟಕ್ಕೆ ಸಂಪೂರ್ಣ ಹಕ್ಕು ಪ್ರಾಪ್ತವಾಗುವದು. ಒಂದು ಕುಟುಂಬದಲ್ಲಿ ಎಂಟು-ಹತ್ತು ಜನರಿದ್ದರೆ, ಒಬ್ಬಿಬ್ಬರು ಅಲ್ಪಸ್ವಲ್ಪಕೆಲಸಮಾಡಿದರಾಯಿತು. ಎಲ್ಲರ ಊಟಕ್ಕೆ ಹಕ್ಕು ಪ್ರಾಪ್ತವಾಗುವದು!! ಈ ಸಂಸ್ಥೆಯಲ್ಲಿ ಇಂಥವರು ಇಂಥ ಕೆಲಸಮಾಡಬೇಕೆಂಬ ನಿಯಮವಿಲ್ಲ. ಶಾಸ್ತ್ರಿಗಳೆನಿಸಿಕೊಳ್ಳುವವರು ಸಹ ಹೆಂಗಸರೊಡನೆ ಕುಟ್ಟುವದು, ಬೀಸುವದು, ಅಡಿಗೆ, ನೀರು, ಮುಸುರೆ, ಕಸ, ಉಡಸಾರಣೆ, ಉಪಗಾರಣೆ, (ಉಪಕರಣ) ಮಜ್ಜಿಗೆ ಮಾಡುವದು, ಹಾಲಿಗೆ ಹೆಪ್ಪುಹಾಕುವದು ಮುಂತಾದ ಕೆಲಸಗಳನ್ನು ಮಾಡುವರು!

ವಿದ್ಯಾರ್ಥಿ ಸಂಸ್ಥೆಯವರ ಆಚರಣೆಗಳು ಇವುಗಳಿಂದ ಭಿನ್ನವಾಗಿದ್ದರೂ, ಈ ಮೊದಲನೆಯ ಸಂಸ್ಥೆಯ ನೆರಳು ವಿದ್ಯಾರ್ಥಿಸಂಸ್ಥೆಯವರ ಮೇಲೆ ಕೆಲಮಟ್ಟಿಗಾದರೂ ಬೀಳುವದೆಂದು ಹೇಳಬೇಕಾಗುವದು; ಆದರೂ ವಿದ್ಯಾರ್ಥಿಸಂಸ್ಥೆಯವರ ನಡತೆಯು ಹೀಗೆಯೇ ಇರಬೇಕೆಂದು ಸಾಧಾರಣವಾಗಿ ನಿರ್ಬಂಧಿಸಲ್ಪಟ್ಟದ್ದು, ಈ ನಿರ್ಬಂಧವು ದಿನ ದಿನಕ್ಕೆ ಬಿಗಿಯಾಗುತ್ತ ಹೋಗುವದು. ನಿರ್ಬಂಧಕ್ಕೆ ವಿರುದ್ಧವಾಗಿ ನಡೆಯುವವರನ್ನು ಯಾರೇ ಇರಲಿ, ನಿರ್ಭಿಡೆಯಿಂದ ನಿರಾಕರಿಸಲಾಗುವದು. ಈ ಜನರಿಗೆ ಲೋಕಭಯ-ಲೋಕಲಜ್ಜೆಗಳು ಇದ್ದು, "ತನ್ನ ನೆರಳಿಗೆ ತಾನು ಅಂಜಿ ನಡೆಯಬೇಕು ಮಹಾರಾಜಾ" ಎಂಬ ಶ್ರೀ ಗುರುವಿನ ಉಪದೇಶಕ್ಕೆ ಇವರು ಮಹತ್ವಕೊಡುವರು. ಯೋಗ್ಯತೆಯ ತಾರತಮ್ಯದಂತೆ ಅವರವರ ಕೆಲಸಗಳನ್ನು ಅವ

ರವರು ಮಾಡಬೇಕೆಂದು ತೀರ ನಿರ್ಬಂಧವಿದ್ದರೂ, ಹೊತ್ತು ಬಿದ್ದಾಗವಾತ್ರ ಸರ್ವ ತೋಮುಖಿಯಾಗುವಂತೆ ಈ ಸಂಸ್ಥೆಯವರು ಬಿದ್ದ ಕೆಲಸ ಮಾಡಬೇಕೆಂದು ಸಾಧಾರಣ ನಿಯಮವಿರುವದು; ಆದರೆ ಗಂಡಸರು ಹೆಂಗಸರು ಕೂಡಿ ಸರ್ವಥಾ ಕೆಲಸ ಮಾಡಲಾಗದು; ವಿದ್ಯಾರ್ಥಿಗಳಿಗೆ ಸ್ತ್ರೀಯರ ಸಂಬಂಧವು ಕಡಿಮೆಯಾದಷ್ಟು ಹಿತಕರವೆಂದು ಈ ಸಂಸ್ಥೆಯವರು ತಿಳಿಯುವರು. ಈ ಸಂಸ್ಥೆಯೊಳಗಿನ ಜನರು ಬೆಳಗಿನ ನಾಲ್ಕು ಗಂಟೆಗೆ ಏಳಬೇಕೆಂದು ನಿರ್ಬಂಧವಿರುವದು. ಎಲ್ಲರೂ ಬಹುತರ ಪ್ರಾತಃಸ್ನಾನವನ್ನು ಮಾಡಿ, ಸಂಧ್ಯಾವಂದನವನ್ನು ತೀರಿಸಿಕೊಂಡು, ತಮ್ಮ ತಮ್ಮ ಕೆಲಸಗಳಿಗೆ ಹೋಗುವರು. ವಿದ್ಯಾರ್ಥಿಗಳು ಬೆಳಗಿನ ೪ ಗಂಟೆಗೆ ಎದ್ದು ೫ ಗಂಟೆಯವರೆಗೆ ಓದಿ, ೫ ರಿಂದ ೭ ರವರೆಗೆ ಪ್ರಾತರ್ವಿಧಿ, ಸ್ನಾನ, ಸಂಧ್ಯಾವಂದನ, ಅಗ್ನಿಕಾರ್ಯ, ಶ್ರೀ ಗುರುವಿನ ಮುಂದೆ ವೇದಪಾರಾಯಣ, ಸೂರ್ಯನಮಸ್ಕಾರ [ಇವು ೫ರಿಂದ ಮೇಲೆ ಆಗುವವು] ಗೋಸೇವೆ ಇಷ್ಟು ಕೆಲಸ ತೀರಿಸಿಕೊಂಡು, ೭ ಗಂಟೆಗೆ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಹತ್ತುವರು. ಹೀಗೆ ವಿದ್ಯಾರ್ಥಿಗಳೂ-ಅಧ್ಯಾಪಕರೂ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗುವ ಕಾಲದಲ್ಲಿಯೇ, ನೌಕರರು ಛಾಪಖಾನೆಮೊದಲಾದ ಕಡೆಯಲ್ಲಿ ತಮ್ಮ ತಮ್ಮ ಕೆಲಸಗಳನ್ನು ತಪ್ಪದೆ ಮಾಡಹತ್ತುವರು. ಆ ಮೇಲೆ ವಿದ್ಯಾರ್ಥಿಗಳು ಮೂರು ತಾಸು, ಉಳಿದವರು ನಾಲ್ಕು ತಾಸು ಕೆಲಸಮಾಡಿದ ಬಳಿಕ, ಅವರು ಕ್ರಮವಾಗಿ ೧೦॥-೧೧ ಗಂಟೆಗಳಿಗೆ ತಮ್ಮ ತಮ್ಮ ಕೆಲಸಗಳಿಂದ ಮುಕ್ತರಾಗುವರು. ಅಮೇಲೆ ಮಧ್ಯಾಹ್ನ ೧ ಗಂಟೆಯವರೆಗೆ ವಿಶ್ರಾಂತಿ, ಅನುಕೂಲವಾದರೆ ಓದುವದು, ಮಾಧ್ಯಾಹ್ನ ಸಂಧ್ಯೆ ಇವುಗಳನ್ನು ಮಾಡಿಕೊಳ್ಳುವರು. ೧ ಗಂಟೆಗೆ ಊಟವಾದ ಬಳಿಕ ೨ ಗಂಟೆಗೆ ಎಲ್ಲರೂ ಪುನಃ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗುವರು. ಮುಂದೆ ೫ ಗಂಟೆಗೆ ವಿದ್ಯಾರ್ಥಿಗಳ ಕೆಲಸವೂ, ೬ ಗಂಟೆಗೆ ನೌಕರರ ಕೆಲಸಗಳೂ ಮುಗಿಯುವವು. ಅಂದರೆ, ಅಧ್ಯಾಪಕರೂ ವಿದ್ಯಾರ್ಥಿಗಳೂ ದಿನಾಲು ೬ ತಾಸು ಕೆಲಸಮಾಡುವರು; ಇತರರು ೮ ತಾಸು ದುಡಿಯುವರು. ಕೆಲಸದಲ್ಲಿ ಯಾರಮೈಗಳ್ಳತನವನ್ನೂ ಈ ಸಂಸ್ಥೆಯವರು ಸೈರಿಸರು. ವಿದ್ಯಾರ್ಥಿಗಳು ಸಂಜೆಯ ೫ ರಿಂದ ೭ ರವರೆಗೆ ವಿಶ್ರಾಂತಿ, ಸಾಯಂಸಂಧ್ಯಾ, ಸಾಯಂ ಅಗ್ನಿಕಾರ್ಯ, ಊಟ ಇಷ್ಟು ಕೆಲಸಗಳನ್ನು ಮಾಡಿಕೊಂಡು, ಮುಂದೆ ೯ ರವರೆಗೆ ಓದಿ, ರಾತ್ರಿ ೯ ಗಂಟೆಗೆ ಸರಿಯಾಗಿ ತಪ್ಪದೆ ಮಲಗಿಕೊಳ್ಳುವರು.

ಇನ್ನು ಇವೆರಡೂ ಸಂಸ್ಥೆಯವರ ಯೋಗಕ್ಷೇಮದ ಮಾರ್ಗವನ್ನು ಕುರಿತು ಆಲೋಚಿಸುವಾ. ಮೊದಲನೆಯ ಸಂಸ್ಥೆಯವರು ಸತ್ಪುರುಷರ ವೇಷದಿಂದ

ದೇಶದಲ್ಲಿ ಸಂಚರಿಸಿ, ಶ್ರೀ ಗುರುಗಳ ಧರ್ಮವನ್ನೂ, ಶ್ರೀ ಗುರುಸ್ಥಾನದಲ್ಲಿ ನಡೆಯುವ ಅತಿಥಿಸೇವೆ, ದೊಡ್ಡ ದೊಡ್ಡ ಪ್ರಸ್ತಗಳು, ಇವಲ್ಲದೆ ವಿದ್ಯಾದಾನ ಮೊದಲಾದ ಸತ್ಕಾರ್ಯಗಳ ಸುದ್ದಿಯನ್ನೂ ಜನರಿಗೆ ಹೇಳಿ, ಭಿಕ್ಷೆಬೇಡಿಕೊಂಡು ಬರುವದೇ ತಮ್ಮ ಸಂಸ್ಥೆಯ ಯೋಗಕ್ಷೇಮದ ಮಾರ್ಗವೆಂದು ತಿಳಿದಿರುವರು. ೨ನೆಯ ಸಂಸ್ಥೆಯವರು ಭಿಕ್ಷಾವೃತ್ತಿಯನ್ನು ನಿರಾಕರಿಸದಿದ್ದರೂ, ಸತ್ಪುರುಷರ ವೇಷದಿಂದ ಮೋಸಮಾಡಿ ಭಿಕ್ಷೆಬೇಡುವದನ್ನು ಸಂಪೂರ್ಣವಾಗಿ ನಿರಾಕರಿಸುವರು. ಭಿಕ್ಷೆಗಿಂತಲೂ ಭಾಷಾಸೇವಾರೂಪವಾದ ಉದ್ಯೋಗಕ್ಕೆ ಇವರು ಹೆಚ್ಚು ಮಹತ್ವ ಕೊಡುವರು. ತಮ್ಮಲ್ಲಿ ಪ್ರಕಟವಾಗುವ ಸದ್ಬೋಧಚಂದ್ರಿಕಾ ಮಾಸಿಕ ಪುಸ್ತಕವನ್ನೂ, ಬೇರೆ ಪುಸ್ತಕಗಳನ್ನೂ, ಓದಲಿಕ್ಕೆ ಬಂದ ಕನ್ನಡಿಗರೆಲ್ಲರೂ ಉದಾರ ಮನಸ್ಸಿನಿಂದ ತಕ್ಕೊಂಡರೆ, ಅದರ ಉತ್ಪನ್ನದಿಂದಲೂ ಭಾಷಾಶಾಲೆಯಲ್ಲಿ ನಡೆಯುವ ಬೇರೆ ಕೆಲಸಗಳ ಉತ್ಪನ್ನದಿಂದಲೂ, ದೊಡ್ಡ ಜನರು ಕೊಟ್ಟ ವರ್ಷಾಶನಗಳ ಸಹಾಯದಿಂದಲೂ ತಮ್ಮ ಸಂಸ್ಥೆಯನ್ನು ಒಹುಮಟ್ಟಿಗೆ ಸಾಗಿಸಬಹುದೆಂಬ ನಂಬಿಗೆಯು ಇವರಿಗಿರುತ್ತದೆ ಮೊದಲನೆಯ ಸಂಸ್ಥೆಯವರ ಜಮಾಖರ್ಚಿನ ಬಗ್ಗೆ ಲೆಖ್ಖವಿಲ್ಲ; ಎರಡನೆಯ ಸಂಸ್ಥೆಯವರಲ್ಲಿ ಜಮಾಖರ್ಚಿನ ಬಗ್ಗೆ ಲೆಖ್ಖವಿದ್ದು ಅವರು ಸಮಾಜಕ್ಕೆ ಒಂದು ಬಗೆಯಾಗಿ ತಾವು ಜವಾಬುದಾರರಿರುವೆವೆಂದು ತಿಳಿದು ಅಂಜಿ ನಡೆಯುತ್ತಾರೆ. ಮೊದಲನೆಯ ಸಂಸ್ಥೆಯವರು ಪಕ್ವಾನ್ನದ ದೊಡ್ಡ ದೊಡ್ಡ ಪ್ರಸ್ತಮಾಡುವದೇ ಬ್ರಾಹ್ಮಣಸೇವೆಯೆಂದು ತಿಳಿದು, ಅದಕ್ಕಾಗಿ ವಿಶೇಷ ಹಣವೆಚ್ಚಮಾಡಿ, ದಿನದ ಊಟವು ಕದನ್ನವಾದರೂ ಚಿಂತೆಯಿಲ್ಲೆಂದು ದಿನದ ಖರ್ಚಿಗೆ ಕೈ ಬಿಗಿಹಿಡಿಯುವರು; ಆದರೆ ಎರಡನೆಯ ಸಂಸ್ಥೆಯವರು, ಎಲ್ಲವೂ ಬ್ರಾಹ್ಮಣಸೇವೆಯೆಂತಲೇ ಭಾವಿಸಿ, ದಿನದ ಊಟವು ಕದನ್ನವಾದರೆ ವಿದ್ಯಾರ್ಥಿಗಳಿಗೂ, ಅತಿಥಿಗಳಿಗೂ, ತಮಗೂ ಹಿತವಾಗದೆಂದು ತಿಳಿದು, ದಿನದ ಊಟದ ವೆಚ್ಚಕ್ಕಾಗಿ ಕೈ ಬಿಗಿಹಿಡಿದು ವೆಚ್ಚಮಾಡದೆ, ಪ್ರಸ್ತ-ಪ್ರಯೋಜನಗಳ ವಿಲ್ಲಿ ಯೋಗ್ಯರೀತಿಯಿಂದ ಕೈ ಬಿಗಿಹಿಡಿಯಲಿಕ್ಕೆ ಯತ್ನಿಸಬೇಕೆನ್ನುವರು.

ಈ ಮೇರೆಗೆ ಮೇಲೆ ವರ್ಣಿಸಿದ ಎರಡೂ ಸಂಸ್ಥೆಗಳ ವಿಚಾರ-ಆಚಾರಾದಿಗಳ ಪರ್ಯಾಲೋಚನೆ ಮಾಡಿದರೆ, ಮೊದಲನೆಯ ಸಂಸ್ಥೆಯಲ್ಲಿ ಸಿದ್ಧರಸಂಗ್ರಹವೂ, ಎರಡನೆಯ ಸಂಸ್ಥೆಯಲ್ಲಿ ಸಾಧಕರ ಸಂಗ್ರಹವೂ ಆಗಿರುತ್ತದೆಂದು ತಿಳಿಯಬಹುದು; ಅಂದಬಳಿಕ ಸಿದ್ಧರಿಗೂ, ಸಾಧಕರಿಗೂ ಹ್ಯಾಗೆ ಕೂಡಿ ನಡೆಯಬೇಕು? ವಿದ್ಯಾರ್ಥಿಸಂಸ್ಥಾರೂಪವಾದ ಈ ಸಾಧಕರ ಸಂಸ್ಥೆಯು, ಮೊದಲನೆಯ ಸಂಸ್ಥೆಯೊಳಗಿನ ಸಿದ್ಧಪುರುಷರ ಸಹಾಯದಿಂದಲೇ ಸ್ಥಾಪಿಸಲ್ಪಟ್ಟಿದ್ದರೂ, ಶ್ರೀ

ಶೇಷಾಚಲಸದ್ಗುರುವು ತನ್ನ ಕೃಪಾದೃಷ್ಟಿಯಿಂದ "ನೀವು ಸಾಧಕರಾದ್ದರಿಂದ ಸಿದ್ಧರ ನೆರಳಿಗೆ ಹೋಗಬೇಡಿರಿ" ಎಂದು ಸಂಜ್ಞೆಮಾಡಿ ತಿಳಿಸಿದ್ದರಿಂದ, ಈ ಎರಡನೇ ಸಂಸ್ಥೆಯು ಮೊದಲನೆಯ ಸಂಸ್ಥೆಯಿಂದ ಮೆಲ್ಲಮೆಲ್ಲನೆ ಹೊರಗೆ ಜಾರಿಬರಹತ್ತಿ, ಕಡೆಗೆ ಶ್ರೀ ಗುರುವು ಇರುವಾಗಲೇ ತನ್ನ ಸ್ವತಂತ್ರ ಅಸ್ತಿತ್ವವನ್ನು ಕಾಯ್ದುಕೊಂಡು, ಮಧ್ಯಾಹ್ನದ ಒಪ್ಪತ್ತಿನ ಊಟದ ಮಟ್ಟಿಗೆ ಮಾತ್ರ ಮೊದಲನೆಯ ಸಂಸ್ಥೆಯ ಸಂಬಂಧವನ್ನು ಇಟ್ಟುಕೊಂಡಿತು; ಹೀಗಿದ್ದು ಶ್ರೀ ಶೇಷಾಚಲಸದ್ಗುರುವು ಯಾವ ಕಾರಣದಿಂದಲೋ ಈ ಸಿದ್ಧ-ಸಾಧಕ ಸಂಸ್ಥೆಗಳೆರಡನ್ನು ಕೂಡಿಸಿ ಆನಂದಪಡಬೇಕೆಂದು ಮಾಡಿದರು; ಆದರೆ ಯಾವ ಸಂಸ್ಥೆಯವರ ಅವಿವೇಕತನದಿಂದಲೋ ಈ ಸಂಯೋಗವು ಒದಗಿ ಬರಲಿಲ್ಲ! ಈಗ ಶ್ರೀ ಗುರುವು ದೇಹವಿಟ್ಟಿರುವದರಿಂದ, ಆತನು ಹೇಳಿದಂತೆ ಇನ್ನು ಮೇಲೆ ಆನಂದವನಕ್ಕೆ ಜಗತ್ತೇ ಗುರುಸರೂಪವಾಗಿರಲು, ಸಮಾಜದವರು ಸರ್ಭಿಡೆಯಿಂದ ವ್ಯವಸ್ಥೆ ಮಾಡಿ, ಈ ಸಂಸ್ಥೆಗಳ ಏಕೀಕರಣವನ್ನು ಮಾಡಿ ಶ್ರೀ ಗುರುವಿನ ಪರೋಪಕಾರದ ಸಂಸ್ಥೆಯನ್ನು ಊರ್ಜಿತಸ್ಥಿತಿಗೆ ಒಯ್ಯಬೇಕೆಂದು ಚಂದ್ರಿಕೆಯು ಬೇಡಿಕೊಳ್ಳುವಳು! ಶ್ರೀ ಚಿದಂಬರಮೂರ್ತಿಗಳ ಕುಟುಂಬರೂಪವಾದ ಈ ಸಂಸ್ಥೆಯಲ್ಲಿಯ ಅಶನಾರ್ಥಿಗಳ ಸಂಖ್ಯೆಯು ಆದಷ್ಟು ಕರಗಿ, ವಿದ್ಯಾರ್ಥಿಗಳ ಸಂಖ್ಯೆಯು ಆದಷ್ಟು ಹೆಚ್ಚಿ, ಆ ಕುಟುಂಬಕ್ಕೆ ವೈದಿಕಮಹಾವಿದ್ಯಾಪೀಠದ ಸ್ವರೂಪವು ಪ್ರಾಪ್ತವಾಗಲೆಂದು ಚಂದ್ರಿಕೆಯು ಮನಮುಟ್ಟಿ ಇಚ್ಛಿಸುವಳು! ಸದ್ಯಕ್ಕೆ ಪಾಠಶಾಲೆಯಲ್ಲಿ ಚತುಶ್ಶಾಖೆಯ ೭೫ ಜನ ವಿದ್ಯಾರ್ಥಿಗಳೂ, ೮ ಜನ ಅಧ್ಯಾಪಕರೂ, ೧೫।೨೦ ಜನ ನೌಕರರೂ ಇರುವರು. ಈಗ ಚಂದ್ರಿಕೆಯು ತನ್ನ ಕರ್ತವ್ಯವೆಂದು ತಿಳಿದು, ಮುಂದೆ ಒಂದಾಗಿ ನಡೆಯಬೇಕಾಗಿರುವ ಆನಂದವನದ ಸಂಸ್ಥೆಯನ್ನು ಆನಂದವನಸ್ಥರು ಹ್ಯಾಗೆ ನಡಿಸಬೇಕೆಂಬದನ್ನು ಕುರಿತು ಮುಂದಿನ ಉಪಸಂಹಾರದಲ್ಲಿ ಹೇಳಿ, ಬಹಳವಾಗಿ ಬೆಳೆದ ಈ ನಿರ್ಯಾಣಮಹೋತ್ಸವ ವರ್ಣನವನ್ನು ಮುಗಿಸುವಳು.

## ಉಪಸಂಹಾರ.

कणशःकणशश्चैव विद्यामर्थंचसाधयेत् ।
ग्रहीत इव केशेषु मृत्युना धर्ममाचरेत् ॥

ಶ್ರೀ ಶೇಷಾಚಲಸದ್ಗುರೂತ್ತಮನು ಸಂತರ ಶ್ರೇಷ್ಠವಾದ ಧರ್ಮದಿಂದ

ಅವತರಿಸಿ, ಲೋಕಕಲ್ಯಾಣಾರ್ಥವಾಗಿ ಯಾಚನಾರೂಪದಿಂದ ಜನರ ಪಾಪವನ್ನು ಶೋಷಿಸಿ, ತನ್ನ ಸಂಭಬೋಧದಿಂದ ಮುಂದಮತಿಗಳಲ್ಲಿಯೂ ಧರ್ಮಜಾಗ್ರತಿಯನ್ನುಂಟುಮಾಡಿ, ತನ್ನ ಕೀರ್ತಿರೂಪವಾದ ಅತಿಥಿಸೇವೆ-ವಿದ್ಯಾದಾನಗಳೆಂಬ ದ್ವಿಮುಖ-ಧ್ವಜವನ್ನು ಆನಂದವನದಲ್ಲಿ ನಿಲ್ಲಿಸಿ, ಲೋಕದ ದುಷ್ಕರ್ಮರೂಪಪ್ರಾರಬ್ಧವನ್ನು ಸಾಮಾನ್ಯಜನರಂತೆ ತಾನು ವ್ಯಾಧಿಗ್ರಸ್ತವಾದ ನೆವದಿಂದ ಭೋಗಿಸಿ, ಸೃಷ್ಟಿಕ್ರಮದಂತೆ ಕಲಿಕಾಲವು ಒದಗಲು, ಪರಂಧಾಮಕ್ಕೆ ತೆರಳಿದನೆಂದು ವಾಚಕರು ಅರಿತಿರುವರಷ್ಟೆ? ಆದರೆ ಶ್ರೀ ಸದ್ಗುರುವು, ತನ್ನ ರಕ್ತಾಂಶವೂ, ವ್ಯಕ್ತ್ಯಂಶವೂ ಆದ ಶ್ರೀ ಚಿದಂಬರಮೂರ್ತಿಯೆಂಬ ಸತ್ಪುರುಷನ ಹೃದಯಸನಾಗಿ, ಆನಂದವನದಲ್ಲಿ ಮೊದಲಿಗಿಂತ ಹೆಚ್ಚು ಉಜ್ವಲವಾಗಿ ಪರೋಪಕಾರದ ಕಾರ್ಯಗಳನ್ನು ನಡಿಸುವ ವಾಸನೆಯನ್ನು ತಾಳಿದ್ದರಿಂದ, ಆನಂದವನದ ಪರೋಪಕಾರದ ಸಂಸ್ಥಾರೂಪ ಪುರುಷನ ಅಸ್ತಿತ್ವವು ಪುನಃ ಜಾಗ್ರತವಾದಂತಾಯಿತು! ಇನ್ನು ಮೇಲೆ ವಿದ್ಯಾರ್ಥಿಗಳೆಂಬ ಪಂಚಪ್ರಾಣಗಳು ಆ ಪುರುಷನ ದೇಹದಲ್ಲಿ ಪ್ರವೇಶಿಸಿ, ಶಿಷ್ಯರೂಪವಾದ ಆ ಪುರುಷನ ಇಂದ್ರಿಯಗಳು ತಮ್ಮ ತಮ್ಮ ವ್ಯಾಪಾರಗಳನ್ನು ದಕ್ಷತೆಯಿಂದಲೂ ನಿಷ್ಠೆಯಿಂದಲೂ ನಡಿಸಹತ್ತಿದವೆಂದರೆ, ಆನಂದವನದ ತೇಜಸ್ಸು ತೀರ ಹೆಚ್ಚುತ್ತ ಹೋಗುವದರಲ್ಲಿ ಸಂಶಯವಿಲ್ಲ. ಹೀಗೆ ಆನಂದವನದ ತೇಜಸ್ಸು ಹೆಚ್ಚುವ ಪ್ರಸಂಗದಲ್ಲಿ ತಮ್ಮಲ್ಲಿ ಹುಳುಕು ಉತ್ಪನ್ನವಾಗದಂತೆ ಆನಂದವನಸ್ಥರು ಹ್ಯಾಗೆ ನಡಕೊಳ್ಳಬೇಕೆಂಬದನ್ನು ಕುರಿತು ಈ ಪ್ರಕರಣದಲ್ಲಿ ವಿಚಾರಿಸಬೇಕಾಗಿದೆ. ಹಿಂದಿನ ಪ್ರಕರಣದಲ್ಲಿ ಆನಂದವನದ ಎರಡೂ ಸಂಸ್ಥೆಗಳೊಳಗಿನ ಜನರ ಆಚಾರವಿಚಾರಗಳ ಭಿನ್ನತ್ವವನ್ನು ಕುರಿತು ಹೇಳಿದ್ದು ವಾಚಕರ ಸ್ಮರಣದಲ್ಲಿರುವದಷ್ಟೆ? ಆವೆರಡು ಸಂಸ್ಥೆಗಳು ಒಂದಾಗಿ ಆನಂದವನವು ಹೆಚ್ಚು ಲೋಕಾದರಣೀಯವಾಗಬೇಕಾದರೆ, ಎರಡೂ ಸಂಸ್ಥೆಯವರು ಯಾವ ಸಾಮಾನ್ಯನಿಯಮಗಳಿಗೆ ಒಳಪಡಬೇಕೆಂಬದನ್ನು ಮುಖ್ಯವಾಗಿ ಈಗ ಆಲೋಚಿಸಬೇಕಾಗಿದೆ.

ಆನಂದವನದ ಸಂಬಂಧವು ಬಹು ವ್ಯಾಪಕವಾದದ್ದು, ಅದರ ಸಂಬಂಧವು ವೈದಿಕ ಧರ್ಮಕ್ಕೇ ಇರುತ್ತದೆ; ಆದ್ದರಿಂದ ಹೆಂಡಿರು-ಮಕ್ಕಳು, ಹಾಗು ಮನೆ-ಮಾರುಗಳ ಮೋಹದಲ್ಲಿ ಸಿಕ್ಕ ಸಾಂಸಾರಿಕರು ಆನಂದವನವೆಂಬ ಭಿಕ್ಷುಕ ಸಂಸ್ಥೆಯ ಬಾಹ್ಯಶೋಭೆಗೆ ಮರುಳಾಗಿ, ಅದರ ವ್ಯವಹಾರದಲ್ಲಿ ಸ್ವಾರ್ಥಬುದ್ಧಿಯಿಂದ ಕೈಹಾಕಿದರೆ, ಅವರ ಕೈ ಅಷ್ಟೇ ಅಲ್ಲ, ಅವರ ವಂಶವು ಸುಟ್ಟುಸೂರೆಗೊಂಡೀತೆಂಬ ಎಚ್ಚರವನ್ನು ಆನಂದವನದವರೂ, ಹೊರಗಿನವರೂ ಲಕ್ಷ್ಯದಲ್ಲಿಡಬೇಕೆಂದು ಚಂದ್ರಿ

ಕೆಯು ಬುದ್ಧಿವಾದ ಹೇಳುವಳು! ನೋಡಲಿಕ್ಕೆ ಆನಂದವನದ ಇವರೂರತ್ನಗಳು ರಮ್ಯವಾಗಿ ಕಂಡಾವು, ಪ್ರೇಮಲಾಭದಾಯಕವಾಗಿ ತೋರೀತು, ಪಾತ್ರೆ-ಪರಡಿಗೆ, ಕಾಳು-ಕಡಿ ಮೊದಲಾದ ಯಾಚನೆಯಿಂದ ಸಂಗ್ರಹೀತವಾಗಿದ್ದ ವಸ್ತುಗಳು ಅನಾಯಾಸಸಿಗುವಂತೆ ತೋರಬಹುದು; ಆದರೆ ಇವುಗಳ ಬೆನ್ನಹತ್ತಿ ಹಿಡಿಯುವ ಜನರು, ಅವು ತಮ್ಮ ಸ್ವಾಹಾಕಾರಕ್ಕಾಗಿ ನಿಂತುಕೊಂಡಿದ್ದ ಪ್ರಜ್ವಲಿತ ಅಗ್ನಿಕುಂಡಗಳೆಂದು ತಿಳಿದಿರಬೇಕು. ಒಟ್ಟಿಗೆ, ಆನಂದವನದ ಸೊತ್ತಿನ ಆಸೆಯು ನಾಶಕ ವಾದದ್ದೆಂದು ಚಂದ್ರಿಕೆಯು ಸಾರಿ ಸಾರಿ ಹೇಳುವಳು. “ಮಹಾರಾಜಾ, ಸಾಂಸಾರಿಕರಿಗೆ ಇದು ದಕ್ಕತಕ್ಕದ್ದಲ್ಲ” ಎಂದು ಶ್ರೀ ಗುರುವು ಪ್ರತ್ಯಕ್ಷ ಜ್ಯೋತಿಯ ಮಗನನ್ನುದ್ದೇಶಿಸಿ ಹೇಳಿದ್ದರ ರಹಸ್ಯವನ್ನು ವಾಚಕರು ವಿಚಾರಿಸತಕ್ಕದ್ದು. ನಿರ್ಮೋಹಸ್ಥಿತಿಯಲ್ಲಿರುವ ಶ್ರೀ ಗುರುವು ಮತ್ತು ಲೋಕ, ಇವರಿಬ್ಬರ ಮಧ್ಯಸ್ಥರಾಗಿ ಆನಂದವನದವರು ಧರ್ಮಪ್ರಸಾರದಂಥ ಲೋಕಹಿತದ ಕಾರ್ಯ ಮಾಡಬೇಕಾಗಿರುವದರಿಂದ, ಆನಂದವನದವರ ಆಚರಣೆಯು ಎಷ್ಟು ಪರಿಶುದ್ಧವಾಗಿರಬೇಕಾಗುತ್ತೆಂಬದನ್ನು ವಾಚಕರು ನಿರ್ಭಿಡೆಯಿಂದ ವಿಚಾರಿಸತಕ್ಕದ್ದು. ಆನಂದವನದವರು, ವಿಶೇಷವಾಗಿ ಶಿಷ್ಯರೆನಿಸಿಕೊಳ್ಳುವವರು, ನಿಸ್ಪೃಹರೂ, ಬುರಿಮೋಸಗಳಿಗೆ ಆಸ್ಪದಕೊಡದವರೂ, ತಮ್ಮ ಗುಣದೋಷಗಳನ್ನು ಅವಶ್ಯಪ್ರಸಂಗದಲ್ಲಿಯಾದರೂ ಜಗತ್ತಿನ ಮುಂದೆ ಇಡಲಿಕ್ಕೆ ಹೆದರದವರೂ, ಚಂದ್ರಿಕೆಯಂಥ ಸ್ಪಷ್ಟವಾದಿಗಳು ಆ ಗುಣದೋಷಗಳನ್ನು ಬೈಲಿಗಿಟ್ಟರೆ, ವಿಕಲ್ಪವೆಣಿಸದೆ, ತಮ್ಮ ದೋಷಗಳನ್ನು ತಿದ್ದಿಕೊಳ್ಳುವವರೂ, ದಿನದಿನಕ್ಕೆ ಧರ್ಮಮಾರ್ಗದಲ್ಲಿ ಭರದಿಂದ ಹೆಜ್ಜೆಗಳನ್ನಿಡುವವರೂ, ಜಗತ್ತೇ ತಮ್ಮನ್ನು ತಿದ್ದಲಿಕ್ಕೆ ಗುರುವೆಂದು ಭಾವಿಸುವವರೂ, ಗುಣಪಕ್ಷಪಾತಿಗಳೂ, ಅಂಥಪ್ರಸಂಗ ಒದಗಿದರೆ ಸ್ವೀಕೃತಕಾರ್ಯಕ್ಕಾಗಿ ದೇಹವನ್ನಾದರೂ ಅರ್ಪಿಸುವವರೂ ಆಗದಿದ್ದರೆ, ಆದುರಭಿಮಾನಿಗಳನ್ನು ಯಾರು ಕೇಳುವರು? ಮೇಲಿನ ಗುಣಗಳನ್ನು ಸಂಪಾದಿಸಿ ಪರಿಪುಷ್ಟರಾಗದಿದ್ದರೆ, ಸದ್ಗುರು, ಮತ್ತು ಲೋಕ, ಇವರಿಬ್ಬರ ಮಧ್ಯಸ್ಥಿಮಾಡುವಾಗ, ಆ ಶಿಷ್ಯರು ನಡುವೆ ಸಿಕ್ಕು ಜಿಬ್ಬಿಯಾದಾರು! ಮಧ್ಯಸ್ಥರಲ್ಲಿ ಘನವಾದ ಯೋಗ್ಯತೆಯಿರಬೇಕಾಗುತ್ತದೆ. ಕೌರವ–ಪಾಂಡವರ ಸಂಧಾನಕ್ಕಾಗಿ ಶ್ರೀ ಕೃಷ್ಣನು ಮಧ್ಯಸ್ಥನಾಗಿ ಹೋಗದೆ, ಮತ್ತೆ ಯಾವ ದುರ್ಬಲನಾದರೂ ಮಧ್ಯಸ್ಥನಾಗಿ ಹೋಗಿದ್ದರೆ, ದುರ್ಯೋಧನನಿಂದ ಹೆಡಮುರಿಗೆ ಕಟ್ಟಿಸಿಕೊಂಡು ಕಾರಾಗೃಹ ವಾಸಮಾಡಬೇಕಾಗುತ್ತಿತ್ತು! ಭಗವಂತನಾದ್ದರಿಂದಲೇ, ವಿಶ್ವರೂಪ ತೋರಿಸಿ, ಪಾರಾಗಿ ಬಂದು “सत्यमेवजयते” ಎಂಬ ಸಿದ್ಧಾಂತವನ್ನು ಸ್ಥಾಪಿಸಿ ತೋರಿಸಿದನು; ಆದ್ದರಿಂದ

ಆನಂದವನಸ್ಥರೇ, ಮುಖ್ಯವಾಗಿ ಶಿಷ್ಯರೆನಿಸಿಕೊಳ್ಳುವವರೇ, ಅದರಲ್ಲಿಯೂ ಶ್ರೀ ಸದ್ಗುರುವಿನ ಮುಖ್ಯ ಶಿಷ್ಯರೆನಿಸಿಕೊಳ್ಳುವವರೇ, ಬಹು ಎಚ್ಚರಿಕೆ. ನಿಮ್ಮ ವ್ಯವಹಾರವು ಲೋಕದ ಸಂಗಡ, ಅರ್ಥಾತ್ ಸದ್ಗುರುವಿನ ಸಂಗಡ ಇರುತ್ತದೆ; ಮನೆಯೊಳಗಿನ ಹೆಂಡಿರು-ಮಕ್ಕಳ ಸಂಗಡ ಇರುವದಿಲ್ಲ! ಚಂದ್ರಿಕೆಯು ಈ ಸ್ಫೂರ್ತಿದರ್ಶಕ ಉಕ್ತಿಗಳನ್ನು ದುರ್ಲಕ್ಷಿಸಿದರೆ, ಶ್ರೀ ಸದ್ಗುರುವು ಕಂಠರವದಿಂದ ಹೇಳಿದಂತೆ ನಿಮಗೆ ಕೋರಡೆಯ ಪೆಟ್ಟುಗಳು ಬಿದ್ದಾವು!! ಶ್ರೀ ಗುರುಗಳ ಪೆಟ್ಟುಗಳ ಪ್ರಖರತೆಯನ್ನು, ಗುರುಪುತ್ರಿಯಾದ ಚಂದ್ರಿಕೆಯು ಈ ಪೆಟ್ಟುಗಳಿಂದ ತರ್ಕಿಸಿ, ಜಾಗರೂಕರಾಗಿರಿ.

ಇಂಥ ಪವಿತ್ರ ಜನರ ಸಮುಚ್ಚಯವು ಆನಂದವನದಲ್ಲಿ ಆಗಬೇಕಾಗಿರುವದರಿಂದ, ಆನಂದವನದಲ್ಲಿ ಜನರನ್ನು ಸೇರಿಸಿಕೊಳ್ಳುವಾಗ ಬಹಳ ಎಚ್ಚರಪಡಬೇಕಾಗುವದೆಂದು ಚಂದ್ರಿಕೆಯು ಹೇಳಲವಶ್ಯವಿಲ್ಲ. ಆನಂದವನದ ಸಂಸ್ಥೆಯು ಲೋಕೋದ್ಧಾರಕ್ಕಾಗಿ ಅವತರಿಸಿದ ಶ್ರೀ ಶೇಷಾಚಲಸದ್ಗುರುವಿನ ಕುಟುಂಬಕ್ಕೆ ಸಂಬಂಧಪಟ್ಟದ್ದರಿಂದ, ಆ ಕುಟುಂಬವು ಆನಂದವನದಲ್ಲಿ ಮುಖ್ಯವಾದದ್ದೆಂತಲೂ, ಅಂಥ ಸದ್ವರ್ತನಯುಕ್ತ ಕುಟುಂಬವನ್ನು ಹೋಲುವ ಹಲವು ಕುಟುಂಬಗಳನ್ನು ಸಮಾಜದಲ್ಲಿ ಉಂಟುಮಾಡುವದು ಆನಂದವನದ ಸಂಸ್ಥೆಯ ಕರ್ತವ್ಯವೆಂತಲೂ ತಿಳಿದು, ಆನಂದವನದಲ್ಲಿ ಲೋಕಸಂಗ್ರಹ ಮಾಡಬೇಕಾಗುವದು. ಆದ್ದರಿಂದ ಮುಂದೆ ಹಲವು ಕುಟುಂಬಗಳ ಯಜಮಾನರಾಗುವ ವಿದ್ಯಾರ್ಥಿಗಳನ್ನೂ, ಸತ್ಕಾರ್ಯಮಾಡಿ ತಮ್ಮ ಕುಟುಂಬಗಳನ್ನು ಯೋಗ್ಯರೀತಿಯಿಂದ ಸಾಗಿಸಿಕೊಳ್ಳಬಿಚ್ಛಿಸುವ ಕುಟುಂಬವತ್ಸಲ ಸೇವಕರನ್ನೂ, ಪರೋಪಕಾರಮಾಡಿ ದೇಹಸಾರ್ಥಕಮಾಡಿಕೊಳ್ಳಬೇಕೆನ್ನುವ ಯೋಗ್ಯರಾದ ಏಕಾಕಿಪುರುಷರನ್ನೂ, ಯೋಗ್ಯರೆಂದು ಕಂಡರೆ, ಬಹು ಎಚ್ಚರದಿಂದ ಸ್ತ್ರೀಯರನ್ನೂ ಆನಂದವನದಲ್ಲಿ ಸಂಗ್ರಹಿಸಬೇಕಾಗುವದು. ಆನಂದವನವು ಮುಖ್ಯವಾಗಿ ಗೃಹಸ್ಥಾಶ್ರಮಿಗಳ ವಸತಿಸ್ಥಾನವಾದದ್ದರಿಂದ, "आतिथि देवो भव" ಎಂಬ ಉಪನಿಷದ್ವಾಕ್ಯದಂತೆ, ಅತಿಥಿಗಳನ್ನು ದೇವರೆಂದು ತಿಳಿಯಬೇಕಾಗಿರಲು, ಅವರನ್ನು ಆಗತಜನರಲ್ಲಿ ಹಿಡಿಯಬೇಕಲ್ಲದೆ, ಸಂಗೃಹೀತಜನರಲ್ಲಿ ಹಿಡಿಯತಕ್ಕದ್ದಲ್ಲ. ಹ್ಯಾಗಿದ್ದರೂ ಒಟ್ಟಿಗೆ ಆನಂದವನದಲ್ಲಿ ಶ್ರೀಗುರುವಿನ ಕುಟುಂಬ, ಅತಿಥಿಗಳು, ವಿದ್ಯಾರ್ಥಿಗಳು, ಸೇವಕರ ಕುಟುಂಬಗಳು, ಬಿಡಿಸೇವಕರು ಇಷ್ಟು ಜನರ ಸಂಗ್ರಹವಾಗತಕ್ಕದ್ದಾದ್ದರಿಂದ ಅವರ ವಾಸಸ್ಥಳವನ್ನು ಕುರಿತು ಮೊದಲು ವಿಚಾರಮಾಡತಕ್ಕದ್ದು. ಸದ್ಯಕ್ಕೆ ವಾಸಸ್ಥಳದ

ಯೋಜನೆಯು ತಕ್ಕಂತೆ ಇರುವದಿಲ್ಲ.

ಶ್ರೀ ಗುರುವಿನ ಕುಟುಂಬದವರ ವಾಸಸ್ಥಳ—ಇವರ ಗೌರವಕ್ಕನುಸರಿಸಿ ಇವರ ವಾಸಕ್ಕೆ ಸ್ವತಂತ್ರಸ್ಥಳವಿರಬೇಕು. ಆನಂದವನ ಸಂಸ್ಥೆಯ ಸಾರ್ವತ್ರಿಕ ಭೋಜನಗೃಹವೇ ಇವರ ಭೋಜನಗೃಹವು, ಸಾರ್ವತ್ರಿಕ ಸ್ನಾನಗೃಹವೇ ಇವರ ಸ್ನಾನಗೃಹವು, ಸಾರ್ವತ್ರಿಕ ಕೋಠಿಯೇ ಇವರ ಕೋಠಿಯು ಆಗಿದ್ದರೂ, ಪ್ರಸಂಗವಿಶೇಷದಲ್ಲಿ ಸ್ನಾನ-ಭೋಜನಗಳ ವ್ಯವಸ್ಥೆಯನ್ನು ಅವರ ಮಟ್ಟಿಗೆ ಸ್ವತಂತ್ರವಾಗಿ ಮಾಡಿಕೊಳ್ಳಲಿಕ್ಕೆ ಅನುಕೂಲವಾಗುವಂತೆ, ಇವರ ಮನೆಯ ರಚನೆಯು ಇರಬೇಕು. ಸದ್ಯಕ್ಕೆ ಈಗಿರುವ ಸಿಂಹಾಸನಮನೆಗೆ ಹೊಂದಿ ಇವರ ವಾಸಸ್ಥಳವನ್ನು ಸಿದ್ಧಮಾಡಿಕೊಡಬಹುದು.

ಅತಿಥಿಗಳ ವಾಸಸ್ಥಳ—ಇವರ ಸಲುವಾಗಿ ಕೆಲಮಟ್ಟಿಗಾದರೂ ಮುಚ್ಚುಮರೆಗೆ ಅನುಕೂಲವಾಗುವಂತೆ ಸ್ವತಂತ್ರ ಸ್ಥಳವಿರಬೇಕು; ಅಂದರೆ ತಮ್ಮ ಸಾಮಾನು ಮೊದಲಾದವನ್ನು ಕಾಯ್ದುಕೊಳ್ಳಲಿಕ್ಕೂ, ಸಂಕೋಚವಿಲ್ಲದೆ ಮೈಚಳಿಬಿಟ್ಟು ವಿಶ್ರಾಂತಿಯನ್ನು ಹೊಂದಲಿಕ್ಕೂ ಇವರಿಗೆ ಅನುಕೂಲವಾಗುವದು. ಇವರು ಆನಂದವನದ ಸಾರ್ವತ್ರಿಕವಾದ ಸ್ನಾನಗೃಹದಲ್ಲಿ ಸ್ನಾನವನ್ನೂ, ಭೋಜನಗೃಹದಲ್ಲಿ ಭೋಜನವನ್ನೂ ಮಾಡತಕ್ಕದ್ದು. ಭೋಜನಮಾಡದವರು ತಮಗೆ ಬೇಕಾದ ಸಾಮಾನುಗಳನ್ನು ಸಾರ್ವತ್ರಿಕ ಕೋಠಿಯಲ್ಲಿ ಇಸಕೊಂಡು ಬೇರೆ ಅಡಿಗೆ ಮಾಡಿಕೊಳ್ಳಬಹುದು. ಸದ್ಯಕ್ಕೆ ಇವರಿಗೆ ಇರಲಿಕ್ಕೆ ಮಹಾದ್ವಾರದ ಎಡಬಲಭಾಗಗಳಲ್ಲಿಯ ಕಟ್ಟೆಗಳಮೇಲೆ ಛಾವಣಿಹಾಕಿಸಿ ಅನುಕೂಲಮಾಡಿಕೊಡಬಹುದು. ಅತಿಥಿಗಳನ್ನು ಮೊದಲನೆಯ ದಿವಸ ದೇವರೆಂತಲೂ, ಎರಡನೆಯ ದಿವಸ ಬೀಗರೆಂತಲೂ ಸತ್ಕರಿಸಿ, ಮೂರನೆಯ ದಿವಸ ಅವರನ್ನು ಮನೆಯವರೆಂದು ತಿಳಿದು, ಲೋಕಸೇವೆಯ ಕೆಲಸಕ್ಕೆ ಯೋಗ್ಯತೆನೋಡಿ ಹಚ್ಚಬಹುದು. ಮುಖ್ಯಮಾತು ನಿರುದ್ಯೋಗಕ್ಕೆ ಆನಂದವನದಲ್ಲಿ ಆಸ್ಪದದೊರೆಯಲಾಗದು.

ವಿದ್ಯಾರ್ಥಿಗಳ ವಾಸಸ್ಥಳ—ಇವರಿಗಾಗಿ ಸ್ಥಳಗೊತ್ತುಮಾಡಿಕೊಡುವದು ಬಹು ಮಹತ್ವದ ಸಂಗತಿಯು. ಇವರು ಕೌಟುಂಬಿಕರಿಂದ ತೀರ ವಿಂಗಡವಾಗಿರಬೇಕು. ಕುಟುಂಬದವರ ತ್ರಾಸವು ಇವರಿಗೂ, ಇವರ ತ್ರಾಸವು ಕುಟುಂಬದವರಿಗೂ ಆಗಬಾರದು. ಇವರಿಗೆ ನಿಯಮಿತ ಜನರಿಗೊಂದರಂತೆ (ಬಹಳವಾದರೆ ನಾಲ್ಕು ಜನರಿಗೊಂದರಂತೆ) ಕೋಣೆಗಳಿರಬೇಕು. ಇವರು ಆನಂದವನದ ಸಾರ್ವತ್ರಿಕ ಸ್ನಾನಗೃಹದಲ್ಲಿ ಸ್ನಾನವನ್ನು, ಭೋಜನಗೃಹದಲ್ಲಿ ಭೋಜನವನ್ನೂ

ಮಾಡಿ, ತಮಗೆ ಬೇಕಾಗುವ ಪದಾರ್ಥಗಳನ್ನು ಸಾರ್ವತ್ರಿಕ ಕೋಠಿಯಿಂದ ಪಡೆಯತಕ್ಕದ್ದು. ಒಟ್ಟಿಗೆ ಇವರ ಯೋಗಕ್ಷೇಮವನ್ನು ಸರಿಯಾಗಿ ತಕ್ಕೊಳ್ಳುವ ಜವಾಬುದಾರಿಯು, ಶ್ರೀ ಚಿದಂಬರಮೂರ್ತಿಗಳ ಅಧೀನವಾಗಿದ್ದ ಯಾವತ್ತು ಶಿಷ್ಯವರ್ಗದ ತಲೆಯಮೇಲಿರುತ್ತದೆ. ಸದ್ಯಕ್ಕೆ ಇವರಿಗೆ ಇರಲಿಕ್ಕೆ ಕಾಳಿನ ಕೊಠೆಯಿಂದ ಪುರೋಹಿತರಿದ್ದ ಮನೆಹಿಡಿದು ಗಾಡಿಯ ಮನೆಯವರೆಗೆ ಇದ್ದ ಇಮಾರತಿನಲ್ಲಿ ಕೋಣೆಗಳನ್ನು ಮಾಡಿಕೊಡಬಹುದು. ಪ್ರೇಸಿನ ಮನೆಯ ಸಿಟ್ಟಿನ ತೆರವಿದ್ದ ಸ್ಥಳಗಳು ವಿದ್ಯಾರ್ಥಿಗಳಿಗಾಗಿ ಉಪಯೋಗಿಸಲ್ಪಡತಕ್ಕದ್ದು. ವಿದ್ಯಾರ್ಥಿಗಳಯೋಗಕ್ಷೇಮಕ್ಕೆ ಮುಖ್ಯ ಜವಾಬುದಾರರಾದ ಇಬ್ಬರು ವ್ಯವಸ್ಥಾಪಕರ ಮನೆಗಳು ತಕ್ಕ ಸ್ಥಳದಲ್ಲಿ ವಿದ್ಯಾರ್ಥಿಗಳ ದೇಖರೇಖಿಗೆ ತಕ್ಕಂತೆ ವಿದ್ಯಾರ್ಥಿಗಳ ಹತ್ತರ ಇರಬೇಕು.

ಪಾಠಶಾಲೆ—ವಿದ್ಯಾರ್ಥಿಗಳ ವಸತಿಗೃಹವಲ್ಲದೆ ಅವರ ಪಾಠಗಳು ನಡೆಯುವದಕ್ಕಾಗಿ ಸ್ವತಂತ್ರ ಸ್ಥಳಗಳು ಬೇಕು. ಬೇರೆ ಬೇರೆ ವಿಷಯಗಳ ಅಧ್ಯಾಪನಕ್ಕಾಗಿ ಬೇರೆ ಬೇರೆ ಕೋಣೆಗಳಿರುವದು ಅವಶ್ಯವು. ಸದ್ಯಕ್ಕೆ ಈ ಕೆಲಸಕ್ಕಾಗಿ ಆನಂದವನದ ಮಹಾದ್ವಾರದೊಳಗಿನ ಪಟಾಂಗಣದ ದಕ್ಷಿಣ-ಪಶ್ಚಿಮ ದಿಕ್ಕಿನ ಕಟ್ಟೆಗಳಮೇಲೆ ಛಾವಣಿಹಾಕಿಸಿ ಅನುಕೂಲಮಾಡಿಕೊಡಬಹುದು.

ಸೇವಕರ ಕುಟುಂಬಗಳು—ಇವುಗಳಿಗಾಗಿ ಆನಂದವನದ ಎದುರಿಗಿನ ಲೈನದ ಆಚೆಕಡೆಯ ಹೊಲದಲ್ಲಿ ಸಣ್ಣ ಸಣ್ಣ ಮನೆಗಳನ್ನು ಹಾಕಿಸತಕ್ಕದ್ದು. ಈ ಕುಟುಂಬದವರು ತಾವು ಸಂಪಾದಿಸಿದ ಪಗಾರದಿಂದ ತಮ್ಮ ತಮ್ಮ ಯೋಗಕ್ಷೇಮವನ್ನು ಸಾಗಿಸಿಕೊಳ್ಳತಕ್ಕದ್ದು. ಸಂಸ್ಥೆಯ ಬಗ್ಗೆ ಸೇವಕರಲ್ಲಿ ಮಮಕಾರವು ಉತ್ಪನ್ನವಾಗುವದಕ್ಕಾಗಿಯೂ, ಸೇವಕರೂ-ಅವರ ಕುಟುಂಬದವರೂ ಸಾಮಾನ್ಯ ನಿಯಮಗಳಿಗನುಸರಿಸಿ ಸಂಸ್ಥೆಯ ಕಾರ್ಯಗಳು ನಿಲ್ಲದಂತೆ ಪ್ರಸಂಗವಶಾತ್ ಬಿದ್ದ ಕೆಲಸಮಾಡಲಿಕ್ಕೆ ಸಿದ್ಧರಾಗಿರುವದಕ್ಕಾಗಿಯೂ, ಸಂಸ್ಥೆಯಲ್ಲಿ ಚಾಕರಿಮಾಡುವ ಪ್ರತಿಯೊಬ್ಬನು ಎರಡೂಹೊತ್ತು ಸಾರ್ವತ್ರಿಕ ಭೋಜನಗೃಹದಲ್ಲಿ ಊಟಕ್ಕೆ ಹೋಗಬಹುದು. ಅಯೋಗ್ಯಸೇವಕರನ್ನೂ, ಸಂಸ್ಥೆಯ ನಿಯಮಕ್ಕನುಸರಿಸಿ ನಡೆಯದ ಸೇವಕರನ್ನೂ ಸಂಸ್ಥೆಯಲ್ಲಿ ಇಟ್ಟುಕೊಳ್ಳಬಾರದು. ಔತಣವಿದ್ದ ಹೊರತು, ಸೇವಕರ ಕುಟುಂಬದವರು ಆನಂದವನಕ್ಕೆ ಊಟಕ್ಕೆ ಹೋಗಬಾರದು. ಕೆಲಸಮಾಡುವವನೊಬ್ಬನ ಎರಡೂಹೊತ್ತಿನ ಊಟ, ಗೊತ್ತುಮಾಡಿದ ಪಗಾರ ಇವುಗಳ ಹೊರತು ಬೇರೆ ಯಾತರಮೇಲೆಯೂ ಸೇವಕರ ಕುಟುಂಬದವರ ಹಕ್ಕು ಇಲ್ಲ.

ಬಿಡಿಸೇವಕರು—ಇವರಿಗಾಗಿ ಹೆಂಗಸರಿಗೊತ್ತಟ್ಟಿಗೆ, ಗಂಡಸರಿಗೊತ್ತಟ್ಟಿಗೆ

ದೂರ ದೂರ ಸ್ಥಳ ಗೊತ್ತುಮಾಡಿಕೊಡಬೇಕು. ಪಗಾರವನ್ನು ತಕ್ಕೊಳ್ಳಲಿ, ತಕ್ಕೊಳ್ಳದಿರಲಿ, ಸೇವಕರು ವೈಮುರಿದು ದುಡಿಯಬೇಕು. ಮೈಮುರಿಯದೆ ದುಡಿಯದೆ, ನಾವು ಪಗಾರತಕ್ಕೊಳ್ಳದವರೆಂದು ಡೌಲು ತೋರಿಸುವವರನ್ನು, ಅವರು ಕುಟುಂಬವತ್ಸಲರಿರಲಿ, ಏಕಾಕಿಗಳಿರಲಿ ಸಂಸ್ಥೆ ಬಿಡಿಸಿ ಹೊರಗೆ ಹಾಕಬೇಕು. ಸದ್ಯಕ್ಕೆ ಆನಂದವನದಲ್ಲಿ ಇವರಿಗಾಗಿ ಹೊಸ ಸ್ಥಳ ಕಟ್ಟಿಸಬೇಕೆಂತಲೇ ಕಾಣುತ್ತದೆ.

ಹೀಗೆ ಬೇರೆ ಬೇರೆ ವಿಧದ ಜನರ ಇರುವ ಸ್ಥಳಗಳನ್ನು ಗೊತ್ತುಮಾಡಿದ ಬಳಿಕ, ಸಂಸ್ಥೆಯು ಸುಸೂತ್ರವಾಗಿ ನಾಗಲಿಕ್ಕೆ ಧನಸಂಗ್ರಹ, ಕೋಠಿ, ಅಡಿಗೆ, ದನಕರುಗಳು ಈ ನಾಲ್ಕು ಬಾಬುಗಳ ವ್ಯವಸ್ಥೆಯನ್ನು ವಿಚಾರಪೂರ್ವಕವಾಗಿ ಮಾಡಬೇಕಾಗುತ್ತದೆ. ಈವೊತ್ತಿಗೆಲ ವರ್ಷಗಳಿಂದ ಆನಂದವನದಲ್ಲಿ ಜೋಡಾಗಿ ನಡೆಯುತ್ತ ಬಂದಿರುವ ಎರಡು ಸಂಸ್ಥೆಗಳಲ್ಲಿ, ಮೊದಲನೆಯ ಅತಿಥಿಸತ್ಕಾರಸಂಸ್ಥೆಯಲ್ಲಿ ಪಗಾರವಿಲ್ಲದ ಜನರೂ, ಎರಡನೆಯ ವಿದ್ಯಾದಾನದ ಸಂಸ್ಥೆಯಲ್ಲಿ ಪಗಾರದ ಜನರೂ ಇದ್ದು, ಹಲವು ಮಾತುಗಳ ಅನುಭವದಿಂದ ಪಗಾರದ ಜನರಿಂದಲೇ ಕೆಲಸವು ವ್ಯವಸ್ಥಿತವಾಗಿ ಆಗುತ್ತದೆಂದು ಬಿನಪಗಾರಿಜನರು ಸಹ ಒಪ್ಪಿಕೊಂಡಿದ್ದಾರೆ; ಆದ್ದರಿಂದ ಜವಾಬುದಾರಿಯ ಕೆಲಸಗಳನ್ನು ಪಗಾರಿಯ ಜನರ ಕಡೆಗೇ ಕೊಡಬೇಕು. ಯಾಕೆಂದರೆ, ಬಿನಪಗಾರಿಜನರಂತೆ ಅವರು ಲಂಡತನಮಾಡಲಿಕ್ಕೆ ಬರುವದಿಲ್ಲ ಜನರಿಗೆ ಹೆದಂಬೇಕಾಗುತ್ತದೆ. ಸಿರದ್ಯೋಗದಿಂದ ಕಳಿಸುಕೊಳ್ಳಲಿಕ್ಕೆ ಬರುವದಿಲ್ಲ. ಕೆಲಸ ಕೆಡಿಸಲಿಕ್ಕೆ ಬರುವದಿಲ್ಲ. ಮುಖ್ಯ—ಗಿಂಜನರ ಕೆಲಸಮಾಡುವವನು ಹತ್ತು ಜನರಿಗೆ ಅಂಜಿ, ದಾಸನಂತೆ ಅವರ ಹಿತವನ್ನು ಮಾಡಬೇಕಾಗುವದು. ಪಗಾರವಿಲ್ಲದವರಿಗೆ, ನಾವು ನಿಸ್ಪೃಹರೆಂಬ ಮೂರ್ಖತನದ ಅಹಂಭಾವವಿರುವದರಿಂದ, ಅವರ ಮರ್ಜಿಯನ್ನು ಹಿಡಿಯುವದರೊಳಗೇ ಸಾಕಾಗುತ್ತದೆ. ಮೇಲಾಗಿ ಅವರಿಂದ ಪಕ್ಷಾಭಿಮಾನವು ಹುಟ್ಟಲು ಕಾರಣವಾಗುತ್ತದೆ.

ಧನಸಂಗ್ರಹ—ಒಟ್ಟು ಆನಂದವನದ ಎಲ್ಲ ಬಾಬಿನಿಂದಾದ ಧನಸಂಗ್ರಹವು ಶ್ರೀ ಚಿದಂಬರಮೂರ್ತಿಗಳ ಇಚ್ಛೆಯಂತೆ ಮೂವರಿಗಿಂತ ಕಡಿಮೆಯಿಲ್ಲದಷ್ಟು ಜನರ ಮುಖಾಂತರ ಆಗತಕ್ಕದ್ದು. ವೆಚ್ಚಮಾಡುವಾಗ, ದೊಡ್ಡ ರಕಮು ಇದ್ದಲ್ಲಿ ಆ ಮೂವರು ಬೇರೆ ಯೋಗ್ಯ ಜನರ ಬಹು ಮತದಿಂದ ಮೂರ್ತಿಗಳನ್ನು ಕೇಳಿ, ವೆಚ್ಚಮಾಡತಕ್ಕದ್ದು. ಇಡಿಯ ಆನಂದವನದ ಜಮೆ ಮತ್ತು ಖರ್ಚಿನ ತಪಸೀಲು ತಿಳಿಯುವಂತೆ ಪ್ರಶಸ್ತವಾಗಿ ಖಾತೆ-ಕಿರ್ದಿಗಳನ್ನು ಇಡಬೇಕು. ಲೆಖ್ಖ—

ಪತ್ರಕ್ಕಾಗಿ ಒಬ್ಬ ನಂಬಿಗೆಯ ಕಾರಕೂನನನ್ನು ಇಡಬೇಕು. ಅವನಿಗೆ ಯೋಗ್ಯ ಪಗಾರಕೊಡಬೇಕು.

ಕೋಠಿ—ಈ ಕೆಲಸಕ್ಕಾಗಿ ಕುಟುಂಬವತ್ಸಲನಾದ ಒಬ್ಬ ಕಾರ್ಯದಕ್ಷ ಚತುರಮನುಷ್ಯನನ್ನು ಪಗಾರದಿಂದ ನಿಯಮಿಸತಕ್ಕದ್ದು. ಇವನಿಗೆ ಹೊರಗಿನ ಸಾಮಾನುಗಳನ್ನು ಮುಖ್ಯ ವ್ಯವಸ್ಥಾಪಕರು ಆಗಾಗ್ಗೆ ಬೇರೆಯುವರಿಂದ ತರಿಸಿಕೊಡತಕ್ಕದ್ದು. ಶ್ರೀ ಗುರುಗಳ ಕುಟುಂಬದವರಿಗೂ, ವಿದ್ಯಾರ್ಥಿಗಳಿಗೂ, ಅತಿಥಿಗಳಿಗೂ, ಕೋಠಿಯು ಕೆಲಮಟ್ಟಿಗೆ ನಿಯಮಕ್ಕನುಸರಿಸಿ ಮುಕ್ತದ್ವಾರವಿರುತ್ತದೆಂದು ಹೇಳಬಹುದು. ಉಳಿದವರಿಗೆ ವಿಶೇಷಪ್ರಸಂಗದ ಹೊರತು ಪುಕ್ಕಟೆಯಾಗಿ ಸಾಮಾನು ಒಯ್ಯುವ ಹಕ್ಕು ಇಲ್ಲ.

ದನಗಳವ್ಯವಸ್ಥೆ—ಈ ಕೆಲಸಕ್ಕಾದರೂ ಒಬ್ಬ ಹುಷಾರ ಮನುಷ್ಯನನ್ನು ಪಗಾರದಿಂದ ನಿಯಮಿಸಬೇಕು. ಅವನು ತಕ್ಕಷ್ಟು ಆಳುಗಳನ್ನು ಇಟ್ಟುಕೊಂಡು ತಾನೂ ಅವರೊಡನೆ ದುಡಿದು,ದನಗಳ ಯೋಗಕ್ಷೇಮವನ್ನು ದಕ್ಷತೆಯಿಂದ ನೋಡಿಕೊಳ್ಳತಕ್ಕದ್ದು. ಹೈನ-ಹಾಲುಗಳ ವ್ಯವಸ್ಥೆಯನ್ನಾದರೂ ಕೋಠಿಯವರು ಮಾಡಿಕೊಟ್ಟ ನಿಯಮದಂತೆ ಈತನೇ ಮಾಡತಕ್ಕದ್ದು.

ಅಡಿಗೆ— ಯೋಗ್ಯರಾದ ಹೆಣ್ಣುಮಕ್ಕಳಿಂದ ಈಕೆಲಸವು ಸರಿಯಾಗಿ ಆಗದ ಪಕ್ಷದಲ್ಲಿ, ಇದಕ್ಕಾದರೂ ಪಗಾರದ ಮನುಷ್ಯರನ್ನು ಇಡತಕ್ಕದ್ದು. ಅಡಿಗೆಯ ನೆವದಿಂದ ಹತ್ತು-ಹದಿನೈದು ಜನಹೆಣ್ಣುಮಕ್ಕಳನ್ನು ಸೇರಿಸಿಕೊಳ್ಳುವದರಿಂದ ಬಹಳ ಹಾನಿಯಾಗುವದಲ್ಲದೆ, ಹಲವು ತೊಂದರೆಗಳೂ ಆಗುತ್ತವೆ. ಹತ್ತು-ಹನ್ನೆರಡು ಜನಹೆಂಗಸರ ಯೋಗಕ್ಷೇಮಕ್ಕಾಗಿ ತಿಂಗಳಿಗೆ ೫ ರೂಪಾಯಿಯಂತೆ ಪ್ರತಿಯೊಬ್ಬರಿಗೆ ಹಿಡಿದರೂ, ೫೦|೬೦ ರೂಪಾಯಿಗಳು ಆಗುತ್ತವೆ. ಈ ರಕಮಿನಲ್ಲಿ ನಾಲ್ಕು ಜನ ಅಡಿಗೆಯವರು ಸಹಜವಾಗಿ ಬರುವರು. ಅಂಥ ಹೊತ್ತು ಬಿದ್ದರೆ ನೌಕರರ ಕುಟುಂಬದ ಹೆಣ್ಣುಮಕ್ಕಳು ಸಹಾಯಮಾಡಲಿಕ್ಕೆ ಇದ್ದೇ ಇರುವರು. ಬೇರೆ ಬಿಡಿ ಜನರು ಒಬ್ಬಿಬ್ಬರು ಇದ್ದೇ ಇರುವರು. ಆನಂದವನದವರಿಗೆ ಅಡಿಗೆಗೆ ಪಗಾರದ ಜನರನ್ನು ಇಟ್ಟು ಗೊತ್ತಿಲ್ಲದ್ದರಿಂದ, ಈ ಹೆಣ್ಣುಮಕ್ಕಳ ಹಿಂಡಿನ ಹೊರತು ಅಡಿಗೆಯ ಕೆಲಸ ನಡೆಯದೆಂಬಹಾಗೆ ಅವರಿಗೆ ಆಗಿರುತ್ತದೆ. ಅದು ತಪ್ಪು. ನಾಲ್ಕುಕಡೆಯ ಸಂಸ್ಥೆಗಳನ್ನು ನೋಡಿದರೆ, ಅವರಿಗೆ ಗೊತ್ತಾಗುವದು.

ಸ್ನಾನ— ತಮ್ಮ ತಮ್ಮ ನೀರು ತಾವೇ ಹಾಕಿಕೊಂಡು ವಿದ್ಯಾರ್ಥಿಗಳು ಪಾಳಿಯಿಂದ ಈ ಕೆಲಸಮಾಡಿಕೊಳ್ಳುವರು. ಉಳಿದವರು ತಮ್ಮತಮ್ಮ ವ್ಯವಸ್ಥೆ ತಾವು

ಮಾಡಿಕೊಳ್ಳಬೇಕು.

ಮುಖ್ಯವಾಗಿ ಆನಂದವನದಲ್ಲಿ ಅನ್ನಸಂತರ್ಪಣ, ಪಾಠಶಾಲೆ, ಪ್ರೇಸು ಎಂಬ ಮೂರು ಮುಖ್ಯಬಾಬುಗಳಿರುತ್ತವೆ. ಈ ಮೂರುಬಾಬುಗಳಿಗೂ ಒಬ್ಬೊಬ್ಬನು ಮುಖ್ಯನಾಗಿ, ತನ್ನ ತನ್ನ ಬಾಬನ್ನು ಜವಾಬುದಾರಿಯಿಂದ ನೋಡಬೇಕಲ್ಲದೆ, ಎಲ್ಲರೂ ಎಲ್ಲ ಬಾಬುಗಳ ವಿಚಾರವನ್ನು ಶಕ್ಯವಿದ್ದಷ್ಟು ಗೈಮಾಡಿ, ಯೋಗ್ಯ ಸೂಚನೆಗಳನ್ನು ಮಾಡತಕ್ಕದ್ದು. ಇದಿ ಸಂಸ್ಥೆಯು ಮೇಲೆ ಮುಖ್ಯಮನುಷ್ಯರಿಬ್ಬರ ಕಣ್ಣು ಇರತಕ್ಕದ್ದು.

ಈ ಪದ್ಧತಿಯಿಂದ ಜನಸಂಗ್ರಹವನ್ನು ಮಾಡಿ ನಡಿಸಿಕೊಳ್ಳಹತ್ತಿದಬಳಿಕ, ಜನರ ನಿತ್ಯಕ್ರಮವನ್ನು ಕುರಿತು ಹೇಳತಕ್ಕದ್ದನ್ನು ಹೇಳಬೇಕಾಗುವದು. ಆನಂದವನದ ಸೇವಕರು, ಮುಖ್ಯವಾಗಿ ವಿದ್ಯಾರ್ಥಿಗಳು ತಪ್ಪದೆ ಬೆಳಗಿನ ನಾಲ್ಕು ಗಂಟೆಗೆ ಏಳಬೇಕು. ೫ ಗಂಟೆಗೆ ಆನಂದವನಕ್ಕೆ ಸಂಬಂಧಿಸಿದ ಮನುಷ್ಯರು ಬಹುತರ ಏಳದೆ ಇರಬಾರದು. ೭ ಹೊಡೆಯುವದರೊಳಗಾಗಿ ಬಹುತರ ಎಲ್ಲರು ಪ್ರಾತರ್ವಿಧಿಗಳನ್ನೂ, ಪ್ರಾತರ್ನಿತ್ಯಕರ್ಮಗಳನ್ನೂ ತೀರಿಸಿಕೊಂಡು, ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಬೇಕು. ೧೧ ಗಂಟೆಯವರೆಗೆ ಸಾಧಾರಣವಾಗಿ ಮುಂಜಾವಿನ ಕೆಲಸ ಮಾಡತಕ್ಕ ಅವಧಿಯು. ೧ ಗಂಟೆಯೊಳಗಾಗಿ ಮಧ್ಯಾಹ್ನದ ಊಟವಾಗಬೇಕು ಮಧ್ಯಾಹ್ನದ ೨ ಗಂಟೆಗೆ ಮತ್ತೆ ಕೆಲಸಕ್ಕೆ ಆರಂಭವಾಗಿ, ೫||-೬ ಗಂಟೆಗೆ ಮಧ್ಯಾಹ್ನದ ಕೆಲಸವು ಮುಗಿಯುವದು. ಅಡಿಗೆಯವರೂ, ಕೋಲಿಯವರೂ, ದನಕರದವರೂ ತಮ್ಮ ತಮ್ಮ ಅನುಕೂಲತೆಯಂತೆ ಕೆಲಸಮಾಡಿಕೊಳ್ಳಬಹುದು. ಆನಂದವನದವರಿಗೆ ಆದಷ್ಟು ಸಮಯಾನುವರ್ತನವನ್ನು ಕಲಿಸುವದು ಶ್ರೇಯಸ್ಕರವು. ಅಗ್ರಹಾರದ ಕ್ರಮವನ್ನು, ಆನಂದವನದಲ್ಲಿದ್ದ ಬೇರೆ ಕುಟುಂಬಗಳ ಜನರೂ ಅನುಸರಿಸಿ, ಅಥವಾ ಅಗ್ರಹಾರಕ್ಕಿಂತ ಹೆಚ್ಚಿನ ವ್ಯವಸ್ಥೆಯಿಂದ ನಡೆದು, ಸೈ ಅನಿಸಿಕೊಳ್ಳತಕ್ಕದ್ದು. ಚಲೋ ಕೆಲಸದಲ್ಲಿ ಪೈಲಾಟವಿದ್ದಷ್ಟು ಒಳ್ಳೆಯದು; ಆದರೆ ಆ ಪೈಲಾಟವು ಜಗಳದ ಸ್ವರೂಪವನ್ನು ಹೊಂದದಂತೆ ಎಚ್ಚರಪಡತಕ್ಕದ್ದು—ಮುಖ್ಯಮಾತು, ಆನಂದವನದವರಲ್ಲಿ ಪ್ರತಿ ಒಬ್ಬನ ಕೆಲಸವು ಇಂಥದೆಂದು ಗೊತ್ತಾಗಿದ್ದು, ಆಯಾ ಮನುಷ್ಯನು ತನ್ನ ಕೆಲಸದಲ್ಲಿ ನಿಯಮಿತಕಾಲ ದುಡಿಯಲೇಬೇಕು. ಅಂದರೆ ವ್ಯರ್ಥ ಹರಟೆಗಳಿಗೂ, ನಿರರ್ಥಕ ಕಿಚ್ಚುಬೋಧಕಕ್ಕೂ ಆಸ್ಪದದೊರೆಯಲಿಕ್ಕಿಲ್ಲ. ಪುರಾಣಗಳಿಗೂ, ಪ್ರವಚನಗಳಿಗೂ ಬಹುತರ ಎಲ್ಲರಿಗೂ ಅನುಕೂಲವಿದ್ದ ಕಾಲವನ್ನು ಗೊತ್ತುಮಾಡಿ, ಅವನ್ನು ನಡಿಸತಕ್ಕದ್ದು. ಅವಕ್ಕೆ ಎಲ್ಲರೂ

ಬರುವಂತೆ ಕಟ್ಟುಮಾಡತಕ್ಕದ್ದು. ಪ್ರತಿ ಒಬ್ಬ ಆನಂದವನದ ಕುಟುಂಬದವನು ತನ್ನ ಕುಟುಂಬವು ವ್ಯವಸ್ಥಿತವೂ, ಪರೋಪಕಾರಕ್ಷಮವೂ ಆಗುವಂತೆ ಯತ್ನಿಸಬೇಕು.

ಇನ್ನು, ಆನಂದವನದ ಸಂಸ್ಥೆಯನ್ನು ನಡಿಸಲಿಕ್ಕೆ ಬೇಕಾಗುವ ಧನಸಂಗ್ರಹ ಮಾಡುವ ಉಪಾಯಗಳನ್ನು ಕುರಿತು ಯೋಚಿಸುವಾ. ಆನಂದವನದ ಎರಡು ಸಂಸ್ಥೆಗಳಲ್ಲಿ, ಮೊದಲನೆಯದರೊಳಗಿನವರು ಧನಸಂಗ್ರಹದ ಕೇವಲ ಸಾಧನವು ಭಿಕ್ಷೆಯೆಂದು ತಿಳಿದಿರುವರು. ಎರಡನೆಯ ಸಂಸ್ಥೆಯೊಳಗಿನವರು ಭಾಷಾಸೇವಾರೂಪ ಉದ್ಯೋಗವು ಮುಖ್ಯಸಾಧನವೆಂತಲೂ ಭಿಕ್ಷೆಯು ಗೌಣಸಾಧನವೆಂತಲೂ ತಿಳಿದಿರುವರು. ಇವೆರಡರ ಹೊರತು, ವರ್ಷಾಶನ ಪದ್ಧತಿಯನ್ನಾದರೂ ಆ ಎರಡನೆಯ ಸಂಸ್ಥೆಯವರು ಹಾಕತೊಡಗಿರುವರು. ಸದ್ಯಕ್ಕೆ ಎರಡೂ ಸಂಸ್ಥೆಗಳು ಒಂದಾಗಬೇಕಾಗಿರಲು, ಆನಂದವನಸ್ಥರು ಪುಸ್ತಕಮಾರಾಟ, ಭಿಕ್ಷೆ, ವರ್ಷಾಶನ ಈ ಮೂರು ಉಪಾಯಗಳನ್ನು ಕೈಕೊಂಡು, ಯಾರಯಾರಲ್ಲಿ ಯಾವ ಯಾವ ಉಪಾಯಗಳು ನಡೆಯುವವೋ, ಅವುಗಳಿಂದ ಧನಸಂಗ್ರಹಮಾಡಬೇಕು. ಧನಸಂಗ್ರಹವಾದಮಾನದಿಂದ ಪಾಠಶಾಲೆಯನ್ನು ಊರ್ಜಿತಸ್ಥಿತಿಗೆ ಒಯ್ಯುವ ಉದ್ದೇಶವಿರುವದರಿಂದ, ಹಲವು ಉಪಾಯಗಳಿಂದ ಆನಂದವನದವರು ಪ್ರಾಮಾಣಿಕರಾಗಿ ಧನಸಂಚಯ ಮಾಡತಕ್ಕದ್ದು. ಧನಕೂಡಿಸಹೋದವರು ಈ ಕೆಳಗಿನ ನಿಯಮಗಳನ್ನು ಅನುಸರಿಸಬೇಕು.

೧ ಯಾವ ಬಾಬಿನಿಂದಲೇ ಆಗಲಿ, ಧನಸಂಗ್ರಹಮಾಡಹೋದವರ ಬಳಿಯಲ್ಲಿ ಶ್ರೀ ಚಿದಂಬರಮೂರ್ತಿಗಳ ಸಹಿಯ, ಹಾಗು ಅವರ ಹೆಸರಿನ ಮುದ್ರೆಯ ಅಧಿಕಾರಪತ್ರವಿರಬೇಕು.

೨ ಹತ್ತು ಜನರಂತೆ ಸ್ವಾಭಾವಿಕವಾದ ಸಭ್ಯತನದ ಉಡುಗೆ-ತೊಡಿಗೆಗಳಿಂದ ಸಂಚಾರಕ್ಕೆ ಹೋಗತಕ್ಕದ್ದಲ್ಲದೆ, ವೇಷಧಾರಿಗಳಾಗಿ ಹೋಗತಕ್ಕದ್ದಲ್ಲ. ಈ ನಿಯಮಕ್ಕೆ ಅಗ್ರಹಾರದ ಹಳೆಯ ಸೇವಕಜನರು ಅಪವಾದವಾಗಿರಬಹುದು.

೩ ಸಂಸ್ಥೆಯ ನಿಜವಾದ ಸಂಗತಿಯನ್ನು ತಿಳಿಸಿ ತಮಗೆ ಅನುಭವಕ್ಕೆ ಬಂದ ನಾಲ್ಕು ಒಳ್ಳೆಯ ಮಾತುಗಳನ್ನು ಹೇಳಬಹುದಲ್ಲದೆ, ತಮ್ಮ ಯೋಗ್ಯತೆಯಿಲ್ಲದೆ ಕಲಿಕೆಯ ಮಾತುಗಳಿಂದ ಜನರನ್ನು ಬೋಧಿಸುವ ಗೊಡವಿಗೆ ಹೋಗಬಾರದು.

೪ ಭಿಕ್ಷೆ, ವರ್ಷಾಶನ, ಬುಕ್‌ವಿಕ್ರಿ ಇವುಗಳಬಗ್ಗೆ ಆನಂದವನದ ಮೊಹರಿನ ಪಾವತಿಗಳಮೇಲೆ ತಮ್ಮ ಸಹಿಮಾಡಿ ಪಾವತಿ ಕೊಡಬೇಕು.

೫ ಸಂಚಾರಕ್ಕೆ ಹೋದವರು ತಮ್ಮ ವಾಸಕ್ಕೆ ಗುಡಿ-ಗುಂಡಾರಗಳು

ಯೋಗ್ಯಸ್ಥಾನವೆಂದು ತಿಳಿಯಬೇಕು. ದೊಡ್ಡಮನುಷ್ಯರ ಮನೆಗಳಲ್ಲಿ ಇರಬಹುದು; ಆದರೆ ತಮ್ಮ ಕೆಲಸಕ್ಕೆ ಸಂಬಂಧವಿಲ್ಲದ ಹೆಚ್ಚಿನ ಉಪಚಾರಗಳಿಗೆ ಹೋಗಬಾರದು. ತಮ್ಮಲ್ಲಿಯ ಹಣದ ಯೋಗ್ಯ ಬಂದೋಬಸ್ತುಮಾಡಿ, ಮನೆಯ ಹೊರ ಅಟವಾಳಿಗೆ ಮುಂತಾದ ಸ್ವತಂತ್ರ ಸ್ಥಳದಲ್ಲಿ ಮಲಗುವ ಪದ್ಧತಿಯನ್ನಿಡಬೇಕು.

(೬) ಆನಂದವನದ ಗುಣಗಳನ್ನು ವರ್ಣಿಸುವಾಗ ದೋಷಗಳನ್ನು ಮುಚ್ಚತಕ್ಕದ್ದಲ್ಲ. ಮಂದಿ ದೋಷಗಳನ್ನು ಹೇಳಿದರೆ ಸಮಾಧಾನದಿಂದ ಕೇಳಿಕೊಂಡು, ಅದರಬಗ್ಗೆ ಏನಾದರೂ ಹೇಳತಕ್ಕದ್ದಿದ್ದರೆ ಹೇಳಬೇಕು; ಒಪ್ಪಿಕೊಳ್ಳತಕ್ಕದ್ದಿದ್ದರೆ ಒಪ್ಪಿಕೊಳ್ಳಬೇಕು. ತಮಗೆ ಗೊತ್ತಿಲ್ಲದಿದ್ದರೆ, ಮುಖ್ಯರನು ಕೇಳಿಕೊಳಬೇಕೆಂದು ಸೂಚಿಸತಕ್ಕದ್ದು. ಒಂದಿದ್ದರೆ ಎರಡು ಹೇಳಲಿಕ್ಕಾ, ಉಪ್ಪುಕಾರ ಹಚ್ಚಿ ರುಚಿ ಮಾಡಿಹೇಳಲಿಕ್ಕೂ ಸರ್ವಥಾ ಹೋಗಬಾರದು.

(೭) ಜನರನ್ನು ಭಿಡೆ-ಮುರವತ್ತುಗಳಿಗೆ ಹಾಕದೆ, ಧನ ಸಂಗ್ರಹಿಸುವದು ಯೋಗ್ಯವು. ಪ್ರಸಂಗವಶಾತ್ ದೊಡ್ಡಜನರ ಸಹಾಯದಿಂದ ಸಂಸ್ಥೆಗೆ ಹೆಚ್ಚು ಸಹಾಯ ಮಾಡಿಕೊಂಡರೆ ದೋಷವಲ್ಲ. ಅಪರಿಚಿತರಿಗೆ ಪರರ ಸಹಾಯವು ಬೇಕಾಗುತ್ತಿರುತ್ತದೆ.

(೮) ಕೊಡದವರಿಂದ ಗುದ್ದಾಡಿಯಾದರೂ ಏನಾದರೂ ಇಸುಕೊಳ್ಳಬಹುದು; ಆದರೆ ಹರಿಯುವತನಕ ಜಗ್ಗುವಭರಿಗೆ ಹೋಗದೆ, ವಿವೇಕದಿಂದ ಹಿಂದಕ್ಕೆ ಸರಿದು, ಇನ್ನೊಂದು ಸಾರೆಯಪ್ರಯತ್ನಕ್ಕೆ ಆಸ್ಪದವುಳಿಯುವಂತೆ ಮಾಡಿಕೊಳ್ಳತಕ್ಕದ್ದು; ಅಸಂತೋಷಪಟ್ಟು ಹೋಗಬಾರದು.

(೯) ಸಂಚಾರದವರು, ಸಂಚಾರಕಾಲದ ತಮ್ಮ ಖಾಯಂಪಗಾರ, ಸಂಚಾರದ ಹಣದ ಮೇಲಿನ ೧/೫ ಕಮಿಶನ್ ಇವುಗಳ ಸರಾಸರಿ ಹಣವನ್ನು ತಮ್ಮ ವೇತನವಾಗಿ ಪಡೆಯತಕ್ಕದ್ದು.

(೧೦) ಪ್ರತಿಯೊಂದು ಊರಲ್ಲಾದ ಉತ್ಪನ್ನವನ್ನು ಆ ಊರ ಒಬ್ಬ ದೊಡ್ಡ ಮನುಷ್ಯನ ಸಹಿಯಿಂದ ನಂಬಿಗೆಯಾಗುವಂತೆ ಸಂಸ್ಥೆಗೆ ತಿಳಿಸಿ, ಆ ಊರ ತಪಸೀಲವಾರ ಯಾದಿಯನ್ನು ಚಂದ್ರಿಕೆಯಲ್ಲಿ ಪ್ರಸಿದ್ಧಿಸಲಿಕ್ಕೆ ಕೊಡಬೇಕು.

ಇನ್ನು ಆನಂದವನದವರ ಧರ್ಮಾಚರಣೆಯನ್ನು ಕುರಿತು ನಾಲ್ಕು ಮಾತುಗಳನ್ನು ಹೇಳುವಾ. ಶ್ರೀ ಗುರುಗಳು ಇರುವ ತನಕ ಒಂದು ಬಗೆಯ ಮೂಢಭಾವನೆಯಿಂದ ನಿಯಮಿತ-ಧಾರ್ಮಿಕ ಕರ್ಮಾಚರಣೆಗಳಿಲ್ಲದೆ ಬಹು ಜನರ ಕಾಲಹರಣವಾಯಿತು. ಇದಕ್ಕೆ ಶ್ರೀ ಗುರುಗಳ ಒಪ್ಪಿಗೆಯು ಸರ್ವಥಾ ಇದ್ದಿಲ್ಲ. ಸ್ವತಃ ಶ್ರೀ

ಗುರುಗಳು ಸುಕರ್ಮಠದ ಸಾಂಪ್ರದಾಯಾಭಿಮಾನಿಗಳಾಗಿದ್ದರು. ಅವರು "ಸ್ನಾನ-ಸಂಧ್ಯಾದಿಕರ್ಮಗಳನ್ನು ಏಕನಿಷ್ಠೆಯಿಂದ ಮಾಡಿರಿ, ಚಂಚಲಮನಸ್ಸಿನಿಂದ ಮಾಡಿದ ಕರ್ಮಗಳು ನಿರರ್ಥಕವಾಗುವವು" ಎಂದು ಹೇಳಿದ್ದನ್ನು ನಾನು ವಿಪರೀತವಾಗಿ ತಿಳಕೊಂಡು, ಸಂಧ್ಯಾವಂದನವನ್ನೇ ಕೆಲಗಾಲ ಬಿಟ್ಟುಬಿಟ್ಟೆನು. ಗುರುಸೇವೆಯ ನೆವದಿಂದ ಸಂಧ್ಯಾವಂದನ ಬಿಟ್ಟಂತೆ, ಊಟ-ನಿದ್ದೆಗಳನ್ನು ಬಿಟ್ಟಿದ್ದರೆ ಆಕ್ಷೇಪಕ್ಕೆ ಆಸ್ಪದವಿದ್ದಿಲ್ಲ. ಏನಾದರೂ ಹೊಟ್ಟೆಗೆ ಹಾಕುವದು ಅವಶ್ಯವಾಗಿರುವಂತೆ, ಹ್ಯಾಗಾದರೂ ಸಂಧ್ಯಾವಂದನ ಮಾಡುವದು ಅವಶ್ಯವಾಗಿರುವದು. ಬ್ರಾಹ್ಮಣರು ಏನು ಬಿಟ್ಟರೂ ಸಂಧ್ಯಾವಂದನವನ್ನು ಬಿಡಲಾಗದು. ಇದು ಆತನಿಗೆ ಮುಖ್ಯವಾದ ಉಪಾಸನೆಯು. ಉಪಾಸನೆಯಲ್ಲಿ ಈಶ್ವರೋಪಾಸನೆ, ಮೂರ್ತ್ಯೋಪಾಸನೆ, ಕೃತ್ರಿಮೋಪಾಸನೆ ಎಂದು ಮೂರು ವಿಧಗಳನ್ನು ಕಲ್ಪಿಸಬಹುದು. ಪ್ರತ್ಯಕ್ಷ ಈಶ್ವರಸ್ವರೂಪಜ್ಞಾನಮಾಡಿಕೊಂಡು, ಅನನ್ಯಭಾವದಿಂದ ಆತನನ್ನು ಸೇವಿಸುವದೇ ಈಶ್ವರೋಪಾಸನೆಯು. ಪ್ರತ್ಯಕ್ಷ ಈಶ್ವರಜ್ಞಾನವಿಲ್ಲದಿರಲು ಆತನ ಅಗಾಧ ಮಾಯಾಕೃತಿಯಾದ ಸೃಷ್ಟಿಯನ್ನು ನೋಡಿ ಆಶ್ಚರ್ಯಚಕಿತರಾಗಿ, ಅದರೊಳಗಿನ ಅದ್ಭುತ ಪದಾರ್ಥಗಳನ್ನೇ ದೇವರೆಂದು ತಿಳಿದು, ಪಂಚಮಹಾಭೂತಗಳನ್ನೂ, ಸೂರ್ಯಾಗ್ನಿ ಮೊದಲಾದ ಅದ್ಭುತ ಸೃಷ್ಟಪದಾರ್ಥಗಳನ್ನೂ, ಪ್ರಾಣಿಮಾತ್ರಗಳನ್ನೂ, ಪ್ರಾಚೀನರಾದ ಮಹಾತ್ಮರನ್ನೂ, ಅವತಾರಿಕರನ್ನೂ ಆರಾಧಿಸುವದು ಮೂರ್ತ್ಯೋಪಾಸನೆಯೆನಿಸುವದು. ಇದು ಮೊದಲನೆಯದಕ್ಕಿಂತಲೂ ಗೌಣವಾದದ್ದು. ಈಶ್ವರನ ಈ ವಿರಾಟಸ್ವರೂಪದ ಉಪಾಸನೆಗೂ ಯೋಗ್ಯತೆಯಿಲ್ಲದವರು, ಯಾವದೊಂದು ಈಶ್ವರಾವತಾರದ ಕೃತ್ರಿಮ ಮೂರ್ತಿಯು ಪೂಜಿಸುವರು ಇದೇ ಕೃತ್ರಿಮೋಪಾಸನೆಯು. ಈ ಜಗತ್ತು ಸತ್ಯವಸ್ತುವಿಗೆ ಶರಣುಹೋಗುವದಿಲ್ಲ. ಕೃತ್ರಿಮಕ್ಕೆ ಮರುಳಾಗುವದು. ಈಶ್ವರನು ಸತ್ಯವಸ್ತುವಿದ್ದು, ಸೃಷ್ಟಿಯು ಆತನ ಕೃತ್ರಿಮಸ್ವರೂಪವಾದದ್ದರಿಂದ, ಲೋಕದಲ್ಲಿ ಈಶ್ವರಪ್ರಾಪ್ತಿಗಿಂತ ಸೃಷ್ಟಪದಾರ್ಥಗಳ ಪ್ರಾಪ್ತಿಯಲ್ಲಿ ಹಂಬಲಿಸುವವರೇ ಬಹಳ. ಸೃಷ್ಟಪದಾರ್ಥಗಳಿಗೆ ಮೂರ್ತಿಮೊದಲಾದ ಕೃತ್ರಿಮಸ್ವರೂಪಕೊಟ್ಟು, ಅವನ್ನು ದೇವರೆಂದು ತಿಳಿದು, ಉತ್ಸವಾದಿಗಳಿಂದ ಪೂಜಿಸುವದು ಅತ್ಯಂತ ಕೃತ್ರಿಮವಾದದ್ದರಿಂದ, ಈಶ್ವರನ, ಅಥವಾ ಸತ್ಪುರುಷರ ಪ್ರತೀಕಗಳಾದ ಮೂರ್ತಿಗಳು, ಸಮಾಧಿಗಳು, ಗೋರಿಗಳು, ವೃಂದಾವನಗಳು ಮುಂತಾದವುಗಳನ್ನು ಆರಾಧಿಸುವದರಲ್ಲಿ ಜನರ ಕೌತುಕ ಹೆಚ್ಚು. ನಿಜವಾದ ನಾಯಿಯ ಕೂಗಿಗೆ ಯಾರೂ ಮಹತ್ವಕೊಡುವದಿಲ್ಲ; ಆದರೆ ನಾಯಿಯು ಹಾಗೆ

ಯಾವನಾದರೂ ಒಡವೆಗಳನ್ನು ಕೇಳಿದ್ದಕ್ಕೆ ಜನರು ನಗುವರು. ಅದರಂತೆ, ನಿಜವಾದ ಬಾಣಂತಿಯನ್ನು ಯಾರೂ ನೋಡುವದಿಲ್ಲ; ಆದರೆ ಜಾತಿಗನು ಬಾಣಂತಿಯ ಸೋಗು ಹಾಕಿದರೆ ನೋಡಲಿಕ್ಕೆ ಜನರು ನೆರೆಯುವರು. ಮುಖ್ಯಮಾತು, ಜನರಿಗೆ ಸತ್ಯಕ್ಕಿಂತ ಕೃತ್ರಿಮಗಳಲ್ಲಿ ರಂಜನವು ಹೆಚ್ಚು; ಅವರು ಸೋಗಿಗೆ ಮರುಳಾಗುವರು! ಅದ್ದರಿಂದ ಸತ್ಯದ ಮೂರ್ತಿಯಾದ ದೇವರಿಗಿಂತ, ಆತನ ಕೃತ್ರಿಮಸ್ವರೂಪವಾದ ಸೃಷ್ಟಿಯಲ್ಲಿಯೂ, ಸೃಷ್ಟ ಪದಾರ್ಥಗಳಿಗಿಂತ ಆ ಪದಾರ್ಥಗಳ ಕೃತ್ರಿಮಸ್ವರೂಪವಾದ ಪ್ರತಿಮೆ, ಸಮಾಧಿ, ದೇವಾಲಯಗಳಲ್ಲಿಯೂ ಮನೋರಂಜನವು ಹೆಚ್ಚು. ಈ ಸೋಗಿನಾಟಕ್ಕೆ ಮರುಳಾಗಿ, ಭಾವನೆಯಿಲ್ಲದೆ ಕೃತ್ರಿಮಸ್ವರೂಪಗಳನ್ನು ಭ್ರಾಂತಿಯಿಂದ ಪೂಜಿಸಹತ್ತಿದರಲ್ಲದೆ ದೇವರೂ ನಮ್ಮ ಪಾಲಿಗೆ ದೂರ ದೂರ ಹೋಗುತ್ತಾನೆ. ಜ್ಞಾನಿಗಳು ಸತ್ಯವನ್ನು ಬಲ್ಲವರಾದ್ದರಿಂದ, ಈ ಮೂರನೆಯ ಉಪಾಸನೆಗಳಿಂದಲೂ ಈಶ್ವರನನ್ನೇ ಉಪಾಸಿಸುವರು. ಅವರ ಪಾಲಿಗೆ ಯಾವ ಉಪಾಸನೆಯೂ ದೋಷಯುಕ್ತವಲ್ಲ. ಹ್ಯಾಗೇ ಇರಲಿ. ಸಂಧ್ಯಾವಂದನವಲ್ಲಿ ಸೂರ್ಯಾದಿ ಸೃಷ್ಟಪದಾರ್ಥಗಳ, ಹಾಗು ಋಷಿಗಳ, ಗುರುಗಳ, ಭೂತಮಾತ್ರಗಳ ಉಪಾಸನೆಯು, ಅಂದರೆ ಸೃಷ್ಟಿಯ ಉಪಾಸನೆಯು ಇರುವದರಿಂದ, ಅದು ಈಶ್ವರೋಪಾಸನೆಯ ಒಳಗಿನ ಉಪಾಸನೆಯಾದ್ದರಿಂದ, ಅನಾಯಾಸ ಸತ್ಯಮಾರ್ಗವನ್ನು ಹೇಳಿದ ಆನಂದವನದವರು ಏನು ಬಿಟ್ಟರೂ ತ್ರಿಕಾಲಸಂಧ್ಯಾವಂದನ ಬಿಡದಂತೆ ಆನಂದವನದ ವ್ಯವಸ್ಥೆಯಾಗತಕ್ಕದ್ದು. ಆಮೇಲೆ ಅವರವರ ಭಕ್ತಿಯನ್ನು, ಅನುಕೂಲತೆಯನ್ನು ಇದ್ದಂತೆ ಉಪಾಸನಾಮಾರ್ಗದಲ್ಲಿ ಪ್ರವರ್ತಿಸಬಹುದು. ಸಂಧ್ಯಾವಂದನ ಮಾಡಿಸುವರಿಗೆ ಮಾತ್ರ ಅಗ್ರಹಾರದಲ್ಲಿ ಅಶನವು ವರ್ಜವಾಗತಕ್ಕದ್ದು.

ಮುಖ್ಯಮಾತು, ಪವಿತ್ರವೈದಿಕವಿದ್ಯಾದಾನಕ್ಕೆ ಈಗ ಆಸ್ಪದವೇ ಇಲ್ಲ. ಹೀಗಿರುವಾಗ ಶ್ರೀಶೇಷಾಚಲಸದ್ಗುರೂತ್ತಮರ ಕೃಪೆಯಿಂದ ಸಾಗಿರುವ ಆನಂದವನದ ವೇದ ಮತ್ತು ಸಂಸ್ಕೃತಪಾಠಶಾಲೆಯು ಊರ್ಜಿತಸ್ಥಿತಿಯನ್ನು ಹೊಂದಬೇಕೆಂದು ಚಂದ್ರಿಕೆಯು ಇಷ್ಟು ಕಷ್ಟಪಟ್ಟು ಬರೆಯಬೇಕಾಯಿತು! ಈ ಉಪಸಂಹಾರದಲ್ಲಿ ಬರೆದ ವ್ಯವಸ್ಥೆಯಂತೆ ಒಂದನೆಯ ಸಂಸ್ಥೆಯವರು ನಡೆಯಲಿಕ್ಕೆ ಒಪ್ಪದಿದ್ದರೆ, ಇದೇ ಉಪಸಂಹಾರ ಲೇಖದಲ್ಲಿ ತೋರಿಸಿದಂತೆ ಪಾಠಶಾಲೆಗೂ, ವಿದ್ಯಾರ್ಥಿಗಳಿಗೆ ಇರಲಿಕ್ಕೆ ಸ್ಥಳಕೊಟ್ಟು, ಈ ಹೊತ್ತಿನವರೆಗೆ ಹಾಕುತ್ತ ಬಂದಂತೆ ಹುಡುಗರಿಗೂ, ಅಧ್ಯಾಪಕರಿಗೂ, ಪ್ರವೇಶಿಸಿನವರಿಗೂ ಕೆಲಸಮಾಡುವ ಬಟ್ಟನವಟ್ಟಿಗೆ ಮಾತ್ರ ಒಪ್ಪತ್ತು ಊಟಕ್ಕೆ ಹಾಕಲೆಂದರಾಯಿತು. ಉಳಿದ

ಮಾತಿನಲ್ಲಿ ಎಂದಿನಂತೆ ಶ್ರೀ ಗುರುವಿನ ಸತ್ಯದಲ್ಲಿಯೂ, ಸತತೋದ್ಯೋಗದಲ್ಲಿಯೂ ಲಕ್ಷವಿಟ್ಟು ಶ್ರೀ ಚಿದಂಬರಮೂರ್ತಿಗಳ ಕೃಪಾಛತ್ರದ ಕೆಳಗೆ ಚಂದ್ರಿಕೆಯು ತನ್ನ ಶಕ್ತಿಯಿರುವಮಟ್ಟಿಗೆ ಪಾಠಶಾಲೆ ನಡಿಸಲಿಕ್ಕೆ ಹೆಣಗುವಳು. ಆಕೆಯು ಈ ಉಪಸಂಹಾರದ ಶಿರೋಲೇಖದಲ್ಲಿ ಬರೆದ ಶ್ಲೋಕದಂತೆ "ಪ್ರತಿಕ್ಷಣದಲ್ಲಿಯೂ ಸ್ವಲ್ಪ ಸ್ವಲ್ಪ ವಿದ್ಯೆಯನ್ನೂ, ಧನವನ್ನೂ ಸಂಪಾದಿಸಿ, ಮೃತ್ಯುವಿನಿಂದ ಕೇಶಗಳಲ್ಲಿ ಹಿಡಿಯಲ್ಪಟ್ಟವಳಂತೆ ಧರ್ಮವನ್ನು ಆಚರಿಸುವಳು". ಇತ್ತ ಕಡೆಗೆ ಸಮಾಜದವರು ಲಕ್ಷಗೊಟ್ಟು ಜಾಗರೂಕರಾಗಿ ಸತ್ಯವನ್ನು ಸ್ಥಾಪಿಸಿ, ಆನಂದವನದ ಪರೋಪಕಾರದ ಸಂಸ್ಥೆಗೆ ಸಹಾಯಮಾಡತಕ್ಕದ್ದು. ವಿದ್ಯಾದಾನದ ಕಾರ್ಯಕ್ಕೆ ಮಾಡುವ ಮುಖ್ಯ ಸಹಾಯ ವೆಂದರೆ, ಚಂದ್ರಿಕೆಗೆ ವರ್ಗಣಿದಾರರಾಗುವದು, ಚಂದ್ರಿಕೆಯ ಆಫೀಸಿನಲ್ಲಿ ಪ್ರಸಿದ್ಧವಾಗುವ ಉತ್ತಮೋತ್ತಮ ಪುಸ್ತಕಗಳನ್ನು ಕೊಂಡುಕೊಳ್ಳುವದು, ವರ್ಷಾಶನ ಕೊಡುವದು, ಭಿಕ್ಷೆ ಕೊಡುವದು. ಇವುಗಳಲ್ಲಿ ಯಾವದೊಂದು ಬಗೆಯಿಂದ, ಅಥವಾ ಎರಡು ಬಗೆಯಿಂದ ಅಥವಾ ಎಲ್ಲ ಬಗೆಯಿಂದ ಸಹಾಯ ಮಾಡಿ ಪುಣ್ಯಭಾಗಿಗಳಾಗತಕ್ಕದ್ದು. ಅಂಥ ಸದ್ಬುದ್ಧಿಯನ್ನು ವಿದೇಹಲಕ್ಷಣದಲ್ಲಿರುವ ಶ್ರೀ ಶೇಷಾಚಲಸದ್ಗುರೂತ್ತಮನು ಎಲ್ಲರಿಗೂ ಕೊಡಲಿ!!

ಓಂ ಶಾಂತಿಃ ಶಾಂತಿಃ ಶಾಂತಿಃ!

Printer: Y. G. Kulkarni, at the Sheshachal Press,
Anandvan-agdi.

# ಗಳಗನಾಥರವರ ಪುಸ್ತಕಗಳ ಪಟ್ಟಿಯು.

.... ಈ ಚಿಹ್ನೆ ಹಾಕಿದ ಪುಸ್ತಕಗಳು ತೀರಿರುತ್ತವೆ.

## ಪೌರಾಣಿಕ ಗ್ರಂಥಗಳು

| | ರೂ. ಆ. |
|---|---|
| ೧ ಸಚಿತ್ರ ಹಾಗು ಸರಹಸ್ಯ ಮಹಾ ಭಾರತಾಮೃತ (ಆದಿಪರ್ವ) | ೩-೫ |
| ೨ ಭಾಗವತಾಮೃತ. | ೧-೮ |
| ೩ ಶೈವಸುಧಾರ್ಣವ. | [illegible] |
| ೪ ತುಲಸೀರಾಮಾಯಣ. | ೩-೧ |
| ೫ ಶ್ರೀ ... ಮಾಹಾತ್ಮ್ಯ. | ೧-೦ |
| ೬ ಭಗವತೀಕಾತ್ಯಾಯನಿ. | ೦-೮ |

## ಕನ್ನಡಿಗರ ಕಾದಂಬರಿಗಳು.

| | |
|---|---|
| ೭ ಮಾಧವಕರುಣಾವಿಲಾಸ. | ೩-೧೨ |
| ೮ ಕರ್ಮಕಥೆ. | ೧-೮ |
| ...೯ ಕುಮುದಿನಿ. | ೧-೦ |

## ಮರಾಟರ ಕಾದಂಬರಿಗಳು.

| | |
|---|---|
| ೧೦ ಈಶ್ವರೀಸೂತ್ರ | ೧-೦ |
| ...೧೧ ಕಮಲಕುಮಾರಿ. | ೧-೦ |
| ...೧೨ ಮರಾಟರ ... | [illegible] |
| ...೧೩ ಛತ್ರಹತಿ. | ೧- |
| ...೧೪ ಗೃಹಕಲಹ. | ೧-೦ |
| ...೧೫ ಶಿವಪ್ರಭುವಿನ ಪುಣ್ಯ. | ೧-೦ |
| ೧೬ ಕುರುಕ್ಷೇತ್ರ. | ೧-೦ |

## ರಜಪೂತರ ಕಾದಂಬರಿಗಳು.

| | ರೂ. ಆ. |
|---|---|
| ...೧೭ ... | ೧-೮ |
| ೧೮ ... | ೧-೮ |
| ೧೯ ಧರ್ಮರಹಸ್ಯ. | ೧- |
| ...೨೦ ಸತ್ವಸಾರ. | ೧-೦ |
| ...೨೧ ಕ್ಷಾತ್ರತೇಜ. | ೧- |
| ೨೨ ತಿಲೋತ್ತಮೆ. | ೧-೦ |
| ...೨೩ ರಾಣಾರಾಜಸಿಂಹ. | ೦-೧೨ |

## ಕಾಲ್ಪನಿಕ ಕಾದಂಬರಿಗಳು.

| | |
|---|---|
| ೨೪ ಪ್ರಬುದ್ಧ-ಪದ್ಮನಯನೆ. | ೧-೦ |
| ...೨೫ ಲಕ್ಷ್ಮೀಬಾಯಿ. | ೧-೦ |
| ೨೬ ಗುರುಪ್ರಸಾದ. | ೦-೧೨ |

## ಚರಿತ್ರಗಳು.

| | |
|---|---|
| ...೨೭ ಶ್ರೀ ಚಿದಂಬರಚರಿತ್ರ. | ೧-೦ |
| ೨೮ ನಿರ್ಯಾಣಮಹೋತ್ಸವ. | ೦- |

## ಪ್ರಬಂಧಗಳು.

| | |
|---|---|
| ...೨೯ ದಾಂಪತ್ಯ. | ೦-೪ |
| ...೩೦ ಕುಟುಂಬ. | ೦-೬ |
| ...೩೧ ಮನಸ್ಸು. | ೦-೪ |
| ೩೨ ಸದ್ಗುರುಪ್ರಭಾವ. | ೦-೧೨ |

## ಇದೀಗ ತಯಾರಾದ ಹೊಸಪುಸ್ತಕಗಳು.

| | | | |
|---|---|---|---|
| ೧ ಕಮಲಕುಮಾರಿ | ೧-೦ | ೫ ... ರಹಸ್ಯಗಳು | ೦-೧೨ |
| ೨ ಧರ್ಮರಹಸ್ಯ | ೧-೦ | ೬ ಮಹಾಭಾರತಾಮೃತದ ೨ನೇಪುಸ್ತಕ | |
| ೩ ಅಹಂಕಾರವಿನಾಶ | ೦-೧೨ | (ಸಭಾಪರ್ವಪೂರ್ಣ ವನಪರ್ವಅರ್ಧ) | ೩- |
| ೪ ಪ್ರಬುದ್ಧ ಪದ್ಮನಯನೆ | ೧-೦ | ೭ ಮುರಾರಿರಾವ. | ೦-೬ |


**ಪುಸ್ತಕ ದೊರೆಯುವ ಸ್ಥಳ.**

ಪತ್ರೆ—ಮ್ಯಾನೇಜರ "ಸದ್ಗುರು ಸುರಸಗ್ರಂಥಮಾಲಾ"

ಆಫೀಸ್ ಹಾವೇರಿ. ಪೋ. ಹಾವೇರಿ. ಜಿ, ಧಾರವಾಡ.